ಕಸ್ತೂರಿ

ಸಪ್ಟೆಂಬರ್ ೧೯೭೮



ಹಾರ್ಲಿಕ್ಸ್

ನಿಮಗೆ ಬಹಳ ಅಗತ್ಯವಿರುವಾಗ ಅತ್ಯುತ್ತಮ ಪೋಷಣೆ ನೀಡುತ್ತದೆ







ಗರ್ಭಿಣಿಯರಿಗೆ

ಗರ್ಭಿಣಿಯರಿಗೆ ಸಮತೂಕದ, ಜೀರ್ಣಿಸಿಕೊಳ್ಳಲು ಸುಲಭವಾದ ಆಹಾರ ಅಗತ್ಯ. ಆದ್ದರಿಂದ ಗರ್ಭಿಣಿಯರಿಗೆ ಹಾರ್ಲಿಕ್ಸ್ ಅತ್ಯಂತ ಮಾದರಿ ಆಹಾರ. ತಾಯಿಗೂ, ಮಗುವಿಗೂ ದೇಹ ನಿರ್ಮಿಸುವ ಪ್ರೋಟೀನುಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಅದು ಸಮನಾದ ರೀತಿಯಲ್ಲಿ ಒದಗಿಸುತ್ತದೆ. ರಾತ್ರಿಯ ವೇಳೆ ತೆಗೆದುಕೊಂಡಲ್ಲಿ ಅದು ಮಲಬದ್ಧತೆಯನ್ನು ತಡೆಯುತ್ತದೆ ಮತ್ತು ಬೆಳಗಿನ ವೇಳೆಯ ಓಕರಿಕೆಯನ್ನು ತಪ್ಪಿಸುತ್ತದೆ.

ಅಸ್ವಸ್ಥತೆಯಲ್ಲಿ/ನಂತರ ಚೇತರಿಸಿಕೊಳ್ಳುವಾಗ

ಅಸ್ವಸ್ಥರಾದಾಗ ನಿಮ್ಮ ದೇಹವು ಅತ್ಯಮೂಲ್ಯವಾದ ಪ್ರೋಟೀನುಗಳನ್ನು ಮತ್ತು ಪೋಷಕಾಂಶಗಳನ್ನು ಕಳೆದುಕೊಳ್ಳುತ್ತದೆ. ಇದರಿಂದ ನಿಶ್ಶಕ್ತಿ ಉಂಟಾಗುತ್ತದೆ. ಹಾರ್ಲಿಕ್ಸ್ ಜೀವಕಣಗಳನ್ನು ನಿರ್ಮಿಸುವ ಪ್ರೋಟೀನುಗಳನ್ನು, ದೇಹಕ್ಕೆ ಶಕ್ತಿ ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಮತ್ತು ಖನಿಜಾಂಶಗಳನ್ನು, ಜೀರ್ಣಿಸಿಕೊಳ್ಳಲು ಸುಲಭವಾದ ರೂಪದಲ್ಲಿ ಒದಗಿಸುತ್ತದೆ. ಇದರಿಂದ ಅದು ದೇಹವು ಕಳೆದುಕೊಂಡಿದ್ದ ಪೋಷಕಾಂಶಗಳನ್ನು ತುಂಬಿಕೊಡುತ್ತದೆ. ಬೇಗನೆ ಗುಣಹೊಂದಲು ನೆರವಾಗುತ್ತದೆ. ಪುನಃ ಅಸ್ವಸ್ಥರಾಗದಂತೆ ನೋಡಿಕೊಳ್ಳಲು ರೋಗನಿರೋಧಕ ಶಕ್ತಿಯನ್ನು ನಿರ್ಮಿಸುತ್ತದೆ.

ವಿಶ್ವಾದ್ಯಂತ ಡಾಕ್ಟರ್‌ಗಳು ಶಿಫಾರಸು ಮಾಡಿದ್ದಾರೆ

ಇದರಲ್ಲಿ ಆರೋಗ್ಯ ತುಂಬಿದೆ ಹಾರ್ಲಿಕ್ಸ್.

ಕಸ್ತೂರಿ

✡

ವ್ಯವಸ್ಥಾಪಕ ಸಂಪಾದಕ:
ಎಚ್. ಆರ್. ಬಸವರಾಜ್

✡

ಸಂಪಾದಕ :
ಪ. ಸು. ಭಟ್ಟ

✡

ಕಲೆ :
ಕೆ. ಬಿ. ಕುಲಕರ್ಣಿ

✡

ಮುಖಪುಟ :
'ಭೂವನ ಕುಸುಮಿಸಿ'
ಆರ್ಯ

✡

ಚಂದಾದರ

೩ ವರ್ಷ (ಅಂಚೆ ಸೇರಿ)	ರೂ. ೩೫-೦೦
೨ ವರ್ಷ ,,	ರೂ. ೨೫-೦೦
೧ ವರ್ಷ ,	ರೂ. ೧೪-೦೦
ಅರ್ಧ ವರ್ಷ ,,	ರೂ. 2-೫೦

KASTURI September 1978

ಬೆಳಕಿಂಡಿ

ವಾಕ್ ಸ್ವಾತಂತ್ರ್ಯದಷ್ಟೇ ಮೌನ ಸ್ವಾತಂತ್ರ್ಯವೂ ಒಂದು ಮೂಲಭೂತ ಹಕ್ಕು.

– ಹ್ಯಾರಿ ಹೆರ್ಸ್‌ಫೀಲ್ಡ್

ಮರವೊಂದರಿಂದ ಕೋಟಿಗಟ್ಟಲೇ ಬೆಂಕಿ ಕಡ್ಡಿಗಳನ್ನು ಸೃಷ್ಟಿಸಬಹುದು. ಆದರೆ ಕಡ್ಡಿಯೊಂದರಿಂದ ಅದರ ಹತ್ತುಪಟ್ಟು ಮರಗಳನ್ನು ಸುಡಲೂ ಬಹುದು.

– 'ಕ್ರಾಸ್ ಟೈ ಬುಲೆಟಿನ್'ನಿಂದ

ಒಂಟಿತನದ ಅನಿಸಿಕೆಯುಂಟಾಗುವುದರ ಕಾರಣವಿಷ್ಟೆ, ನಾವು ಸೇತುವೆಗಳ ಬದಲು ಹೆಚ್ಚು ಗೋಡೆಗಳನ್ನೇ ಕಟ್ಟುತ್ತೇವೆ.

– ಜಾಾನ್ಯೂಡಿ

ನಿಮ್ಮ ಬದುಕಿನಿಂದ ನೀವು ಬೋಧನೆಗಿಂತಲೂ ಹೆಚ್ಚು ಪರಿಣಾಮಕಾರಿ ಪಾಠ ಹೇಳಬಲ್ಲಿರಿ.

– ಆಲಿವರ್ ಗೋಲ್ಡ್‌ಸ್ಮಿತ್

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಮಚಿಂತನ

ನಿಮ್ಮ 'ಕಸ್ತೂರಿ'ಯ ಸತತ ಓದುಗರಲ್ಲಿ ನಾನೂ ಒಬ್ಬ. (ಸಾಧಾರಣ ೧೯೬೮ ರಿಂದ ೭೮ರ ವರೆಗೆ ಓದುತ್ತಿದ್ದೇನೆ.) ತಿಂಗಳ ಕೊನೆಯ ವರ 'ಕಸ್ತೂರಿ'ಗಾಗಿ ಹಾತೊರೆಯುವಂತಾಗುತ್ತದೆ. ಕನ್ನಡ ಮಾಸಿಕಗಳಲ್ಲಿ 'ಕಸ್ತೂರಿ' ನನ್ನ ಅತ್ಯಂತ ಮೆಚ್ಚಿನ ಪತ್ರಿಕೆ. ಇದರಲ್ಲಿ ಪ್ರಕಟವಾಗುವ ಆಧ್ಯಾತ್ಮಿಕ ಲೇಖ, ವೈಜ್ಞಾನಿಕ ಕಥೆ, ಕವನ ಹೃದಯಂಗಮ. ಇದೇ ಅಗಸ್ಟ ಸಂಚಿಕೆಯಲ್ಲಿನ 'ಅಣು ಸ್ಫೋಟಕ್ಕೆ ಒಂದು ಸಾಕ್ಷಿ' ನನ್ನ ಹೃದಯ ಕಲಕಿತು– ಇತ್ತೀಚಿನ ಅಣು ನೀತಿಯ ಬಗ್ಗೆ ರಾಜಕಾರಣಿಗಳ ಕಣ್ಣು ತೆರೆಸೀತು ಈ ಲೇಖನ. ಕನ್ನಡ 'ಕಸ್ತೂರಿ' ಇನ್ನೂ ಸುಮಾಸಿಕವಾಗಿ ಬರಲಿ ಎಂದು ಸದಾ ಆಶಿಸುತ್ತೇನೆ.

ಜಿ. ಹೊಸಹಳ್ಳಿ –ಮಲ್ಲಪ್ಪ ಕವುರಿ

ವೈವಿಧ್ಯಮಯ

'ಕಸ್ತೂರಿ' ಅಗಸ್ಟ ಸಂಚಿಕೆಯು ತುಂಬಾ ಉಪಯುಕ್ತ ಲೇಖನಗಳಿಂದ ಕೂಡಿದೆ. ವೈವಿಧ್ಯಮಯವಾಗಿದೆ. ಜಯಂತ ಕಾಯ್ಕಿಣಿಯವರ ಕವನ– 'ಸಂಧ್ಯಾಗೀತ ಕೆಲ ಟಿಪ್ಪಣಿಗಳು' ಬದುಕು–ಭಾವನೆಗಳ, ಅನುಭವ ರಸಾವೇಶಗಳ ಸಾಂಕೇತಿಕ–ಸಮ್ಮಿಲಿತ ಅರ್ಥದೊಂದಿಗೆ ಗಂಭೀರವಾಗಿದೆ. ವಿಜಯರಾಘವ ಅವರ 'ಹೀಗೊಂದು ಕತೆ' ನೈಜ ಅನುಭವವನ್ನು ಪ್ರತಿಬಿಂಬಿಸುವಂತಿದ್ದು 'ಕನ್ನಡ ನಾಡಿನಲ್ಲಿ ನರವಿಕ್ರಯ' ಎಂಬ ಲೇಖನವು ತೀರಾ ಇತ್ತೀಚಿನ ವರೆಗೂ ನಮ್ಮ ಹತ್ತಿರದಲ್ಲಿಯೇ ಈ ಅಸಹ್ಯಕರ ವ್ಯವಹಾರಗಳು ನಡೆಯುತ್ತಿತ್ತೆಂಬುದಕ್ಕೆ ಆಧಾರ ಸಹಿತ ಸೂಚಿತವಾಗಿದೆ. 'ಲೆಬನಾನಿನಲ್ಲಿ ನಾನು' ಒಂದು ಸ್ವಾರಸ್ಯಕರ ಲೇಖನ. 'ಫ್ರೆಡರಿಕ್ ಎಂಗೆಲ್ಸ' ಲೇಖನವು ಉಪಯುಕ್ತ, ಸರಳ ನಿರೂಪಣೆ ಎನ್ನಿಸಿತು. 'ಜಿಹ್ವಾ ಮೀಮಾಂಸೆ' ಲೇಖನವಂತೂ ಬಹಳ ಅಪರೂಪ. ಈ ಬಗ್ಗೆ ಯಾವ ಪತ್ರಿಕೆಯಲ್ಲಿಯೂ ಇಷ್ಟು ವಿವರಣಾತ್ಮಕ ಲೇಖನ ಬಂದಿಲ್ಲ.

ಅರಸೀತೋಟ –ಎ. ಎಸ್. ಗಣೇಶರಾವ್

ಫ್ರೆಡರಿಕ್ ಎಂಗೆಲ್ಸ

ಅಗಸ್ಟ 'ಕಸ್ತೂರಿ' ಓದಿದೆ. ಸುಮಾರಾಗಿದೆ ಎನ್ನಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಆರ್. ಪೂರ್ಣಿಮಾರವರ 'ಫ್ರೆಡರಿಕ್ ಎಂಗೆಲ್ಸ' ಲೇಖನ ತುಂಬಾ ಚೆನ್ನಾಗಿದೆ. ಕಮ್ಯೂನಿಸಂನ ಬಗ್ಗೆ ಅಪಾರ ಆಸಕ್ತಿ ಇರುವ ನನಗೆ ಅದರ ಸ್ಥಾಪಕರಲ್ಲೊಬ್ಬರಾದ ಫ್ರೆಡರಿಕ್ ಎಂಗೆಲ್ಸನ ಜೀವನ ಚರಿತ್ರೆಯನ್ನು ತಿಳಿಸಿದ 'ಕಸ್ತೂರಿ'ಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಆದರೆ ಈ ಲೇಖನದಲ್ಲಿ ಒಂದು ತಪ್ಪಿದೆ. ಪುಟ ೪೬ ರ ಪ್ರಾರಂಭದಲ್ಲಿಯೇ "ಮ್ಯಾನಿಫೆಸ್ಟೊ ಬಂದಾಗ ಫ್ರೆಂಚ್ ಕ್ರಾಂತಿಯಾಗುತ್ತಿತ್ತು" ಎಂದಿದೆ. ಮ್ಯಾನಿಫೆಸ್ಟೊ ಪ್ರಕಟವಾದದ್ದು ೧೮೪೮ರಲ್ಲಿ ಎಂದು ಲೇಖಕಿಯರೇ ಹೇಳಿದ್ದಾರೆ. ಫ್ರೆಂಚ್ ಕ್ರಾಂತಿಯಾದುದು ಕ್ರಿ.ಶ. ೧೭೮೯ರಲ್ಲಿ, ಅಂದರೆ

ತಿದ್ದುಪಡಿ

ಅಗಸ್ಟ ಸಂಚಿಕೆಯ ಮುಖಚಿತ್ರ ಬರೆದ ಕಲಾವಿದರು ಶ್ರೀ ಉದಯಸಿಂಹ. ಕಣ್ಣುತಪ್ಪಿನಿಂದ ಆ ಹೆಸರು ಉಳಿದುಹೋದುದಕ್ಕೆ ವಿಷಾದಿಸುತ್ತೇವೆ. –ಸಂ.

ಮ್ಯಾನಿಫೆಸ್ಟೊ ಪ್ರಕಟವಾಗುವುದಕ್ಕಿಂತ ಸುಮಾರು ೫೯ ವರ್ಷಗಳ ಹಿಂದೆ. ಹೀಗಿರುವಾಗ ಇವೆರಡೂ ಒಂದೇ ಸಮಯದಲ್ಲಿ ನಡೆಯಲು ಹೇಗೆ ಸಾಧ್ಯ?

ಸಿದ್ಧಯ್ಯನಪುರಂ -ಎಲ್. ಪ್ರೇಮಶೇಖರ

ಆತ ಬಿಟ್ಟು ಹೋದದ್ದು...

ಕಳೆದ ಸಂಚಿಕೆಯಲ್ಲಿ ನನ್ನ ಕುತೂಹಲವನ್ನು ಕೆರಳಿಸಿದ್ದು ಶಶಿ ದೇಶಪಾಂಡೆಯವರ ಕಥೆ 'ಆತ ಬಿಟ್ಟುಹೋದದ್ದು...' ಇತ್ತೀಚೆ ಹೊರಬಂದಿರುವ ಅವರ ಕಥಾಸಂಕಲನ The Legacy (ಕಥೆಯ ತಲೆಕಟ್ಟೂ ಇದೇ)ಯಲ್ಲಿ ಈ ಕಥೆಯನ್ನು ಮೂಲದಲ್ಲಿ ಓದಿದ ನನಗೆ ಅನುವಾದ ತುಂಬ ಸಮರ್ಪಕವೆನಿಸಿತು. ಮನುಷ್ಯ ಜೀವನವ್ಯಾಪಾರವನ್ನು ಕಥೆಗಾರ್ತಿ ತೆರೆದ ಕಣ್ಣುಗಳಿಂದ ನೋಡುತ್ತಾರೆ. ಮನುಷ್ಯ ಜೀವನದಲ್ಲಿ ನಂಬಿಕೆಗಿರುವ ಸ್ಥಾನ ಬಹು

ದೊಡ್ಡದು. ಆ ನಂಬಿಕೆ ಕಾಜಿನ ಪಾತ್ರೆಯಂತೆ ಯಾವ ಕ್ಷಣಕ್ಕೂ ಒಡೆದುಹೋಗಬಹು ದಾದಂಥದಾದರೂ ಅದಿಲ್ಲದೆ ಅವನ ಬದುಕು ಅರ್ಥಹೀನವಾದೀತೆಂಬ ಅಂಶ ಈ ಕಥೆಯಿಂದ ಮನದಟ್ಟಾಗುತ್ತದೆ.

ಆದರೆ ಅನುವಾದದಲ್ಲಿ ಉಳಿದುಕೊಂಡ ಒಂದು ದೋಷ(?)ವನ್ನು ಎತ್ತಿತೋರದಿರಲಾಗುವುದಿಲ್ಲ. ಪ್ರಾರಂಭದ ವಾಕ್ಯದಲ್ಲಿ ಅವನಿಗೆ (ಡಾಕ್ಟರ್) ಅರ್ಧಾಂಗವಾಯುವಾಗಿತ್ತು ಎಂದು ಬಂದುದು ಕಥೆಯಲ್ಲಿ ಮುಂದೆ ಬರುವ ವಿವರಗಳಿಗೆ ಅಸಂಗತ ವಾಗುವುದಿಲ್ಲವೆ? ಅರ್ಧಾಂಗವಾಯು ಪೀಡಿತ ವ್ಯಕ್ತಿ ಮಾತಾಡಲಾರ, ಮಗ್ಗುಲಾಗಲಾರ, ಬರೆಯಲಾರ. ಆದರೆ ಇಲ್ಲಿ ಅವನು ಈ ಮೂರ-ನ್ನೂ ಮಾಡುತ್ತಾನೆ. ಮೂಲ ಕಥೆಯಲ್ಲಿ stroke ಶಬ್ದವನ್ನು ತಪ್ಪಾಗಿ ಗ್ರಹಿಸಿದ್ದರಿಂದ ಈ ದೋಷವುಳಿದಿರಬೇಕು. ಅದು paralytic stroke ಅಲ್ಲ, heart stroke. ಕಥೆಯಲ್ಲಿ ಹಾಗೆಲ್ಲೂ ಸ್ಪಷ್ಟವಾಗಿ ಹೇಳಿಲ್ಲವಾದರೂ ಸೂಚ್ಯ ಅರ್ಥ ಇದೇ ಆಗಿರಲು ಸಾಕು. ಹೃದಯಾಘಾತ-ವಾಗಿರುವ ಮನುಷ್ಯ ಮಾತಾಡಬಲ್ಲ, ಮಗ್ಗುಲಾ ಗಬಲ್ಲ, ಬರೆಯಬಲ್ಲ.

ಬೆಳಗಾಂವಿ ಎಂ. ರಾವ್

[ಭಾಷಾಂತರದಲ್ಲಿಯ ಈ ದೋಷ ನಮ್ಮ ಗಮನಕ್ಕೂ ಬಂದಿದೆ, ತೀರ ತಡವಾಗಿ, 'ಕಸ್ತೂರಿ' ಪೂರ್ತಿ ಮುದ್ರಣವಾದ ನಂತರ. ನೀವು ಹೇಳು ವುದು ಪೂರ್ತಿ ಸರಿ. –ಸಂ.]

ಕೂದಲು

ಆಗಸ್ಟ 'ಕಸ್ತೂರಿ'ಯಲ್ಲಿ ಕೂದಲಿಗೆ ಸಂಬಂಧಿ ಸಿದಂತೆ ಬಂದ ಎರಡು ಲೇಖನಗಳು 'ಕೂದಲಿಗೆ ಹಚ್ಚುವ ಬಣ್ಣ ಮುಡಿಯಲ್ಲಿಯ ನಾಗರಹಾವೆ?' ಹಾಗೂ 'ಮಾನವ ದೇಹದ ಹುಲಸಾದ ಬೆಳೆ' ಚೆನ್ನಾಗಿವೆ. ಅದರಲ್ಲೂ ಮೊದಲಿನ ಲೇಖನ ಸೌಂದರ್ಯ ಪ್ರಸಾಧನಗಳ ಬಗ್ಗೆ ನೀಡುವ ಎಚ್ಚರಿಕೆ ಸಕಾಲಿಕವಾಗಿದೆ. ನಮ್ಮ ದೇಶದಲ್ಲಿ ಪಾಶ್ಚಾತ್ಯೀಕರಣದ ಪ್ರಭಾವ ಹೆಚ್ಚುತ್ತಿರುವಂತೆಯೆ 'ನಿಮ್ಮ ದೇಹದ ಸೌಂದರ್ಯ ಹೆಚ್ಚಿಸುವ' ಹತ್ತಾರು ಸಾಧನಗಳು ಪೇಟೆಗೆ ವಿವಿಧ ಲೇಬಲ್ಲುಗಳಲ್ಲಿ ಹರಿದುಬರುತ್ತಿವೆ. ಆದರೆ ಏನೋ ಒಂದು ಅಂಧ ವಿಶ್ವಾಸದಿಂದಲೋ ಪ್ರತಿಷ್ಠೆಯ ಕುರುಹೆಂದೋ ಇಲ್ಲವೆ ಒಂದು ಚಟವೆಂದೋ ನಾವೆಲ್ಲ ಅವನ್ನು ಬಳಸುತ್ತಿದ್ದೇವೆ!

ಹುಬ್ಬಳ್ಳಿ ಬಸಣ್ಣ ತಿಲ್ಲಾಪುರ

ನೊಗ್ಲಿಂಗ್

ಹರ್ಮನ್ ಮೊಗ್ಲಿಂಗ್ ಕುರಿತು ಜುಲೈ ಸಂಚಿಕೆಯಲ್ಲಿ ಬಂದ ಮೋಹನ ಹೆಗಡೆಯವರ ಲೇಖನವನ್ನು ನೋಡಿದೆ. ಮೊಗ್ಲಿಂಗ್ ಮತ್ತು ಕನ್ನಡದ ಆದ್ಯ ಪತ್ರಿಕೆಯ ಬಗ್ಗೆ, 'ಪ್ರಜಾಮತ' ದೀಪಾವಳಿ ಸಂಚಿಕೆ, ೧೯೬೫ ರಲ್ಲಿ ಹಾಗೂ 'ಕಸ್ತೂರಿ'ಯ ವಸಂತ ಸಂಚಿಕೆ ೧೯೬೭ ರಲ್ಲಿ ವಿಸ್ತಾರವಾದ ವಿವೇಚನೆ ಬಂದಿತ್ತು. ಅವೆಲ್ಲ ಅಂಶಗಳು 'ಹೊಸಗನ್ನಡದ ಅರುಣೋದಯ' ವೆಂಬ ಉದ್ಗ್ರಂಥದಲ್ಲಿಯೂ ಬಂದಿವೆ. ಶ್ರೀ ಹೆಗಡೆಯವರು ಅವುಗಳಿಂದ ವಿಚಾರಗಳನ್ನು ಎತ್ತಿಕೊಂಡಿದ್ದಾರೆ– ವಾಕ್ಯಗಳನ್ನು ಸಹ. ಮೂಲದ ಆಧಾರಗಳನ್ನು ಅವರು ತಮ್ಮ ಲೇಖನದ ಕೊನೆಯಲ್ಲಿ ಸ್ಮರಿಸಬಹುದಿತ್ತು.

ಮುಂಬಯಿ –ಶ್ರೀ. ಹಾ.

ಯಾವ ಪುರುಷಾರ್ಥಕ್ಕೆ ?

ಆಗಸ್ಟ 'ಕಸ್ತೂರಿ'ಯಲ್ಲಿ ನಾಲ್ಕು ಪುಟ ಗಳಷ್ಟು ಅರ್ಧವಾರ್ಷಿಕ ಪರಿವಿಡಿ ಕೊಟ್ಟಿದ್ದೀರಿ. ಅದು ವ್ಯರ್ಥ ಪುಟಗಳನ್ನು ಹಾಳುಮಾಡಿದಂತೆ ನಿಸುತ್ತದೆ. ಅಲ್ಲದೆ ಒಂದೇ ಲೇಖನ ಎರಡು ಮೂರು ವಿಭಾಗಗಳಲ್ಲಿ ಬರುವುದೂ ಆಶ್ಚರ್ಯಕರ.

ಊರತೋಟ -ತಾರೇಹಳ್ಳಿ ನರಸಿಂಹಭಟ್ಟ

[ಈ ಪದ್ಧತಿಯನ್ನು ಕಳೆದ ಸುಮಾರು ೧೫ ವರ್ಷಗಳಿಂದಲೂ 'ಕಸ್ತೂರಿ' ಅನುಸರಿಸುತ್ತಿದೆ. ಇದು ನಮ್ಮ ಬಹುಜನ ಓದುಗರಿಗೆ ಅತ್ಯುಪ-ಯುಕ್ತವೆನಿಸಿದೆ. ಆರು ತಿಂಗಳುಗಳಲ್ಲಿ ಬರುವ ಲೇಖನಗಳನ್ನು ವಿಷಯಕ್ಕೆ ಸಂಬಂಧಿಸಿದಂತೆ ವಿಂಗಡಿಸಿಕೊಡುವುದು ಆಧುನಿಕ ಪದ್ಧತಿ. ಒಂದೇ ಲೇಖನ ಒಂದಕ್ಕಿಂತ ಹೆಚ್ಚು ವಿಭಾಗಗಳಲ್ಲಿ ಬರ ಬಹುದು. ವೈದ್ಯಕೀಯ ಕುರಿತ ಲೇಖನ 'ವೈದ್ಯಕೀಯ'ದಲ್ಲೂ ಬರುತ್ತದೆ, 'ವಿಜ್ಞಾನ' ದಲ್ಲೂ ಬರುತ್ತದೆ. -ಸಂ.]

ಕಸ್ತೂರಿ

ಸಂಚಿಕೆ: ೧ ಕಸ್ತೂರಿ, ಸಪ್ಟೆಂಬರ್ ೧೯೭೪ ವರ್ಷ: ೨೩

ಸಾಂಬನ ಕಥೆ

ಎನ್. ಪ್ರಹ್ಲಾದರಾವ್

ಎಂಥವರ ಹೊಟ್ಟೆಯಲ್ಲಿ ಎಂಥವರು ಹುಟ್ಟುತ್ತಾರೆ, ಏನು ಮಾಡುತ್ತಾರೆ ಎಂದು ಹೇಳಲು ಬಾರದು. ಸಾಂಬ ಶ್ರೀಕೃಷ್ಣನ ಮಗ. ಕೃಷ್ಣ ಪಾಂಡವ–ಕೌರವರ ಗೌರವಕ್ಕೆ ಪಾತ್ರನಾದ ವ್ಯಕ್ತಿ. ಪಾಂಡವರಿಗಂತೂ ಗುರು, ದೈವ, ಏಕೈಕ ರಕ್ಷಕ. ಜಾಂಬವತಿಯ ಹೊಟ್ಟೆಯಲ್ಲಿ ಹುಟ್ಟಿದ ಸಾಂಬ-ಶೀಲಭ್ರಷ್ಟ. ಸದಾ ಕುಡಿತದಲ್ಲಿ, ನಿರತ-ನಾಗಿರುತ್ತಿದ್ದ ಈತ ಹೊಟ್ಟೆಬಾಕ ಬೇರೆ. ತಿನ್ನು-ವುದಕ್ಕಾಗಿಯೇ ಹುಟ್ಟಿದವನಂತೆ ಮಾಂಸಾದಿಗ-ಳನ್ನು ಭಕ್ಷಿಸುತ್ತಿದ್ದ. ಬೇರೆ ಉದ್ಯೋಗವಿಲ್ಲ ದುದರಿಂದ ಬೇಟೆಯಲ್ಲಿ ಕಾಲ ಕಳೆಯುತ್ತಿದ್ದ. ದುರ್ಯೋಧನನ ಮಗಳಾದ ಲಕ್ಷ್ಮಣೆಯ ಸ್ವಯಂ-ವರಕ್ಕೆ ಹೋಗಿದ್ದ ಈತ ಆಕೆಯನ್ನು ಅಪಹರಿಸಿ ತಂದದ್ದು ಒಂದು ದೃಷ್ಟಿಯಿಂದ ಶೌರ್ಯದ ಲಕ್ಷಣವಾದರೂ ಅದು ಈತನಿಗೆ ಹೆಂಗಸರನ್ನು ಅಪಹರಿಸುವ ವಿದ್ಯೆಯಲ್ಲಿ ಮೊದಲ ಪಾಠವಾಗಿತ್ತೆಂಬುದು ನೆನಪಿಡಬೇಕಾದ ಅಂಶ. ನಂತರ ಈತ ಇನ್ನೊಬ್ಬರ ಹೆಂಡತಿಯನ್ನು ಅಪಹರಿಸಿದುದೂ ಕೆಡಿಸಿದುದೂ ಉಂಟು. ತನ್ನ ಮಗಳನ್ನು ಅಪಹರಿಸಿದ್ದನ್ನು ಕಂಡು ದುರ್ಯೋಧನ ಈತನನ್ನು ಸೆರೆ-ಹಿಡಿದು ಹಸ್ತಿನಾವತಿಗೆ ಕರೆದೊಯ್ದು ಸೆರೆ ಇಟ್ಟನಂತೆ. ಆಗ ಈತನ ದೊಡ್ಡಪ್ಪ ಬಲರಾಮ ಹಸ್ತಿನಾವತಿಯನ್ನೇ ಸುಟ್ಟುಬಿಡುವುದಾಗಿ ಬೆದರಿಕೆ ಹಾಕಿ ಈತನನ್ನೂ ಲಕ್ಷ್ಮಣೆಯನ್ನೂ ಬಿಡಿಸಿತಂದನಂತೆ. ದುಷ್ಟರನ್ನು ಕಾಪಾಡಲು ಬಲರಾಮನಂಥ ಒಬ್ಬಿ-ಬ್ಬರು ಯಾವಾಗಲೂ ಇದ್ದೇ ಇರುತ್ತಾರೆ.!

ಬಲರಾಮನೇನು ಶುದ್ಧ! ಆತನು ಮಹಾ ಕುಡುಕನೆ.

ಇತ್ತ ದ್ವಾರಕೆಯಲ್ಲಿ ಸಾಂಬ ಆಡಿದ್ದೆ ಆಟವಾ-ಯಿತು. ಇವನಂತೆ ನೀತಿಗೆಟ್ಟ ಇತರರು ಇವನ

ಸಂಗಡ ಸೇರಿದರು. ಎಲ್ಲರೊಂದಿಗೆ ಪುಂಡೆದ್ದು ಬೀದಿ ಬೀದಿ ಅಲೆದರು. ಚೌಕಗಳಲ್ಲಿ ನಿಂತು ಕುಣಿದರು, ಕೇಕೆ ಹಾಕಿದರು. ಸಾಂಬ ಹೆಣ್ಣು ವೇಷ ಧರಿಸಿ ಅವರೊಂದಿಗೆ ಪ್ರಣಯ ಚೇಷ್ಟೆಗಳನ್ನು ಮೆರೆಯುತ್ತ ನರ್ತಿಸಿದ. ವಿಶ್ವಾಮಿತ್ರ, ದೂರ್ವಾಸ, ನಾರದ ಮೊದಲಾದ ಹಿರಿಯರು ಹೇಳಿದ ಯಾವ ಬುದ್ಧಿವಾದವೂ ಈ ಮೂರ್ಖರಿಗೆ ರುಚಿಸಲಿಲ್ಲ. ಇಷ್ಟೆಲ್ಲ ಸಾಲದು ಎಂಬಂತೆ ಸಾಂಬ ಸಲಿಂಗ ಸಂಭೋಗದಲ್ಲಿ ನಿರತನಾದನಂತೆ.

ಒಂದು ಸಾರಿ ಪೋಕರಿ ಸ್ನೇಹಿತರು ಕೆಲವರು ಸಾಂಬನಿಗೆ ಬಸುರಿ ಹೆಂಗಸಿನ ವೇಷಹಾಕಿ ದ್ವಾರಕೆಗೆ ಬಂದಿದ್ದ ಕಣ್ವರ ಎದುರಿನಲ್ಲಿ ನಿಲ್ಲಿಸಿ, "ಈಕೆ ಎಂಥ ಮಗುವನ್ನು ಹೆರುವಳು?" ಎಂದು ಕೇಳಿದರಂತೆ. ಇವರ ಹುಡುಗಾಟವನ್ನು ದಿವ್ಯದೃಷ್ಟಿಯಿಂದ ಅರಿತು ಸಿಟ್ಟಿಗೆದ್ದ ಕಣ್ವರು, "ನಿಮ್ಮ ಸಾಂಬ ಶುದ್ಧ ಘಟಿಂಗ. ಮೂರೂ ಇಲ್ಲದವನು ಅತಿಕಾಮಿ. ಒರಟ. ಪಾಪ ಪುಣ್ಯಗಳ ಭೀತಿ ಇಲ್ಲಿ ವಂಶವನ್ನೇ ನಿರ್ನಾಮ ಮಾಡುವ ಮುಸಲವನ್ನು ಹೆರುವಳು ಈಕೆ," ಎಂದರಂತೆ.

ಋಷಿವಾಕ್ಯದಂತೆ ಸಾಂಬ ಒಂದು ಮುಸಲವನ್ನು ಹೆತ್ತ. ಆದರಿಂದ ತಮ್ಮ ನಾಶವಾಗುವುದೆಂದು ತಿಳಿದ ಯಾದವರು ಅದನ್ನು ಪುಡಿಪುಡಿಯಾಗಿ ಅರೆದು ಸಮುದ್ರಕ್ಕೆ ಎಸೆದರು. ಸಮುದ್ರಕ್ಕೆ ಬಿದ್ದ ಆ ಪುಡಿಯಿಂದ ಸಮುದ್ರ ತೀರದಲ್ಲಿ ಅಸಂಖ್ಯಾತ ಜೊಂಡು ಬೆಳೆದುಕೊಂಡಿತು.

ಕೊನೆಗೊಂದು ದಿನ ಉನ್ಮತ್ತರಾದ ಯಾದವರು ಯಾವುದೋ ಒಂದು ಒಳಜಗಳವನ್ನು ಮುಂದೆ ಮಾಡಿಕೊಂಡು ಹೊಡೆದಾಟಕ್ಕೆ ನಿಂತು ಸಮುದ್ರತೀರದಲ್ಲಿ ಬೆಳೆದಿದ್ದ ಬೆತ್ತದಂಥ ಜೊಂಡನ್ನು ಕಿತ್ತುಕೊಂಡು ಪರಸ್ಪರ ಥಳಿಸಿ ಎಲ್ಲರೂ ನಾಶವಾದರು.

ಇಷ್ಟೆಲ್ಲ ಆದದ್ದು ಶ್ರೀಕೃಷ್ಣನ ಎದುರಿನಲ್ಲಿಯೇ. ಸಾಧುಗಳನ್ನು ಸಂಬಾಳಿಸಿ ದುಷ್ಟರನ್ನು ಸಂಹಾರ ಮಾಡಲು ಅವತಾರವೆತ್ತಿ ಬಂದ ಶ್ರೀಕೃಷ್ಣ ಕೂಡ ಯಾದವರನ್ನು ಉಳಿಸಲಾರದೆ ಹೋದ. ಆತನ ಎದುರಿಗೇ ಅವನ ವಂಶ ನಾಶವಾಗಿಹೋಯಿತು. ದೊಡ್ಡ ವಂಶ, ದೊಡ್ಡ ದೇಶ ಯಾರಿಂದ ಯಾವಾಗ ನೆಲಸಮವಾಗುತ್ತದೆ ಎಂದು ಹೇಳಲುಬಾರದು. ಸಾಂಬನಂಥ ದುಷ್ಟರು ಒಬ್ಬರು ಇದ್ದರೆ ಏನಾಯಿತು ಎಂದು ತಾತ್ಸಾರ ಮಾಡುವಂತಿಲ್ಲ. ಕ್ರಮೇಣ ಅಂಥವರ ಸಂತತಿ ಹೆಚ್ಚುತ್ತದೆ. ಸಾಂಬ ತನ್ನ ಗೆಳೆಯರೊಂದಿಗೆ ಬೀದಿಗಿಳಿದಾಗ ಉಳಿದವರು ಏನು ಮಾಡುತ್ತಿದ್ದರು? ಅವರನ್ನು ತಡೆಯುವ ಶಕ್ತಿ ಯಾರಿಗೂ ಇರಲಿಲ್ಲವೆ? ಎಲ್ಲರೂ ಅವರೊಡನೆ ಸಾಮೀಲಾದರೆ? ಯಾರ ದೌರ್ಜನ್ಯವನ್ನೇ ಆಗಲಿ, ಕಣ್ಣಾರೆ ಕಂಡ ಜನ ಹಾಗೂ ಅಧಿಕಾರಿ ನಿಸ್ಸಹಾಯಕತೆಯಿಂದ ಅದನ್ನು ಕಡೆಗಣಿಸಿದಲ್ಲಿ ಅದು ಇಡೀ ದೇಶಕ್ಕೆ ಒಂದು ದಿನ ಪಾರ್ಥೇನಿಯಂ ಆಗಬಲ್ಲದು.


✡

ಟಾಮಿಯೊಡನೆ ಬಸ್ ಹತ್ತಿದ ಕ್ಯಾಥರೀನ್ ಕಂಡಕ್ಟರನನ್ನು ಕೇಳಿದಳು:

"ನಾನು ಎರಡು ಟಿಕೆಟ್ ಕೊಂಡರೆ ಈ ನಾಯೀನ ಮನುಷ್ಯರ ಹಾಗೆ ಒಂದು ಸೀಟನಲ್ಲಿ ಕೂಡಿಸಿಕೊಂಡೊಯ್ಯಬಹುದಾ?"

ಕಂಡಕ್ಟರ್ ನಾಯಿಯನ್ನೊಮ್ಮೆ, ಆಕೆಯನ್ನೊಮ್ಮೆ ನೋಡಿ ಮುಗುಳ್ನಕ್ಕು ಹೇಳಿದ:

"ಅದಕ್ಕೇನಂತೆ? ಆದರೆ ಒಂದು ಮಾತು. ಟಾಮಿ ಮನುಷ್ಯರ-ಹಾಗೆ ಕಾಲು ಇಳಿಬಿಟ್ಟು ಕೂಡಬೇಕು."



ಒಡೆಯರರೊಂದಿಗೆ ಒಂದೆರಡು ಗಂಟೆ....

ಪಾವೆಂ

ಕರ್ನಾಟಕ ವಿಶ್ವವಿದ್ಯಾಲಯದ ನೂತನ ಉಪ ಕುಲಪತಿಗಳಾದ ಸದಾಶಿವ ಒಡೆಯರು ಸಂದರ್ಶಕರ ಮನಸ್ಸಿನ ಮೇಲೆ ಮಾಡುವ ಪ್ರಥಮ ಪ್ರಭಾವವೆಂದರೆ ಸೌಜನ್ಯದ್ದು. ಎಲ್ಲರಿಗೂ ನಗುಮುಖದ ಪ್ರಾಂಜಲವಾದ ಸ್ವಾಗತ ಕೊಟ್ಟು ಎಲ್ಲರನ್ನೂ ಸಹನೆಯಿಂದ ಆಲಿಸುವುದು ಅವರ ಸ್ವಭಾವವೆಂಬುದು ಬೇಗನೆ ಅರಿವಿಗೆ ಬರುತ್ತದೆ. ಅವರ ಸಾಹಿತ್ಯಪ್ರೇಮ ಅವರ ಮನೆಯಲ್ಲಿ ಸಾಲುಗಟ್ಟಿರುವ ಗ್ರಂಥ ರಾಶಿಯಿಂದ ವ್ಯಕ್ತವಾಗುತ್ತದೆ. ಅವರ ತರಬೇತಿಯಾದದ್ದು ವಕೀಲಿಗೆ. ಅವರ ತಂದೆ ಮತ್ತು ದೊಡ್ಡಪ್ಪ ವಕೀಲರೇ. ಸದಾಶಿವ ಒಡೆಯರು ಬೆಳಗಾವಿಯಲ್ಲಿ ಮೂರೇ ವರ್ಷಗಳಲ್ಲಿ ಎಂ. ಎ. ಮತ್ತು ಎಲ್. ಎಲ್. ಬಿ. ಎರಡೂ ಕೋರ್ಸುಗಳನ್ನು ಏಕಕಾಲದಲ್ಲಿ ಮುಗಿಸಿದರೂ ವಕಾಲತ್ತಿನ ಆಕರ್ಷಣೆ ಅವರಿಗೆ ಅಷ್ಟಾಗಿ ಇರಲಿಲ್ಲ. "ಕ್ಲಾಸ್" ಬರುವ ಜನ ವಿರಳವಾಗಿದ್ದ ಆ ಕಾಲದಲ್ಲಿ (೧೯೪೮) ಕ್ಲಾಸ್ ತೆಗೆದುಕೊಂಡ ಅವರಿಗೆ ಇಂಗ್ಲಿಷ್ ಲೆಕ್ಚರರ್ ಕೆಲಸದ ಕೊಡುಗೆ ಬಂದಾಗ ಅವರು ಅದನ್ನೇ ಸ್ವೀಕರಿಸಿದರು. ಹೆಸರಾಂತ ಗುರುಮನೆತನಕ್ಕೆ ಸೇರಿದ ಅವರು ಸಂಸ್ಕೃತ ವಿದ್ವತ್ತೆಯ ದಾಯವನ್ನು ಪಡೆದು ಬಂದವರು. ಗುರುತ್ವ ಅವರಿಗೆ ಸಹಜವಾಗಿಯೆ ಇತ್ತು.

ಕರ್ನಾಟಕ ವಿಶ್ವವಿದ್ಯಾಲಯದೊಡನೆಯೆ ಅವರು ಬೆಳೆದು ಬಂದಿದ್ದಾರೆ. ಮೊದಲು ಅಸಿಸ್ಟಂಟ್ ರಿಜಿಸ್ಟ್ರಾರರಾಗಿ, ಅನಂತರ ರಿಜಿಸ್ಟ್ರಾರರಾಗಿ, ನಡುವೆ ಕೆಲಕಾಲ ಹಂಗಾಮಿ ಉಪಕುಲಪತಿಗಳಾಗಿ ವಿಶ್ವವಿದ್ಯಾಲಯದ ಆಗು ಹೋಗುಗಳಲ್ಲಿ ಬೆರೆತು ಹೋಗಿರುವ ಒಡೆಯರಿಗೆ ಈ ಪದವಿ ಹೊಸ ಭಾರವೇನಲ್ಲ. ಆದರೆ ಅವರು ತುಂಬ ಆಯಕಟ್ಟಿನ ಹೊತ್ತಿನಲ್ಲಿ ಈ ಹೊಣೆಗೆ ಹೆಗಲು ಕೊಟ್ಟಿದ್ದಾರೆ. ಶಿಕ್ಷಣರಂಗದಲ್ಲಿ ಬಹು ಕಾಲದಿಂದ ಕೂಡಿ ಬಿದ್ದ ಸಮಸ್ಯೆಗಳು ಈಗ ಸ್ಫೋಟಕಾವಸ್ಥೆಗೆ ಮುಟ್ಟಿರುವ ನಿಟ್ಟಿನಲ್ಲಿ ಅವರು ಅಧಿಕಾರ ವಹಿಸಿಕೊಂಡಿರುವುದರಿಂದ ಬೇರೆ ಬೇರೆ ವಿಷಯಗಳಲ್ಲಿ ಅವರ ಅಭಿಪ್ರಾಯ ತಿಳಿದುಕೊಳ್ಳುವ ಕುತೂಹಲ ನನಗಿತ್ತು.

ಅವರ ಕೌಟುಂಬಿಕ ಮತ್ತು ವಿದ್ಯಾರ್ಥಿ ಜೀವನದ ಪ್ರಾರಂಭಿಕ ಪ್ರಭಾವಗಳನ್ನು ಕುರಿತು ಕೇಳಿದೆ.

"ತಂದೆಯವರಿಗಿಂತ ತಾಯಿಯ ಪ್ರಭಾವ ನನ್ನ ಮೇಲೆ ಹೆಚ್ಚಾಗಿತ್ತು. ತಾಯಿ ಆಗಿನ ಕಾಲಕ್ಕೆ ಸುಶಿಕ್ಷಿತರೇ ಆಗಿದ್ದರು. ಅವರು ಪ್ರಾಮಾಣಿಕತೆ–ಶಿಸ್ತಿನಲ್ಲಿ ನಮ್ಮನ್ನು ಬೆಳೆಸಿದರು. ಸಂಸ್ಕೃತ ಶ್ಲೋಕ, ಕನ್ನಡ ಪದ್ಯಗಳ ಕಂಠಪಾಠದೊಡನೆ ಸಾಹಿತ್ಯಪ್ರೇಮದ ಬೀಜ ಬಿತ್ತಿದವರೂ ಅವರೇ. ಹಾವೇರಿ ಹೈಸ್ಕೂಲಿನಲ್ಲಿ ಆಗ ಬೆಂಗೇರಿ, ಕರ್ಜಗಿ, ಕುಬಸದ, ಕರಕಣ್ಣವರ, ಜೋಗಳೇಕರ ಮೊದಲಾದ ಸಮರ್ಥ ಶಿಕ್ಷಕರ ಕೈಯಲ್ಲಿ ನಮ್ಮ ತರಬೇತಿ ಆಯಿತು. ಜೋಗಳೇಕರ ಮಾಸ್ತರರು ಇಂಗ್ಲೀಷ್ ಸಾಹಿತ್ಯದಲ್ಲಿ ನನ್ನ ಆಸಕ್ತಿಯನ್ನು ಪ್ರಚೋದಿಸಿದ್ದು ಮುಂದೆ

ಕರ್ನಾಟಕ ಕಾಲೇಜಿನಲ್ಲಿ ಪ್ರೊ. ಮಹಿಷಿ, ಪ್ರೊ. ಮೆನೆಜಿಸ್ಸರ ಮೂಲಕ ಬೆಳೆಯಿತು.ಅವರ ಕ್ಲಾಸುಗಳು ಜೀವಚೈತನ್ಯದಿಂದ ಸ್ಫುರಿಸುತ್ತಿದ್ದವು. ಶ್ರೀರಂಗ, ಸ. ಸ. ಮಾಳವಾಡರು ಕನ್ನಡ ಸಾಹಿತ್ಯದಲ್ಲಿ ಅಭಿಮಾನವನ್ನು ಹುಟ್ಟಿಸಿದರು. ಹೀಗೆ ಬಿ. ಎ., ಎಂ. ಎ. ಗಳಲ್ಲಿ ಇಂಗ್ಲೀಷ್ ಮೇಜರ್ ಸಂಗಡ ಕನ್ನಡವನ್ನು ಮೈನರ್ ಆಗಿ ತೆಗೆದುಕೊಂಡೆ."

● ನೀವು ಕಲಿಯುವಾಗಿನ ಕಾಲೇಜುವಾತಾವರಣಕ್ಕೂ ಈಗಿನದಕ್ಕೂ ಏನು ಅಂತರ ಕಾಣುತ್ತೀರಿ?

"ಆಗ ಶಿಕ್ಷಕರ ಮೇಲಿದ್ದ ಗೌರವ ಈಗ ಕಾಣಸುವುದಿಲ್ಲ. ಎಲ್ಲ ಕ್ಷೇತ್ರಗಳಲ್ಲಿ ಆಗ respect for authority- ನಿಯಾಮಕರಿಗೆ ಗೌರವ ಇತ್ತು- ಈಗ ಅದು ಮುರಿದು ಬಿದ್ದಿದೆ."

● ಹೀಗಾಗಲು ಕಾರಣ ಏನಿರಬಹುದು?

"ಬಹುಶಃ ಪ್ರಜಾಸತ್ತೆಯ ಅಪಾರ್ಥ ಕಾರಣವಿರಬಹುದು. ಮನೆಯಲ್ಲಿಯೂ ಶಾಲೆ ಕಾಲೇಜುಗಳಲ್ಲಿಯೂ ಹಿರಿಯರೂ ಮೊದಲಿನವರಂತೆ ಈಗ ಶಿಸ್ತಿನ ಮೇಲ್ಪಂಕ್ತಿ ಹಾಕುವುದಿಲ್ಲ. ಉದಾಹರಣೆಗೆ ಹಿರಿಯರು ಮಕ್ಕಳ ಮುಂದೆ ಎಂದೂ ಸಿಗರೇಟು ಸೇದುತ್ತಿರಲಿಲ್ಲ. ಹಾಗೆಯೇ ಶಿಸ್ತಿನ ಅನುಭವ, ಹಿನ್ನೆಲೆ ಇಲ್ಲದ ವಿಶಾಲ ವರ್ಗಗಳು ವಿದ್ಯಾರ್ಜನೆಗೆ ಧಾವಿಸುತ್ತಿರುವುದೂ ಒಂದು ಕಾರಣವಿರಬಹುದು"

● ಇಂದಿನ ವಿದ್ಯಾರ್ಥಿ ಗಲಭೆಗಳ ಮೂಲ ಕಾರಣ ಏನು?

"ವಿದ್ಯಾರ್ಥಿ—ಶಿಕ್ಷಕ ಸಂಬಂಧ ಈಗ ತೀರ ಅ—ವೈಯಕ್ತಿಕವಾಗಿದೆ.ವಿದ್ಯಾರ್ಥಿಗಳು ವ್ಯಕ್ತಿಗಳಾಗಿರುವ ಬದಲು ನಂಬರುಗಳಾಗಿ ಬಿಟ್ಟಿದ್ದಾರೆ. ತ್ವರಿತ ವಿಸ್ತರಣೆಯ ಗಡಿಬಿಡಿಯಲ್ಲಿ ಸ್ವಭಾವದಿಂದ ಶಿಕ್ಷಕತ್ವಕ್ಕೆ ಸರಿ ಹೊಂದದದರು ಈ ಉದ್ಯೋಗಕ್ಕೆ ಸೇರಿದ್ದಾರೆ. ಇದೆಲ್ಲದರಿಂದ ವಿದ್ಯಾರ್ಥಿಗಳಿಗೆ ತಮ್ಮನ್ನು ಯಾರೂ ಕೇಳುವವರಿಲ್ಲ, ತಾವೇಕೆ ಯಾರನ್ನಾದರೂ ಕೇಳಬೇಕು ಎಂಬ ಅನಿಸಿಕೆ ಬಂದುಬಿಡುತ್ತದೆ. ಇದು ಸಂಬಳ ಸಾರಿಗೆ ಸುಧಾರಣೆಯಿಂದಲೇ ತಿದ್ದತಕ್ಕ ಸಮಸ್ಯೆಯಲ್ಲ."

'ಸ್ಯಾಂಡ್ ವಿಚ್ ಕೋರ್ಸ್'

● ಉತ್ಪಾದನಮುಖಿ, ಉದ್ಯೋಗಮುಖಿ ಶಿಕ್ಷಣ ಬೇಕೆಂಬ ಮಾತು ಕೇಳಿಬರುತ್ತಿದೆ. ಇದಕ್ಕೆ ಮುಂದಿನ ಐದೋ ಹತ್ತೋ ವರ್ಷಗಳಲ್ಲಿ ಇಂಥಿಂಥ ಕೆಲಸಕ್ಕೆ ಇಂತಿಷ್ಟು ಜನ ಬೇಕಾದೀತೆಂಬ ಸುಮಾರು ನಿಖರವಾದ ಮುನ್ನಂದಾಜು ಬೇಕಲ್ಲವೇ? ಇಂಥ ಅಂದಾಜನ್ನು ಯಾರಾದರೂ ತಯಾರಿಸಿದ್ದಾರೆಯೆ? ನಿಮ್ಮ ಯೋಜನೆ ಏನು?

"ಉತ್ಪಾದನಾ ಮುಖಿ ಶಿಕ್ಷಣದ ಕಲ್ಪನೆ ಒಳ್ಳೇದು. ಪಿ. ಯು. ಸಿ.ಯಲ್ಲೇ ಇದು ಆರಂಭವಾದರೆ ಸೇಕಡಾ ೬೦ ವಿದ್ಯಾರ್ಥಿಗಳು ಅತ್ತ ಸಾಗುತ್ತಾರೆ. ಸ್ವಲ್ಪವಾದರೂ ಪಾಂಡಿತ್ಯ ಮುಖಿ (academic) ಮನೋವೃತ್ತಿ ಉಳ್ಳ ಇತರರು ಪದವೀ ವರ್ಗಗಳಿಗೆ ಬರುತ್ತಾರೆ. ಇಷ್ಟು ಸಾಕು. ಆದರೆ ಎಸ್. ಎಸ್. ಎಲ್. ಸಿ. ವರೆಗೆ ಜೀವನ ಮೌಲ್ಯಗಳನ್ನು ಪೋಷಿಸಲು ಅಗತ್ಯವಾದ ವಿಶಾಲ ತಳಹದಿಯ ಸಾಮಾನ್ಯ ಶಿಕ್ಷಣ ಬೇಕೇಬೇಕು. ಜೀವನೋಪಾಯವೊಂದೇ ಶಿಕ್ಷಣದ ಗುರಿ ಆಗಬಾರದು. ಈಗ ವೈದ್ಯರನ್ನು ಕೂಡ ಹಣಗಳಿಕೆಯ ಯಂತ್ರಗಳೆಂಬಂತೆ ತರಬೇತು ಮಾಡಲಾಗುತ್ತಿದೆ.

"ಅಂದಾಜು ಅಂಕೆ ಸಂಖ್ಯೆಗಳ ಬಗ್ಗೆ ನೀವನ್ನುವುದು ಸರಿ. ಸರಿಯಾದ (up-to-date) ಅಂಕೆ ಸಂಖ್ಯೆಗಳು ಇನ್ನೂ ಸಿದ್ಧವಾಗುತ್ತಿಲ್ಲ. ಅಖಿಲ ಭಾರತ ವ್ಯಾಪ್ತಿಯ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಕೂಡ ವಿದ್ಯಾರ್ಥಿಗಳಿಗೇಕೆ, ವಿದ್ಯಾ ಸಂಸ್ಥೆಗಳಿಗೂ ಸರಿಯಾದ ಸೂಚನೆಗಳು ಸಿಗುತ್ತಿಲ್ಲ. ಇದಕ್ಕೆ ವೈಜ್ಞಾನಿಕ—ಅಧ್ಯಯನಗಳು ಅಗತ್ಯ. ವೃತ್ತಿ ಮಾರ್ಗದರ್ಶನವೂ ಬೇಕು."

● ನೀವು ವಿದೇಶಗಳನ್ನು ಸಂದರ್ಶಿಸಿದ್ದೀರಿ. ಅಲ್ಲಿ ಹೇಗೆ ಇದನ್ನು ನಿಭಾಯಿಸುತ್ತಾರೆ?

"ಇಂಗ್ಲಂಡಿನಲ್ಲಿ ೧೯೭೦—೮೦ರ ದಶಮಾನದ ಬಗ್ಗೆ frame work of expansion- ವಿಸ್ತರಣೆಯ ಚೌಕಟ್ಟು—ಎಂಬ ಅಧ್ಯಯನವನ್ನು ೧೯೬೭ರಲ್ಲೇ ಪ್ರಕಟಿಸಿದರು. ನಮ್ಮಲ್ಲಿಯೂ ರಾಜ್ಯ ಮತ್ತು ಕೇಂದ್ರ ಸರಕಾರದವರು ಇಂಥ ಅಧ್ಯಯನಗಳನು ಮಾಡಿಸಿ ಪ್ರಕಟಿಸಬೇಕು.

"ಅಲ್ಲಿ ಸೇಕಡಾ ೪೦ರಷ್ಟು ವಿದ್ಯಾರ್ಥಿಗಳು ಪಾಲಿಟೆಕ್ನಿಕ್ ಕೋರ್ಸುಗಳಿಗೆ ಹೋಗುತ್ತಾರೆ. ಇವು ಡಿಗ್ರಿಗಳಿಗೆ ಸಮಾನ ಅಥವಾ ವೈಕಲ್ಪಿಕ (alternative) ಆಗಬೇಕೆಂಬುದು ಅವರ ಯತ್ನ. ಅಲ್ಲಿ ಶಿಕ್ಷಣದ ಆಡಳಿತ ಕೌಂಟಿ ಕೌನ್ಸಿಲ್ಲು

ಗಳ ಕೈಲಿದೆ. ತಂತಮ್ಮ ಪ್ರದೇಶಗಳಲ್ಲಿನ ಕಾರಖಾನೆ ಇತ್ಯಾದಿಗಳಲ್ಲಿ ಕಾಲ ಕಾಲಕ್ಕೆ ಎಷ್ಟು ಅವಕಾಶಗಳುಂಟೆಂದು ನಿಶ್ಚಿತಪಡಿಸಿಕೊಂಡು ಅದಕ್ಕೆ ಸರಿಯಾದ ಸಂಖ್ಯೆಯಲ್ಲಿ ತರಬೇತಿ ಕೊಡುತ್ತಾರೆ.

"ಪಾಲಿಟೆಕ್ನಿಕ್ಕಿಗೆ ಹೊಂದಿ ಸ್ಯಾಂಡ್‌ವಿಚ್ ಕೋರ್ಸ್‌ಗಳನ್ನು ಅವರು ಏರ್ಪಡಿಸಿದ್ದು ಗಮನಾರ್ಹ. ಪಾಲಿಟೆಕ್ನಿಕ್‌ನಲ್ಲಿ ಸಿದ್ಧಾಂತಗಳನ್ನು ವಿದ್ಯಾರ್ಥಿ ಓದಿ ಕಾರಖಾನೆಗೆ ಪ್ರತ್ಯಕ್ಷ ತರಬೇತಿಗೆ ಬರುತ್ತಾನೆ. ಅದನ್ನು ಮುಗಿಸಿ ಪುನಃ ಪಾಲಿಟೆಕ್ನಿಕ್ಕಿಗೆ ಮರಳಿ ಓದು ಮುಗಿಸುತ್ತಾನೆ. ತತ್‌ಕ್ಷಣ ಅವನನ್ನು ಆ ಕಾರಖಾನೆ ಸೇರಿಸಿಕೊಳ್ಳುತ್ತದೆ. ನೌಕರಿ ಗ್ಯಾರಂಟಿಯುಳ್ಳ ಇಂಥ ಕ್ರಮ ಇಲ್ಲಿಯೂ ಬಳಕೆಗೆ ಬರಬೇಕು."

● ಈಚೆಗೆ ಮಂತ್ರಿಗಳೊಬ್ಬರು ನಮ್ಮಲ್ಲಿ ಶಿಕ್ಷಣ ತಜ್ಞರು ಮಾರ್ಗದರ್ಶನದಲ್ಲಿ ವಿಫಲರಾದರೆಂದು ಹೇಳಿದರು. ನಿಮ್ಮ ಅಭಿಪ್ರಾಯವೇನು?

"ಇದು ಬಲು ಅಸ್ಪಷ್ಟ ಆಕ್ಷೇಪ. ಶಿಕ್ಷಣ ರಂಗದಲ್ಲಿರುವವರನ್ನು ಸರಿಯಾಗಿ ವಿಚಾರಿಸದೆ ಸರಕಾರದವರು ನಿರ್ಣಯ ಕೈಕೊಳ್ಳುತ್ತಾರೆ. ಮೂಲ ಉದ್ದೇಶ ಮರೆತು ಪದೇ ಪದೇ ಬದಲಾವಣೆಗಳನ್ನು ಮಾಡಿ ಬಿಡುತ್ತಾರೆ. ಉದಾಹರಣೆಗೆ ಪಿ. ಯು. ಸಿ. ಪ್ರಾರಂಭಿಸಿದ್ದು ಮೂಲತಃ ಕಾಲೇಜುಗಳಿಲ್ಲದ ಗ್ರಾಮಾಂತರದಲ್ಲಿ ಹತ್ತಿರದಲ್ಲೇ ಇನ್ನೆರಡು ವರ್ಷ ಶಿಕ್ಷಣ ಮುಂದುವರಿಯಲಿ ಎಂಬುದಕ್ಕಾಗಿ. ಆದರೆ ಮುಂದೆ ಅದನ್ನು ಮರೆತು ಕಾಲೇಜುಗಳಿರುವ ಪಟ್ಟಣಗಳಲ್ಲಿಯೂ ಪ್ರತ್ಯೇಕ ಜ್ಯೂನಿಯರ್ ಕಾಲೇಜುಗಳಿಗೆ ಅನುಮತಿ ಕೊಟ್ಟರು– ರಾಜಕೀಯ ಒತ್ತಡಗಳಿಗೆ ಮಣಿದು."

ಮಟ್ಟ ಇಳಿದಿದೆಯೆ ?

● ವೃತ್ತಿಮುಖ ಶಿಕ್ಷಣದ ಬಗ್ಗೆ ನಿಮ್ಮ ವಿಚಾರಗಳೇನು?

"ಪಿ. ಯು. ಸಿ. ಯಲ್ಲಿ ಈಗಾಗಲೇ ಇಂಥ ಕೋರ್ಸುಗಳನ್ನು ಪ್ರಾರಂಭಿಸಿದ್ದು ಯುಕ್ತ. ಆದರೆ ಕಾಲಾಂತರದಿಂದ ವೃತ್ತಿಮುಖ ಕೋರ್ಸುಗಳಿಗೆ ಹೋದವರಿಗೂ ಆ ಮೇಲೆ ಪಾಂಡಿತ್ಯಮುಖ (ವಿಶ್ವವಿದ್ಯಾಲಯ) ಕೋರ್ಸುಗಳಿಗೆ ಬರಲು ಅವಕಾಶ ಇರಬೇಕು. ಇಂಗ್ಲಂಡಿನಲ್ಲಿ ಇಂಥ 'ಬಹುಗುಣ ಪ್ರವೇಶ' ವ್ಯವಸ್ಥೆ ಇದೆ. ಮುಕ್ತ (open) ವಿಶ್ವವಿದ್ಯಾಲಯ. ಕಾಲಬದ್ಧ ಕೋರ್ಸುಗಳು ಮೊದಲಾದವುಗಳ ಮೂಲಕ ಮನೆಯಲ್ಲೇ ಅಭ್ಯಸಿಸಿ ಅರ್ಹತೆ ಹೆಚ್ಚಿಸಿಕೊಳ್ಳುವ ವ್ಯವಸ್ಥೆ ಅಲ್ಲಿ ಸಫಲವಾಗಿದೆ. ನಮ್ಮಲ್ಲಿಯೂ ಎಕ್ಸ್‌ಟರ್ನಲ್ ಡಿಗ್ರಿಗಳಿಂದ ಒಳ್ಳೆಯದೇ ಆಗಿದೆ."

● ಶಿಕ್ಷಣ ಮಟ್ಟದ ಅವನತಿಯ ಬಗ್ಗೆ ಬಹಳ ಕೇಳಿ ಬರುತ್ತಿದೆಯಲ್ಲ?

● "ಮಟ್ಟ ಎಂಬುದೊಂದು ಅಸ್ಫುಟ ಕಲ್ಪನೆ. ಈಗಿನ ವಿದ್ಯಾರ್ಥಿಗಳಿಗೆ ಸಹಜವಾಗಿ ಬರುವ ಅನುಭವಗಳಿಂದಾಗಿ ನಮ್ಮ ಕಾಲದವರಿಗಿಂತ ಅವರು ಹೆಚ್ಚು ವೈವಿಧ್ಯವುಳ್ಳ ಪರಿಜ್ಞಾನ ಪಡೆದಿರುತ್ತಾರೆ. ಎಷ್ಟೋ ಸಲ ಇಂಗ್ಲೀಷ್ ಚೆನ್ನಾಗಿ ಬರೆಯಲು ಬರುವುದಿಲ್ಲವೆಂಬುದನ್ನೇ ಮಟ್ಟದ ಅವನತಿ ಎಂದು ಭ್ರಮಿಸಲಾಗುತ್ತಿದೆ.

"ಆದರೂ ಮಟ್ಟ ಇಳಿಮುಖವಾಗಿದೆಯೆಂಬುದರಲ್ಲಿ ಸತ್ಯ ಇದೆ. ಇದಕ್ಕೆ ಕಾರಣವೆಂದರೆ ಜ್ಞಾನವೇ ಶಕ್ತಿ ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲು ತಪ್ಪಿದ್ದು. ಕಲಿಸುವ ವಿಷಯದ ಪ್ರಯೋಜನ ಕಲಿಸುವವರಿಗೇ ಸಂದಿಗ್ಧವಾಗಿ ಉಳಿದರೆ ಕಲಿಯುವವರಿಗೆ ಗಂಭೀರವಾದ ಆಸಕ್ತಿ ಹುಟ್ಟುವುದು ಕಷ್ಟ. ಜ್ಞಾನದ ಪ್ರಯೋಜನ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಬೇಕು."

● ವಿದ್ಯಾ ಪರಿಣತಿಯ ನಿರ್ಣಯವನ್ನು ಇಂದು ಲಘುತಮ ಸಾಮಾನ್ಯ ಯೋಗ್ಯತೆಯ ಮಟ್ಟದಲ್ಲಿ ಅಳೆಯುವುದರಿಂದ ಶಿಕ್ಷಣ ಮಟ್ಟ ಇಳಿದಿದೆಯೇ ಎಂದು ನನ್ನ ಸಂಶಯ. ಬಿಗಿಯಾದ ಮಟ್ಟಗಳನ್ನು ಜಾರಿಗೆ ತಂದರೆ ಇದೇ ವಿದ್ಯಾರ್ಥಿಗಳು ಆ ಮಟ್ಟಕ್ಕೆ ಸರಿಯಾಗಿ ಅಭ್ಯಾಸ ಮಾಡಿ ತೇರ್ಗಡೆಯಾಗಲಿಕ್ಕಿಲ್ಲವೇ? ಆಹ್ವಾನಕ್ಕೆ (challenge)ಗೆ ಸರಿಯಾದ ಪ್ರಯತ್ನ ಮನುಷ್ಯ ಸ್ವಭಾವವಲ್ಲವೆ?

"ಬರೇ ಬಿಗಿಯಾದ ಆಹ್ವಾನ ಸಾಲದು; ಅದರಿಂದ ನಪಾಸಿನ ಪ್ರಮಾಣ ಹೆಚ್ಚಾಗಿ ಮನುಷ್ಯ ಶಕ್ತಿಯ ಅಪವ್ಯಯ ಆದೀತು."

● ಕಾಲೇಜುಗಳಿಗೆ ಪ್ರವೇಶ ಕೊಡುವಾಗಲೇ ಬಿಗಿಯಾದ ಮಟ್ಟಗಳನ್ನು ಏಕೆ ಗೊತ್ತುಪಡಿಸಬಾರದು? ಅಥವಾ ಕಾಲೇಜುಗಳ ಹಣ ಕಾಸಿನ ಪ್ರಶ್ನೆ ಇದಕ್ಕೆ ಅಡ್ಡ ಬರುತ್ತದೆಯೇ?

"ಹಣಕಾಸಿನ ಹಿಡಿತ ಸರಕಾರದ್ದೇ ನಿರ್ವಹಿಸುತ್ತಿರುವುದರಿಂದ ಈಗ ಕಾಲೇಜು ಹಣಕಾಸಿನ ಸಮಸ್ಯೆಯೇನೂ ಇಲ್ಲ. ಆದರೆ ಜಾರಿಯಾದ ಮಟ್ಟಕ್ಕೆ ರಾಜಕೀಯ ವಿರೋಧ ಪ್ರಬಲವಾಗಿ ಬಂದೀತು. ಹಿಂದುಳಿದವರನ್ನು ಹೊರಗಿಡಲಿಕ್ಕೇ ಹೀಗೆ ಮಾಡಿದ್ದಾರೆಂಬ ಭಾವನೆ ಬೆಳೆದೀತು. ಇದು ಸರಿಯಿಲ್ಲದಿದ್ದರೂ ಒಂದು ತಥ್ಯ. ಅದನ್ನು ಅಲಕ್ಷಿಸಿದರೆ ನಡೆಯದು.

ಮುಂದುವರಿದ ದೇಶಗಳಲ್ಲಿಯೂ ಎಲ್ಲ ವಿದ್ಯಾಲಯಗಳಲ್ಲಿ ಬಿಗಿಯಾದ ಪ್ರವೇಶ ನಿಯಮಗಳಿಲ್ಲ. ಅಮೇರಿಕದಲ್ಲಿ ಪ್ರಿನ್ಸ್‌ಟನ್ನಿನಂಥ ಹೆಸರಾದ ಖಾಸಗಿ ವಿಶ್ವವಿದ್ಯಾಲಯಗಳಲ್ಲದೆ ಕಡಿಮೆ ಶುಲ್ಕದ ರಾಜ್ಯ (State) ವಿಶ್ವವಿದ್ಯಾಲಯಗಳೂ ೨೦೦೦ ಕಾಲೇಜುಗಳೂ ಇವೆ. ಈ ಸಾಮಾನ್ಯ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾರ್ಹತೆ ಅಥವಾ ಪರೀಕ್ಷಾ ಮಟ್ಟ ಅಷ್ಟು ಕಠೋರವಾಗಿಲ್ಲ. ಹಾರ್ವರ್ಡ್, ಪ್ರಿನ್ಸ್‌ಟನ್‌ಸಂಥ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಬಿಗಿಯೂ ಹೌದು, ಅವುಗಳ ಡಿಗ್ರಿಗಳಿಗೆ ಹೆಚ್ಚಿನ ಗೌರವ ಇರುವುದೂ ಹೌದು. ಆದರೆ ಅಂಥ ಪ್ರಾವೀಣ್ಯ ಬೇಕೆಂಬವರು ಮಾತ್ರ ಅಲ್ಲಿ ಹೋಗುತ್ತಾರೆ."

● ಕಳೆದ ಶೈಕ್ಷಣಿಕ ವರ್ಷದಲ್ಲಿ ನಡೆದ ಘಟನೆಗಳ ಹಿನ್ನೆಲೆಯಲ್ಲಿ ಸೆಮಿಸ್ಟರ್ ಪದ್ಧತಿಯ ಭವಿಷ್ಯದ ಬಗ್ಗೆ ಏನೆನಿಸುತ್ತದೆ?

"ನನಗೆ ಅದರ ಭವಿಷ್ಯದ ಬಗ್ಗೆ ವಿಶ್ವಾಸವಿದೆ. ಅದು ವಿದ್ಯಾರ್ಥಿಗಳಿಗೇ ಹಿತಕರ. ಅದರಲ್ಲಿ ಅವರಿಗೆ ದೈನಂದಿನವಾಗಿ ದುಡಿಯುವ ಅಗತ್ಯ ಬರುತ್ತದೆ. ಈಗಾಗಲೇ ಅನೇಕ ವಿದ್ಯಾರ್ಥಿಗಳಿಗೆ ಇದರ ಅನುಕೂಲಗಳ ಮನವರಿಕೆಯಾಗುತ್ತಿದೆ. ಎಂಜಿನಿಯರಿಂಗಿನಲ್ಲಿ ಅದು ಈಗಾಗಲೇ ಜನಪ್ರಿಯವಾಗಿದೆ. ಎಲ್ಲ ರಂಗಗಳಲ್ಲಿಯೂ ಅದು ಕಾಲಾಂತರದಲ್ಲಿ ಸ್ವೀಕಾರಾರ್ಹವಾಗುತ್ತದೆಂದು ನಾನು ನಂಬಿದ್ದೇನೆ.

"ಅದನ್ನು ಜಾರಿಗೆ ತರುವುದಕ್ಕೆ ಅವಸರ ಮಾಡಿದ್ದು ಮಾತ್ರ ಹೆಚ್ಚಾಯಿತು. ಅಧ್ಯಾಪಕರಿಗೆ ಅದು ಹೆಚ್ಚು ದುಡಿತ ಹೇರುತ್ತದೆ. ಅವರಿಂದ ಹೆಚ್ಚು ಉತ್ಸಾಹದ ಪ್ರತಿಕ್ರಿಯೆ ಬರುವುದು ಅಗತ್ಯ.

"ಆದರೆ ಮುಖ್ಯ ಸಮಸ್ಯೆ ಬಂದದ್ದು ಅಧ್ಯಾಪಕರ ಮೇಲೆ ವಿದ್ಯಾರ್ಥಿಗಳಿಗೆ ನಂಬಿಕೆ ಇಲ್ಲದ್ದು. ಅಧ್ಯಾಪಕರಿಗೆ ಇದರಲ್ಲಿ ಹೆಚ್ಚು ಅಧಿಕಾರ ಬರುವುದರಿಂದ ಅವರ ವೈಯಕ್ತಿಕ ರಾಗದ್ವೇಷಗಳಿಂದ ವಿದ್ಯಾರ್ಥಿಗಳ ಕೆಲಸದ ಬೆಲೆ ಕಟ್ಟುವುದರಲ್ಲಿ ಅನ್ಯಾಯಗಳಾದಾವೆಂದು ವಿದ್ಯಾರ್ಥಿಗಳು ಭಯಪಟ್ಟರು. ನನಗೆ ಅತ್ಯಂತ ದುಃಖದಾಯಕವಾದದ್ದು ಇದು. ನಾನು ನೋಡಿದ ಮಟ್ಟಿಗೆ ವಿದೇಶಗಳಲ್ಲಿ ವಿದ್ಯಾರ್ಥಿ-ಶಿಕ್ಷಕರ ಅವಿಶ್ವಾಸದ ಸಮಸ್ಯೆಯೇ ಇಲ್ಲ. ಆದರೆ ಇಲ್ಲಿಂದ ಹೋದ ವಿದ್ಯಾರ್ಥಿಗಳು ಮಾತ್ರ ಅಲ್ಲಿ ಕೂಡ ಶಿಕ್ಷಕರ ಮೇಲೆ ಪಕ್ಷಪಾತದ ಆರೋಪ ಮಾಡುತ್ತಾರೆಂದು ಕೆಲ ವಿಶ್ವವಿದ್ಯಾಲಯ ಶಿಕ್ಷಕರು ನನಗೆ ಹೇಳಿದರು. 'ನಾನು ಅನ್ಯಾಯ ಮಾಡುತ್ತೇನೆಂದು ಯಾವನಾದರೂ ವಿದ್ಯಾರ್ಥಿ ಹೇಳಿದರೆ ನನಗೆ ಸತ್ತ ಹಾಗಾಗುತ್ತದೆ' ಎಂದು ಒಬ್ಬ ಪ್ರೊಫೆಸರರು ನನ್ನ ಬಳಿ ದೂರಿದರು."

ನಿಯಂತ್ರಣ ಸ್ವಾಯತ್ತತೆ

● ವಿಶ್ವವಿದ್ಯಾಲಯಗಳ ಮೇಲೆ ಹೆಚ್ಚಿನ ಸರಕಾರಿ ನಿಯಂತ್ರಣದಿಂದ ಅವುಗಳ ಸ್ವಾಯತ್ತತೆ ನಷ್ಟವಾಗುವುದಿಲ್ಲವೆ? ಹಣಕಾಸಿನಲ್ಲಿ ವಿ.ವಿ.ಗಳು ಹೆಚ್ಚು ಆತ್ಮನಿರ್ಭರವಾದರೆ ಒಳಿತಲ್ಲವೆ? ವಿದೇಶಗಳ ಅನುಭವ ಏನು?

"ಅಮೇರಿಕದಲ್ಲಿ ಹೆಚ್ಚಿನ ಕಾಲೇಜು, ವಿಶ್ವವಿದ್ಯಾಲಯಗಳು ಹಣಕಾಸಿನಲ್ಲಿ ಹೆಚ್ಚು ಸ್ವತಂತ್ರವಾಗಿವೆ. Land grant ಪದ್ಧತಿ ಇದಕ್ಕೆ ಪೋಷಕವಾಗಿದೆ. ಇಂಗ್ಲಂಡಿನಲ್ಲಿ ಸರಕಾರಿ ಅನುದಾನ ಇದ್ದರೂ ನೇರ ನಿಯಂತ್ರಣ ಇಲ್ಲ. ಅಲ್ಲಿ ವಿ.ವಿ.ಗಳಿಗೆ ನಿಖರವಾದ ಮೊತ್ತವನ್ನು ಅನುದಾನ ಕೊಟ್ಟು ಆ ಮೇಲೆ ಒಂದು ನಿರ್ದಿಷ್ಟಪ್ರಮಾಣದಲ್ಲಿ ವಾರ್ಷಿಕ ಬಡತಿ ವ್ಯವಸ್ಥೆ ಇಡುತ್ತಾರೆ. ಆಮೇಲೆ ಯಾವುದೇ ಹಸ್ತಕ್ಷೇಪ ಇಲ್ಲ. ಹಣಕಾಸು ನೇರವಾಗಿ ಸರಕಾರದ ಸಂಕೋಚದ ಮಾತಾದರೆ ಅದರಲ್ಲಿ ರಾಜಕೀಯ ಕೈವಾಡಗಳು ಅಪರಿಹಾರ್ಯವಾಗುತ್ತವೆ. ಇಂಗ್ಲಂಡಿನ ರೀತಿ ಇಲ್ಲಿಯೂ ಬಂದರೆ ಒಳ್ಳೇದು. ಈಗ ಹಾಗಿಲ್ಲವೆಂಬುದು ವಿಷಾದಕರ.

"ಒಂದು ಮಹತ್ವದ ವಿಷಯವೆಂದರೆ ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ತನ್ನದೇ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವಕಾಶ ಬೇಕು. ಇದಕ್ಕೆ ಸರಕಾರಗಳು ಪ್ರೋತ್ಸಾಹ ಕೊಡಬೇಕು."

● ಶಿಕ್ಷಣ ಮಾಧ್ಯಮದ ಬಗ್ಗೆ ನಿಮ್ಮ ಅಭಿಮತವೇ

ಸು? ಇಂಗ್ಲೀಷಿನ ಗೌಣೀಕರಣದಿಂದ ಹಿತವಾದೀತೆ?

"ಎಲ್ಲ ಹಂತಗಳಲ್ಲಿ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕು ನಿಜ; ಆದರೆ ಇದು ಪದವೀ ಪರೀಕ್ಷೆಯವರೆಗೆ ಮಾತ್ರ ಅನ್ವಯಿಸಬೇಕು. ಪದವಿ-ಉತ್ತರ ಅಧ್ಯಯ ಇಂಗ್ಲೀಷಿನಲ್ಲೇ ಇರಬೇಕು. ಇದಕ್ಕಾಗಿ ಪದವೀ ಕೋರ್ಸುಗಳಲ್ಲಿಯೂ ಇಂಗ್ಲೀಷು ಕಡ್ಡಾಯವಾಗಬೇಕು, ತ್ರಿಭಾಷಾ ಸೂತ್ರ ಮೆಟ್ರಿಕ್ ತನಕ ಇದ್ದರೆ ಸಾಕು. ಮುಂದೆ ಮಾತೃಭಾಷೆ ಮತ್ತು ಇಂಗ್ಲೀಷ್ ಬೇಕು.

"ಇದು ವಾಸ್ತವದ ಪ್ರಶ್ನೆ: ಅತಿ ಭಾವುಕತೆ ಬೇಡ. ಇಂಗ್ಲೀಷ್ ಗೌಣವಾದರೆ ವಿದ್ಯಾರ್ಥಿಯ ಜ್ಞಾನದ ಕ್ಷಿತಿಜವನ್ನು ಇಕ್ಕಟ್ಟು ಮಾಡಿದಂತಾಗುತ್ತದೆ. ಮಾಸ್ಟರ್ ಡಿಗ್ರಿಗಳಿಗೆ ಬೇಕಾದ ಮಟ್ಟದ ಜ್ಞಾನಾರ್ಜನೆಗೆ ಬೇಕಾದ ಗ್ರಂಥ ಸಂಪತ್ತು ದೇಶಿ ಭಾಷೆಗಳಲ್ಲಿ ಇಲ್ಲ."

● ಜಪಾನ್ ಮೊದಲಾದ ವಿದೇಶಗಳಲ್ಲಿ ಇಂಗ್ಲೀಷಿನ ಅವಲಂಬನೆ ಇಲ್ಲ ಎನ್ನುತ್ತಾರಲ್ಲ?

"ಇದು ಅಷ್ಟು ಸರಿಯಲ್ಲ. ಜಪಾನಿನಲ್ಲಿ ಇಂಗ್ಲೀಷು ಪುನಃ ಪ್ರಾಧಾನ್ಯ ಪಡೆಯುತ್ತಿದೆ. ಇಂಗ್ಲೀಷಿನಲ್ಲಿ ಸಾಹಿತ್ಯ ಸೂಚಿ (documentation) ಬಹಳ ಚೆನ್ನಾಗಿದೆ. ಸಂಶೋಧನೆಗೆ ಇದು ತುಂಬಾ ಅಗತ್ಯ. ಮೇಲಾಗಿ ಸಂಶೋಧನೆಗಳ ವರದಿಗಳು ಯಾವುದಾದರೂ ಅಂತಾರಾಷ್ಟ್ರೀಯ ಭಾಷೆಯಲ್ಲಿಲ್ಲದೆ ಇದ್ದರೆ ಅದಕ್ಕೆ ಮನ್ನಣೆ ಸಿಗುವುದು ಕಷ್ಟ."

ವಿದ್ವತ್ ವಾತಾವರಣದ ಅಭಾವ

● ವಿಶ್ವವಿದ್ಯಾಲಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸುವುದು ಉಚಿತವೆ?

"ರಾಜಕೀಯ ಜ್ಞಾನ ಅತ್ಯಗತ್ಯವೇ ಹೊರತು ಸಕ್ರಿಯ ರಾಜಕಾರಣವಲ್ಲ. ಸಕ್ರಿಯ ರಾಜಕಾರಣ ವೆಂಬುದು ಅರೆಹೊತ್ತಿನ (part-time) ಉದ್ಯೋಗವಲ್ಲ. ಶಿಕ್ಷಣವೂ ಹಾಗೆಯೇ. ಆದ್ದರಿಂದ ನೇರವಾಗಿ ವಿದ್ಯಾರ್ಥಿಗಳಾಗಲಿ ಶಿಕ್ಷಕರಾಗಲಿ ರಾಜಕೀಯದಲ್ಲಿ ಸೇರುವುದು, ಪಕ್ಷಗಳ ಸದಸ್ಯರಾಗುವುದು, ಚುನಾವಣೆಗಳಲ್ಲಿ ಸ್ಪರ್ಧಿಸುವುದು ಹಿತವೆನಿಸುವುದಿಲ್ಲ. ಆದರೆ ಇಡೀ ದೇಶದ ಭವಿಷ್ಯಕ್ಕೆ ವಿಪತ್ತು ಬಂದಾಗಿನ ಮಾತು ಬೇರೆ."

● 'ವಿಶ್ವವಿದ್ಯಾಲಯ ರಾಜಕಾರಣ' ನಮ್ಮ ದೇಶದಲ್ಲಿ ಒಂದು ಸಮಸ್ಯೆಯೆ ಆಗಿದೆ. ಇದನ್ನು ತಪ್ಪಿಸಲು ಹಾದಿ ಉಂಟೆ? ಪರದೇಶಗಳ ಅನುಭವ ಏನು? ಶಿಕ್ಷಕರ ಟ್ರೇಡ್ ಯೂನಿಯನಿಜಂ ವಿಷಯವೇನು?

"ವಿಷ್ಣುರ್ ಸ್ನೋ ನಾಟಕಗಳನ್ನು ಓದಿದರೆ ವಿದೇಶಗಳಲ್ಲಿನ ವಿಶ್ವವಿದ್ಯಾಲಯ ರಾಜಕಾರಣದ ಹೊಳಹು ಸಿಕ್ಕುತ್ತದೆ. ಆಡಳಿತ ಚೆನ್ನಾಗಿ, ನ್ಯಾಯನಿಷ್ಠವಾಗಿ ಇದ್ದಲ್ಲಿ ರಾಜಕಾರಣ ಕಮ್ಮಿ; ಇಲ್ಲದಲ್ಲಿ ಹೆಚ್ಚು. ಇಲ್ಲಿಯೂ ಅಷ್ಟೇ. ಸರ್ವಸಮ್ಮತ ನ್ಯಾಯಮಾರ್ಗದಲ್ಲಿ ನಿರ್ಣಯಗಳಾದರೆ ರಾಜಕಾರಣ ತಂತಾನೆ ಕಡಿಮೆ ಆದೀತು. ಎಲ್ಲದಕ್ಕೂ ವೈಯಕ್ತಿಕ ಇಚ್ಛೆ, ವೈಯಕ್ತಿಕ ಸಮೀಕರಣವೇ ಅಳತೆಗೋಲಾದರೆ ಆಂತರಿಕ ರಾಜಕಾರಣ ಹೆಚ್ಚುತ್ತದೆ. ಅದೇ ಪ್ರಕಾರ ವೈಯಕ್ತಿಕ ವಿದ್ವತ್ ಸಾಧನೆಗಳ ಬಗ್ಗೆ ಸಮಾಜದಲ್ಲಿ ಉಪೇಕ್ಷೆ ಇದ್ದರೆ ಅನ್ಯಾಯಗಳು ಹೆಚ್ಚಾಗುತ್ತವೆ. ಮುಖಸ್ತುತಿಯ ಪ್ರಭಾವ ಮುಖ್ಯವಾಗುತ್ತದೆ. ನ್ಯಾಯ ದೊರೆಯುತ್ತದೆನ್ನುವ ಭರವಸೆ ಮುಖ್ಯ. ಪಾವಟೆ ಯುವರೂಪವರು ಅಧಿಕಾರದಲ್ಲಿದ್ದಲ್ಲಿ ರಾಜಕಾರಣ ಕಮ್ಮಿಯಿರುವುದು ಅನುಭವದ ಮಾತು."

● ವಿಶ್ವವಿದ್ಯಾಲಯಗಳಲ್ಲಿ ವೈಜ್ಞಾನಿಕ, ಸಾಮಾಜಿಕ ಸಂಶೋಧನೆಗಳು ಇಂದು ಎಷ್ಟು ಮಟ್ಟಿಗೆ ಪ್ರಸ್ತುತ ಅಗತ್ಯಕ್ಕೆ ಅನುಗುಣವಾಗಿವೆ? ನೀವು ಈ ಬಗ್ಗೆ ಏನು ಯೋಚಿಸಿದ್ದೀರಿ?

"ಸಂಶೋಧನೆಗಳು ಸಮಾಜಕ್ಕೆ ಉಪಯೋಗ ಬೀಳುವಂತಿರಬೇಕು. ನಮ್ಮ ಯತ್ನಗಳು ಈ ಧ್ಯೇಯದಲ್ಲಿ ಸ್ವಲ್ಪ ಹಿಂದುಳಿದಿರುವುದು ನಿಜ. ನನ್ನ ಯೋಜನೆಗಳನ್ನು ಕುರಿತು ಹೇಳಬೇಕಾದರೆ ನಮ್ಮ ಪ್ರದೇಶದ ಸಮಸ್ಯೆಗಳನ್ನೇ ಹೆಚ್ಚು ಆಧರಿಸಿ ಸಂಶೋಧನೆ ನಡೆಸಲು ವಿವಿಧ ವಿಭಾಗಗಳಿಗೆ ಸೂಚಿಸುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ಕೂಡ (desertion) ಗಳಿಗೆ ಅವರವರ ಗ್ರಾಮ ಅಥವಾ ಸ್ಥಳದ ಭೌಗೋಲಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಶ್ನೆಗಳ ಬಗ್ಗೆಯೇ ಲೇಖನಗಳನ್ನು ತಯಾರಿಸಲು ಒತ್ತಾಯಿಸುತ್ತಿದ್ದೇವೆ.

"Post doctoral research ಗೆ ಕೂಡ ಸಾಧ್ಯವಿದ್ದ ಪ್ರೋತ್ಸಾಹ ಕೊಡುತ್ತೇವೆ. ಆಜೀವನ

ಸಂಶೋಧನೆಗೆ ನಮ್ಮ ದೇಶದಲ್ಲಿ ಸಾಕಷ್ಟು ಅವಕಾಶ ಸಿಗುತ್ತಿಲ್ಲ. ಉದಾಹರಣೆಗೆ ಪ್ರೊ. ಸಿ.ಜೆ. ಜಾರ್ಜರು ೮೦ರ ವಯಸ್ಸಿನಲ್ಲಿಯೂ ಪ್ರಾಣಿಶಾಸ್ತ್ರ ಸಂಶೋಧನೆಯಲ್ಲಿ ಆಸಕ್ತರು. ಇದಕ್ಕೂ ಪ್ರೋತ್ಸಾಹ ಹೆಚ್ಚಿಸಬೇಕಾಗಿದೆ.

"ಆಧುನಿಕ ಸಂಶೋಧನೆ ಬಹಳ ಮಟ್ಟಿಗೆ ಒಂದು ಗುಂಪಿನ ಸಮಷ್ಟಿಯತ್ನದ ವಿಷಯವಾಗುತ್ತಿದೆ. ಇಂಥ ಯತ್ನಕ್ಕೆ ಚಾಲನೆ ಕೊಡುವುದಕ್ಕೆ ನಾನು ಇನ್ನೂ ಯೋಜನೆ ಮಾಡಬೇಕಾಗಿದೆ."

● ಸೊಂಡೂರು ತಾಂತ್ರಿಕ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ ನೀವು ಇದ್ದಿರಿ. ಅದರ ಸಂಭಾವ್ಯತೆಗಳು ಹೇಗಿವೆ?

"ಸೊಂಡೂರು ಒಳ್ಳೇ ಸ್ನಾತಕೋತ್ತರ ಕೇಂದ್ರವಾಗಬಲ್ಲದು. ಆದರೆ ಅದಕ್ಕೆ ಇನ್ನೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಸಹಾಯ ಬಂದಿಲ್ಲ. ಅದರ ಪದವಿಗಳಿಗೆ ಮನ್ನಣೆ ಇದೆ. ಗಣಿ (mining) ವಿದ್ಯೆಯಲ್ಲಿ ಅಲ್ಲಿ ಒಳ್ಳೇ ಕೆಲಸ ಆಗುತ್ತಿದೆ. ಆ ಪ್ರದೇಶದಲ್ಲಿ ಗಣಿ ಉದ್ಯಮ ಅಷ್ಟು ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಅದಕ್ಕೆ ಸುಸಂಬದ್ಧತೆ ತರಲು ಈ ಕೇಂದ್ರ ಸಹಾಯವಾಗಬಹುದು. ಅಲ್ಲಿ ಉದ್ಯೋಗಾವಕಾಶಗಳೂ ಚೆನ್ನಾಗಿವೆ. ಈ ಕೇಂದ್ರಕ್ಕೆ ವಿಶ್ವವಿದ್ಯಾಲಯ ಅನುದಾನ ಆಯೋಗದ ನೆರವು ದೊರಕಿಸುವ ನಮ್ಮ ಪ್ರಯತ್ನ ಸಫಲವಾದರೆ ಅದು ಗಣಿ ಅಧ್ಯಯನದ ಉತ್ತಮ ಸ್ನಾತಕೋತ್ತರ ಶಾಲೆಯಾಗುವುದು ಖಂಡಿತ."

● ಕಲಬುರ್ಗಿ ವಿಶ್ವವಿದ್ಯಾಲಯದ ರೂಪರೇಖೆಯ ಬಗ್ಗೆ ನಿಮ್ಮ ಕಲ್ಪನೆ ಏನು?

"ಅದು ಕರ್ನಾಟಕ ವಿ.ವಿ.ದ ತದ್ಪ್ರತಿ ಆಗಬಾರದೆಂಬ ದೃಷ್ಟಿಯಿಂದ ಅದನ್ನು ರೂಪಿಸಲಾಗುತ್ತಿದೆ. ಸ್ವಲ್ಪ ಮಟ್ಟಿಗೆ ಅದು ಕರ್ನಾಟಕ ವಿ.ವಿ.ಕ್ಕೆ ಪೂರಕವಾಗುತ್ತಿದೆ. ಇಲ್ಲಿ ಮೂಲಭೂತ (fundamental) ವಾಗಿರುವ ವಿಷಯಗಳನ್ನು ಅಲ್ಲಿ ಅನ್ವಿತ (applied)ವಾಗಿ ಮಾಡಲಾಗುತ್ತಿದೆ. ಜೀವಾಣುಶಾಸ್ತ್ರ (microbiology) ಇತ್ಯಾದಿ ಹೊಸ ಕೋರ್ಸುಗಳೂ ಇವೆ. ಭೌತಶಾಸ್ತ್ರದಲ್ಲಿ ದೂರದರ್ಶನ (television) ಕೋರ್ಸು ಇದೆ. ಉರ್ದು ಮತ್ತು ಪರ್ಶಿಯನ್ ಭಾಷೆಗಳ ಅಧ್ಯಯನಕ್ಕೆ ಸೂಕ್ತ ವಾತಾವರಣ ಅಲ್ಲಿ ಇದೆ. ಜಾನಪದ ಸಾಹಿತ್ಯಾಧ್ಯಯನವೂ ಆಗುತ್ತಿದೆ. ಅದು ಸ್ವತಂತ್ರ ವಿಶ್ವವಿದ್ಯಾಲಯವಾಗಲಿಕ್ಕೆ ಇನ್ನೂ ಎರಡು ಮೂರು ವರ್ಷ ಹಿಡಿಯಬಹುದು. ಅದಕ್ಕೆ ಆಗತಕ್ಕ ಪೂರ್ವಾನುಷ್ಠಾನಗಳು ದೀರ್ಘ."

ವಿಶ್ವಾಸಗಳು ವೈಜ್ಞಾನಿಕ ಪರೀಕ್ಷೆ

● ನೀವು ನಮ್ಮ ದೇಶದ Institute of Advanced Study ಅಂಥ ಸಂಸ್ಥೆಗಳನ್ನೂ ವಿದೇಶಗಳಲ್ಲಿನ ತತ್ಸಮಾನ ಸಂಸ್ಥೆಗಳನ್ನೂ ಹತ್ತಿರದಿಂದ ಬಲ್ಲಿರಿ. ಅನೇಕ ಶೈಕ್ಷಣಿಕ ಪರಿಷತ್ತುಗಳಲ್ಲಿಯೂ ಭಾಗವಹಿಸುತ್ತಿದ್ದೀರಿ. ನಮ್ಮ ಬೌದ್ಧಿಕ ವರ್ಗದ ಮಾನಸಿಕ ಒಲವು ಮಾತಿನ ನಿಲವುಗಳಿಗೂ ವಿದೇಶಗಳಲ್ಲಿ ಕಾಣಬರುವವುಗಳಿಗೂ ಏನು ಅಂತರ ಕಂಡಿದ್ದೀರಿ? ನಮ್ಮ ದೇಶದಲ್ಲಿ ಧರ್ಮ ಇನ್ನೂ ತತ್ತ್ವಜ್ಞಾನಕ್ಕಿಂತ ಪ್ರಧಾನವಾಗಿದೆ. ಅನಿಸುವುದಿಲ್ಲವೇ? ವೈಜ್ಞಾನಿಕ ದೃಷ್ಟಿಕೋಣ ಬಲಗೊಂಡಿಲ್ಲವಲ್ಲವೆ?

"ನಮ್ಮ ಜನರಲ್ಲಿ ಇನ್ನೂ ಕೆಲ ಧಾರ್ಮಿಕ ವಿಶ್ವಾಸಗಳು ಬಲವಾಗಿವೆಯೆಂಬುದು ನಿಜ. ನಮ್ಮ elite ಎನಿಸುವ ಜನರಲ್ಲಿ ವೈಜ್ಞಾನಿಕ ದೃಷ್ಟಿಕೋಣ ಬಲವಾಗಿ ರೊಢವಾಗಿಲ್ಲವೆನ್ನುವುದೂ ಸತ್ಯ. ಇದಕ್ಕೆ ಕಾರಣ ಹೇಳುವುದು ಕಷ್ಟ. ಆದರೆ ಕೆಲ ವಿಶ್ವಾಸಗಳ ವೈಜ್ಞಾನಿಕ ಸತ್ವಪರೀಕ್ಷೆ ಮಾಡುವುದು ಸಾಧ್ಯ. ಆ ದಿಶೆಯಲ್ಲಿ ಕರ್ನಾಟಕ ವಿ.ವಿ. ಆಲೋಚಿಸುತ್ತಿದೆ. ಉದಾಹರಣೆಗೆ ಫಲಜ್ಯೋತಿಷ ಶಾಸ್ತ್ರದ ವಿಶ್ವಾಸ ನಮ್ಮಲ್ಲಿ ಸಾರ್ವತ್ರಿಕವಾಗಿದೆ. ಇದರ ವೈಜ್ಞಾನಿಕ ಆಧಾರದ-ನಿರಾಧಾರ ಇನ್ನೂ ಅನಿರ್ಣೀತವಾಗಿದೆ. ನಮ್ಮ ವಿ. ವಿ. ಆ ಬಗ್ಗೆ ಸಂಶೋಧನೆ ಕೈಕೊಳ್ಳಬೇಕೆಂದಿದೆ. ಅದು ಅಂತರ್‌- ಶಾಸ್ತ್ರ ಯೋಜನೆ. ಶುದ್ಧ ವೈಜ್ಞಾನಿಕ ಸತ್ವ ಪರೀಕ್ಷೆಗೆ ಜ್ಯೋತಿಷಶಾಸ್ತ್ರದ ಬೇರೆ ಬೇರೆ ಸಿದ್ಧಾಂತಗಳನ್ನು ಒಳಪಡಿಸಿ ಫಲಿತಾಂಶ ಪ್ರಕಟಿಸಲಾಗುವುದು."

ನಮ್ಮದು ಒಂದು ಸಂದರ್ಶನ ಎನ್ನುವುದಕ್ಕಿಂತಲೂ ಒಂದು ತರಹದ ಸುದೀರ್ಘ ಚರ್ಚೆಯೇ ಆಗಿತ್ತು. ಶ್ರೀ ಒಡೆಯರರು ಉದ್ದಕ್ಕೂ ಕೆಲವೇಳೆ ನನ್ನ ಅತಿಪ್ರಸಂಗದ ಪ್ರಶ್ನೆಗಳನ್ನೂ ಸಹನೆಯಿಂದ ಉತ್ತರಿಸಿದರು. ✡

ಸೆಪ್ಟೆಂಬರ್-1978

ಕನ್ನಡ ಪತ್ರಿಕೋದ್ಯಮ ಹೇಗಿರಬೇಕು ?

ನಮ್ಮ ಪತ್ರಿಕೆಗಳ ಮುಂದಿನ ಬೆಳವಣಿಗೆ, ಉಪಯುಕ್ತತೆ ಹಾಗೂ ಪ್ರಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾಡಿರುವ ಈ ವಿಶ್ಲೇಷಣೆ ಒಂದು ದೃಷ್ಟಿಯಲ್ಲಿ ಸ್ವವಿಮರ್ಶೆ ಹಾಗೂ ಆತ್ಮವಿವೇಚನೆಯೆಂದರೂ ಅಡ್ಡಿಯಿಲ್ಲ. ರಾಷ್ಟ್ರದ ಸೃಜನಾತ್ಮಕ ಜೀವನದಲ್ಲಿ ಸಮರ್ಥ ಸಾಮಾಜಿಕ ವಾಹಿನಿಯಾಗಿ, ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವದ ಶಂಖನಾದವಾಗಿ, ಜನಜಾಗೃತಿಯ ಕಹಳೆಯಾಗಿ, ಕನ್ನಡ ಪತ್ರಿಕೆಗಳನ್ನು ಮುಂದೆ ಸಮಾಜಕ್ಕೆ ಯೋಗ್ಯ ಸಂಗಾತಿಯಾಗಿ, ಮಾರ್ಗದರ್ಶಿಯಾಗಿ ಹೇಗೆ ರೂಪಿಸಬಹುದು ಎಂಬ ಕುರಿತು ತುಸು ಗಟ್ಟಿಯಾಗಿ ಯೋಚಿಸಲು ಇಲ್ಲಿ ಪ್ರಯತ್ನಿಸಿದೆ.

ಕನ್ನಡ ಪತ್ರಿಕೋದ್ಯಮ ಹೇಗಿರಬೇಕು?

ಸಂತೋಷಕುಮಾರ ಗುಲ್ವಾಡಿ

ಇನ್ನೆರಡು ವರ್ಷಗಳಲ್ಲಿ ಭಾರತೀಯ ಪತ್ರಿಕೋದ್ಯಮಕ್ಕೆ ೨೦೦ ವರ್ಷಗಳು ತುಂಬುತ್ತವೆ. * ಕನ್ನಡ ಪತ್ರಿಕೋದ್ಯಮಕ್ಕೆ ೧೩೫ ವರ್ಷಗಳಾದವು.** ನಮ್ಮ ಕನ್ನಡ ಪತ್ರಿಕೆಗಳನ್ನು ಆರಂಭಿಸಿದವರು ಕನ್ನಡೇತರರು-ವಿದೇಶಿ ಕ್ರೈಸ್ತ ಮಿಶನರಿಗಳು. ಬ್ರಿಟಿಷ್ ಆಳರಸರು ಹಾಗೂ ರಾಜಕೀಯ ಆಸಕ್ತಿತ್ರಗಳ ಉದ್ದೇಶಗಳಿಗಾಗಿ ಕರ್ನಾಟಕವನ್ನು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹರಿದುಹಂಚಿಬಿಟ್ಟುದರಿಂದ ಕನ್ನಡ ಪತ್ರಿಕೋದ್ಯಮಕ್ಕೆ ಒಂದು ಸಮಗ್ರತೆ ಬಂದಿರಲಿಲ್ಲ. ಇಂದಿಗೂ ದಕ್ಷಿಣ ಭಾರತದಲ್ಲಿ ಕನ್ನಡ ಪತ್ರಿಕೋದ್ಯಮ ತಮಿಳು, ಮಲಯಾಳಂ ಮತ್ತು ತೆಲಗುಗಳಿಗಿಂತ ಹಿಂದುಳಿದಿದೆ.

ಮೂರು ಕೋಟಿ ಕನ್ನಡಿಗರಲ್ಲಿ ೩೧.೫೫% ಸಾಕ್ಷರತೆ ಇದೆ. ಅಂದರೆ ಕರ್ನಾಟಕಲ್ಲಿ ಸುಮಾರು ಒಂದು ಕೋಟಿ ಮಂದಿಗೆ ಓದು, ಬರಹ ಬರುತ್ತದೆ ಎಂದಂತಾಯಿತು. ಆದರೆ ನಮ್ಮ ಎಲ್ಲ ಪತ್ರಿಕೆಗಳ ಒಟ್ಟು ಪ್ರಸಾರ ಸಂಖ್ಯೆ ೧೨ ಲಕ್ಷವನ್ನು ಮೀರಿಲ್ಲ. ಅಂದರೆ ಒಟ್ಟು ಓದುಗರು ಸಾಧಾರಣ ೫೦-೬೦ ಲಕ್ಷದಷ್ಟಿರಬಹುದು ಎಂದು ಅಂದಾಜು ಮಾಡಬಹುದು. ಕೇರಳದ ಜನಸಂಖ್ಯೆ ಎರಡು ಕೋಟಿಗಿಂತ ತುಸುವೇ ಹೆಚ್ಚು. ಅಲ್ಲಿಯ ೫೨೫ ಪತ್ರಿಕೆಗಳ ಒಟ್ಟು ಪ್ರಸಾರ ೩೦ ಲಕ್ಷ (ಸಾಕ್ಷರತೆ ೬೦.೧೮%). ತಮಿಳು ನಾಡಿನ ನಾಲ್ಕು ಕೋಟಿ ಜನತೆಗೆ ೮೦೦ ಪತ್ರಿಕೆಗಳಿವೆ (ಸಾಕ್ಷರತೆ ೩೯.೩೯%) ಮತ್ತು ಅವುಗಳ ಒಟ್ಟು ಪ್ರಸಾರ ೫೦ ಲಕ್ಷ.

ಪ್ರೆಸ್ ರಜಿಸ್ಟ್ರಾರರ ಇತ್ತೀಚಿನ ವರದಿಯಂತೆ ಕರ್ನಾಟಕದಲ್ಲಿ ಇಂಗ್ಲೀಷು ಮತ್ತು ಇತರ ಭಾಷೆಯ ಪತ್ರಿಕೆಗಳೂ ಸೇರಿ ಒಟ್ಟು ೫೪೫ ಪತ್ರಿಕೆಗಳಿವೆ. ಕಳೆದ ಒಂದು ದಶಕದಲ್ಲಿ ಕರ್ನಾಟಕದ ಪತ್ರಿಕೆಗಳ ಸಂಖ್ಯೆ ದ್ವಿಗುಣಿತವಾಗಿದೆ. ಕನ್ನಡದಲ್ಲಿ ಇಂದು

---

* ಭಾರತದ ಮೊತ್ತ ಮೊದಲ ಪತ್ರಿಕೆ 'ಬೆಂಗಾಲ ಗಜೆಟ್' ಸಾಪ್ತಾಹಿಕ ಜನವರಿ ೨೯, ೧೭೮೦ರಂದು ಕಲ್ಕತ್ತದಲ್ಲಿ ಆರಂಭವಾಯಿತು. ** ಕನ್ನಡದ ಪ್ರಪ್ರಥಮ ಪತ್ರಿಕೆ ಇದುವರೆಗೆ ತಿಳಿದಂತೆ 'ಮಂಗಳೂರು ಸಮಾಚಾರ' ಪಾಕ್ಷಿಕ ಜುಲೈ ಒಂದು, ೧೮೪೩ರಲ್ಲಿ ಮಂಗಳೂರಿನಿಂದ ಹೊರಟಿತ್ತು. ಬಳ್ಳಾರಿಯಲ್ಲಿ ೧೮೧೨ರಲ್ಲಿ 'ಕನ್ನಡ ಸಮಾಚಾರ' ಎಂಬ ಕಲ್ಲಚ್ಚು ಮುದ್ರಣದ ಪತ್ರಿಕೆ ಆರಂಭವಾಗಿತ್ತೆನ್ನಲಾದರೂ ಅದರ ಸಾಕ್ಷ್ಯಾಧಾರಗಳು ದೊರೆತಿಲ್ಲ.

ಪ್ರಕಟವಾಗುತ್ತಿರುವ ಒಟ್ಟು ಪತ್ರಿಕೆಗಳು ೩೨೫. ಬೆಂಗಳೂರು ಹಾಗೂ ಸುತ್ತುಮುತ್ತಲಿನ ಪ್ರದೇಶಗಳಿಂದಲೇ ೨೮೩ ಪತ್ರಿಕೆಗಳು ಪ್ರಕಟವಾಗುತ್ತಿವೆ. ಕರ್ನಾಟಕದಲ್ಲಿರುವ ಒಟ್ಟು ಓದುಗರಲ್ಲಿ ೬೫% ಮಂದಿ-ಸುಮಾರು ೩೦ ಲಕ್ಷ ಜನ ಕನ್ನಡ ಪತ್ರಿಕೆಗಳನ್ನು ಓದುತ್ತಾರೆ. ಕರ್ನಾಟಕದಲ್ಲಿ ಇಂಗ್ಲೀಷ್ ಪತ್ರಿಕೆಗಳನ್ನು ಓದುವವರು ಸುಮಾರು ಎರಡೂವರೆ ಲಕ್ಷ-ಅಂದರೆ ೧೬% ಮಾತ್ರ. ಕನ್ನಡ ಪತ್ರಿಕಾ ಪ್ರಸಾರದಲ್ಲಿ ಸ್ವಾರಸ್ಯಕರವಾದ ಇನ್ನೊಂದು ಅಂಶವೇದರೆ ದೈನಿಕಗಳ ಪ್ರಸಾರ ಮೂರುವರೆ ಲಕ್ಷ ಲಕ್ಷವಾದರೆ ಸಾಪ್ತಾಹಿಕೆಗಳ ಪ್ರಸಾರ ಅದಕ್ಕಿಂತ ಹೆಚ್ಚಿದೆ. ಮಾಸಿಕಗಳು ಒಟ್ಟು ಸುಮಾರು ಮೂರು ಲಕ್ಷ ಮಾರಾಟವಾಗುತ್ತವೆ. ಪತ್ರಿಕಾ ಪ್ರಸಾರ ಬೆಂಗಳೂರಲ್ಲಿ ಹೆಚ್ಚು-ಮೂರುವರೆವಲಕ್ಷ. ಅನಂತರ ಕನ್ನಡ ಪತ್ರಿಕೆಗಳಿಗೆ ಅತ್ಯಂತ ಹೆಚ್ಚು ಬೇಡಿಕೆ ಇರುವ ಒಂದು ಕೇಂದ್ರ ಮುಂಬಯಿ. ಆದರೆ ಮುಂಬಯಿ, ದಿಲ್ಲಿ, ಕಲಕತ್ತ, ಮದ್ರಾಸು ಮಹಾನಗರಗಳ ಒಟ್ಟು ಪತ್ರಿಕಾ ಪ್ರಸಾರ ಜನಸಂಖ್ಯೆಯ ಪ್ರಮಾಣದಲ್ಲಿ ಸರಾಸರಿ ೩೨% ಇದ್ದರೆ ಬೆಂಗಳೂರಲ್ಲಿ ಅದು ೨೫% ಮಾತ್ರ ಇದೆ. ಭಾರತದಲ್ಲಿ ಒಟ್ಟು ೬೩೬ ದೈನಿಕಗಳು ಹಾಗೂ ೯೩೦೦ ನಿಯತಕಾಲಿಕಗಳಿದ್ದು ಅವುಗಳ ಒಟ್ಟು ಪ್ರಸಾರ ಸುಮಾರು ಎರಡು ಕೋಟಿ. ಭಾರತದ ಒಟ್ಟು ಪತ್ರಿಕಾ ಪ್ರಸಾರದಲ್ಲಿ ಕನ್ನಡ ಪತ್ರಿಕೆಗಳ ಪಾಲು ಬರೀ ಶೇಕಡಾ ಆರು! ಈ ಅಂಕ ಅಂಶಗಳನ್ನೆಲ್ಲ ಕೊಡುವ ಉದ್ದೇಶ ಸಮಗ್ರ ಭಾರತೀಯ ಪತ್ರಿಕೋದ್ಯಮದ ಹಿನ್ನೆಲೆಯಲ್ಲಿ ಕನ್ನಡ ಪತ್ರಿಕೆಗಳ ಸ್ಥಾನವನ್ನು, ಇತಿ ಮಿತಿಗಳನ್ನು ಸ್ಪಷ್ಟಪಡಿಸುವುದು.

ಇವೆಲ್ಲ ಅಂಕೆ ಸಂಖ್ಯೆಗಳ ಮಾತಾಯಿತು. ಪ್ರಕೃತ ಕನ್ನಡ ಪತ್ರಿಕೆಗಳ ಸ್ಥಿತಿಗತಿಗಳೇನು? ಒಟ್ಟಿನಲ್ಲಿ ಹೇಳುವದಾದರೆ ಸ್ವಾತಂತ್ರ್ಯಪೂರ್ವದಲ್ಲಿದ್ದ ಆದರ್ಶನಿಷ್ಠೆ, ಜಾಗೃತಿ, ಕೆಚ್ಚುಗಳು ಕನ್ನಡ ಪತ್ರಿಕೆಗಳಲ್ಲಿ ಆ ಬಳಿಕ ಉಳಿದಿಲ್ಲ. ಕರ್ನಾಟಕ ರಾಜ್ಯ ರೂಪುಗೊಂಡ ಬಳಿಕ ಕನ್ನಡ ಪತ್ರಿಕೆಗಳಲ್ಲಿ ಪ್ರತ್ಯೇಕ ಬಗೆಯ ಆವಿಷ್ಕಾರ, ಪ್ರಯೋಗಗಳಾಗುತ್ತಿದ್ದರೂ ಅವು ಸಾಮಾಜಿಕವಾಗಿ ಹೆಚ್ಚು ಪ್ರಸಕ್ತ(ರೆಲಮೆಂಟ್) ಆಗಿಲ್ಲ. ಇಂದು ನಮ್ಮ ಪತ್ರಿಕೋದ್ಯಮ ಒಂದು ಮಿಷಿನ್ ಆಗುವುದಕ್ಕಿಂತ ಹೆಚ್ಚಾಗಿ ಪ್ರೊಫೆಷನ್ ಆಗಿದೆ. ಆದರೆ ವ್ಯವಸಾಯಕ್ಕಿಂತ ವ್ಯವಹಾರವೇ ಮೇಲು ಅನಿಸಿದೆ. ಇದು ನಮ್ಮ ಪತ್ರಿಕೆಗಳ ತೇಜೋವಧೆಗೆ ಮೂಲ ಕಾರಣ. ಇದರ ಅಭಿವ್ಯಕ್ತಿ ಹಲವು ವಿಧಗಳಲ್ಲಿ ಹೇಗೆ ಸಾಗುತ್ತದೆ ಎಂಬುದನ್ನು ಒಂದಿಷ್ಟು ನೋಡೋಣ,

ಪತ್ರಿಕೆಗಳಿಲ್ಲದ ಸರಕಾರಕ್ಕಿಂತ, ಸರಕಾರವಿಲ್ಲದ ಪತ್ರಿಕೆಗಳು ಆಗಬಹುದು ಎಂದು ರಾಜಕಾರಣಿಗಳೊಬ್ಬರು ಉದ್ಗರಿಸಿದುದು ನಿಮಗೆ ಗೊತ್ತು. ಆದರೆ ಭಾರತೀಯ, ಹಾಗೆಯೆ ಕರ್ನಾಟಕದ ಪತ್ರಿಕೆಗಳಲ್ಲಿ ಅತ್ಯಂತ ಭಯಂಕರವಾಗಿ ಉಲ್ಬಣಗೊಂಡ ಮಹಾರೋಗವೆಂದರೆ ರಾಜಕೀಯ ವರದಿಗಳಿಗೆ ಮಿತಿಮೀರಿದ ಪ್ರಾಶಸ್ತ್ಯ, ರಾಜಕಾರಣಿಗಳಿಗೆ ಅತಿ ಪ್ರಚಾರ, ರಾಜಕೀಯ ಸುದ್ದಿ, ವ್ಯಾಖ್ಯಾನ, ಟಿಪ್ಪಣಿಗಳಿಗೆ ಅತಿರಂಜಿತ ಸ್ಥಾನಮಾನ ಕೊಟ್ಟಿರುವುದು. ರಾಜಕಾರಣಿಗಳು ಪತ್ರಿಕೆಗಳಿಗೆ ಹೆದರಿ ಜವಾಬ್ದಾರಿಯುತರಾಗಿ ವರ್ತಿಸುವುದಕ್ಕೆ ಬದಲಾಗಿ ಪತ್ರಿಕೆಗಳೇ ರಾಜಕಾರಣಿಗಳ ಪ್ರಚಾರ ಮಾಧ್ಯಮ ಎಂಬಂತಾಗಿ ಬಿಟ್ಟಿದೆ. ಹಾಗಾದರೆ ವಾರ್ತಾ ಮಾಧ್ಯಮವಿರುವುದೇ ರಾಜಕಾರಣಿಗಳಿಗಾಗಿಯೋ ರಾಜಕಾರಣಿಗಳನ್ನು ಕರೆಸುವುದೇ ಸುದ್ದಿ ಮಾಡುವ ಉದ್ದೇಶದಿಂದಲೋ?

ಅಮೇರಿಕದ ಪತ್ರಿಕಾಧರ್ಮದಲ್ಲಿ ಒಂದು ಸೂತ್ರವಿದೆ. ಪತ್ರಿಕೆಗಳಿಗೆ ಸ್ವಾತಂತ್ರ್ಯ ಕೊಟ್ಟಿರುವುದು ಏಕೆ ಗೊತ್ತೆ? ಸಾರ್ವಜನಿಕ ಅಧಿಕಾರಿಗಳು ಜನರಿಗೆ ಜವಾಬ್ದಾರಾಗಿರುವವರು. ಪ್ರಜಾಪ್ರತಿನಿಧಿಗಳೆನಿಸಿಕೊಳ್ಳುವವರು ಹದ್ದು ಮೀರಿ ಹೋಗಿ ಜನರ ವಿಚಾರ ಶಕ್ತಿಯ ನಿಯಂತ್ರಣವನ್ನು ಮಾಡುವ ಅಧಿಕ ಪ್ರಸಂಗ ಮಾಡುವುದೇ ಬೇಡ ಎಂಬುದಕ್ಕಾಗಿ. ಇತ್ತೀಚಿನ ಇತಿಹಾಸದಲ್ಲಿ (ಜರೂರು ಪರಿಸ್ಥಿತಿ ಸಾರಿದಾಗ) ನಡೆದ ಪತ್ರಿಕಾಸ್ವಾತಂತ್ರ್ಯಹರಣ ಇದಕ್ಕೊಂದು ಜ್ವಲಂತ ಉದಾಹರಣೆ. ಪತ್ರಿಕೆಗಳಿರುವುದು ಜನರನ್ನು ಮುಕ್ತ ವಾತಾವರಣದಲ್ಲಿ ಸ್ವತಂತ್ರವಾಗಿ ವಿಚಾರಮಾಡಲು

ಪ್ರಚೋದಿಸಲಿಕ್ಕಾಗಿ. ಈ ಮಾತು ನಮ್ಮ ರಾಜಕಾರಣಿಗಳಿಗೂ ಪತ್ರಿಕಾಕರ್ತರಿಗೂ ಚೆನ್ನಾಗಿ ತಿಳಿದಿರಬೇಕು.

ಸ್ವಾತಂತ್ರ್ಯ ಸಿಕ್ಕ ಈ ೩೧ ವರ್ಷಗಳಲ್ಲೂ ಪತ್ರಿಕಾಕರ್ತರು ರಾಜಕಾರಣಿಗಳ ವಂದಿಮಾಗಧರಾಗಿಯೇ ಉಳಿದಿರುವದು ನಮ್ಮ ಪ್ರಜಾಪ್ರಭುತ್ವ ಹಾಗೂ ವೈಚಾರಿಕ ಸ್ವಾತಂತ್ರ್ಯದ ದುರಂತ. ಕನ್ನಡ ಪತ್ರಿಕೆಗಳನ್ನೇ ತೆಗೆದುಕೊಂಡರೆ ಈಗಲೂ ನಮ್ಮ ದೈನಿಕ ಮತ್ತು ಸಾಪ್ತಾಹಿಕಗಳಲ್ಲಿ ಸುಮಾರು ೬೦% ರಿಂದ ೭೫% ಜಾಗ ರಾಜಕೀಯ ಸುದ್ದಿ ಸಮಾಚಾರ ವ್ಯಾಖ್ಯಾನಗಳಿಗೇ ಮೀಸಲಾಗಿಟ್ಟಿರುವಂತಿದೆ. ಈ ರಾಜಕೀಯ ದೆವ್ವ ನಮ್ಮ ಜನಜೀವನವನ್ನು ಉಸಿರುಗಟ್ಟಿಸುವಷ್ಟು ಪತ್ರಿಕೆಗಳ ಮೂಲಕ ಮೈಮೇಲೆ ಏರಬೇಕೆ? ಇದರ ಬಗ್ಗೆ ಉದಾಹರಣೆ ಕೊಡಲು ಪ್ರತಿದಿನದ ನಮ್ಮ ಪತ್ರಿಕೆಗಳೇ ಸಾಕು.

ಇತ್ತೀಚೆಗೆ ದಿಲ್ಲಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ೫೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಸಮ್ಮೇಳನದ ಅಧ್ಯಕ್ಷರಾದ ಡಾ. ಜಿ. ಪಿ. ರಾಜರತ್ನಂ ಅವರಲ್ಲದೆ ಹಲವು ಸಾಹಿತ್ಯಗೋಷ್ಠಿಗಳಲ್ಲಿ ಡಾ. ಹಾ. ಮಾ. ನಾಯಕ, ಎಲ್. ಎಸ್. ಶೇಷಗಿರಿರಾವ್. ಪಿ. ಎಂ. ಇನಾಂದಾರ್. ಕೀರ್ತಿನಾಥ ಕುರ್ತಕೋಟಿ, ಡಾ. ಎಂ. ಎಸ್. ಸುಂಕಾಪುರ, ಡಾ. ವಿ. ಕೃ. ಗೋಕಾಕ. ಚೆ.ನ. ಮಂಗಳಾ. ಡಾ. ಶಾಂತಿನಾಥ ದೇಸಾಯಿ. ಕೆ. ಎಸ್. ನಿಸ್ಸಾರ್ ಅಹಮ್ಮದ, ವೀಣಾ ಶಾಂತೇಶ್ವರ, ಡಾ. ಎಸ್. ಎಲ್. ಭೈರಪ್ಪ, ಡಾ. ರಂ. ಶ್ರೀ ಮುಗಳಿ, ಡಾ. ಸಿದ್ದಯ್ಯ ಪುರಾಣಿಕ, ಡಾ. ಪ್ರಭುಶಂಕರ, ಡಾ. ಜೀ. ಶಂ. ಪರಮಶಿವಯ್ಯ. ಕವಿಗಳಾದ ಡಾ. ಪು. ತಿ. ನ. ಎಸ್. ಆರ್. ಎಕ್ಕುಂಡಿ, ಕೆ.ಎಸ್. ನರಸಿಂಹಸ್ವಾಮಿ, ಕಯ್ಯಾರ ಕಿಞ್ಞಣ್ಣ ರೈ ಇವರೇ ಮೊದಲಾದ ಕನ್ನಡ ಖ್ಯಾತ ಸಾಹಿತಿಗಳು ಭಾಗವಹಿಸಿದ್ದರು. ಅಂತರ್ ಭಾರತಿ ವಿಚಾರಗೋಷ್ಠಿಯಲ್ಲಿ ಬೇರೆ ಬೇರೆ ಭಾಷೆಯ ಸಾಹಿತಿಗಳು ಉಪನ್ಯಾಸ ಮಂಡಿಸಿದ್ದರು. ಸೋದರ ಭಾಷಾ ಸಾಹಿತಿಗಳ ಸನ್ಮಾನ ಸಮಾರಂಭದಲ್ಲಿ ಜ್ಞಾನಪೀಠ ಪ್ರಶಸ್ತಿವಿಜೇತೆ ಆಶಾಪೂರ್ಣಾದೇವಿ (ಬಂಗಾಳಿ) ದ. ಬಾ. ಕಾಲೇಲ್ಕರ (ಗುಜರಾತಿ). ಎಸ್. ಎಚ್, ವಾತ್ಸ್ಯಾಯನ (ಹಿಂದಿ), ಆತ್ಮಾರಾವ್ ರಾವ್‌ಜಿ ದೇಶಪಾಂಡೆ "ಅನಿತ" (ಮರಾಠಿ), ಅಮೃತಾ ಪ್ರೀತಂ(ಪಂಜಾಬಿ), ಟಿ.ಜಾನಕಿ ರಾಮನ್ (ತಮಿಳು), ಶ್ರೀರಂಗಂ ಶ್ರೀನಿವಾಸನ್ (ತೆಲಗು), ತಕ್ಕಳಿ ಶಿವಶಂಕರ ಪಿಳ್ಳೆ (ಮಲೆಯಾಳಂ), ಟಿ. ನಾರಾಯಣ ಶ್ಯಾಮ್ (ಸಿಂಧಿ) ಮೊದಲಾದ ಪ್ರತಿಭಾವಂತರು ಭಾಗವಹಿಸಿ ಮಾತನಾಡಿದ್ದರು. ಇವರ ಬಗ್ಗೆ ನಮ್ಮ ಪತ್ರಿಕೆಗಳಿಗೆ ಹೆಚ್ಚು ಆಸಕ್ತಿಯಿಲ್ಲ.

ಆದರೆ ಸಮ್ಮೇಳನವನ್ನು ಉದ್ಘಾಟಿಸಿದ ಪ್ರಧಾನಿ ಮುರಾಜಿ ದೇಸಾಯಿ, ಸಂಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಕರ್ನಾಟಕದ ಮುಖ್ಯಮಂತ್ರಿ ದೇವರಾಜ್ ಅರಸು ಮತ್ತು ಸಮಾರೋಪ ಭಾಷಣ ಮಾಡಿದ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಇವರು ಮಾಡಿದ ಸಾಹಿತ್ಯಕ್ಕೆ ಅಷ್ಟೊಂದು ಉಪಯೋಗವಿಲ್ಲದ ಭಾಷಣಗಳನ್ನೇ ನಮ್ಮ ಹೆಚ್ಚಿನ ಪತ್ರಿಕೆಗಳು ವರದಿ ಮಾಡಿದ್ದವು. ಸಾಹಿತ್ಯ ಸಮ್ಮೇಳನಕ್ಕೆ ರಾಜಕಾರಣಿಗಳನ್ನು ಕರೆಯಬಹುದೇ, ಬಾರದೇ ಎಂಬ ವಿಚಾರ ಇಲ್ಲಿ ಪ್ರಸಕ್ತವಲ್ಲ. ಆದರೆ ಕೆಲವು ನೂರು ಮಂದಿ ಜನರು ಮಾತ್ರ ಕೇಳಿದ ಸಾಹಿತಿಗಳ ಭಾಷಣಗಳಲ್ಲಿ ಮುಖ್ಯವಾದವು ಯಾವುವು, ಮೌಲಿಕವಾದುದು ಯಾವುವು ಎಂಬ ತಾರತಮ್ಯ ಜ್ಞಾನ ಉಪಯೋಗಿಸಿ ನಮ್ಮ ಪತ್ರಿಕೆಗಳು ಅವನ್ನೇ ಮುಖ್ಯವಾಗಿ ವರದಿ ಮಾಡಿದ್ದರೆ ಅವುಗಳ ಅಬ್ಜೆಕ್ಟಿವ್ ಉದ್ದೇಶ ಶ್ಲಾಘನೀಯವಾಗುತ್ತಿತ್ತು. ಓದುಗರನ್ನು ಈ ರೀತಿ ಪ್ರತಿದಿನ ಬೆಳಗ್ಗೆ ರಾತ್ರಿ ರಾಜಕಾರಣಿಗಳ ಬಗ್ಗೆ "ಬ್ರೈನ್‌ವಾಷ್" ಮಾಡುವ ಇಂಥ ಪತ್ರಿಕೋದ್ಯಮ ನಿರ್ಭೀತವೂ ಅಲ್ಲ; ಸ್ವತಂತ್ರವೂ ಅಲ್ಲ. ಒಟ್ಟಿನಲ್ಲಿ ಈ ದೇಶದಲ್ಲಿ ಎಲ್ಲ ರಂಗಗಳಲ್ಲೂ ಆಕ್ಟೊಪಸ್ ಕಾಲು ಹಾಕಿ ವ್ಯಾಪಿಸಿರುವ ರಾಜಕೀಯ ಪ್ರಭಾವ ನಮ್ಮ ಕ್ರಿಯಾತ್ಮಕ, ಬೌದ್ಧಿಕ, ಸೃಷ್ಟ್ಯಾತ್ಮಕ, ರಚನಾತ್ಮಕ ಕಾರ್ಯಗಳತ್ತ ಸಂಪೂರ್ಣ ಅಲಕ್ಷ್ಯ ತೋರಿದೆ. ಅದು ನಮ್ಮ ಪತ್ರಿಕೆಗಳಲ್ಲೂ ಪ್ರತಿಬಿಂಬಿರುವುದು ಆಶ್ಚರ್ಯವೆ. ಏಕೆಂದರೆ ಜಡ ಜನತೆಯನ್ನು ಎಚ್ಚರಿಸಬೇಕಾದವರು ಜಾಗೃತ ಪತ್ರಿಕೆಗಳೇ- ಆ ಎಚ್ಚರಿಕೆಯ ಅರಿವು ಇದ್ದರೆ.

ಈ ಮಾನಸಿಕ ಗುಲಾಮಗಿರಿಯಿಂದ ತಪ್ಪಿಸಿಕೊಳ್ಳುವ ಉಪಾಯ, ಇತರರಿಗೆ ಸ್ವಾತಂತ್ರ್ಯಮೌಲ್ಯದ ಉಪದೇಶ ಕೊಡುವ ನಮ್ಮ ಪತ್ರಕರ್ತರಿಗೆ.

ಸಂಪಾದಕರುಗಳಿಗೆ ಹೊಳೆಯದೆ ಇರುವುದು ಆಶ್ಚರ್ಯಕರವೆ. ಉದಾಹರಣೆಗೆ ಇತ್ತೀಚೆಗೆ ದೇಶದಲ್ಲಿ ಕಾಂಗ್ರೆಸ್ಸು ಹಾಗೂ ಜನತಾದೊಳಗಿನ ಅಧಿಕಾರ ಲಾಲಸೆಯ ಒಳಜಗಳದ ವಿಚಾರ. ಇಂಥ ಕ್ಷುದ್ರ ಅಂತಃಕಲಹಗಳು ಯಾರಿಗೂ ಒಳ್ಳೆಯದಲ್ಲ. ಇವುಗಳಿಗೆ ಪತ್ರಿಕೆಗಳು ಅಷ್ಟೇಕೆ ಮಹತ್ವ ಕೊಡಬೇಕು? ಆದರೆ ಮಂತ್ರಿಗಳು ತಮ್ಮ ಕರ್ತವ್ಯ ಬಿಟ್ಟು ಸಾರ್ವಜನಿಕ ಸಮಯವನ್ನು, ಜನರ ಹಣವನ್ನು ಪಕ್ಷದ ಬಿಕ್ಕಟ್ಟಿನಲ್ಲಿ ಕಳೆಯುತ್ತಿರುವ ಕುರಿತು ಯಾವ ಪತ್ರಿಕೆಗಳು ಉಗ್ರ ಟೀಕೆ ಮಾಡಿವೆ? ರಾಜಕೀಯ ಸುದ್ದಿ [illegible] ಪ್ರಕಟಣೆಯಲ್ಲಿ ನಮ್ಮ ಪತ್ರಿಕೆಗಳು ತಾರತಮ್ಯ ಜ್ಞಾನವನ್ನೇ ಕಳೆದುಕೊಂಡಿವೆ. ಈ ದೇಶದಲ್ಲಿ ರಾಜಕಾರಣಿಗಳಿಗೆ ಅನಗತ್ಯದ ಮಹತ್ವ ಕೊಟ್ಟು, ವ್ಯಕ್ತಿಪೂಜೆಮಾಡುವಂತೆ ಪ್ರಚೋದನೆ ಕೊಟ್ಟವು ಪತ್ರಿಕೆಗಳೆ. ಈ ವ್ಯಕ್ತಿಪೂಜೆ ನಿಲ್ಲುವವರೆಗೆ ಈ ದೇಶಕ್ಕೆ ಆರೋಗ್ಯಕರ ಭವಿಷ್ಯ ಸಿಗಲಾರದು. ಒಂದು ಪತ್ರಿಕೆಯಲ್ಲಿ ೪೦%ಕ್ಕಿಂತ ಹೆಚ್ಚು ಜಾಗದಲ್ಲಿ ಜಾಹಿರಾತು ಪ್ರಕಟವಾದರೆ ಅದು ಸ್ವನಿಯಂತ್ರಣವನ್ನು ಪತ್ರಿಕೆಗಳೇ ಮಾಡಿಕೊಂಡಿವೆ. [illegible] ಟಿಪ್ಪಣಿಗಳೂ ಇಂತಿಷ್ಟೇ ಸ್ಥಳ ಎಂದು ಮಿತಿಯನ್ನು ಪತ್ರಿಕೆಗಳೇಕೆ ಹಾಕಬಾರದು? ರಾಜಕಾರಣಿಗಳ ಅರ್ಥಹೀನ ಭಾಷಣಗಳು, ಅಕ್ಷಮ್ಯದ ಉದ್ಘಾಟನಾ ವರದಿಗಳು. ಪ್ರವಾಸಗಳ ಟಿಪ್ಪಣಿಗಳು. ಫೋಟೋಗಳು ಇವುಗಳಂತ ಅರ್ಥಕ್ಕರ್ಥ ಕಡಿಮೆಯಾದರೆ ಈ ದೇಶದಲ್ಲಿ ಒಂದು ಪವಾಡವೇ ಆದೀತು. ಅಂಥ ದೂರದರ್ಶಿತ್ವದ ಎದೆಗಾರಿಕೆ ನಮ್ಮ ಪತ್ರಿಕೆಗಳಿಗಿದೆಯೇ?

ರಾಜಕಾರಣಿಗಳನ್ನು ಸರಿ ದಾರಿಗೆ ತರಬೇಕಾದರೆ ಪತ್ರಿಕೆಯು ಅಲಗು ಮಸೆಯುತ್ತ ಅವರ ತಲೆಯ ಮೇಲೆ ತೂಗಾಡುವಂತೆ ಮಾಡಬೇಕು. ಅವರ ಭ್ರಷ್ಟಾಚಾರ. [illegible]. ದಂಧೆ. ಪಕ್ಷ. [illegible]. ಜನತೆಯ ವಿಶ್ವಾಸದ ದುರುಪಯೋಗಗಳನ್ನು ಕನ್ನಡ ಪತ್ರಿಕೆಗಳು ನಿರ್ಭೀತಿಯಿಂದ ಪ್ರಕಟಿಸಿ, ದೇಶದಲ್ಲಿ ಇತರ ಪತ್ರಿಕೆಗಳಿಗೆ ಮಾರ್ಗದರ್ಶನ ಮಾಡಬೇಕು. ದೇಶದ ಪ್ರಮುಖ ಸಮಸ್ಯೆಗಳನ್ನು ಬಿಟ್ಟು, ಪಕ್ಷಗಳೊಳಗಿನ ಬಿಕ್ಕಟ್ಟು. ಸ್ವಮೂತ್ರಪಾನ, ಹಿಂದೀಪ್ರಚಾರ, ಪಾನಪ್ರತಿಬಂಧ ಇತ್ಯಾದಿ ಕುರ್ತು ಅಲ್ಲದ ಸಂಗತಿಗಳನ್ನು ನಮ್ಮ ಪತ್ರಿಕೆಗಳು ಕಡೆಗಣಿಸಿ, ಅವುಗಳಿಗೆ ಕವರೇಜ್ ಕೊಡುವುದನ್ನು ತೀರಾ ಕಡಿಮೆ ಮಾಡಿದರೆ ಈ ರಾಜಕಾರಣಿಗಳು ತಮ್ಮಿಂದ ತಾನೇ ಸರಿ ದಾರಿಗೆ ಬರುತ್ತಾರೆ. ರಾಜಕಾರಣಿಗಳ ಸವಾಲ್ ಜವಾಬುಗಳನ್ನು ಮನೋರಂಜಕವಾಗಿ ಕೊಡುವ ಪರಿಪಾಠ ಬಿಟ್ಟು ಬಿಡಬೇಕು. ಅದಕ್ಕೆ ಬದಲಾಗಿ ಪ್ರತಿ ಪತ್ರಿಕೆಯೂ ಸತ್ಯಶೋಧಕತೆಯ ತನ್ನ ಕರ್ತವ್ಯವನ್ನು ನಿರ್ವಹಿಸಿ, ವಾಟರ್‌ಗೇಟ್‌ಗಿಂತ ಭಯಂಕರವಾಗಿರಬಹುದಾದಂತಹ ಪ್ರಕರಣಗಳನ್ನು ಬಯಲಿಗೆಳೆಯಬೇಕು. ಸರಕಾರಿ ಕಚೇರಿಗಳಲ್ಲಿ, ಕೋರ್ಟುಗಳಲ್ಲಿ, ಆಸ್ಪತ್ರೆಗಳಲ್ಲಿ ಜನತೆಗೆ ಸೇವೆ ಸಿಗಬೇಕಾದಂಥ ಎಲ್ಲ ಸಾರ್ವಜನಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಅನ್ಯಾಯ ಶೋಷಣೆ, ವಿಳಂಬಗಳನ್ನು ಬಹಿರಂಗಗೊಳಿಸಬೇಕು. ಹಲವು ಪ್ರಕರಣಗಳ ವಿಚಾರಣೆಗೆ ಆಯೋಗಗಳ ನೇಮಕವಾಗಿದೆ. ಆದರೆ ಪತ್ರಿಕೆಗಳು ಅವುಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಪತ್ತೇದಾರಿಯಂಥ ಕೆಲಸ ಮಾಡಿ ವಿವರಗಳನ್ನು ಜನತೆಗೆ ಒದಗಿಸಬೇಕು. ಈ ಬಗೆಯ ಸ್ವತಂತ್ರ ಸಂಶೋಧಕ ವರದಿಗಳು ಬರುತ್ತಲಿದ್ದರೆ ಪತ್ರಿಕೆಗಳು ರಾಜಕಾರಣಿಗಳಿಗೆ ಸಿಂಹಸ್ವಪ್ನವಾಗುತ್ತವೆ. ಖ್ಯಾತ ಲೇಖಕ, ರಾಜಕಾರಣಿ ಮೀನು ಮಸಾನಿಯವರು "ಪ್ರಜಾಪ್ರಭುತ್ವದಲ್ಲಿ ಪತ್ರಿಕಾಸ್ವಾತಂತ್ರ್ಯದ ಮಹತ್ವ" ಎಂಬ ಲೇಖನದಲ್ಲಿ ಒಂದು ಮಾತಂದಿದ್ದಾರೆ: "ನಮ್ಮ ಜನರಲ್ಲಿ ವಿಚಿತ್ರರೋಗವೊಂದು ರಕ್ತಗತವಾಗಿದೆ. ಯಾರೇ ಅಧಿಕಾರದಲ್ಲಿರಲಿ, ಅವರಿಗೆ ಶಿರಬಾಗಿ ಹಾಂಜೀ ಹಾಂಜೀ ಮಾಡುವುದು ನಮ್ಮ ಪರಂಪರೆ. ಪತ್ರಿಕೆಗಳಿಗೂ ಅಪವಾದವಿಲ್ಲ. ಆಗ ಮುಕ್ತ ವಿಚಾರ, ಪ್ರತಿಭಟನೆಗೆಲ್ಲಿಯ ಅವಕಾಶ?" ಕನ್ನಡದ ಒಂದೆರಡು ಜಾಗೃತ ಪತ್ರಿಕೆಗಳು ನಿರ್ಭೀತಿಯಿಂದ ಕೆಲಸ ಮಾಡುತ್ತಿವೆ ನಿಜ. ಆದರೆ ಒಟ್ಟಿನ ಪರಿಣಾಮ ಅಷ್ಟೊಂದು ಗಮನಾರ್ಹವಾಗಿಲ್ಲ.

ಇಪ್ಪತ್ತೈದು ವರ್ಷಗಳ ಹಿಂದೆ ಪಂಡಿತ ಜವಾಹರಲಾಲ ನೆಹರೂ ಪ್ರಧಾನಿಯಾಗಿದ್ದಾಗ ಪತ್ರಿಕೆಗಳ ಹಲವು ಸಮಸ್ಯೆಗಳನ್ನು ಅಭ್ಯಸಿಸಿ ಪರಿಹಾರ ಕಂಡುಹಿಡಿಯಲು ನ್ಯಾಯಾಧೀಶರಾಗಿದ್ದ ಜಿ. ಎಸ್. ರಾಜಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ನೇಮಕವಾಗಿತ್ತು. ಈ ಆಯೋಗ

ಕೂಲಂಕಷ ಅಭ್ಯಾಸ ನಡೆಸಿ, ವರದಿ ಮಾಡಿದ ಹಲವು ಸಮಸ್ಯೆಗಳು ಪರಿಹಾರವಾಗದೆ ಇನ್ನೂ ಹಾಗೆಯೇ ಉಳಿದಿವೆ ಅಥವಾ ಉಗ್ರ ಸ್ವರೂಪ ತಾಳಿವೆ. ಇವುಗಳಲ್ಲಿ ಪತ್ರಿಕೆಯ ಏಕಸ್ವಾಮ್ಯವೂ ಒಂದು. ಈ ಕುರಿತು ನೆಹರೂರವರಾಗಲಿ. ಅನಂತರ ಇಂದಿರಾ ಗಾಂಧಿಯವರಾಗಲಿ ಪ್ರಧಾನಿಯಾಗಿದ್ದಾಗ ಏನು ಮಾಡಲಾಗಲಿಲ್ಲ. ಆಯೋಗದ ಶಿಫಾರಸು ಸೂಚನೆಗಳನ್ನು ಕಾನೂನಿನಲ್ಲಿ ಅನುಷ್ಠಾನಕ್ಕೆ ತರಲೂ ಇಲ್ಲ. ನಂದಿನಿ ಸತ್ಪತಿಯವರು ಸಮಾಚಾರ ಮತ್ತು ಸೂಚನಾ ಮಂತ್ರಿಯಾಗಿದ್ದಾಗ ಹಲವು ದೊಡ್ಡ ಪತ್ರಿಕೆಗಳ ಷೇರುಗಳನ್ನು ವಿಭಜಿಸಿ, ಪತ್ರಿಕಾ ಸಂಸ್ಥೆಗಳನ್ನು ಧರ್ಮದರ್ಶಿ ಸಂಸ್ಥೆಗಳನ್ನಾಗಿ ಮಾಡುವ ಮಸೂದೆಯೊಂದನ್ನು ತಯಾರಿಸಿದ್ದರು. ಆದರೆ ಇದನ್ನು ಮಂಡಿಸುವುದನ್ನು ಇಂದಿರಾ ಗಾಂಧಿಯವರೇ ತಡೆದರು. ತುರ್ತು ಪರಿಸ್ಥಿತಿಯಲ್ಲಿ ಕೂಡ ಇದನ್ನು ಕಾನೂನಾಗಿ ಮಾಡಲಿಲ್ಲ. ಈಗ ಜನತಾ ಸರಕಾರ ನ್ಯಾಯಮೂರ್ತಿ ಪಿ. ಕೆ. ಗೋಸ್ವಾಮಿಯವರ ಅಧ್ಯಕ್ಷತೆಯಲ್ಲಿ ಎರಡನೆಯ ಪತ್ರಿಕಾ ಆಯೋಗ ನೇಮಕ ಮಾಡಿ, ಹೆಚ್ಚು ಕಡಿಮೆ ಹಿಂದಿನ ಸಮಸ್ಯೆಗಳನ್ನೇ ಅಭ್ಯಸಿಸಲು ಅನುವು ಮಾಡಿಕೊಟ್ಟಿದೆ. ಪತ್ರಿಕೆಗಳನ್ನು ಸಶಕ್ತ ಹಾಗೂ ಆರೋಗ್ಯಕರವಾಗಿ ಮಾಡಲು ಇದೊಂದು ಹೆಜ್ಜೆ ಎಂದು ಕೇಂದ್ರ ಸಮಾಚಾರ ಮತ್ತು ಸೂಚನಾ ಮಂತ್ರಿ ಅಡ್ವಾನಿಯವರು ವಿವರಣೆಯಿತ್ತಿದ್ದಾರೆ.

ಏಕಸ್ವಾಮ್ಯದ ಸಮಸ್ಯೆ ಹಲವು ಮುಖ್ಯ ಕನ್ನಡ ಪತ್ರಿಕೆಗಳು ಅನ್ವಯಿಸುತ್ತದೆ. ನಿಜವಾಗಿ ಸ್ವತಂತ್ರ ಪತ್ರಿಕೋದ್ಯಮವೆಂದರೆ ಸರಕಾರಿ ಮತ್ತು ಖಾಸಗೀ ಹಿತಾಸಕ್ತಿ ಹಿಡಿತಗಳಿಂದ ವಿಮೋಚನೆಯು. ಆ ದೃಷ್ಟಿಯಿಂದ ನಮ್ಮ ಪತ್ರಿಕೆಗಳು ಇನ್ನೂ ಸ್ವತಂತ್ರ ಅಲ್ಲ. ನಮ್ಮ ಪತ್ರಿಕೆಗಳಿಗೆ ಭ್ರಷ್ಟಾಚಾರದ ಷಡ್ಯಂತ್ರಗಳನ್ನು ಹೊರಹಾಕುವ, ವ್ಯಾಪಾರದಲ್ಲಿ ಜನತೆಯನ್ನು ದೋಚುವಂಥ ಪ್ರಸಂಗಗಳನ್ನು ಹೇಳಿ, ಪ್ರತಿಭಟಿಸುವ ನೈತಿಕ ಧೈರ್ಯವಿಲ್ಲ. ಏಕೆಂದರೆ ಈ ಪತ್ರಿಕೆಗಳ ಮುಖ್ಯ ಉದ್ದೇಶವೇ ವ್ಯಾಪಾರ ಮತ್ತು ಅಧಿಕಾರ. ರಾಜಕಾರಣಿಗಳ ಗುಪ್ತ ಹಾಗೂ ಧೂರ್ತ ಗುರಿಗಳಾಗಿ ಇವುಗಳ ಉಪಯೋಗ. ರಾಜಕೀಯ ಚದುರಂಗದಾಟದಲ್ಲಿ ಪತ್ರಿಕೆ ಒಂದು ಅಸ್ತ್ರ. ಬಂಡವಾಳದಾರರು ತಮ್ಮ ಇತರ ವ್ಯಾಪಾರಗಳ ಜತೆಗೆ ಪತ್ರಿಕಾ ವ್ಯಾಪಾರವನ್ನೂ ನಡೆಸುತ್ತಾರೆ ಅಷ್ಟೆ. ಹಾಗಾಗಿ ಇಂಥ ಪತ್ರಿಕೆಗಳು ತಮ್ಮ ಅಸ್ತಿತ್ವಕ್ಕಾಗಿ ಸರಕಾರಿ ಕೃಪಾಭಿಕ್ಷೆಗೆ ಕೈಯೊಡ್ಡುತ್ತಾ, ಜಾಹಿರಾತುದಾರರಿಗೆ ಪ್ರೋತ್ಸಾಹ ಕೊಡುತ್ತ, ಅನೇಕ ಸಂಗತಿಗಳಲ್ಲಿ ರಾಜಿಮಾಡಿಕೊಳ್ಳುತ್ತ, ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರೋತ್ಸಾಹ ಕೊಡುತ್ತಾ ಓದುಗರ ಆಶೋತ್ತರಗಳನ್ನು ಈಡೇರಿಸದೆ. ಮುಕ್ತ ವೇದಿಕೆಯಾಗದೆ ಹೋಗುವ ಭಯವೇ ಹೆಚ್ಚು. ಇದು ಹಳೆಯ ದೂರು. ಇಲ್ಲಿ ಸರಕಾರ, ಪತ್ರಿಕಾ ಮಾಲಿಕರು ಹಾಗೂ ಕಾರ್ಯನಿರತ ಪತ್ರಿಕೋದ್ಯಮಿಗಳು ಪರಸ್ಪರ ಒಬ್ಬರನ್ನೊಬ್ಬರು ಸಂಶಯದಿಂದಲೇ ಕಾಣುತ್ತ ಬಂದಿರುವುದರಿಂದ ಇದೊಂದು ಚಿರಂತನ ತ್ರಿಕೋನವಾಗಿ ಬಿಟ್ಟಿದೆ. ವಾಸ್ತವಿಕವಾಗಿ ಪತ್ರಿಕೆಯನ್ನು ಯಾರು ನಡೆಸಿದರೂ ಅವರು ಬಂಡವಾಳದಾರರೆ ಆಗುತ್ತಾರೆ. ಅದನ್ನು ಗುಡಿಕೈಗಾರಿಕೆಯಾಗಿಯೋ ಧರ್ಮದರ್ಶಿತ್ವದಲ್ಲೋ —ನಡೆಸುವದು ತೀರಾ ಆದರ್ಶದ ಮಾತು. ಪತ್ರಿಕೆಗಳ ರಾಷ್ಟ್ರೀಕರಣ- ಪತ್ರಿಕಾಕರ್ತರೆ ಮಾಲಿಕರಾಗುವುದು ಈ ದೇಶದಲ್ಲಿ ಯಶಸ್ವಿಯಾಗುವಂಥ ವಾತಾವರಣ ಸದ್ಯ ಕಾಣುತ್ತಿಲ್ಲ.

ಅಧಿಕಾರ ವಿಕೇಂದ್ರೀಕರಣ ಕುರಿತು ಇತ್ತೀಚೆ ಬಹಳಷ್ಟು ಮಾತು ಕೇಳಿ ಬರುತ್ತದೆ. ಇದೇ ತತ್ತ್ವವನ್ನು ಪತ್ರಿಕೆಗಳ ಒಡೆತನ ಹಾಗೂ ಪ್ರಸಾರಕ್ಕೂ ಅನ್ವಯಿಸಿದರೆ ಹೇಗೆ? ಕರ್ನಾಟಕದ ೧೯ ಜಿಲ್ಲೆಗಳಲ್ಲೂ ಪ್ರತಿ ಜಿಲ್ಲೆಗೆ ಒಂದು ಇಲ್ಲವೆ ಎರಡರಂತೆ ಮಧ್ಯಮ ಪ್ರಸಾರದ- ಅಂದರೆ ೫೦,೦೦೦ ಪ್ರತಿಗಳೊಳಗಿನ- ದೈನಿಕ ಸಾಪ್ತಾಹಿಕಗಳನ್ನು ಆರಂಭಿಸುವುದು ಈ ಯೋಜನೆ. ಚಿಕ್ಕ ಚಿಕ್ಕ ಊರುಗಳಲ್ಲಿ ಪತ್ರಿಕೆಗಳನ್ನು ಆರಂಭಿಸುವ ಕುರಿತು ರಾಜಾಧ್ಯಕ್ಷ ಆಯೋಗವೂ ಶಿಫಾರಸು ಮಾಡಿತ್ತು. ಅಮೇರಿಕದಲ್ಲಿ ರಾಷ್ಟ್ರೀಯ ದೈನಿಕಗಳು ಇಲ್ಲ. "ನ್ಯೂಯಾರ್ಕ್ ಟೈಮ್ಸ್" ಮತ್ತು "ವಾಷಿಂಗ್ಟನ್ ಪೋಸ್ಟ್"ಗಳನ್ನು ವಿದೇಶಿಯರು ರಾಷ್ಟ್ರೀಯ ದೈನಿಕಗಳೆಂದು ತಿಳಿದಿದ್ದರೂ ಆ ದೇಶದ ಜೀವಾಳವಾಗಿರುವುದು ಚಿಕ್ಕ ಪುಟ್ಟ ಪ್ರಾದೇ

ಟಿಕ ಪತ್ರಿಕೆಗಳಿ. ಅಮೇರಿಕದಲ್ಲಿ ಪತ್ರಿಕಾ ಏಕ ಸ್ವಾಮ್ಯ ಕಾನೂನುಬಾಹಿರ.

ಸದ್ಯ ಕನ್ನಡದಲ್ಲಿ ಜಿಲ್ಲಾ ಮಟ್ಟದ ಪತ್ರಿಕೆಗಳು ಕೆಲವೇ ಇವೆ. ಮಣಿಪಾಲದ "ಉದಯವಾಣಿ" ಬೆಳಗಾವಿಯ "ಲೋಕದರ್ಶನ". ಮೈಸೂರಿನ "ಸಾಧ್ವಿ"ಯಂಥ ಪತ್ರಿಕೆಗಳು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಬರಬೇಕು. ಆದರೆ ಈ ಬಗೆಯ ಪತ್ರಿಕೆಗಳು ಪ್ರಾದೇಶಿಕ ಸಮಾಚಾರ, ಸಮಸ್ಯೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕಲ್ಲದೆ, ಅಂತಾರಾಷ್ಟ್ರೀಯ ಹಾಗೂ ನಮ್ಮ ಜನರಿಗೆ ನೇರವಾಗಿ ಸಂಬಂಧಪಡದಂಥ ವರದಿಗಳಿಗೆ ಪ್ರಾಶಸ್ತ್ಯ ಕೊಡಬಾರದು. ಚಿಕ್ಕ ಪತ್ರಿಕೆಗಳು ಹಳ್ಳಿಗರನ್ನು ಆಕರ್ಷಿಸುತ್ತವೆ. ಇಂದು ನಮ್ಮ ಪತ್ರಿಕೆಗಳ ಪ್ರಭಾವ ಹಳ್ಳಿಗಳ ಮೇಲೆ ಏನೇನೂ ಆಗುತ್ತಿಲ್ಲ ಎಂಬುದಕ್ಕೆ ಇತ್ತೀಚಿನ ವಿಧಾನ ಸಭಾ ಚುನಾವಣೆಗಳ ಫಲಿತಾಂಶವೇ ಸಾಕ್ಷಿ. ಕರ್ನಾಟಕದ ೨೬.೮೨೬ ಹಳ್ಳಿಗಳಲ್ಲಿ ಹಾಗೂ ೨೮೧ ಊರುಗಳಲ್ಲಿ ಪತ್ರಿಕಾ ಪ್ರಸಾರವೇ ಕಡಿಮೆ. ಇದಕ್ಕೆ ಕಾರಣವೇನು ಗೊತ್ತೇ? ಹಳ್ಳಿಗರಿಗೆ ಉಪಯುಕ್ತವಾಗುವ, ಆಸಕ್ತಿ ಉಂಟುಮಾಡುವ ಸಂಗತಿಗಳನ್ನು ಅವರ ಭಾಷೆಯಲ್ಲಿ ನಮ್ಮ ಪತ್ರಿಕೆಗಳು ಕೊಡುತ್ತಿಲ್ಲ. ನಗರದ ಜನರನ್ನೇ ಗಮನದಲ್ಲಿಟ್ಟುಕೊಂಡು ಹೆಚ್ಚಿನ ಕನ್ನಡ ಪತ್ರಿಕೆಗಳು ತಯಾರಾಗುತ್ತಿವೆ. ಈ ನಗರ ಪ್ರಾಶಸ್ತ್ಯ ಕಡಿಮೆಯಾಗಬೇಕು. ನಮ್ಮದು ಪಂಚಾಯತಿ ರಾಜ್ಯವೆಂದು ಬಹಳ ಹಿಂದೆಯೇ ಜವಾಹರಲಾಲರು ಘೋಷಿಸಿದ್ದರು. ಹಳ್ಳಿಗಳಿಗೆ, ಅಲ್ಲಿಯ ಅಭಿವೃದ್ಧಿ ಕೆಲಸಗಳಿಗೆ ಮಹತ್ವ ಕೊಡಬೇಕೆಂದು ಈಗ ಜನತಾ ಸರಕಾರವೂ ಜಾಹೀರು ಮಾಡಿದೆ. ಪ್ರಕೃತ ಹಳ್ಳಿಗಳ ಸಮಾಚಾರಗಳು ಕನ್ನಡದ ಪ್ರಧಾನ ಪತ್ರಿಕೆಗಳಲ್ಲಿ ಶೇಕಡಾ ೧೦ ರಿಂದ ೨೦ ರಷ್ಟು ಬರುತ್ತಿರಬಹುದು. ತಿರುವು ಮುರುವಾದ ಈ ಪ್ರಾಶಸ್ತ್ಯವನ್ನು ಸಾಧ್ಯವಿದ್ದಷ್ಟು ಬೇಗನೆ ಸರಿಪಡಿಸುವುದು ದೇಶದ ಆರೋಗ್ಯಕ್ಕೆ ಹಿತಕರ.

ಕಳೆದ ಒಂದೂವರೆ ದಶಕದಲ್ಲಿ ಕನ್ನಡ ಭಾಷಾ ಶೈಲಿಯ ಸ್ವರೂಪ ಹೊಸ ಆಕಾರ ಪಡೆಯುತ್ತಿದೆ. ಬರೆಯುವುದರ ಹಲವು ಬಗೆಗಳು ಬಳಕೆಯಲ್ಲಿ ಬಂದಿವೆ. ವಾಕ್ಯಗಳು ಚಿಕ್ಕದಾಗುತ್ತಿವೆ. ಅರಿಸಮಾಸ ಇತ್ಯಾದಿಗಳನ್ನು ಮುರಿಯುವುದನ್ನೂ ಸ್ವೀಕರಿಸಲಾಗುತ್ತಿದೆ. ಈ ಒಂದು ದಶಕದಲ್ಲಿ ಕನ್ನಡ ಭಾಷೆ ಬೆಳೆದು, ಬದಲಾದಷ್ಟು ಬೇರೆ ದಶಕದಲ್ಲಿ ಹಿಂದೆಂದೂ ಆಗಿರಲಿಲ್ಲ. ಕೆಲವು ಮಟ್ಟಿಗೆ ಈ ಸಾಧನೆ ತಮ್ಮದು ಎಂದು ನವ್ಯ ಪಂಥದ ಸಾಹಿತಿಗಳೆನಿಸಿಕೊಳ್ಳುವವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆಯಾದರೂ ಈ ಭಾಷಾ ಪವಾಡ, ಕನ್ನಡ ಪತ್ರಿಕೆಗಳದ್ದೂ ಹಿರಿಯ ಪಾಲು. ಹೊಸ ಹೊಸ ಶಬ್ದಗಳ ಚಲಾವಣೆ ಪತ್ರಿಕೆಗಳ ನಿರಂತರ ಕಾಯಕ. ಕನ್ನಡದಲ್ಲಿ ನವ್ಯ ಸಾಹಿತ್ಯದ ಕಲೆಯಾಗಲಿ ಹೊಸ ಬಗೆಯ ಸಿನಿಮಾ ಪ್ರಯೋಗವಾಗಲಿ ಜನಕ್ಕೆ ಮುಟ್ಟುವಂತೆ ಮಾಡಿ ಅವರ ಮಹತ್ವವನ್ನು ಜನತೆಗೆ ತಲುಪುವದರಲ್ಲಿ ಪತ್ರಿಕೆಗಳು ಮಹತ್ವಪೂರ್ಣ ಪಾತ್ರ ವಹಿಸಿದವು. ದವು. ಈ ಹೊಸ ಬೆಳವಣಿಗೆಗೆ ಪ್ರೇರಣೆ, ಶಕ್ತಿ, ಸಾಮರ್ಥ್ಯ, ಮಾರ್ಗದರ್ಶನ ಕೊಟ್ಟು ಪ್ರೋತ್ಸಾಹಿಸಿದವು. ಪತ್ರಿಕೋದ್ಯಮವನ್ನು ಅವಸರದ ಸಾಹಿತ್ಯ ಎನ್ನುತ್ತಾರೆ. ಇದೂ ಸಾಹಿತ್ಯದ ಒಂದು ಅವಿಭಾಜ್ಯ ಅಂಗವೆಂದು ಸ್ಥಾನ ಕೊಡಲು ಮಾತ್ರ ಕೆಲವು ಮಡಿವಂತರು ಸಿದ್ಧರಿಲ್ಲ.

ಕನ್ನಡದಲ್ಲಿ ಅನ್ವೇಷಕ ವರದಿಗಳು– Investigative Reports– ಎಂಬುದು ಇನ್ನೂ ಸ್ಪಷ್ಟವಾಗಿ ರೂಪುಗೊಂಡಿಲ್ಲ. "ಪ್ರಜಾವಾಣಿ" ಪತ್ರಿಕೆಯಲ್ಲಿ ಇತ್ತೀಚೆಗೆ ಈ ಬಗೆಯ ಕೆಲವು ವಿಶೇಷ ವರದಿಗಳು ಓದುಗರ ಆಸಕ್ತಿ ಕೆರಳಿಸಿವೆ. "ಸುಧಾ" ಸಾಪ್ತಾಹಿಕವೂ ಕೆಲವು ರಾಜಕೀಯ ಅನ್ವೇಷಕ ವರದಿಗಳನ್ನು ವಿಶೇಷ ಲೇಖನಮಾಲೆಯ ರೂಪದಲ್ಲಿ ಪ್ರಕಟಿಸಿದೆ. ಹಿಂದೆ "ಕಸ್ತೂರಿ"ಯಲ್ಲಿ ಪಾ. ವೆಂ. ಆಚಾರ್ಯರು ಸಹ ಸಂಪಾದಕರಾಗಿದ್ದಾಗ ವಿಶೇಷ ಶೋಧದ ಲೇಖನಗಳನ್ನು ವಿವಿಧ ವಿಷಯಗಳಲ್ಲಿ ಬರೆಸುವ ಯೋಜನೆ ಹಾಕಿಕೊಂಡರೂ ಆರ್ಥಿಕ ದೃಷ್ಟಿಯಿಂದ ಅದನ್ನು ಕೈ ಬಿಡಲಾಗಿತ್ತು. ಈ ಬಗೆಯ ವರದಿಗಳು. ಲೇಖನಗಳು ಜೀವಂತ ಪತ್ರಿಕೋದ್ಯಮದ ಬೆಳವಣಿಗೆಗೆ ಅನಿವಾರ್ಯ.

ಬರೀ ರಾಜಕಾರಣಿಗಳ ವರದಿಗಳು ಮಾತ್ರವಲ್ಲ. ಆಹಾರ ವಸ್ತುಗಳ ಕಲಬೆರಕೆ. ವ್ಯಾಪಾರಿಗಳ ಮೋಸ, ವೈದ್ಯರು ರೋಗಿಗಳನ್ನು ಶೋಷಿಸುವುದು. ಪೋಲೀಸರ ಅಮಾನುಷಗಿರಿ. ಬಸ್ಸು, ಟ್ಯಾಕ್ಸಿ, ಆಟೋರಿಕ್ಷಾ ಚಾಲಕರು ಜನರಿಗೆ ಕೊಡುವ ಉಪಟಳ. ನ್ಯಾಯಾಲಯದಲ್ಲಾಗುವ ಅನ್ಯಾಯ. ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಆಗುವ ಅನಾಹುತ, ಲೈಸನ್ಸ್

ಪ್ರಮುಖ್ಯ ಗಳ ರಕರಾರು.—ಹೀಗೆ ಒಂದೇ ಎರಡೇ ಪ್ರತಿ ದಿಂತ ಪ್ರಾಂತದಲ್ಲೂ ವಿಭಾಗದಲ್ಲೂ ದೈನಂದಿನ ಜೀವನದಲ್ಲಿ ಸಾಮಾನ್ಯ ಜನರಿಗಾಗು ತ್ತಿರುವ ಹಿಂಸೆ, ಶೋಷಣೆ. ಅನ್ಯಾಯಗಳನ್ನು ಪತ್ರಿಕೆಗಳು ಕರಾರುವಾಕ್ಕಾಗಿ ವರದಿ ಮಾಡಿ ಜನಾಭಿಪ್ರಾಯ ರೂಪಿಸಿ, ಸರ್ವವ್ಯಾಪಿಯಾಗಿರುವ ಭ್ರಷ್ಟಾಚಾರವನ್ನು ಸಂದಿಗೊಂದಿಗಳಿಂದ ಹೊರತೆಗೆದು, ರಟ್ಟು ಮಾಡಿ ನಿರ್ನಾಮ ಮಾಡಬೇಕು. ಅವಶ್ಯವಿದ್ದರೆ ಚಳವಳಿ. ಪ್ರತಿಭಟನೆಗಳನ್ನು ಮಾಡಿ ಸಾಮಾಜಿಕ ಬದಲಾವಣೆಯ ಸಮರ್ಥ ಸೇನಾನಿಯಾಗಬೇಕು. ಕನ್ನಡ ಪತ್ರಿಕೆಗಳು ಆಗ ಮಾತ್ರ ನಿಜವಾದ ಅರ್ಥದಲ್ಲಿ ಸಾರ್ವಜನಿಕ ವೇದಿಕೆಯಾಗಿ. ಜನಸೇವೆಯ ಸ್ವಾತಂತ್ರ್ಯ ಅಭಿವ್ಯಕ್ತಿಯ ಪ್ರಬಲ ಮಾಧ್ಯಮವಾಗುತ್ತವೆ. ಇದರ ಬದಲಾಗಿ ನಮ್ಮ ಪತ್ರಿಕೆಗಳು ಪಕ್ಷ ಪತ್ರಿಕೆಗಳಾಗದೆ. ಪ್ರಚಾರಮಾಧ್ಯಮ (propaganda medium) ಆಗದಂತೆ ಎಚ್ಚರಿಕೆ ವಹಿಸಬೇಕಾದುದು ಮುಖ್ಯ.

ಏಕಪಕ್ಷೀಯವಾದ ವರದಿಗಳನ್ನು ಕೊಡುವುದೂ ಅಭಾಸಕರ. ಉದಾಹರಣೆಗೆ ಹರಿಜನರ ಕುರಿತಾದ ಸುದ್ದಿಗಳು. ಪತ್ರಿಕೆಗಳಲ್ಲಿ ಹರಿಜನರಿಗಾಗುತ್ತಿರುವ ಹಿಂಸೆ, ದೌರ್ಜನ್ಯಗಳ ವರದಿಗಳು ಆಗಾಗ ಬರುತ್ತಲೇ ಇರುತ್ತವೆ. ಇಂಥ ವರದಿಗಳ ಬಹಳಷ್ಟರಲ್ಲಿ ಆ ಘಟನೆಯ ಮೂಲ ಕಾರಣ. ಘಟನೆಯ ಬಳಿಕ ನಡೆದ ಸಂಗತಿಗಳ (Follow-up) ಸಮಾಚಾರವೇ ಬರುವುದಿಲ್ಲ. ಪತ್ರಕರ್ತರು ಒಂದು Thrill ಗಾಗಿ. Sensationalism ದೃಷ್ಟಿಯಿಂದ ಈ ಬಗೆಯ ವರದಿ ಮಾಡುತ್ತಾರೆಯೋ ಅನಿಸುತ್ತಿದೆ. ಉದಾಹರಣೆಗೆ ಬೆಲ್ಚಿಯಲ್ಲಿ ನಡೆದ ಎರಡು ಹರಿಜನ ಬಣಗಳೊಳಗಿನ ದ್ವೇಷದ, ನರಮೇಧದ ವರದಿ. ಆ ಬಳಿಕ ಅಲ್ಲಿಗೆ ಇಂದಿರಾ ಗಾಂಧಿ ಆನೆಯ ಸವಾರಿ ಮಾಡಿದ ಸ್ಟಂಟ್ ಸಮಾಚಾರ ಬಂದಿತು. ಮುಂದೆ ಏನಾಯಿತು ಎಂದು ಓದುಗಾರರಿಗಾದರೂ ಪತ್ರಿಕೆಗಳು ತಿಳಿಸಿವೆಯೆ? ಸತ್ತ ಹರಿಜನರ ಕುಟುಂಬದ ಗತಿ ಏನಾಯಿತು? ನಿಮಗೆ ಗೊತ್ತಾಯಿತೆ? ಅಷ್ಟು ಬಿಸಿಯಿದ್ದ ಸುದ್ದಿಯನ್ನು ಮತ್ತೆ ಒಮ್ಮೆಲೆ ತಣ್ಣಗೇಕೆ ಮಾಡಿದರು? ಪತ್ರಿಕಾ ವರದಿಗಳಲ್ಲಿ ಪದೇ ಪದೇ ಹರಿಜನ ಎಂದು ಲೇಬಲ್ ಹಚ್ಚುವ ಬದಲು ಮಾನವೀಯ ದೃಷ್ಟಿಯಿಂದ ಇಂಥ ಘಟನೆಗಳ ವರದಿ, ವಿಮರ್ಶೆ ನಡೆಸುವುದು ಪತ್ರಿಕಾಧರ್ಮ.

"ಒಪೀನಿಯನ್" ಪತ್ರಿಕೆಯ ಸಂಪಾದಕ ಹಾಗೂ ಖ್ಯಾತ ಪತ್ರಿಕೋದ್ಯಮಿ ಎ. ಡಿ. ಗೋರ್‌ವಾಲಾ ಅವರು "ಶಕ್ತಿ ಮಾಧ್ಯಮವಾಗಿ ಪತ್ರಿಕೋದ್ಯಮ" ಎಂಬ ಉಪನ್ಯಾಸದಲ್ಲಿ ಬರೆದ ಒಂದು ಸಂಗತಿಯನ್ನು ಕನ್ನಡ ಪತ್ರಿಕಾ ಬಂಧುಗಳೂ ತಿಳಿದುಕೊಳ್ಳುವುದು ಉಚಿತ. ಕಸ್ಟಮ್ಸ್ ನವರು ಭಾರಿ ಸಾಧನೆ ಮಾಡಿ. ಕಳ್ಳ ಚಿನ್ನ. ರಿಸ್ಟ್ ವಾಚು. ಟ್ರಾನ್ಸಿಸ್ಟರ್‌ಗಳು ಮೊದಲಾದ ಬೆಲೆಯ ಸಾಮಾನುಗಳನ್ನು ವಶಪಡಿಸಿಕೊಂಡ ವರದಿ ಹಾಗು ಫೋಟೋಗಳು ಪತ್ರಿಕೆಗಳಲ್ಲಿ ಆಗಾಗ ಬರುತ್ತಿರುತ್ತವೆ. ಫೋಟೋದಲ್ಲಿ ಆರೋಪಿಗಳ ಜತೆ ಅನೇಕ ಬಾರಿ ಬಟ್ಟು ರಾಜೀಯ ವ್ಯಕ್ತಿಯೂ ಇರುವುದನ್ನು ನೀವು ಗಮನಿಸಿರಬಹುದು. ಇಂಥ ಫೋಟೋ

ಪ್ರಕಟಣೆಯಿಂದ ಏನು ಸಾಧಿಸಿದಂತಾಯಿತು? ಹೋಗಲಿ, ಈ ಕಳ್ಳ ವಸ್ತುಗಳು ಎಲ್ಲಿಂದ ಬಂದವು, ಎಲ್ಲಿಗೆ ಹೋದವು? ಅವುಗಳನ್ನು ವಶಪಡಿಸಿಕೊಳ್ಳುವಾಗ ನಡೆದ ಸಾಹಸದ ಕತೆ, ಕ್ರಮ (Modus operandi) ಗಳನ್ನು ಸ್ವಾರಸ್ಯಕರವಾಗಿ ಓದುಗರಿಗೆ ವರದಿ ಮಾಡುವುದು ಎಷ್ಟೊಂದು ಅಬ್ಜೆಕ್ಟಿವ್ ಆಗೀತು.

ಕನ್ನಡ ಪತ್ರಿಕೋದ್ಯಮದಲ್ಲಿ ಸಾಕಷ್ಟು ವೈವಿಧ್ಯ ಬೆಳೆದಿಲ್ಲ. ವಿಶೇಷ ವಿಭಾಗಗಳಿಗೆ ಸಂಬಂಧಪಟ್ಟ ವಿಶಿಷ್ಟವಾದ, ಪ್ರತ್ಯೇಕ ಪತ್ರಿಕೆಗಳೇ ನಮ್ಮಲ್ಲಿಲ್ಲ. ವಿಜ್ಞಾನ, ಕ್ರೀಡೆ, ರಂಗಭೂಮಿ ಹಾಗೂ ಇತರ ಕಲೆಗಳು ಚರಿತ್ರೆ, ಕರ್ನಾಟಕದ ನೈಸರ್ಗಿಕ ಸಂಪತ್ತು (ಖನಿಜ, ಮೀನುಗಾರಿಕೆ, ಅರಣ್ಯ, ಮೃಗ, ಪಕ್ಷಿ), ನೀರಾವರಿ, ವಿದ್ಯುತ್ತು, ಉದ್ದಿಮೆಗಳ ಕುರಿತು ಅಭ್ಯಾಸಪೂರ್ಣ (ಶಾಸ್ತ್ರೀಯ ಹಾಗೂ ಜನಪ್ರಿಯ) ಪತ್ರಿಕೆಗಳನ್ನು ಹೊರಡಿಸುವ ಸಾಹಸ ಏಕಿಲ್ಲ? ಸ್ತ್ರೀಯರ ಹಾಗೂ ಮಕ್ಕಳ ಕುರಿತಾದ ಪತ್ರಿಕೆಗಳು ಅನಿವಾರ್ಯವಾಗಿವೆ. ಪತ್ರಿಕೋದ್ಯಮದ ಕುರಿತಾಗಿಯೇ ಒಂದು ಪತ್ರಿಕೆ ನಮಗೆ ಬೇಕು. ಒಂದು ಭಾಷೆಯ ಜನರ ಸಮಗ್ರ ಅಭಿವೃದ್ಧಿಯಲ್ಲಿ ಪೋಷಕವಾಗುವಂಥ ವೈವಿಧ್ಯಪೂರ್ಣ ವಿಶಿಷ್ಟ ಸಾಹಿತ್ಯದ ಜರೂರಿ ಹಿಂದೆಂದಿಗಿಂತಲೂ ಇಂದು ಬಹಳವಾಗಿದೆ. ಕನ್ನಡದಲ್ಲಿ ೪–೫ ದೀಪಾವಳಿ ಸಂಚಿಕೆಗಳು ಮಾತ್ರ ಬರುತ್ತವೆ. ಮರಾಠಿಯಲ್ಲಿ ೨೫೦–೩೦೦ ವಿಶೇಷಾಂಕಗಳಿವೆ. ಬಂಗಾಳಿಯ ಪೂಜಾ ವಿಶೇಷಾಂಕಗಳು, ತಮಿಳಿನ ಸಂಕ್ರಾಂತಿ ಸಂಚಿಕೆಗಳು, ಮಲಯಾಳಿಯ ಓಣಂ ಅಂಕಗಳ ಹಿಂದೆ ಸ್ವಾರಸ್ಯಕರವಾದ ಸಾಹಸದ ಕತೆಗಳಿವೆ. ಕೆಲವು ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ರಸಿಕ ದಂಪತಿಗಳು ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಇಂಥ ಒಂದು ಪ್ರಯೋಗ ಮುಂಬಯಿಯ ಪ್ರಾಧ್ಯಾಪಕರಿಂದ ಹಾಗೂ ಬೆಂಗಳೂರಿನ ವಿದ್ಯಾರ್ಥಿಯೊಬ್ಬರಿಂದ ನಡೆದಿದೆ. ಇಂಥ ಪ್ರಯತ್ನಗಳು ಹೆಚ್ಚಾಗಬೇಕು.


ನಮ್ಮ ಪತ್ರಿಕೆಗಳ ಜೀವವಾಹಿನಿಯಾಗಬಲ್ಲಂಥ ಒಳ್ಳೆಯ ಫೀಚರ್ ಸಿಂಡಿಕೇಟುಗಳು ಕರ್ನಾಟಕದಲ್ಲೇ ಏಕೆ, ಭಾರತದಲ್ಲಿಯೇ ಇಲ್ಲವೆಂದರೂ ಸರಿ. ಬಹುಭಾಷಾದೇಶವಾದ ಭಾರತದಲ್ಲಿ ಈ ತೆರನಾದ ಸಾಹಸಕ್ಕೆ ಭಾರಿ ಅವಕಾಶವಿದೆ. ನಮ್ಮಲ್ಲಿ ಕಾರ್ಟೂನ್ಸು, ಫೀಚರುಗಳು, ಸಾಹಸಚಿತ್ರ ಸಿಂಡಿಕೇಟುಗಳೂ ಬೇಕು. ಮಹತ್ವಾಕಾಂಕ್ಷೆ ಇರುವ, ಸಾಹಸ ಪ್ರವೃತ್ತಿಯ ತರುಣ ಪ್ರತಿಭಾವಂತರು ಇಂಥವನ್ನು ಆರಂಭಿಸುವದರಿಂದ ನೂರಾರು ಮಂದಿಗೆ ಸ್ವಂತ ಉದ್ಯೋಗಾವಕಾಶವೂ ಆದೀತು.

ಪತ್ರಿಕೆಗಳ ಮುದ್ರಣ, ವಿನ್ಯಾಸ ಹಾಗೂ ಲೇಔಟ್‌ಗಳು ಒಂದು ವಿಶಿಷ್ಟ ಕಲೆ ಎಂದು ನಮ್ಮ ಪತ್ರಿಕೆಗಳು ಇತ್ತೀಚೆಗೆ ತಿಳಿದುಕೊಳ ಲಾರಂಭಿಸಿದುದು ಶುಭಲಕ್ಷಣ. ಆದರೆ ಕನ್ನಡ ಮುದ್ರಣ ಮೊಳೆ(ಟೈಪು)ಗಳ ವಿನ್ಯಾಸ, ವೈವಿಧ್ಯಗಳಲ್ಲಿ ಏನೇನೂ ಸಮಾಧಾನಕರವಾಗಿ ಪ್ರಗತಿಯಾಗಿಲ್ಲ. ಉದಾಹರಣೆಗೆ ಕನ್ನಡದಲ್ಲಿ ಇಟೆಲಿಕ್ಸ್ ಮೊಳೆಗಳು ಇನ್ನೂ ಬಂದಿಲ್ಲ. ರನ್ನಿಂಗ್ ಟೈಪ್‌ನಲ್ಲಿ ಎರಡು ಮೂರು ಬಗೆಗಳು ಮಾತ್ರ ಇವೆ. ಸಂಶೋಧನೆ, ನಿರ್ಮಾಣಗಳಿಂದಲೇ ಈ ಕೊರತೆ ನೀಗಬೇಕು. ನಮ್ಮ ಒಂದೆರಡು ಪತ್ರಿಕೆಗಳು ಉತ್ತಮ ಮುದ್ರಣಕ್ಕಾಗಿ ಪ್ರಶಸ್ತಿಗಳಿಸಿವೆ. ಆದರೆ ಇವುಗಳೂ ವಿನ್ಯಾಸ, ಲೇಔಟ್‌ಗಳ ಬಗ್ಗೆ ವಹಿಸಬೇಕಾದಷ್ಟು ಕಾಳಜಿ ತೆಗೆದುಕೊಳುತ್ತಿಲ್ಲ.

ಲೇಖಕರ ಪರಿಶ್ರಮಕ್ಕೆ ಸಂಭಾವನೆ ಕೊಡುವ ಉಪಕ್ರಮ ಕನ್ನಡದಲ್ಲಿ ಒಂದೂವರೆ ದಶಕದಿಂದೀಚೆಗೆ ಆರಂಭವಾಯಿತು. ಈ ಬಗ್ಗೆ ಇತರ ಭಾಷಾ ಪತ್ರಿಕೆಗಳಲ್ಲಿ ಶ್ಲಾಘನೆಯ ಮಾತು ಬಂದಿವೆ. ಆದರೆ ಕನ್ನಡದಲ್ಲಿ ಒಳ್ಳೆಯ ಪ್ರಸಾರವಿದ್ದು ಲಾಭಗಳಿಸುತ್ತಿರುವ ಕೆಲವು ಪತ್ರಿಕೆಗಳು ಇನ್ನೂ ಲೇಖಕರ ಶೋಷಣೆ ನಡೆಸಿಯೇ ಇವೆ. ಶೋಷಣೆ ಖಂಡಿಸಬೇಕಾದವರೇ ಅದನ್ನು ಪೋಷಿಸುವುದು ಒಂದು ವಿಡಂಬನೆ.

ವೈದ್ಯಕೀಯ, ವಕೀಲಿ ಮೊದಲಾದ ವೃತ್ತಿಗಳಂತೆ ಪತ್ರಿಕೋದ್ಯಮವೂ ಒಂದು ಗೌರವಯುತ ವ್ಯವಸಾಯವೆಂದು ಇನ್ನೂ ನಮ್ಮ ಸಮಾಜ ಗುರುತಿಸಿಲ್ಲ. ಇದಕ್ಕೆ ಪತ್ರಿಕಾಕರ್ತರೇ ತುಸು ಮಟ್ಟಿಗೆ ಕಾರಣರು. **ಪತ್ರಿಕೆಗಳ ನಮ್ಮ ಸಮಾಜಕ್ಕೆ ಬದುಕಿಗೆ ನಿಕಟವಾಗಿ, ಅಧಿಕಾರಶಾಹಿಗಳಿಂದ ದೂರವಾದೊಡನೆ ಪತ್ರಕರ್ತರಿಗೆ ತನ್ನಷ್ಟಕ್ಕೆ ತಾನೇ ಗೌರವ ಬರುತ್ತದೆ. ಸರಕಾರ ಹಾಗೂ ಖಾಸಗಿ ಸಂಸ್ಥೆಗಳು ಕನ್ನಡದಲ್ಲಿ ವರ್ಷದ ಶ್ರೇಷ್ಠ ವರದಿ, ಶ್ರೇಷ್ಠ**

ಚಾರ್ಲಿ ಚಾಪ್ಲಿನ್



ಭಾರತದ ಅಂಚೆ-ತಂತಿ ಇಲಾಖೆಯವರು ಈ ಕಲಾವಿದನ ಗೌರವಾರ್ಥ ಪ್ರಕಟಿಸಿದ ಅಂಚೆಚೀಟಿ. ಚಾಪ್ಲಿನ್ ಬಗ್ಗೆ ಲೇಖನಕ್ಕಾಗಿ ೧೧೧ ನೇ ಪುಟ ನೋಡಿ.

ಅಗ್ರಲೇಖನ, ಶ್ರೇಷ್ಠ ಬರಹಗಳಿಗೆ ಪ್ರಶಸ್ತಿ, ಪುರಸ್ಕಾರಕೊಡುವ ಉಪಕ್ರಮಗಳನ್ನೂ ಆರಂಭಿಸಬೇಕು. ಪತ್ರಿಕಾಕರ್ತರೂ ತಮ್ಮ ಜ್ಞಾನ, ಸಾಧನೆ, ಸಾಹಸಗಳನ್ನು ವಿಸ್ತರಿಸಿಕೊಳ್ಳಲು, ಅದನ್ನು ಒರೆಗೆ ಹಚ್ಚಲು ಈ ಪ್ರಶಸ್ತಿಗಳು ಕಾರಣವಾಗಬಹುದು. ನಿಯೋಜಿತ ಲೇಖನಗಳನ್ನು ಬರೆಯಿಸುವ (Assignment features) ಪರಂಪರೆಯೂ ನಮ್ಮಲ್ಲಿ ಬೆಳೆಯಲಿ.

ಗತಕಾಲದ ಪತ್ರಿಕಾಜಗತ್ತಿನ ಸವಿನೆನಪುಗಳನ್ನು ಮೆಲುಕಾಡುವಾಗ 'ಜೀವನ', 'ಜಯಂತಿ' 'ಅಂತರಂಗ', 'ಕೊರವಂಜಿ', 'ಜಯಕರ್ನಾಟಕ' ಮೊದಲಾದ ಪತ್ರಿಕೆಗಳು ನಮ್ಮ ಜನರ ಮೇಲೆ ಮಾಡಿದ ಅಚ್ಚಳಿಯದ ಪ್ರಭಾವಗಳ ನೆನಪಾಗುತ್ತಿದೆ. ಕನ್ನಡದ ಹಲವು ರಂಗಗಳು ಸಮೃದ್ಧವಾಗುತ್ತಿರುವಾಗ ಪತ್ರಿಕಾಪ್ರಪಂಚ ಏಕೆ ಹಿಂದೆ ಬೀಳಬೇಕು? ಈ ಬಗ್ಗೆ ನಮ್ಮ ಪತ್ರಿಕಾಕರ್ತರು, ಸಾಹಿತಿಗಳು, ವಿಚಾರವಂತರು, ತರುಣರು ಯೋಚಿಸಬೇಕು. ಭಾರತದ ಹಲವು ಶ್ರೇಷ್ಠ ಪತ್ರಕರ್ತರು ಕನ್ನಡಿಗರು. ಕನ್ನಡ ಪತ್ರಿಕೋದ್ಯಮದಲ್ಲಿ ಪ್ರಗತಿ ಅಭಿವೃದ್ಧಿಗಳ ಚಳವಳಿಯೂ ಬಂದು ಹೋಗಲಿ.

ಇಲ್ಲಿ ಪತ್ರಿಕಾಕರ್ತರ ಕಡೆಯಿಂದಾಯಿತು. ಕಡಿಮೆ ಸಂಖ್ಯೆಯಲ್ಲಿರುವ ನಮ್ಮ ಓದುಗರಿಗೂ ಅವರ ಹೊಣೆಯಿದೆ ತಾನೆ? ಓದುವಿಕೆ ಅದರಲ್ಲೂ ಪತ್ರಿಕಾ ಓದು—ನಮ್ಮಲ್ಲಿ ಕಡಿಮೆಯಾಗುತ್ತಿದೆ. ಹೆಚ್ಚಿನ ಪತ್ರಿಕೆಗಳ ಓದುಗರು ಸ್ತ್ರೀಯರೇ. ಆದರೆ ಪತ್ರಿಕೆಯಲ್ಲಿ ಬರುವುದೆಲ್ಲ ವೇದವಾಕ್ಯವೆಂಬ ಭಾವನೆ ನಮ್ಮ ಜನರಲ್ಲಿ ಬದಲಾಗಬೇಕು. ಪತ್ರಿಕೆಗಳನ್ನು ಸರಿದಾರಿಗೆ ತರುವ ಕೆಲಸ ಓದುಗರದು. ಅಮೇರಿಕದಲ್ಲಿ 'ವಾಷಿಂಗ್‌ಟನ್ ಪೋಸ್ಟ್', ಮೊದಲಾದ ಪತ್ರಿಕೆಗಳಲ್ಲಿ ಒಂಬುಡ್ಸಮನ್‌ನಂಥ ಸ್ವವಿಮರ್ಶಕರು ಇರುತ್ತಾರೆ. ಅನುಭವಿಯಾದ ಪತ್ರಿಕೋದ್ಯಮಿಯೊಬ್ಬ, ಆ ಪತ್ರಿಕೆಯ ಏಕಪಕ್ಷೀಯ ವರದಿಗಳನ್ನು, ಸಂಪಾದಕರು ಪೂರ್ವಾಗ್ರಹಪೀಡಿತರಾಗಿ ಬರದಿರಬಹುದಾದ ಸುದ್ದಿ, ಸಂಪಾದಕೀಯ ಅಗ್ರಲೇಖನಗಳನ್ನು ಅದೇ ಪತ್ರಿಕೆಯಲ್ಲಿ ಟೀಕಿಸಿ, ವಿಮರ್ಶಿಸಿ, ಖಂಡಿಸಿ ಬರೆಯುವ ಈ ಹೊಸ ಉಪಕ್ರಮ ಕನ್ನಡದಲ್ಲೂ ಇರಲಿ. ಈ ಆತ್ಮಶುದ್ಧಿ ಪತ್ರಿಕೆಯ ಆರೋಗ್ಯಕರ ಬೆಳವಣಿಗೆಗೆ ಒಳ್ಳೆಯ ಟಾನಿಕ್. ಭಾರತದಲ್ಲಿ 'ಇಲಸ್ಟ್ರೇಟೆಡ್ ವೀಕ್ಲಿ' ಮತ್ತು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗಳಲ್ಲಿ ಈ ರೀತಿ ಓದುಗರು ಸಂಪಾದಕರನ್ನು, ಲೇಖನಗಳನ್ನು ಟೀಕಿಸಿ, ಖಂಡಿಸಿ ಬರೆದ ಪತ್ರಗಳನ್ನು ಪ್ರಕಟಿಸುವ ಔದಾರ್ಯ ತೋರಿಸುತ್ತಾರೆ.

ಲೆನಿನ್ ಬರೆದ ಒಂದು ಮಾತು ನಮ್ಮ ಪತ್ರಿಕೋದ್ಯಮಕ್ಕೆ ದಾರಿದೀಪವಾದೀತು; "ಪತ್ರಿಕೋದ್ಯಮ ಜನತೆಯ ಸಾಮೂಹಿಕ ಪ್ರಚಾರ, ಚಳವಳಿ ಮತ್ತು ಸಂಘಟನೆಯ ಪ್ರೇರಕ ಹಾಗೂ ಚಾಲಕ ಶಕ್ತಿಯಾಗಬೇಕು" ✡

(ದಿಲ್ಲಿಯಲ್ಲಿ ನಡೆದ ಅಖಿಲ ಭಾರತ ೫೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೇಖಕರು ಮಾಡಿದ ಭಾಷಣ ಮತ್ತು ಇತ್ತೀಚಿನ ಬೆಳವಣಿಗೆಯ ಅಳವಡಿಕೆಯೊಂದಿಗೆ ಮಾಡಿದ ಸಮೀಕ್ಷೆ)

ಅವಿಭಾಜ್ಯ ಸಂಖ್ಯೆಗಳ ಅನಂತ ಸಾಮ್ರಾಜ್ಯ

ಜಿ. ಟಿ. ನಾರಾಯಣರಾವ್

ಏರುವ ಮೆಟ್ಟಲುಗಳು

ಶಾಲೆಯಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳಿದ್ದಾರೆ? ಮೊಟ್ಟೆಯಲ್ಲಿರುವ (?) ರಾಸುಗಳ ಸಂಖ್ಯೆ ಎಷ್ಟು? ದಂಡಕಾರಣ್ಯದಲ್ಲಿ ಎಷ್ಟು ಮರಗಳಿವೆ? ಆಕಾಶಗಂಗೆಯಲ್ಲಿರುವ ನಕ್ಷತ್ರಗಳ ಸಂಖ್ಯೆ ಎಷ್ಟು?

ಇಂಥ ಪ್ರಶ್ನೆಗಳಿಗೆ ದೊರೆಯುವ ಉತ್ತರಗಳನ್ನು ಧನಪೂರ್ಣಾಂಕಗಳೆಂದು ಕರೆಯುತ್ತೇವೆ. ಧನಪೂರ್ಣಾಂಕಗಳ ಏರುವ ಮೆಟ್ಟಲುಗಳಿವು:

1, 2, 3, 4, 5, 6, 7, 8, 9, 10, …

ಈ ಶ್ರೇಣಿ ಅನಂತವಾಗಿ, ಅಂದರೆ ಕೊನೆಯ ಸಂಖ್ಯೆ ಅಥವಾ ಮೆಟ್ಟಲು ಎಂಬುದು ಇಲ್ಲದೆ, ಸಾಗುತ್ತದೆ. ಇದರಲ್ಲಿ ಹೆಜ್ಜೆ ಬಿಟ್ಟು ಹೆಜ್ಜೆ ಇಟ್ಟು ನಡೆದಾಗ ಎರಡು ಪ್ರತ್ಯೇಕ ಅನಂತ ಶ್ರೇಣಿಗಳು ಲಭಿಸುತ್ತವೆ:

1, 3, 5, 7, 9, 11, ……

2, 4, 6, 8, 10, 12, ……

ಮೊದಲನೆಯ ಶ್ರೇಣಿಯ ಸಂಖ್ಯೆಗಳಿಗೆ ಬೆಸ (ವಿಷಮ) ಸಂಖ್ಯೆಗಳೆಂದೂ ಎರಡನೆಯ ಶ್ರೇಣಿಯ ಸಂಖ್ಯೆಗಳಿಗೆ ಸರಿ (ಸಮ) ಸಂಖ್ಯೆಗಳೆಂದೂ ಹೆಸರು. ಸರಿಸಂಖ್ಯೆಗಳ ಪೈಕಿ 2ನ್ನು ಉಳಿದು ಎಲ್ಲವನ್ನೂ ಅಪವರ್ತನಗಳಾಗಿ ಒಡೆಯಬಹುದು:

$$4 = 2 \times 2, \qquad 12 = 2 \times 2 \times 3,$$
$$30 = 2 \times 3 \times 5$$

ಬೆಸಸಂಖ್ಯೆಗಳ ಶ್ರೇಣಿಯಲ್ಲಿ ಇಂಥ ಸಾರ್ವತ್ರಿಕ ಲಕ್ಷಣ ಪ್ರಕಟವಾಗುತ್ತಿಲ್ಲ. ಆದರೆ ಅಲ್ಲಿಯೂ ಕೆಲವು ಸಂಖ್ಯೆಗಳನ್ನು ಅಪವರ್ತನಗಳಾಗಿ ಒಡೆಯಬಹುದು:

$$9 = 3 \times 3, \qquad 35 = 5 \times 7,$$
$$1001 = 7 \times 11 \times 13$$

ಅಪವರ್ತನಗಳಾಗಿ ಒಡೆಯಲಾಗುವ (ಅಪವರ್ತನಶೀಲ) ಸಂಖ್ಯೆಗಳು "ಶುದ್ಧವಲ್ಲ, ಬೆರಕೆ" ಎಂದು ನಮಗೆ ಅನ್ನಿಸುವುದು. ಹಾಗಾದರೆ ಅಪವರ್ತನಶೀಲ, ಅಂದರೆ "ಶುದ್ಧ ಮತ್ತು ಬೆರಕೆ ಅಲ್ಲದ," ಸಂಖ್ಯೆಗಳಾವುವೋ? ಈ ಮುಂದಿನ ಶ್ರೇಣಿಯನ್ನು ಪರಿಶೀಲಿಸಿ:

1, 2, 3, 5, 7, 11, 13, 17,
19, 23, …

ಇವರಲ್ಲಿರುವ ಪ್ರತಿಯೊಂದು ಸಂಖ್ಯೆಯೂ 1ರಿಂದ ಮತ್ತು ಸ್ವತಃ ಅದೇ ಸಂಖ್ಯೆಯಿಂದ ಮಾತ್ರ ಭಾಗವಾಗುತ್ತದೆ, ಬೇರೆ ಯಾವ ಸಂಖ್ಯೆಯಿಂದಲೂ ಭಾಗವಾಗುವುದಿಲ್ಲ (ಧನಪೂರ್ಣಾಂಕಗಳೊಡನೆ ಮಾತ್ರ ನಮ್ಮ ವ್ಯವಹಾರ ಎಂಬುದನ್ನು ಮರೆಯಬಾರದು):

$$1 = 1 \times 1, \quad 11 = 1 \times 11, \quad 23 = 1 \times 23$$

ಗಣಿತದ ಕೆಲವು ನಿರ್ದಿಷ್ಟ ಕಾರಣಗಳಿಗೋಸ್ಕರ ಈ ಶ್ರೇಣಿಯಿಂದ 1ನ್ನು ತೆಗೆದು ಉಳಿದ ಸಂಖ್ಯೆ

ಗಳನ್ನು ಮಾತ್ರ ಬರೆಯುತ್ತೇನೆ:

2, 3, 5, 7, 11, 13, 17, 19, 23, 29, 31, …

ಇವುಗಳಿಗೆ ಅವಿಭಾಜ್ಯ (ಅಪವರ್ತನಗಳಾಗಿ ಒಡೆಯಲಾಗದ) ಸಂಖ್ಯೆಗಳೆಂದು ಹೆಸರು.

ಅವಿಭಾಜ್ಯ ಸಂಖ್ಯೆ

ಅವಿಭಾಜ್ಯ ಸಂಖ್ಯೆಯೊಂದು ಧನಪೂರ್ಣಾಂಕ. ಅದನ್ನು 1 ಮತ್ತು ಸ್ವತಃ ಅದೇ ಸಂಖ್ಯೆ ಮಾತ್ರ ಭಾಗಿಸಬಲ್ಲವು. ಬೇರೆ ಯಾವ ಪೂರ್ಣಾಂಕವೂ ಭಾಗಿಸಲಾರದು. ಯಾವುದೇ ಸಂಖ್ಯೆಯನ್ನು ಈ ಒರೆಗಲ್ಲಿಗೆ ತೀಡಿ ಅದು ಅವಿಭಾಜ್ಯವೇ ಅಲ್ಲವೇ ಎಂಬುದನ್ನು ಪತ್ತೆ ಹಚ್ಚುವುದು ತಾತ್ತ್ವಿಕವಾಗಿ ಸಾಧ್ಯವಿದೆ.

ಈಗ ನೀವೇ ಇಂಥ ಒಂದು ಪ್ರಯೋಗವನ್ನು ಮಾಡಿ ನೋಡಿ. 2ರಿಂದ ತೊಡಗಿ ಧನಪೂರ್ಣಾಂಕಗಳನ್ನು ಸಾಲಾಗಿ ಬರೆಯುತ್ತ ಹೋಗಿ. ಸೆಕೆಂಡಿಗೆ ಒಂದು ಸಂಖ್ಯೆಯನ್ನು ಬರೆಯುತ್ತೀರೆಂದೂ ಈ ಕೆಲಸವನ್ನು ನಿರಂತರವಾಗಿ ಮಾಡುತ್ತೀರೆಂದೂ ಭಾವಿಸೋಣ. ವರ್ಷಾಂತ್ಯದಲ್ಲಿ ನೀವು ಬರೆದಿರುವ ಸಂಖ್ಯೆ ಬಲು ದೊಡ್ಡದೇನೂ ಆಗಿರದು: 31556927. ನೀವಾಗಲಿ ನಿಮ್ಮ ಪೀಳಿಗೆಯಾಗಲಿ ಅಷ್ಟೇಕೆ, ಸಮಸ್ತ ಮಾನವಕುಲವೇ ಆಗಲಿ ಈ ಕೆಲಸವನ್ನು ಎಷ್ಟು ವರ್ಷಗಳ ತನಕ ಮುಂದುವರಿಸಿದರೂ ಧನಪೂರ್ಣಾಂಕಗಳ ಅನುಕ್ರಮ ಕೊನೆಗೊಳ್ಳುವ ಕೊನೆ ಎಲ್ಲಿಯೂ ಕಾಣಿಸದು. ಅಂತೂ ನಿಮ್ಮ ಶಕ್ತ್ಯನುಸಾರ ಒಂದು ಹಂತದವರೆಗೆ ಬರೆದು ನಿಲ್ಲಿಸುತ್ತೀರಿ ಎಂದು ಭಾವಿಸೋಣ.

ಇದಾದ ಬಳಿಕ 2ನ್ನು ಮುಟ್ಟದೆ ಅದರ ಎಲ್ಲ ಅಪವರ್ತ್ಯಗಳನ್ನೂ (ಗುಣಿತ) ಈ ಸಂಖ್ಯಾಸಮುದಾಯದಲ್ಲಿ ತೊಡೆದು ಹಾಕಿ. ಅಲ್ಲಿಗೆ 2ರ ವಿನಾ ಎಲ್ಲ ಸರಿಸಂಖ್ಯೆಗಳೂ ಹತಗೊಳ್ಳುತ್ತವೆ. ತರುವಾಯ ಉಳಿದ ಸಂಖ್ಯಾಸಮುದಾಯದಲ್ಲಿ 3ನ್ನು ಮುಟ್ಟದೆ ಅದರ ಎಲ್ಲ ಅಪವರ್ತ್ಯಗಳನ್ನೂ ತೊಡೆದು ಹಾಕಿ. ಮುಖ್ಯವಾಗಿ ನೀವು ಅನುಸರಿಸಬೇಕಾದ ವಿಧಿ ಇದು: ಮೊದಲು ಎದುರಾಗುವ ಅವಿಭಾಜ್ಯ ಸಂಖ್ಯೆಯೊಂದಕ್ಕೆ ಮಾತ್ರ ವಿನಾಯತಿ ನೀಡಿ ಅದರ ಎಲ್ಲ ಅಪವರ್ತ್ಯಗಳನೂ "ಸಂಹರಿಸುತ್ತ" ಹೋಗಿ. ಈ ದಹನಕಾರ್ಯವನ್ನು ಸಾಕಷ್ಟು ಕಾಲ ಮುಂದುವರಿಸಿದ್ದಾದರೆ ನಿಮ್ಮೆದುರು ಈ ಪುಟದಲ್ಲಿ ಕೆಳಗಡೆ ತೋರಿಸಿರುವಂಥ ರಣರಂಗ ಕಂಗೊಳಿಸುತ್ತಿರುವುದು:

ಇದೊಂದು ಪರಶುರಾಮಕುಠಾರ ಪ್ರಯೋಗ! ಕುಠಾರದ ಪೆಟ್ಟಿಗೆ ಸಿಕ್ಕಿ ನಾಶವಾಗುವ "ಕ್ಷತ್ರಿಯರು" ಭಾಜ್ಯ ಸಂಖ್ಯೆಗಳು: ಕುಠಾರಪ್ರಹಾರದಿಂದ ಉಳಿಯುವ "ಗಟ್ಟಿಕುಳ"ಗಳೆಂದರೆ ಸುದೈವೀ ಅವಿಭಾಜ್ಯ ಸಂಖ್ಯೆಗಳು!

ಆದ್ದರಿಂದ ನಿಮ್ಮ ತೀರ್ಮಾನ ಈ ಮುಂದಿನಂತಿರುವುದು: "ಕುಠಾರಪ್ರಹಾರ ವಿಧಾನದಿಂದ ಅವಿಭಾಜ್ಯ ಸಂಖ್ಯೆಗಳ ಪೂರ್ಣಶ್ರೇಣಿಯನ್ನು ಪಡೆಯಲು ಸಾಧ್ಯವಾಗದು."

	2,	3,	~~4~~,	5,	~~6~~,	7,	~~8~~,	~~9~~,	~~10~~,
11,	~~12~~,	13,	~~14~~,	~~15~~,	~~16~~,	17,	~~18~~,	19,	~~20~~,
~~21~~,	~~22~~,	23,	~~24~~,	~~25~~,	~~26~~,	~~27~~,	~~28~~,	29,	~~30~~,
31,	~~32~~,	~~33~~,	~~34~~,	~~35~~,	~~36~~,	37,	~~38~~,	~~39~~,	~~40~~,
41,	~~42~~,	43,	~~44~~,	~~45~~,	~~46~~,	47,	~~48~~,	~~49~~,	~~50~~,

ಬೇರೆ ವಿಧಾನವಿದೆಯೇ? ಇಲ್ಲ. ವಾಸ್ತವ ಸಂಗತಿ ಏನೆಂದರೆ ಅವಿಭಾಜ್ಯ ಸಂಖ್ಯೆಗಳ ಶ್ರೇಣಿಗೆ ಕೊನೆ ಎಂಬುದೇ ಇಲ್ಲ.

ಗರಿಷ್ಠ ಅವಿಭಾಜ್ಯ ಸಂಖ್ಯೆ

ಕನಿಷ್ಠ ಅವಿಭಾಜ್ಯ ಸಂಖ್ಯೆ 2. ಹಾಗಾದರೆ ಗರಿಷ್ಠ ಅವಿಭಾಜ್ಯ ಸಂಖ್ಯೆ ಯಾವುದು?

ಈ ಸಮಸ್ಯೆಯ ಬಗ್ಗೆ "ತಲೆ ಕೆಡಿಸಿಕೊಂಡು ಮಂಡೆ ಬಿಸ್ಸಗೆ ಮಾಡಿಕೊಂಡವ" ಪ್ರಾಚೀನ ಗ್ರೀಕ್ ಗಣಿತವಿದನಾದ ಯೂಕ್ಲಿಡ್. ಕ್ರಿಸ್ತ ಪೂರ್ವ ಸುಮಾರು 325ರಲ್ಲಿ ಇವನು ಜನಿಸಿದ. "ಜ್ಯಾಮಿತಿ" ಮತ್ತು "ಯೂಕ್ಲಿಡ್" ಪರ್ಯಾಯ ಪದಗಳೆಂದು ಗಣಿತಬಲ್ಲವರೆಲ್ಲರಿಗೂ ತಿಳಿದಿದೆ. "ಗರಿಷ್ಠ ಅವಿಭಾಜ್ಯ ಸಂಖ್ಯೆ ಎಂಬುದಿಲ್ಲ. ನೀವು ಎಷ್ಟೇ ದೊಡ್ಡ ಅವಿಭಾಜ್ಯ ಸಂಖ್ಯೆಯನ್ನು ನನ್ನೆದುರು ಇಟ್ಟರೂ ಅದಕ್ಕಿಂತ ದೊಡ್ಡದಾದ ಅವಿಭಾಜ್ಯ ಸಂಖ್ಯೆ ಇದೆ ಎಂದು ನಾನು ಸಾಧಿಸಬಲ್ಲೆ" ಎಂದು ಯೂಕ್ಲಿಡ್ ಹೇಳಿದ ಮತ್ತು ಈ ಹೇಳಿಕೆಗೆ ನಿಖರ ಗಣಿತಸಾಧನೆ (proof) ನೀಡಿದ.

ಸುಲಭ ಉದಾಹರಣೆಯೊಂದರ ಮೂಲಕ ಯೂಕ್ಲಿಡನ ನಡಿಗೆ ಜಾಡನ್ನು ಗುರುತಿಸೋಣ.

"ನನಗೆ ತಿಳಿದಿರುವ ಗರಿಷ್ಠ ಅವಿಭಾಜ್ಯ ಸಂಖ್ಯೆ 5" ಎಂದು ನೀವನ್ನುತ್ತೀರಿ.

ಆಗ ಯೂಕ್ಲಿಡ್ ಹೇಳುತ್ತಾನೆ "$2 \times 3 \times 4 \times 5 + 1 = 121$ ಎಂಬ ಸಂಖ್ಯೆಯನ್ನು ಪರಿಶೀಲಿಸಿ. ಇದನ್ನು ನೀವು 2ರಿಂದ ತೊಡಗಿ ನಿಮ್ಮ ಪ್ರಕಾರ ಗರಿಷ್ಠ ಅವಿಭಾಜ್ಯವಾಗಿರುವ 5ರವರೆಗೆ ಯಾವ ಸಂಖ್ಯೆಯಿಂದ ಭಾಗಿಸಿದರೂ ಶೇಷ 1 ಉಳಿಯುತ್ತದೆ. ಆದ್ದರಿಂದ ಒಂದೋ ಸ್ವತಃ 121 ನಿಮಗೆ ತಿಳಿದಿರುವ ಗರಿಷ್ಠ ಅವಿಭಾಜ್ಯ 5ಕ್ಕಿಂತ ದೊಡ್ಡದಾದ ಇನ್ನೊಂದು ಅವಿಭಾಜ್ಯ ಸಂಖ್ಯೆ, ಇಲ್ಲವೇ ಅದು (121) 5ಕ್ಕಿಂತ ದೊಡ್ಡದಾದ ಕೆಲವು ಅವಿಭಾಜ್ಯಗಳ ಗುಣಲಬ್ಧ."

ವಾಸ್ತವವಾಗಿ $121 = 11 \times 11$. ಇಲ್ಲಿ 11 ಎಂಬುದು 5ಕ್ಕಿಂತ ದೊಡ್ಡದಾದ ಅವಿಭಾಜ್ಯ.

5ರ ಬದಲು ಅದಕ್ಕಿಂತ ಮುಂದಿನದಾದ 7ನ್ನು ತೆಗೆದುಕೊಂಡಿದ್ದರೆ ಆಗ ನೀವು $2 \times 3 \times 4 \times 5 \times 6 \times 7 + 1 = 5041$ನ್ನು ಪರಿಶೀಲಿಸಬೇಕಾಗುತ್ತಿತ್ತು. $5041 = 71 \times 71$. ಇಲ್ಲಿ 71 ಎಂಬುದು 7ಕ್ಕಿಂತ ದೊಡ್ಡದಾದ ಅವಿಭಾಜ್ಯ.

ಮೇಲಿನ ವಾದವೈಖರಿಯನ್ನು ಇದೇ ಧಾಟಿಯಲ್ಲಿ ಸಾರ್ವತ್ರೀಕರಿಸಿ ಸರ್ವ ಸಂದರ್ಭಗಳಿಗೂ ಒಪ್ಪುವ ಸಾಧನೆಯನ್ನು ಯೂಕ್ಲಿಡ್ ನೀಡಿದ್ದಾನೆ. ಭಾವನೆಯಲ್ಲಿಯೂ ಸಾಧನೆಯಲ್ಲಿಯೂ ಅತ್ಯಂತ ಸರಳವಾಗಿದ್ದು ಬೌದ್ಧಿಕ ಸೌಂದರ್ಯದಲ್ಲಿ ಮಹೋನ್ನತ ದರ್ಜೆಯ ಸಾಧನೆ ಇದು ಎಂಬುದಾಗಿ ಜಿ. ಎಚ್. ಹಾರ್ಡಿ (1877-1947; ಪ್ರಸಕ್ತ ಶತಮಾನದ ಮಹಾ ಗಣಿತವಿದರ ಪೈಕಿ ಒಬ್ಬರು) ಉದ್ಗರಿಸಿರುವರು.

ಫರ್ಮಾನ ಆಸಕ್ತಿ

ಫ್ರಾನ್ಸಿನ ಶ್ರೇಷ್ಠ ಗಣಿತವಿದ ಪಿಯರೆ ದ ಫರ್ಮಾ (1601-1665) ಸಂಖ್ಯಾ ಕ್ಷೇತ್ರದಲ್ಲಿ ಹಲವು ಶೋಧಗಳನ್ನು ಮಾಡಿ ಪ್ರಖ್ಯಾತನಾಗಿದ್ದಾನೆ. ಯಾವುದೇ ಸಂಖ್ಯೆಯನ್ನು ಕೊಟ್ಟಾಗ ಅದು ಅವಿಭಾಜ್ಯವೇ ಅಲ್ಲವೇ ಎಂದು ಒಡನೆ ಹೇಳುವುದು ಸಾಧ್ಯವೇ? ಫರ್ಮಾನನ್ನೂ ಒಳಗೊಂಡಂತೆ ಹದಿನೇಳನೆಯ ಶತಮಾನದ ಹಲವಾರು ಹಿರಿಯ ಗಣಿತವಿದರಿಗೆ ಇದು ಸಾಧ್ಯವಾಗಿತ್ತು ಎಂದು ನಂಬಲು ಆಧಾರಗಳಿವೆ.

ಫರ್ಮಾನಿಗೆ ಬಂದ ಒಂದು ಕಾಗದದಲ್ಲಿ 100895598169 ಅವಿಭಾಜ್ಯವೇ ಅಲ್ಲವೇ ಎಂಬ ಪ್ರಶ್ನೆ ಇತ್ತು. ಇದರ "[illegible]" ಫರ್ಮಾ ಒಡನೆ ಉತ್ತರ ಬರೆದ, "ಇದು ಅವಿಭಾಜ್ಯವಲ್ಲ. ಇದಕ್ಕೆ ಎರಡು ಅಪವರ್ತನಗಳಿವೆ: 898423 ಮತ್ತು 112303. ಇವೆರಡೂ ಅವಿಭಾಜ್ಯಗಳೇ. [illegible] ಫರ್ಮಾನಲ್ಲಿ ಹೊಸ ಸೂತ್ರವೊಂದು ಇದ್ದಿರಬೇಕೆಂದು ಊಹಿಸಲು ಈ ತರಹದ ಧಿಡೀರ್ ಉತ್ತರಗಳು ಅವಕಾಶ ಮಾಡಿಕೊಟ್ಟಿವೆ. ಅವು ಇಂದಿನವರಿಗೆ ಉಪಲಬ್ಧವಾಗಿಲ್ಲ; ಹೊಸ ಸೂತ್ರವನ್ನು ಆವಿಷ್ಕರಿಸಲು ಸಾಧ್ಯವಾಗಿಲ್ಲ. ಹೀಗಾಗಿ ದತ್ತ ಸಂಖ್ಯೆ ಅವಿಭಾಜ್ಯವೇ ಅಲ್ಲವೇ ಎಂದು ನಿರ್ಧರಿಸಲು ಹೆಚ್ಚು ಶ್ರಮಿಸುವ ಮತ್ತು ವೇಳೆ ತಾಗುವ ಯಾಂತ್ರಿಕ ವಿಧಾನಗಳಿಗೇ ಶರಣು ಹೋಗಬೇಕಾಗಿದೆ.

ಸದಾ ಅವಿಭಾಜ್ಯಗಳನ್ನೇ ಉತ್ಪಾದಿಸಬಲ್ಲ ಗಣಿತಸೂತ್ರವೊಂದನ್ನು ತಾನು ಶೋಧಿಸಿರುವುದಾಗಿ ಫರ್ಮಾ ಘೋಷಿಸಿದ್ದ (1640). ಆ ಸೂತ್ರದ ಪ್ರಕಾರ ಲಭಿಸಿದ ಮೊದಲ ಐದು ಫರ್ಮಾ ಸಂಖ್ಯೆಗಳಿವು:

3, 5, 17, 257, 65537

ಇವು ಎಲ್ಲವೂ ಅವಿಭಾಜ್ಯಗಳು, ನಿಜ. ಆದರೆ ಅದೇ ಸೂತ್ರದ ಅನ್ವಯದಿಂದ ದೊರೆಯುವ ಆರನೆಯ ಸಂಖ್ಯೆ ಮಾತ್ರ ಅವಿಭಾಜ್ಯವಲ್ಲ ಎಂದು ರುಜುವಾತಿಸಲಾಗಿದೆ:

ಆರನೆಯ ಫರ್ಮಾ ಸಂಖ್ಯೆ $= 4294967297 = 641 \times 6700417$.

ಸೀಮಿತ ವಲಯದೊಳಗೆ ಅವಿಭಾಜ್ಯಗಳನ್ನು ನೀಡಬಲ್ಲ ಹಲವಾರು ಗಣಿತಸೂತ್ರಗಳಿವೆ. ಆದರೆ ಸದಾ, ಅಂದರೆ ಎಲ್ಲ ಸಂದರ್ಭಗಳಲ್ಲಿಯೂ, ಅವಿಭಾಜ್ಯಗಳನ್ನು ಮಾತ್ರ "ಉದುರಿಸಬಲ್ಲ ಸ್ಯಮಂತಕ ಮಣಿ" ಈ ತನಕ ದೊರೆತಿಲ್ಲ. ಅವಿಭಾಜ್ಯಗಳ ಯಾದೃಚ್ಛಿಕತೆ, ವಕ್ರತೆ, ವೈಪರೀತ್ಯಗಳು ಇಂಥ ಯಾವ "ಸೂತ್ರ ಸಂಕೋಲೆಯನ್ನೂ" ಅವುಗಳಿಗೆ ತೊಡಿಸುವುದನ್ನು ನಿಷೇಧಿಸುವಂತೆ ತೋರುತ್ತದೆ.

ಬೃಹತ್‌ಗಾತ್ರದ ಅವಿಭಾಜ್ಯಗಳು

ಪ್ರಾಚೀನ ಕಾಲದಿಂದಲೂ ಗಣಿತಜ್ಞರು ಯುಕ್ತಿಡನ ಹಾದಿಯಲ್ಲಿ ಅವಿಭಾಜ್ಯಗಳ ಅನಂತಯಾತ್ರಾರೋಹಿಗಳಾಗಿದ್ದಾರೆ. ಇಂಥವರ ಒಂದು ಆಸಕ್ತಿ ಎಂದರೆ "ಇಂದು ನಮಗೆ ಗೊತ್ತಿರುವ ಗರಿಷ್ಠ ಅವಿಭಾಜ್ಯ ಯಾವುದು?" ಎಂಬ ಪ್ರಶ್ನೆಗೆ ಉತ್ತರ ಅರಸುವುದು.

2 ನ್ನು ಅದರಿಂದಲೇ 32 ಸಲ ಗುಣಿಸಿದಾಗ ದೊರೆವ ಗುಣಲಬ್ಧಕ್ಕೆ 1ನ್ನು ಕೂಡಿಸಿದರೆ $(2^{32}+1)$ ಸಿಕ್ಕುವ ಸಂಖ್ಯೆ ಅವಿಭಾಜ್ಯವೆಂದು ಫರ್ಮಾ ಸಾರಿದ. ಲಿಯೊನಾರ್ಡ್ ಆಯ್ಲರ್ (1707–1883) ಈ ಸಂಖ್ಯೆಯ ಒಂದು ಅಪವರ್ತನ 641 ಎಂದು ತೋರಿಸಿ ಫರ್ಮಾನ ಹೇಳಿಕೆಯನ್ನು ಹುಸಿ ಆಗಿಸಿದ.

2ನ್ನು ಅದರಿಂದಲೇ 127 ಸಲ ಗುಣಿಸಿದಾಗ ದೊರೆವ ಗುಣಲಬ್ಧದಿಂದ 1ನ್ನು ಕಳೆದರೆ $(2^{127}-1)$ ಸಿಕ್ಕುವ ಸಂಖ್ಯೆ ಹೀಗಿರುವುದು: 17014118346046923173168730-3715884105727. ಇದೊಂದು ಅವಿಭಾಜ್ಯವೆಂದು ಸಾಧಿಸಲಾಗಿದೆ.

ಸದ್ಯ (1978) ನಮಗೆ ತಿಳಿದಿರುವ ಅತಿ ದೊಡ್ಡ ಅವಿಭಾಜ್ಯ ಸಂಖ್ಯೆ ಇದು: 2ನ್ನು ಅದರಿಂದಲೇ 19937 ಸಲ ಗುಣಿಸಿದಾಗ ದೊರೆವ ಗುಣಲಬ್ಧದಿಂದ 1ನ್ನು ಕಳೆಯಬೇಕು. $(2^{19937}-1)$ ಇದರಲ್ಲಿ 5791 ಅಂಕೆಗಳು ಇರುವುವು. ಆಧುನಿಕ ಗಣಕಗಳಿಂದ ಮಾತ್ರ ಇಂಥ ಮಹಾ ಸಾಹಸಗಳು ಸಾಧ್ಯವಾದಾವೇ ವಿನಾ ಅನ್ಯಥಾ ಅಲ್ಲ. ಆದರೆ ಗಣಕಗಳು "ವಿದ್ಯುದಾಲಿಂಗನಕ್ಕೂ" ಅತೀತವಾಗಿ ಅವಿಭಾಜ್ಯಗಳ ಅನಂತ ಸಾಮ್ರಾಜ್ಯ ವಿಸ್ತರಿಸಿಹೋಗಿದೆ ಎಂಬುದನ್ನು ಮರೆಯಬಾರದು.

ಅವಿಭಾಜ್ಯಗಳ ವಿತರಣೆ

ಧನಪೂರ್ಣಾಂಕಗಳ ಶ್ರೇಣಿಯನ್ನು ಅನುಕೂಲ ಅಂತರಗಳಾಗಿ ವಿಭಾಗಿಸಿ ಪ್ರತಿಯೊಂದು ಅಂತರದಲ್ಲಿಯೂ ಎಷ್ಟು ಅವಿಭಾಜ್ಯಗಳು ಹುದುಗಿವೆ ಎಂಬುದನ್ನು ಪತ್ತೆ ಮಾಡಿದ್ದಾರೆ. ಇಲ್ಲಾದರೂ "ಭರತ ವಾಕ್ಯ" ಎಂಬುದಿಲ್ಲ. ನಮಗೆ (ಮತ್ತು ನಮ್ಮ ಗಣಕಗಳಿಗೆ) ಸಾಧ್ಯವಾಗುವ ತನಕ ಸಾಗಬಹುದು ಅಷ್ಟೆ. ಕೆಲವು ಉದಾಹರಣೆಗಳನ್ನು ನೋಡಿ.

2ರಿಂದ 1000ದ ತನಕ 168 ಅವಿಭಾಜ್ಯಗಳಿವೆ. 2ರಿಂದ 50000ದ ತನಕ 5133 ಅವಿಭಾಜ್ಯಗಳಿವೆ. 2ರಿಂದ 100000ದ ತನಕ 9592 ಅವಿಭಾಜ್ಯಗಳಿವೆ. 42ರಿಂದ 200000ದ ತನಕ 17984 ಅವಿಭಾಜ್ಯಗಳಿವೆ.

42ರಿಂದ 1000000000ದ ತನಕ 508475-533 ಅವಿಭಾಜ್ಯಗಳಿವೆ. ಅವಿಭಾಜ್ಯಗಳ ವಿತರಣೆಯಲ್ಲಿ ಯಾವ ನಿರ್ದಿಷ್ಟ ನಿಯಮವೂ ಕಂಡುಬರುತ್ತಿಲ್ಲ. ಸೀಮಿತ ವಲಯಗಳಲ್ಲಿ ಕೆಲವು ವಿಶೇಷ ಗುಣಗಳನ್ನು ಮಾತ್ರ ಗುರುತಿಸಬಹುದು.

11, 101, 131, 151, 181, 313, 353, 727 ಮೊದಲಾದವು ಸಮಾಂಗೀಯ ಅವಿಭಾಜ್ಯಗಳು. ಅಂದರೆ ಇವನ್ನು ಎಡದಿಂದ ಇಲ್ಲವೇ

ಗಣಿತಪ್ರಿಯರಿಗೆ ಮಾತ್ರ

ಸಂಖ್ಯಾಪ್ರಪಂಚದಲ್ಲಿ ಯಾರು ಬೇಕಾದರೂ ಪ್ರಶ್ನೆಗಳನ್ನು ರೂಪಿಸುವುದು ಸಾಧ್ಯ. ಆದರೆ ಅವುಗಳಿಗೆ ಸರಿಯ ಗಣಿತಸಾಧನೆಗಳನ್ನು ಒದಗಿಸುವುದು ಸುಲಭವೇನೂ ಅಲ್ಲ. ಪ್ರಪಂಚದ ಮಹಾ ಗಣಿತಪ್ರತಿಭೆಗಳಿಗೂ ಅವು ಸುದೀರ್ಘ ಕಾಲ ಸವಾಲಾಗಿಯೇ ಉಳಿದಿರುವುದುಂಟು. ಇಂಥವುಗಳ ಪೈಕಿ ಕೆಲವನ್ನು ಇಲ್ಲಿ ಬರೆದಿದೆ. ನೀವೇನಾದರೂ ಈ ಸವಾಲುಗಳನ್ನು ಗಣಿತ ಬದ್ಧವಾದ ರೀತಿಯಲ್ಲಿ ಬಿಡಿಸಬಲ್ಲಿರಾ? ಪ್ರಯತ್ನಿಸಿ ನೋಡಿ.

I. ಎಲ್ಲ ಅವಿಭಾಜ್ಯಗಳನ್ನೂ 2 ರಿಂದ ತೊಡಗಿ ಆರೋಹಣ ಕ್ರಮದಲ್ಲಿ ಅಳವಡಿಸೋಣ:

2, 3, 5, 7, 11, 13, …, 101, …, …, 10301, …

ಇಲ್ಲಿ ಮೊದಲ ಹಲವು ಅವಿಭಾಜ್ಯಗಳ ಸ್ಥಾನಸಂಖ್ಯೆಗಳನ್ನು ನೀವು ಸುಲಭವಾಗಿ ಹೇಳಬಲ್ಲಿರಿ. 7ರ ಸ್ಥಾನಸಂಖ್ಯೆ ನಾಲ್ಕು. 13ರದು ಆರು ಇತ್ಯಾದಿ. ಆದರೆ 101ರದು ಎಷ್ಟು? 10301 ರದು ಎಷ್ಟು? ಒಡನೆ ಹೇಳಬಲ್ಲಿರಾ? ಸಮರ್ಪಕ ಸೂತ್ರದ ನೆರವಿನಿಂದ ಮಾತ್ರ ಇದು ಸಾಧ್ಯವಾದೀತು. ಅಂಥ ಸೂತ್ರ ತಿಳಿದಿಲ್ಲ. ಅದೇನಾದರೂ ತಿಳಿದದ್ದಾದರೆ ಯಾವುದೇ ನಿರ್ದಿಷ್ಟ ಸ್ಥಾನದ ಅವಿಭಾಜ್ಯ ಯಾವುದು ಎಂಬುದನ್ನು ಕೂಡ ಅದರಿಂದ ಪಡೆಯಬಹುದು. (ಉದಾಹರಣೆಗೆ $2n-1$ ಸೂತ್ರ ಸಮಸ್ತ ಬೆಸ ಸಂಖ್ಯೆಗಳನ್ನು ಸೂಚಿಸುತ್ತದೆ. n ಗೆ ನಿಮಗೆ ಇಷ್ಟಬಂದ ಪೂರ್ಣಾಂಕ ಬೆಲೆ ಕೊಟ್ಟು ನೋಡಿ.)

II. ಕೆಲವು ಅವಿಭಾಜ್ಯಗಳ ನಡುವಿನ ವ್ಯತ್ಯಾಸ ಕೇವಲ 2. ಇವು ಯಮಳ ಅವಿಭಾಜ್ಯಗಳು. ಕೆಲವು ಉದಾಹರಣೆಗಳನ್ನು ನೋಡಿ:

5, 7; 29, 31; 10006427, 10006429; 999999999959, 999999999961.

ಯಮಳ ಅವಿಭಾಜ್ಯಗಳು ಅನಂತವೇ? ಅವನ್ನು ಉತ್ಪಾದಿಸಬಲ್ಲ ಸೂತ್ರವಿದೆಯೇ? ಅವುಗಳ ವಿತರಣೆ ಹೇಗಿದೆ? ಗೊತ್ತಿಲ್ಲ.

III. ಚರದ ನಿಯಮಿತ ಬೆಲೆಗಳಿಗೆ ಅವಿಭಾಜ್ಯಗಳನ್ನು ಉತ್ಪಾದಿಸುವ ಹಲವಾರು ಸೂತ್ರಗಳು ತಿಳಿದಿವೆ. ಎರಡನ್ನು ಮಾತ್ರ ಇಲ್ಲಿ ಉದಾಹರಿಸಿದೆ.

(1) n^2+n+41. ಇದರಲ್ಲಿ ಚರ n ಗೆ 0 ಯಿಂದ 39ರ ವರೆಗೆ ಬೆಲೆಗಳನ್ನು ಆದೇಶಿಸಿದಾಗ ಅವಿಭಾಜ್ಯಗಳು ಮಾತ್ರ ದೊರೆಯುತ್ತವೆ. ಉದಾಹರಣೆಗೆ n ನ ಬೆಲೆ 0 ಆದಾಗ 41 ದೊರೆಯುವುದು. ಇದು ಅವಿಭಾಜ್ಯವೆಂದು ಗೊತ್ತಿದೆ.

(2) n^2-n+41. ಇದರಲ್ಲಿ ಚರ n ನ ಯಾವ ಬೆಲೆಗಳಿಗೆ ಮಾತ್ರ ಅವಿಭಾಜ್ಯಗಳುಗಳು ದೊರೆಯುತ್ತವೆ ಎಂಬುದನ್ನು ನೀವೇ ಪತ್ತೆ ಮಾಡಬಹುದು.

(3) $n^2-79n+1601$. ಇದರಲ್ಲಿ n ಗೆ 0ಯಿಂದ 79 ರವರೆಗೆ ಬೆಲೆಗಳನ್ನು ಆದೇಶಿಸಿದಾಗ ಮಾತ್ರ ಅವಿಭಾಜ್ಯಗಳು ದೊರೆಯುತ್ತವೆ.

IV. ಪ್ರತಿಯೊಂದು ಸಮಸಂಖ್ಯೆಯನ್ನು ಎರಡು ಅವಿಭಾಜ್ಯಗಳ ಮೊತ್ತವಾಗಿ ಬರೆಯಬಹುದು. ಉದಾಹರಣೆಗೆ,

$64=5+59$, $100=29+71$

ಇದು ಸಾರ್ವತ್ರಿಕವಾಗಿ ನಿಜವೇ? ಗೊತ್ತಿಲ್ಲ.

ಅವಿಭಾಜ್ಯಗಳ ಅನಂತ ಸಾಮ್ರಾಜ್ಯ, ವ್ಯಾಪಕವಾಗಿ ಸಂಖ್ಯಾಪ್ರಪಂಚ. ಅತಿ ಫಲವತ್ತಾದ ಕ್ಷೇತ್ರ. ಅಲ್ಲಿ ಎಷ್ಟು ಕೃಷಿ ಮಾಡಿದರೂ, ಉತ್ಪನ್ನ ಹೆಚ್ಚಿದರೂ ಅದು ಬರಡಾಗುವುದೇ ಇಲ್ಲ. "ವಿಜ್ಞಾನಗಳ ಶೃಂಗಾರ ಗಣಿತ ಮಕುಟ ಶಿರೋಲಂಕಾರ" ಗಣಿತಕ್ಕೆ ಗಣಿತ ಸಂಖ್ಯಾಪ್ರಪಂಚವೆಂದು ಇದರಲ್ಲಿ ಕೈ ಆಡಿಸುವ ಪ್ರತಿಯೊಬ್ಬರಿಗೂ ತಿಳಿದಿದೆ.

ಬಲದಿಂದ ಓದಿದಾಗ ವ್ಯತ್ಯಾಸವಾಗುವುದಿಲ್ಲ. (19 ಹೀಗಲ್ಲ. ಇವರ ವಿಪರ್ಯಯ ರೂಪ-91. ಇದೊಂದು ವಿಭಾಜ್ಯ ಸಂಖ್ಯೆ.) ಈ ಮುಂದಿನವು ಕೂಡ ಸಮಾಂಗೀಯ ಅವಿಭಾಜ್ಯಗಳು:

10301, 13331, 16361, 19391
13931, 14741, 15551, 16361
94049, 94349, 94649, 94949

ಇಷ್ಟೇ ಅಲ್ಲ. ಮೊದಲಿನ ಸಾಲಿನ ಒತ್ತೊತ್ತಿನ ಸಂಖ್ಯೆಗಳ ವ್ಯತ್ಯಾಸ 3030; ಎರಡನೆಯ ಸಾಲಿನಲ್ಲಿ ಈ ವ್ಯತ್ಯಾಸ 810. ಮೂರನೆಯ ಸಾಲಿನಲ್ಲಿ 300: ಇಂಥ ವಿಚಿತ್ರ ಗುಣಗಳನ್ನು ಪ್ರದರ್ಶಿಸುವ ಅವಿಭಾಜ್ಯಗಳು ಇನ್ನೂ ಇವೆ.

ಪುನರಾವರ್ತಿತ ಏಕಕ ಸಂಖ್ಯೆಗಳು

1ನ್ನು (ಏಕಕ) ಮತ್ತೆ ಮತ್ತೆ ಒತ್ತೊತ್ತಿಗೆ ಬರೆದಾಗ (ಪುನರಾವರ್ತಿಸಿದಾಗ,) ದೊರೆಯುವ ಸಂಖ್ಯೆಗಳಿಗೆ ಪುನರಾವರ್ತಿತ ಏಕಕ ಸಂಖ್ಯೆಗಳೆಂದು ಹೆಸರು:

11, 111, 1111, 11111, 111111,… ಇವುಗಳ ಪೈಕಿ ಯಾವುವು ಅವಿಭಾಜ್ಯಗಳು, ಯಾವುವು ಅಲ್ಲ ಎಂಬ ಪ್ರಶ್ನೆ ಗಣಿತವಿದರ ಕುತೂಹಲ ಕೆರಳಿಸಿದೆ. ಮೇಲು ನೋಟದಿಂದ ಕೆಲವು ಸಂಖ್ಯೆಗಳನ್ನು ಕುರಿತಂತೆ ನೀವೇ ತೀರ್ಮಾನಕ್ಕೆ ಬರಬಹುದು:

$11 = 1 \times 11$, $111 = 3 \times 37$.
$1111 = 111 \times 101$, $11111 = 47 \times 271$, $111111 = 11 \times 10101$

ಆದ್ದರಿಂದ 11 ಅವಿಭಾಜ್ಯ ಸಂಖ್ಯೆ (ಇದು ಹೇಗೂ ಗೊತ್ತಿದೆ.) 1ಗಳ ಸಾಲು ಬೆಳೆಯುತ್ತ ಹೋದಂತೆ ಉದಾಹರಣೆ 1111111 (ಏಳು ಸಲ) 1111111111111(ಹದಿಮೂರು ಸಲ) ಇತ್ಯಾದಿ. ಇಂಥ ನಿರ್ಣಯಕ್ಕೆ ಬರುವುದು ಪ್ರಯಾಸದ ಕೆಲಸವಾಗುತ್ತದೆ. ಪುನರಾವರ್ತಿತ ಏಕಕ ಸಂಖ್ಯೆಗಳ ಶ್ರೇಣಿಯಲ್ಲಿ 1977 ರ ತನಕ ತಿಳಿದಿದ್ದ ಅವಿಭಾಜ್ಯಗಳು ಕೇವಲ ಮೂರು:

11, 11…1 (ಹತ್ತೊಂಬತ್ತು ಸಲ), 11…1 (ಇಪ್ಪತ್ತಮೂರು ಸಲ).

ಮೂರನೆಯ ಪುನರಾವರ್ತಿತ ಏಕಕ ಅವಿಭಾಜ್ಯದ ಆವಿಷ್ಕಾರ ಸುಮಾರು ಐವತ್ತು ವರ್ಷಗಳ ಹಿಂದೆಯೇ ಆಗಿತ್ತು. ಈ ವರ್ಷ (1978) ನಾಲ್ಕನೆಯ ಸದಸ್ಯ ಈ ಸಾಲನ್ನು ಸೇರಿದೆ. ಅದು 111…1 (317 ಸಲ).
ಕೆನಡ ದೇಶದಲ್ಲಿರುವ ಮ್ಯಾನಿಟೋಬ ವಿಶ್ವವಿದ್ಯಾಲಯದ ಹ್ಯೂ ಸಿ. ವಿಲಿಯಮ್ಸ್ ಎಂಬವರು ಈ ವಿಕ್ರಮ ಸಾಧಿಸಿದ ಗಣಿತವಿದರು. ಉನ್ನತ ಸಾಮರ್ಥ್ಯ ಗಣಕದ ನೆರವಿನಿಂದ ಇದು ಸಿದ್ಧಿಸಿತು.

ಐದನೆಯ ಪುನರಾವರ್ತಿತ ಏಕಕ ಅವಿಭಾಜ್ಯವೇನಾದರೂ ಇದ್ದರೆ ಅದು ಪ್ರಾಯಶಃ 111…1 (1031 ಸಲ) ಎಂದು [illegible]. ಸಾಧನೆ ಇನ್ನೂ ಲಭ್ಯವಾಗಿಲ್ಲ.

"ಅವಿಭಾಜ್ಯಗಳೆಂದರೆ ಸಂಖ್ಯಾಸಿದ್ಧಾಂತದ ವಸ್ತ್ರದೊಂದಿಗೆ ಬೇರ್ಪಡಿಸಲಾಗದಂತೆ ನೇಯಲಾದ, ಅಲ್ಲ[illegible], ವಸ್ತ್ರದ ಸಾಕ್ಷಾತ್ ಎಳೆಗಳೇ ಆದ [illegible]. [illegible] ಸಂಖ್ಯಾಶಾಸ್ತ್ರದ [illegible]" [illegible]. ಗಣಿತದ ಈ ಮಾತು ಅಕ್ಷರಶಃ ಸತ್ಯ.

ಅವಿಭಾಜ್ಯಗಳ ಅನಂತ ಸಾಮ್ರಾಜ್ಯವನ್ನು ಪ್ರವೇಶಿಸಲು ವಿಶೇಷ ಗಣಿತಜ್ಞಾನ ಅಥವಾ "ಚಮತ್ಕಾರ" ಬೇಕಾಗುವುದಿಲ್ಲ. ಇಲ್ಲಿ ಯಾರು ಬೇಕಾದರೂ ಪ್ರಶ್ನೆಗಳನ್ನು ಕೇಳಬಹುದು. ಆದರೆ ಅವುಗಳಿಗೆ ಸಾರ್ವತ್ರಿಕ ಉತ್ತರಗಳು [illegible] ದೊರೆತಾಗಲು [illegible] ಅತ್ಯುನ್ನತ ಮಟ್ಟದ ಗಣಿತದ ಕೊಡ [illegible]. ✡

ವಿಮರ್ಶೆ

ವಿಮರ್ಶಕರು ನಿಮ್ಮನ್ನು ಹೊಗಳತೊಡಗುವುದೆಂದರೆ ನಿಮ್ಮನ್ನು ಶೂಲಕ್ಕೇರಿಸುವವನು ನಿಮ್ಮ ಕತ್ತು ಎಷ್ಟು ಸುಂದರವಾಗಿದೆ ಎಂದು ಮೆಚ್ಚಿ ನುಡಿದಂತೆ ಎನ್ನುತ್ತಾನೆ ನಟ ಎಲಿ ವಲಾಚ್.

ಈಗ...! ಚುರುಕಾದ ಜೀವನಕ್ಕಾಗಿ ಶಕ್ತಿ ಕೊಡುವ ಇಂಧನ ಪಡೆಯಿರಿ.



ಬೂಸ್ಟ್

ಮಾಲ್ಟ್ ಚಾಕೊಲೆಟ್ ಹಾಲಿನ ಪೇಯ

ರೈಲಿಗೆ ಇಂಧನ ಹೇಗೆ ಅಗತ್ಯವೋ, ನಿಮಗೂ ಸಹ ದಿನವನ್ನು ಉಲ್ಲಾಸದಿಂದ ಆರಂಭಿಸಲು ಪ್ರತಿದಿನ ಇಂಧನ ಅಗತ್ಯ. ದಿನವಿಡೀ ಎಲ್ಲ ಕೆಲಸಗಳನ್ನು ಚಕಚಕನೆ ಮಾಡಿಕೊಂಡು ಹೋಗಲು ನಿಮಗೆ ಶಕ್ತಿ ನೀಡುವ ಇಂಧನ ಬೇಕು.

ಆದ್ದರಿಂದಲೇ ಪ್ರತಿದಿನ ಬೆಳಗ್ಗೆ ನಿಮಗೆ ಬೂಸ್ಟ್ ಅಗತ್ಯ. ಮಕ್ಕಳಿಗಂತೂ ಇದರ ಅಗತ್ಯ ಇನ್ನೂ ಹೆಚ್ಚು. ಏಕೆಂದರೆ ಮಕ್ಕಳ ಶಕ್ತಿ ಆಟಪಾಠಗಳಲ್ಲೇ ಹೆಚ್ಚಾಗಿ ವ್ಯಯವಾಗುತ್ತದೆ.

ಅವರಿಗೆ ಬೂಸ್ಟ್ ಕೊಡಿ. ಇದು ಹೊಸ ಮಾಲ್ಟ್ ಚಾಕೊಲೆಟ್ ಹಾಲಿನ ಪೇಯ. ಪೌಷ್ಟಿಕ ಆಹಾರದ ಬಗ್ಗೆ ಒಳ್ಳೆಯ ಅನುಭವ ಪಡೆದಿರುವ 'ಹಾರ್ಲಿಕ್ಸ್'ನ ತಯಾರಕರೇ ಈ ಪೇಯವನ್ನು ತಯಾರಿಸಿದ್ದಾರೆ.

ಕೆನೆಯಿಂದ ಸಮೃದ್ಧವಾದ ಬೂಸ್ಟ್ ನಿಮಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತದೆ. ಏಕೆಂದರೆ ಅದನ್ನು ಗಟ್ಟಿಯಾದ ಕೆನೆಹಾಲು, ಗೋಧಿ, ಬಾರ್ಲಿ, ಮಾಲ್ಟ್, ಸಕ್ಕರೆ, ಕೋಕೋ ಇವುಗಳಿಂದ ತಯಾರಿಸಲಾಗಿದೆ.

ನಿಮ್ಮ ಮಕ್ಕಳ ಬೆಳವಣಿಗೆಗೆ ಬೂಸ್ಟ್, ಇಂತಹುದೇ ಇತರ ಯಾವ ಚಾಕೊಲೆಟ್ ಪೇಯ ಹೊಂದಿರುವುದಕ್ಕಿಂತ ಹೆಚ್ಚು ಪೌಷ್ಟಿಕಾಂಶಗಳನ್ನು ಒಳಗೊಂಡಿದೆ.

ಬೂಸ್ಟ್‌ನಲ್ಲಿರುವ ಕೆನೆಭರಿತ ಮಾಲ್ಟ್ ಚಾಕೊಲೆಟ್ ಸವಿ ನಿಮ್ಮ ಇಡೀ ಕುಟುಂಬಕ್ಕೆ ಬಹಳ ಪ್ರಿಯವಾಗುತ್ತದೆ. ಪ್ರತಿದಿನ, ನಿಮ್ಮ ದಿನವನ್ನು ಉಲ್ಲಾಸದಿಂದ ಪ್ರಾರಂಭಿಸಲು ಬೂಸ್ಟ್ ಅತ್ಯುತ್ತಮ ಸಾಧನ.

ಎರಡು ಸೈಜ್‌ಗಳಲ್ಲಿ ದೊರೆಯುತ್ತವೆ.

'ಹಾರ್ಲಿಕ್ಸ್'ನ ತಯಾರಕರಿಂದ

B.5106KAN

ನನ್ನ ಆತ್ಮೀಯ ಮಿತ್ರ ಗೋಪಾಲ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವಾಗ ಒಂದು ಬಾರಿ ಒಂದು ತಿಂಗಳ ರಜೆಯಲ್ಲಿ ಕೇರಳದ ಸೈನಿಕ ಮಿತ್ರ ಭಾಸ್ಕರನೊಡನೆ ಉಜ್ಜಯಿನಿಗೆ ಹೊರಟು ಇಂದೋರ್ ರೈಲ್ವೆ ನಿಲ್ದಾಣದಲ್ಲಿ ರೈಲಿಗಾಗಿ ಕಾಯುತ್ತಿದ್ದ. ಅದೆಲ್ಲಿಂದಲೋ ಬಂದ ಅನುಪಮ ನಿರಾಭರಣ ಸುಂದರಿ, ಹಿಂದಿಯಲ್ಲಿ, "ಅಣ್ಣಾ ನಾನು ರೈಲಿನಲ್ಲಿ ಬರುತ್ತಿದ್ದೇಕಾದ್ರೆ ಪಿಕ್ ಪಾಕೆಟ್ಟಾಗಿದೆ. ಯಾರೋ ಜೇಬುಗಳ್ಳರು ನನ್ನೆಲ್ಲಾ ಹಣವನ್ನು ದೋಚಿಬಿಟ್ಟಿದ್ದಾರೆ. ಮನೆಗೆ ಹಿಂತಿರುಗಲೂ ಹಣವಿಲ್ಲ. ದಯವಿಟ್ಟು ಒಂದೈವತ್ತು ರೂಪಾಯಿಗಳನಿತ್ತಲ್ಲಿ ತುಂಬಾ ಉಪಕಾರಮಾಡಿದಂತಾಗುತ್ತದೆ. ದಯವಿಟ್ಟು ಸಹಾಯಮಾಡಿ" ಅಂದಳು. ಗೋಪಾಲ ತಕ್ಷಣ ಕೊಡಲು ಮುಂದಾದಾಗ ಭಾಸ್ಕರ ಹೇಳಿದ: "ಏ! ಬೇಡ ಬೇಡ. ಕೊಡ್ಬೇಡ. ಎಂಥಾ ಮಹಾ ಸೂಳೆಯೋ ಏನೋ. ಇಂಥವರನ್ನು ನಾನೆಷ್ಟೋ ಮಂದಿಯನ್ನು ಕಂಡಿದ್ದೇನೆ. ಕೊಟ್ರೆ ಕಳಕೊಳ್ಳುತ್ತೀಯಾ ಅಷ್ಟೆ." ಅನಂತರ ಅವಳತ್ತ ತಿರುಗಿ ಹಿಂದಿಯಲ್ಲಿ, "ಹೋಗಲೆ, ನಿನ್ನಂಥಾ ಸೂಳೆಗಳನ್ನೆಷ್ಟೊ ಕಂಡಿದ್ದೀನಿ," ಅಂದ. ಅವಳು ಪರಿಪರಿಯಾಗಿ "ಅಲ್ಲಣ್ಣಾ, ನಾನನ್ನುತ್ತಿರೋದೆಲ್ಲಾ ಸತ್ಯ. ನಾನು ಕೆಟ್ಟೋಳಲ್ಲಣ್ಣಾ," ಎಂದು ಎಷ್ಟು ಹೇಳಿದರೂ ಭಾಸ್ಕರನ ಮನಸ್ಸು ಕರಗಲಿಲ್ಲ. ಕೊನೆಗವಳು ತನ್ನ ವಿಳಾಸ ಕೊಡುತ್ತೇನೆಂದರೂ ಭಾಸ್ಕರ ಗೋಮಟನಂತೆ ಅಚಲನಾಗಿದ್ದ. ಕೊನೆಗೆ ಕನಿಕರದಿಂದ ಗೋಪಾಲ್ ತನ್ನಲ್ಲಿದ್ದ ೪೦/- ರೂ. ಗಳನ್ನು ಕೊಟ್ಟಾಗ ಆಕೆ ತನ್ನ ವಿಳಾಸವನ್ನಿತ್ತು ಧನ್ಯವಾದಗಳನ್ನರ್ಪಿಸಿ ಹೊರಟು ಹೋದಳು. ತಿಂಗಳ ರಜೆ ಮುಗಿಸಿ ಮಿಲಿಟರಿ ಕಾಲೇಜಿಗೆ ಹಿಂತಿರುಗಿದಾಗ ೪೦/- ರೂ. ಗಳ ಎಂ.ಓ. ದೊಟ್ಟಿಗೆ, ಆಕೆಯ ತಂದೆಯ ಕೃತಜ್ಞತೆಯ ಪತ್ರವೂ ಗೋಪಾಲನನ್ನು ಕಾಯುತ್ತಿತ್ತು.

-ಬಿ. ಜಯರಾಣಿ ದಿವಾಕರ

ಆಗ ನಾನು ಮತ್ತು ನನ್ನ ತಾಯಿ ಮುಂಬಯಿಯ ಗೋರೆಗಾಂವದಲ್ಲಿ ಮನೆ ಮಾಡಿದ್ದೆವು. ನಮ್ಮ ಪಕ್ಕದ ಮನೆಯಲ್ಲಿ ಹೊಸದಾಗಿ ಮದುವೆಯಾದ ಜೋಡಿಯೊಂದು ಬಾಡಿಗೆಗಿತ್ತು. ನಮ್ಮ, ಅವರ ಮಾತೃಭಾಷೆ ಒಂದೇ ಆದ್ದರಿಂದ ನಮಗೆ ಬೇಗನೇ ಸಲಿಗೆ ಬೆಳೆಯಿತು.

ಒಂದು ದಿನ ನನಗೆ ಶೀತದಿಂದ ಆಫೀಸಿಗೆ ಹೋಗಲಾಗಲಿಲ್ಲ. ನಾನು ರೂಮಿನಲ್ಲಿ ಕುಳಿತು ಪುಸ್ತಕ ಓದುತ್ತಿದ್ದೆ. ಅಷ್ಟರಲ್ಲಿ ಒಂದು ಆಂಬುಲೆನ್ಸ್ ಒಂದು ನಮ್ಮ ಮನೆಯ ಹತ್ತಿರ ನಿಂತಿತು. ಇಬ್ಬರು ಅದರ ಒಳಗಿಂದ ಒಂದು ಹೆಣವನ್ನು ಕೆಳಗಿಳಿಸಿದರು. ನಾನು ಭಯದಿಂದ ಹೊರಗೆ ಬಂದು ಹೆಣ ಯಾರದೆಂದು ಕೇಳಿದಾಗ ಅದು ನಮ್ಮ ಪಕ್ಕದ ಮನೆಯವನದೆಂದೂ ರೈಲ್ವೆ ಅಪಘಾತದಲ್ಲಿ ಅವನು ತೀರಿಕೊಂಡನೆಂದೂ ಚೀಲದಲ್ಲಿದ್ದ ಅಡ್ರೆಸ್ಸಿನಿಂದಾಗಿ ಅವರು ಹೆಣ ತೆಗೆದುಕೊಂಡು ಬಂದರೆಂದೂ ತಿಳಿಯಿತು.

ಹೆಣ ರೈಲಿನಡಿಗೆ ಸಿಕ್ಕಿ ಗುರುತು ಸಿಗಲಾರದಷ್ಟು ಜಜ್ಜಿಹೋಗಿತ್ತು. ಪಾಪ, ನಮ್ಮ ತಾಯಿಗೆ ಆ ಹುಡುಗಿಯನ್ನು ಸಮಾಧಾನ ಮಾಡುವುದೊಂದೇ ಕೆಲಸವಾಯಿತು. ನಾನು ಅವನ ಅಂತ್ಯಸಂಸ್ಕಾರ ಮುಗಿಸಿ ಬರುವಾಗ ಗಂಟೆ ಎರಡಾಗಿತ್ತು.

ರಾತ್ರಿಯ ಹೊತ್ತಿಗೆ ಅವಳನ್ನು ಒಬ್ಬಳನ್ನೇ ಬಿಡಲಾಗದೆ ನಾವೂ ಅವಳ ಮನೆಯಲ್ಲಿ ಮಲಗಿದ್ದೆವು. ಸುಮಾರು ರಾತ್ರಿ ಹನ್ನೊಂದು ಗಂಟೆಯಾಗಿರಬೇಕು, ಯಾರೋ ಬಾಗಿಲು ತಟ್ಟಿದ ಶಬ್ದ ಕೇಳಿ, ತಾಯಿಯವರು ಬಾಗಿಲು ತೆರೆದು, ಕಿಟಾರನೆ ಕಿರುಚಿಕೊಂಡರು. ಪಕ್ಕದ ಮನೆಯವ ಬಾಗಿಲಲ್ಲಿ ನಿಂತಿದ್ದ. ಅವನು ಮಾತಾಡಿದಾಗಲೇ ಅವನು ದೆವ್ವವಲ್ಲ ಎಂದು ನಮಗೆ ಖಾತ್ರಿಯಾದದ್ದು. ನಾವೆಲ್ಲ ಇಲ್ಲಿ ಯಾಕೆ ಸೇರಿದ್ದು ಎಂದು ಅರ್ಥವಾದದ್ದು ಅವನಿಗೆ

ಅವನ ಹೆಂಡತಿಯು ಬೋಳು ಹಣೆಯನ್ನು ನೋಡಿದಾಗಲೇ. ಆಗಲೆ ನಮ್ಮ ತಾಯಿಯವರು ಅವಳಿಗೆ ವೈಧವ್ಯದ ಶಾಸ್ತ್ರ ಮಾಡಿಯಾಗಿತ್ತು. ಇಲ್ಲಿ ಅವನು ಜೀವಂತವಾಗಿ ಹಿಂತಿರುಗಿ ಬಂದಿದ್ದ. ಹಾಗಾದರೆ ನಾವು ಸುಟ್ಟು ಬಂದ ಹೆಣ ಯಾರದು ? ಈ ಬಗ್ಗೆ ನಂತರ ತಿಳಿದದ್ದು ಇಷ್ಟು: ನಮ್ಮ ಪಕ್ಕದ ಮನೆಯವ ಬೆಳಿಗ್ಗೆ ರೈಲು ಹತ್ತುವಾಗ ಯಾರೋ ಅವನ ಪಾಕೀಟನ್ನು ಹಾರಿಸಿದ್ದರು. ಅದೇ ಮನುಷ್ಯ ರೈಲಿನಡಿ ಬಿದ್ದು ಸತ್ತಿದ್ದ.

–ಎಂ. ದೇವದಾಸ ಶೈ

ಈಚೆಗೆ ನನ್ನ ರಕ್ತಸಂಬಂಧಿಯೊಬ್ಬನಿಗೆ ಮದುವೆಯಾಯಿತು. ಅವನ ಜೀವನದಲ್ಲಿ ನಡೆದ ಸಂಗತಿಯಿದು:

ಗಂಡು ಪದವೀಧರ. ನಗರಗಳಲ್ಲಿ ಬೆಳೆದವನು. ಸಿನಿಮಾ ಚಟ ಬೇರೆ. ಮದುವೆಯಾಗುವ ತನ್ನ ಹೆಂಡತಿ ಹಾಗಿರಬೇಕು ಹೀಗಿರಬೇಕು ಎಂದು ಏನೇನೋ ಬಯಕೆಗಳ ರಾಜ್ಯವನ್ನೇ ಕಟ್ಟಿಕೊಂಡಿದ್ದ. ಆದರೆ ಸಿಕ್ಕಿದ ಹುಡುಗಿ ಹಳ್ಳಿಯಿಂದ ಬಂದವಳು. ಓದು ಬರಹ ತಿಳಿದವಳಾದರೂ ಚಾಕಚಕ್ಯತೆಯನ್ನರಿಯದ ಮುಗ್ಧೆ. ಇಂಥವಳಿಂದ ತನ್ನ ಆಶೋತ್ತರಗಳು ಪೂರೈಸುವುದಾದರೂ ಹೇಗೆ? ಆದರೆ ತನ್ನ ಹೆಂಡತಿ ಅವುಗಳನ್ನೆಲ್ಲಾ ಕಲಿಯಲೇಬೇಕೆಂಬ ಹಟ. ಆದರೆ ಅವನು ಕಲಿಸುವುದಾದರೂ ಹೇಗೆ? ಹೆಂಡತಿಗೇ ಹೇಳುವುದೆ? ಪಾಪ ಅವಳು ನೊಂದುಕೊಳ್ಳಬಹುದು. ಬಹಳ ಕಾಲ ಚಿಂತಿಸಿ ಒಂದು ಯೋಜನೆಯನ್ನೇ ತಯಾರಿಸಿದ. ಹಾವೂ ಸಾಯಬಾರದು ಕೋಲೂ ಮುರಿಯಬಾರದು ಅಂತಹ ಯೋಜನೆ ಅದು.

ತನ್ನ ಮನೆಗೆ ಆಗಾಗ್ಗೆ ಬರುತ್ತಿದ್ದ ಊರಿನ ಅಮಲ್ದಾರರ ಮಗಳು ಸುನಂದೆಯನ್ನೇ ಚುನಾಯಿಸಿಕೊಂಡು ಅವಳಿಗೊಂದು ಕಾಗದ ಬರೆಯುತ್ತಾ, "ಪ್ರಿಯ ಸುನಂದಾ,– ಗಂಡನ ವಿಚಾರದಲ್ಲಿ ಹೇಗಿರಬೇಕೆಂದು ಕೇಳಿದೆಯಲ್ಲವೆ? ನನಗೆ ತಿಳಿದ ಹಾಗೆ ಹೇಳುತ್ತೇನೆ ಕೇಳು. ಗಂಡ ಆಫೀಸಿನಿಂದ ಬಂದಕೂಡಲೆ ನಗುನಗುತ್ತಾ ಸ್ವಾಗತಿಸಬೇಕು. ಕೋಟು ಬಿಚ್ಚಲು ಸಹಾಯ ಮಾಡಬೇಕು. ಕೇಳುವ ಮೊದಲೇ ಕಾಫಿ ಸಿದ್ಧವಾಗಿರಬೇಕು..." ಇತ್ಯಾದಿ ಇತ್ಯಾದಿ... ತಾನು ತನ್ನ ಹೆಂಡತಿಯಿಂದ ಏನೇನು ಬಯಸಿದ್ದನೋ ಅದನ್ನೆಲ್ಲ ಬರೆದು ಎಂಥದೊ ಮಹಾ ಆತುರದಲ್ಲಿ ಕಾಲೇಜಿಗೆ ಹೋಗುವವನಂತೆ ನಟಿಸಿ ಅದನ್ನು ಮೇಜಿನ ಮೇಲೆಯೇ ಬಿಟ್ಟು ನಡೆದ. ಸಂಜೆ ಮನೆಗೆ ಬಂದಾಗ ಹೆಂಡತಿ ನಗುನಗುತ್ತಲೆ ಸ್ವಾಗತಿಸಿದಳು. ಕಾಗದ ಸರಿಯಾದ ಪರಿಣಾಮ ಮಾಡಿದೆ ಎಂದುಕೊಂಡು ಸುಮ್ಮನಾದ.

ಮೂರು ದಿನಗಳ ನಂತರ, "ನೀವು ಇಂತಹ ಶುದ್ಧ ಮೂರ್ಖರೆಂದು ಮೊದಲೇ ತಿಳಿದಿದ್ದರೆ ನನ್ನ ಮಗಳನ್ನು ನಿಮ್ಮ ಮನೆಗೆ ಕಳುಹಿಸುತ್ತಿರಲಿಲ್ಲ. ಸ್ವಲ್ಪ ಮರ್ಯಾದೆಯಿಂದ ಇದ್ದರೆ ಒಳ್ಳೆಯದು" ಎಂದು ಊರಿನ ಅಮಲ್ದಾರರು ಜವಾನನ ಮೂಲಕ ಹೇಳಿಕಳುಹಿಸಿದಾಗಲೆ ನನ್ನ ಸಂಬಂಧಿ ಗಾಬರಿಯಾಗಿ ನಮ್ಮ ಮನೆಗೆ ಓಡಿ ಬಂದದ್ದು. ನನ್ನ ಹೆಂಡತಿಯ ಮುಂದೆ ಎಲ್ಲವನ್ನೂ ಹೇಳಿಕೊಂಡು, ತಾನಾವುದೂ ಅಂತಹ ಕಾಗದವನ್ನೆ ಬರೆದಿಲ್ಲವೆಂದು ಪ್ರಮಾಣ ಮಾಡಿ ಹೇಳಲಾರಂಭಿಸಿದ. ನನಗೂ ಪೇಚಿಗಿಟ್ಟುಕೊಂಡಿತು. "ಸರಿ, ವಿಚಾರಿಸ್ತೀನಿ, ನೀನು ಮಾಮೂಲಿಯಂತೆ ಕ್ಲಾಸಿಗೆ ಹೋಗು" ಎಂದು ಧೈರ್ಯ ಹೇಳಿ ರಹಸ್ಯದ ತಪಾಸಣೆಗಾರಂಭಿಸಿದೆ.

ಆಗ ಗುಟ್ಟು ಹೊರಗೆ ಬಿತ್ತು. ಹೆಂಡತಿಗಾಗಿ, ಸುನಂದೆಗೆ ಬರೆದಿದ್ದ ಕಾಗದವನ್ನು ಅವನ ಹೆಂಡತಿ ನೋಡಿದ್ದಳು, ಓದಿದ್ದಳು. ಆದರೆ ಗಂಡ ಆತುರದಲ್ಲಿ ಬರೆದ ಕಾಗದವನ್ನು ಮರೆತೇ ಹೋಗಿದ್ದಾನಲ್ಲಾ ಎಂದು ಮನೆಗೆಲಸದವಳ ಕೈಯ್ಯಲ್ಲಿ ಸುನಂದೆಗೆ ತಲುಪಿಸಿಬಿಟ್ಟಿದ್ದಳು.

–ಪಿ. ನಾಗಭೂಷಣ

ಒಂದು ವೈದ್ಯಕೀಯ
ಕುತೂಹಲ

ಹೋಮಿಯೋಪಥಿ ಮತ್ತು ಸ್ತ್ರೀಸ್ವಭಾವ

ಕೃಷ್ಣಮೂರ್ತಿ ಕಿತ್ತೂರ

ಹೋಮಿಯೋಪಥಿ ವೈದ್ಯಶಾಸ್ತ್ರದ ಜನಕರಾದ ಡಾ. ಹಾನಿಮನ್ನರು ತಮ್ಮ ಆಯುಷ್ಯದ ೮೦ ನೆಯ ವರ್ಷದಲ್ಲಿ ಕೂಡ ತೀವ್ರಾವಸ್ಥೆಯಲ್ಲಿದ್ದ ರೋಗಿಗಳನ್ನು ಅವರ ನಿವಾಸಗಳಿಗೆ ಹೋಗಿ ಸ್ವತಃ ಪರೀಕ್ಷಿಸಿ ಔಷಧಿ ಕೊಡುತ್ತಿದ್ದರು. ಅಂಥ ಸಮಯದಲ್ಲಿ ಅವರ ಶ್ರೀಮತಿಯವರೂ ಅವರನ್ನು ತಪ್ಪದೆ ಹಿಂಬಾಲಿಸುತ್ತಿದ್ದರು. ಅವರು ಕೂಡ ಹೋಮಿಯೋಪಥಿಯಲ್ಲಿ ತುಂಬ ಪರಿಶ್ರಮವುಳ್ಳವರೇ ಆಗಿದ್ದರು. ಒಮ್ಮೆ ಈ ವೃದ್ಧ ದಂಪತಿಗಳು ಪ್ಯಾರಿಸ್ಸಿನಲ್ಲಿ ರೋಗಿಯೊಬ್ಬರ ಮನೆಗೆ ಹೋದಾಗ ಆ ಮನೆ ಯಜಮಾನತಿ ತನ್ನ ರೋಗದ [illegible]ಗಳನ್ನು ಹೇಳುತ್ತ ತನ್ನ ಮನೆಗೆಲಸದವಳ ಅಪ್ರಾಮಾಣಿಕತೆಯನ್ನೂ ಆ ಕಾರಣಕ್ಕಾಗಿ ಅವಳನ್ನು ಕೆಲಸದಿಂದ ಬಿಡಿಸಿದುದನ್ನೂ ಹೇಳಿದಳು. ಇದನ್ನು ಕೇಳಿದ ಶ್ರೀಮತಿ ಹಾನಿಮನ್ನರು ಕೂಡಲೇ, "Why did you not mention it before? We have medicines for it," (ಈ ವಿಷಯವನ್ನು ಮೊದಲೇ ಏಕೆ ಹೇಳಲಿಲ್ಲ? ಅದಕ್ಕೂ ನಮ್ಮ ಬಳಿ ಔಷಧಗಳಿವೆ) ಎಂದು ಹೇಳಿದರಂತೆ.

ಶ್ರೀಮತಿ ಹಾನಿಮನ್ನರ ಮಾತನ್ನು ಉಪಹಾಸ್ಯಗೈಯಬೇಕಾಗಿಲ್ಲ. ಗಾದೆಯಮಾತು ಸ್ವಭಾವಕ್ಕೆ ಔಷಧವಿಲ್ಲವೆಂದು ಹೇಳಿದ್ದರೂ, ಮನುಷ್ಯರ ಮಾನಸಿಕ ಲಕ್ಷಣಗಳನ್ನು ಕೂಡ ಹೋಮಿಯೋಪಥಿ ಗುಣಪಡಿಸಬಲ್ಲದೆಂಬುದು ಅನುಭವಸಿದ್ಧವಾದ ಮಾತು. ಡಾ. ಹಾನಿಮನ್ನರು ಒಂದೆಡೆ, 'There are no deceases, but sick people' (ರೋಗಗಳೆಂಬುವೇನೂ ಇಲ್ಲ. ಆದರೆ ಅಸ್ವಸ್ಥ ಜನರಿದ್ದಾರೆ) ಎಂದು ಹೇಳಿರುವರು. ಆದರೆ ನಿತ್ಯ ನಮ್ಮನ್ನು ಕಾಡುವ ಸಾಮಾನ್ಯ ರೋಗಗಳಲ್ಲವೆ. ಮಧುಮೇಹ, ರಕ್ತದ ಒತ್ತಡ, ಕ್ಯಾನ್ಸರ್ ಮೊದಲಾದ ಹಲವು ಹಲ

ನೆಂಟು ಉಗ್ರ ರೋಗಗಳೂ ಮಾನವನ ಜೀವನವನ್ನು ಕೊರೆಯುತ್ತಲೇ ಇವೆಲ್ಲ ಅಸಾಧ್ಯ ಅಥವಾ ದುಸ್ಸಾಧ್ಯ ರೋಗಗಳೆಂದು ಖ್ಯಾತವಾಗಿವೆ. ಆಧುನಿಕ ವಿಜ್ಞಾನಿಗಳು ಇಂಥ ಹಲವಾರು ರೋಗಗಳನ್ನು ನಿವಾರಿಸುವ ಉಪಾಯಗಳನ್ನು ಸಂಶೋಧಿಸುವಲ್ಲಿ ವಿಶ್ವಾದ್ಯಂತವೂ ನಿರತರಾಗಿರುವರು. ಅವರ ಪ್ರಯತ್ನದಿಂದ ಒಂದು ರೋಗವು ಮಾಯವಾಗುವಷ್ಟರಲ್ಲಿಯೇ ಅದರ ಸ್ಥಳದಲ್ಲಿ ಮತ್ತೊಂದು ಇನ್ನೂ ಭೀಕರವಾದ ರೋಗವು ಕಾಣಿಸಿಕೊಳ್ಳುತ್ತದೆ. ಇದನ್ನು ದಿನಾಲು ಕಾಣುತ್ತಿರುವ ನಾವು ರೋಗಗಳೇ ಇಲ್ಲವೆಂಬ ಅಭಿಪ್ರಾಯವನ್ನು ಹೇಗೆ ಒಪ್ಪಬೇಕೆಂಬ ಪ್ರಶ್ನೆ ಬರುವುದು ಸ್ವಾಭಾವಿಕ.

ಆದರೆ ಡಾ. ಹಾನಿಮನ್ನರು ಹೇಳುವುದಿಷ್ಟೇ. ಇಂಥ ಹಲವು ತೊಂದರೆಗಳಿಗೆ ಒಳಗಾಗಬಹುದಾದ ಅಸ್ವಸ್ಥ ಮಾನವರಿಂದಲೇ ರೋಗಗಳು ಕಾಣಿಸಿಕೊಳ್ಳುತ್ತವೆ. ನಿದರ್ಶನಕ್ಕಾಗಿ ಹಲವಾರು ರೋಗಗಳು ಕೆಲವು ಜಾತಿಯ ರೋಗಾಣುಗಳಿಂದ ಉಂಟಾಗುತ್ತವೆ ಎಂದು ಹೇಳಲಾಗಿದೆಯಷ್ಟೇ? ಆದರೆ ಡಾ. ಹಾನಿಮನ್ನರ ಪ್ರಕಾರ ಈ ರೋಗಾಣುಗಳು ವ್ಯಕ್ತಿಯನ್ನು ಆವರಿಸಿಕೊಳ್ಳುವ ಮೊದಲೆ ಈ ವ್ಯಕ್ತಿ ರೋಗಿಯಾಗಿರುತ್ತಾನೆ. ರೋಗಾಣುಗಳು ಶರೀರದ ಅಂಗಾಂಗಗಳನ್ನು ಆಕ್ರಮಿಸಿ ಅವುಗಳನ್ನು ಹಾಳುಮಾಡುವ ಮೊದಲೇ ರೋಗಿಯನ್ನು ಗುರುತಿಸುವುದು ಹೋಮಿಯೋಪಥಿ ಶಾಸ್ತ್ರಕ್ಕೆ ಸಾಧ್ಯವಾಗಿದೆಯಷ್ಟೇ ಅಲ್ಲದೆ ಆ ಸಮಯಕ್ಕೆ ಯೋಗ್ಯ ರೀತಿಯ ಔಷಧೋಪಚಾರದಿಂದ ಹೋಮಿಯೋಪಥಿ ಅವನನ್ನು ಪುನಃ ಆರೋಗ್ಯವಂತನನ್ನಾಗಿ ಮಾಡಲು ಸಾಧ್ಯವಿದೆ. ಆದ್ದರಿಂದಲೇ ಡಾ. ಹಾನಿಮನ್ನರು, "Treat the man and not the decease," ಎಂದು ಹೇಳಿದರು.

ಮಾನವರೆಂದರೆ ಕೇವಲ ಶರೀರವಲ್ಲ. ಶರೀರವು ಮಾನವ ವಾಸಿಸುವ ಮನೆ. "The man is the will and understanding, and the house which he lives in is his body" ಎಂದು ಡಾ. ಕೆಂಟ್ ಹೇಳಿರುವುದು ಅರ್ಥಪೂರ್ಣವಾಗಿದೆ. ವ್ಯಕ್ತಿಯ ಅಂಗಾಂಗಗಳಲ್ಲಿ ಕಂಡುಬರುವ ಅನೇಕಾನೇಕ ಲಕ್ಷಣಗಳೇ ಆಂತರಿಕ ಮಾನವನ ಭಾಷೆಯೆಂದೂ ಈ ಭಾಷೆಯ ಮೂಲಕ ನಿಜವಾದ ಅಸ್ವಸ್ಥ ವ್ಯಕ್ತಿಯ ಸ್ಥಿತಿಯನ್ನು ಅರಿತುಕೊಳ್ಳಬೇಕೆಂದೂ ಹೋಮಿಯೋಪಥಿ ಪ್ರತಿಪಾದಿಸುತ್ತದೆ. ಈ ಭಾಷೆಯಲ್ಲಿ ಕೇವಲ ಶಾರೀರಕ ಲಕ್ಷಣಗಳಲ್ಲದೆ ವ್ಯಕ್ತಿಯ ಅರಿವು ಅನಿಸಿಕೆ. ವಿಚಾರ. ಸೇರಿಕೆ ಸೇರದಿರುವಿಕೆ, ಹಾವಭಾವ, ಕೋಪ ತಾಪ, ಪ್ರೀತಿ ದ್ವೇಷ ಮೊದಲಾದ ಮಾನಸಿಕ ಸ್ವಭಾವಗಳೂ ಸೇರುತ್ತವೆ. ಕೆಲವೊಂದು ವ್ಯಕ್ತಿಗಳು ಕೆಲವೊಂದು ಸ್ವಭಾವದವರಿರುತ್ತಾರೆ. ಕೆಲವರು ಬೇಗ ಸಿಟ್ಟಿಗೇಳುತ್ತಾರೆ. ಕೆಲವರಂತೂ ಒಮ್ಮೆಲೇ ಉಗ್ರರೂಪವನ್ನೇ ಧರಿಸುತ್ತಾರೆ. ಕೆಲವರು ಅತ್ಯಂತ ಶಾಂತ ಸ್ವಭಾವದವರಿರುತ್ತಾರೆ. ಕೆಲವರಲ್ಲಿ ಅಸೂಯೆ, ಅತೃಪ್ತಿ, ಅತ್ಯಾಸೆ. ಅತಿಕಾಮ ಮೊದಲಾದ ಹಲವು ಹಲನೆಂಟು ಸ್ವಭಾವವೈಚಿತ್ರ್ಯಗಳು ಕಂಡುಬರುತ್ತವೆ. ಇವರು ನೋಡಲಿಕ್ಕೆ ಆರೋಗ್ಯವಂತರಾಗಿ ಕಂಡರೂ ಇವರ ಅಂತರಿಕ ವ್ಯಕ್ತಿತ್ವ ಅಸ್ವಸ್ಥವಾಗಿರುತ್ತದೆ. ಶರೀರದ ಅಂಗಾಂಗಗಳಲ್ಲಿ ವ್ಯಕ್ತವಾಗುವ ನಾನಾ ಪ್ರಕಾರದ ರೋಗಗಳು ಅದಕ್ಕೂ ಪೂರ್ವದಲ್ಲಿಯೇ ಆಂತರಿಕ ವ್ಯಕ್ತಿಯಲ್ಲಿ ಬೀಜರೂಪದಲ್ಲಿ ನೆಲೆಸಿ ಬೆಳೆಯಲಾರಂಭಿಸಿರುತ್ತವೆ. ಈ ಆಂತರಿಕ ವ್ಯಕ್ತಿಯನ್ನು ಅರಿತು ಅವನನ್ನು ಗುಣಪಡಿಸಬೇಕೆಂಬುದು ಹೋಮಿಯೋಪಥಿಯ ಪರಮೋದ್ದೇಶವಾಗಿದೆ. ವ್ಯಕ್ತಿಯನ್ನೇ ಗುಣಪಡಿಸಬೇಕಲ್ಲದೆ ಆತನ ರೋಗವನ್ನಷ್ಟೆ ಅಲ್ಲ ಎಂದು ಡಾ. ಹಾನಿಮನ್ ಹೇಳುತ್ತಾರೆ.

ಮೊದಲ ಹಂತದಲ್ಲಿ ರೋಗ ಲಕ್ಷಣಗಳು ವ್ಯಕ್ತವಾಗಿರುವುದಿಲ್ಲವಾದರೂ ಆಯಾ 'ವ್ಯಕ್ತಿಯ ಆಂತರಿಕ ವ್ಯಕ್ತಿತ್ವದ ರೋಗಲಕ್ಷಣಗಳನ್ನು ಹೋಮಿಯೋಪಥಿ ವೈದ್ಯ ಕಂಡುಕೊಳ್ಳಬಲ್ಲ. ಆಂತರಿಕ ವ್ಯಕ್ತಿಯನ್ನು ಅವನ ಸ್ವಭಾದಿಂದಲೇ ಗುರುತಿಸಬಲ್ಲನಲ್ಲದೆ ಅವುಗಳಿಗೆ ಸಂವಾದಿಯಾದ ಔಷಧಗಳನ್ನು ಹೋಮಿಯೋಪಥಿ ವೈದ್ಯ ಕೊಡಬಲ್ಲವನಾಗಿದ್ದಾನೆ. ಇಂಥ ಔಷಧಗಳಲ್ಲಿ ಕೆಲವು ಚಿಕ್ಕಮಕ್ಕಳಿಗೆ. ಮತ್ತೆ ಕೆಲವು ಮುಪ್ಪಿನವರಿಗೆ. ಇನ್ನು ಕೆಲವು ಸ್ತ್ರೀಯರಿಗೆ ಹೀಗೆ ವಿಶೇಷವಾಗಿ ಗುಣ ಕೊಡುವಂಥವುಗಳೂ ಉಂಟು. ಸಾಕಷ್ಟು ತಿಂದರೂ ಬಡಕಲು ಶರೀರದವರಾಗಿರುವ. ಸದಾ ಸ್ಥೂಲ ಕಾಯವಾಗಿರುವ, ಬಹಳ ಬೆವರುವ. ಅತಿ ನೀರು ಕುಡಿಯುವ ಹೀಗೆ ಹಲವಾರು ವ್ಯಕ್ತಿ

ಗಳೇ ರೂಢಿಯಾಗಿರುವ ವ್ಯಕ್ತಿಗಳೂ ಇರುತ್ತಾರೆ. ಇಂಥ ಎಲ್ಲ ವರ್ಗದವರನ್ನೂ ಗಮನಿಸಿ ಹೋಮಿಯೋಪಥಿಯು ಅವರಿಗೆ ಸರಿಯಾಗುವಂಥ ಔಷಧಿಗಳನ್ನು ಗುರುತಿಸಿದೆ. ಅವರವರ ರೋಗಗಳನ್ನು ಅವರಿಗೆ ಸರಿಹೊಂದುವ ಔಷಧಿಗಳ ಹೆಸರಿನಿಂದಲೇ ಕರೆಯಲಾಗಿದೆ. ಒಬ್ಬನನ್ನು ಪಾತರೋಗಿಯೆಂದು ಕರೆಯುವ 'ಲೈಕೋಪೋಡಿಯಂ ರೋಗಿ' ಅಥವಾ 'ನಕ್ಸ್ ರೋಗಿ' ಎಂದು ಮೊದಲಾಗಿ ಕರೆಯುವುದು ಈ ಶಾಸ್ತ್ರದ ವೈಶಿಷ್ಟ್ಯವಾಗಿದೆ.

ಹೋಮಿಯೋಪಥಿ ವೈದ್ಯರು ಬಳಸುವ ಕೆಲವು ಔಷಧಗಳಂತೂ ಮುಖ್ಯವಾಗಿ ರೋಗಿಯ ಮಾನಸಿಕ ಲಕ್ಷಣಗಳನ್ನೇ ಅವಲಂಬಿಸಿರುತ್ತವೆ. ರೋಗಿಯ ಶಾರೀರಿಕ ಲಕ್ಷಣಗಳ ಜೊತೆಗೇ ಅಥವಾ ಇನ್ನೂ ಮುಖ್ಯವಾಗಿ, ಮಾನಸಿಕ ಲಕ್ಷಣಗಳನ್ನೇ ಆಧಾರವಾಗಿಟ್ಟುಕೊಂಡು ಇಂಥ ಔಷಧ ಯೋಜನೆಯನ್ನು ಮಾಡಲಾಗುತ್ತದೆ. ಸ್ತ್ರೀಯರಿಗೆ ಅನ್ವಯವಾಗುವಂಥ ಔಷಧಗಳಲ್ಲಿ ಇಗ್ನೇಶಿಯಾ, ನೇಟ್ರಂಮ್ಯೂರ್, ಪಲ್ಸೇಟಿಲಾ, ಅಗ್ಯಾರಿಕಸ್, ಲ್ಯಾಕೇಸಿಸ್, ಹಾಯೋಸಿಯಾಮಸ್, ಸಿಮಿಸಿಫ್ಯೂಗಾ, ಸೇಪಿಯಾ, ಸಿಕೇಲಿ ಕಾರ್ನಟಂ, ಸ್ಟ್ಯಾಫಿಸಾ, ಪ್ಲಾಟಿನಂ, ಝಿಂಕಂ ಮೊದಲಾದವು ಪ್ರಮುಖವಾಗಿವೆ. ಈ ಔಷಧಗಳ ಮಾನಸಿಕ ಲಕ್ಷಣಗಳು ಅತ್ಯಂತ ಸ್ಫುಟವಾಗಿರುತ್ತವೆ. ಆಯಾ ಸ್ವಭಾವದ ಅಥವಾ ಮಾನಸಿಕ ಲಕ್ಷಣಗಳ ಪ್ರಕಾರ ವಿವರ ವಿವರವಾಗಿ, ನಿರ್ದಿಷ್ಟವಾಗಿ ಮಾಡಿರುವ ಈ ಔಷಧಿಗಳ ಅಭ್ಯಾಸವು ಯಾರನ್ನಾದರೂ ಚಕಿತಗೊಳಿಸುವಂತಿದೆ. ಇಷ್ಟು ಸೂಕ್ಷ್ಮವಾಗಿ ಪರೀಕ್ಷೆ ಮಾಡಿ ಆಯಾ ಔಷಧಿಗಳ ಲಕ್ಷಣಗಳನ್ನು ಕಂಡುಹಿಡಿದ ಮಹನೀಯರ ಬಗ್ಗೆ ಗೌರವವೂ ಮೂಡುವಂತಿದೆ. ನಿದರ್ಶನಕ್ಕಾಗಿ ಸ್ತ್ರೀಯರಿಗೆ ಅವರ ಮಾನಸಿಕ ಗುಣ ಲಕ್ಷಣಗಳಿಗಾಗಿ ಸರಿಹೊಂದುವ ಒಂದೆರಡು ಔಷಧಗಳನ್ನು ಈಗ ನೋಡುವುದು.

ಇಂಥ ಔಷಧಗಳಲ್ಲಿ ಇಗ್ನೇಶಿಯಾ ಅತ್ಯಂತ ಪ್ರಮುಖವಾಗಿದೆ. ಇದು ಮುಖ್ಯವಾಗಿ ಪ್ರಕ್ಷುಬ್ಧ ಮನೋಭಾವದ ಸ್ತ್ರೀಯರಿಗೆ ಅನ್ವಯಿಸುವಂಥದು. ಅತ್ಯಂತ ಸೂಕ್ಷ್ಮ ಮನಸ್ಸಿನ ಈ ಕೃಷ್ಣವರ್ಣದ ಸ್ತ್ರೀಯರು ಕೃಷ್ಣ ಕೇಶಿಯರೂ ಆಗಿರುತ್ತಾರೆ. ಸಾಮಾನ್ಯವಾಗಿ ನಯ ವಿನಯ ಸಂಪನ್ನರಾದ ಇವರು ಶೀಘ್ರಗ್ರಾಹಿಗಳೂ ಅಹುದು ಮತ್ತು ಅಷ್ಟೇ ಚುರುಕಾಗಿ ಕಾರ್ಯ ಮಾಡುವವರೂ ಆಗಿರುತ್ತಾರೆ. ಆದರೆ ಈ ಸ್ತ್ರೀಯರ ಮನೋಭಾವವು ಕ್ಷಣಕ್ಷಣಕ್ಕೆ ಬದಲಾಗುವಂಥದು. ಹರ್ಷಿತರಾದವರು ಕ್ಷಣಾರ್ಧದಲ್ಲಿ ದುಃಖಿತರಾಗಬಹುದು. ನಗು ನಗುತ್ತಿದ್ದವರು ಒಮ್ಮೆಲೇ ಅಳಲಾರಂಭಿಸಬಹುದು. ಕೋಪ, ದುಃಖ ಅಥವಾ ತಿರಸ್ಕೃತ ಪ್ರೇಮಭಾವಕ್ಕೆ ತುತ್ತಾಗಿ ಬಳಲುವಂಥ ಈ ಸ್ತ್ರೀಯರು ತಮ್ಮ ಮನದ ಗುಟ್ಟನ್ನು ಯಾರಿಗೂ ಬಿಟ್ಟುಕೊಡುವವರಲ್ಲ; ಹೆಚ್ಚಾಗಿ ಏಕಾಂತವನ್ನೇ ಬಯಸುವವರು. ಉದ್ವಿಗ್ನರಾಗುವ ಸ್ವಭಾವದ ಇವರು ಎಷ್ಟೇ ಸಣ್ಣ-ಪುಟ್ಟ ಮಾತುಗಳಿಗೂ ಅವಮಾನಿತರಾಗುವರು. ಆರಾಮವಿದ್ದಾಗ ಮಾತ್ರ ತುಂಬ ಸಾಧು ಸ್ವಭಾವದವರು. ಆದರೆ ಉದ್ರೇಕಗೊಂಡಾಗ ಏನಾದರೂ ತಪ್ಪು ಮಾಡಿ, ಆ ನಂತರ ಅದಕ್ಕಾಗಿ ಪಶ್ಚಾತ್ತಾಪ ಪಡುವವರು. ತರುಣಿಯೊಬ್ಬಳು ಪ್ರೇಮದ ಹುಚ್ಚಿನಲ್ಲಿ ತನ್ನ ಅಂತಸ್ತಿಗೆ ತಕ್ಕವನಲ್ಲದ ಯುವಕನೊಬ್ಬನನ್ನು ಪ್ರೇಮಿಸಿ ಆ ನಂತರ ತನ್ನ ತಪ್ಪಿನ ಅರಿವಾಗಿ ಪರಿತಪಿಸುತ್ತಾಳೆ. ಆ ಯುವಕನ ಬಗ್ಗೆ ಅವಳಿಗೆ ಅತಿಯಾದ ಆಸೆಯಿತ್ತು, ಭರವಸೆಯಿತ್ತು. ಆದರೆ ಅತ ಅವಳನ್ನು ಸಂಪೂರ್ಣ ನಿರಾಶೆಗೊಳಿಸುತ್ತಾನೆ. ಇದರಿಂದ ಅವಳು ದುಃಖಾಕ್ರಾಂತಳಾಗುತ್ತಾಳೆ. ಅವಳ ತಲೆ ಸಿಡಿಯತೊಡಗುತ್ತದೆ. ಅವಳ ನರಗಳು ಕೆರಳುತ್ತವೆ. ಅವಳು ಥರಗುಟ್ಟಿ ನಡುಗುತ್ತಾಳೆ. ನಿದ್ರೆಯಿಲ್ಲದೆ ಅವಳು ಅನೇಕ ರಾತ್ರಿಗಳನ್ನೇ ಕಳೆಯುತ್ತಾಳೆ. ಅಥವಾ ಮಹಿಳೆಯೊಬ್ಬಳು ತನ್ನ ಮಗುವನ್ನೋ ಅಥವಾ ಪತಿಯನ್ನೋ ಕಳೆದುಕೊಂಡು ದುಃಖಭ್ರಾಂತಳಾಗಿ ಶಾರೀರಿಕ ಮತ್ತು ಮಾನಸಿಕ ವೇದನೆಗಳಿಗೊಳಗಾಗಿ ತನ್ನ ಮೋಜಿನ ಜೀವಿತವನ್ನೇ ಕಳೆದುಕೊಳ್ಳುತ್ತಾಳೆ. ಯಾರು ಎಷ್ಟೇ ಸಮಾಧಾನಪಡಿಸಿದರೂ ಎಷ್ಟು ಪ್ರಯತ್ನಿಸಿದರೂ ಅವಳಿಗೆ ಶಾಂತಿಯನ್ನೂ ಸಮಾಧಾನವನ್ನೂ ತಂದುಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಅವಳು ಆಗ ಉನ್ಮಾದ ರೋಗಿಯಂತೆಯೇ ವ್ಯವಹರಿಸುತ್ತಾಳೆ. ಇಂಥ ಮಾನಸಿಕ ಕುಸಿತದ ಸ್ಥಿತಿಯಲ್ಲಿ ಇಗ್ನೇಶಿಯಾ ಅವಳ ಸಹಾಯಕ್ಕೆ ಬರುತ್ತದೆ.

ಇಂಥವರು ಕೆಲವು ಸಲ ಇಲ್ಲದ ಕಾಲ್ಪನಿಕ ತೊಂದರೆಗಳನು ಊಹಿಸಿಕೊಂಡು ಅದರಿಂದ ಬಳಲುವುದೂ ಉಂಟು. ತಾನೇನೋ ಸಲ್ಲದ ಅಪರಾಧ ಮಾಡಿದ್ದೇನೆಂದು ಸುಮ್ಮಸುಮ್ಮನೆ ಕೊರಗುವರು. ಭೆಟ್ಟಿಯಾದವರು ಸರಿಯಾಗಿ ಮಾತನಾಡಿಸಲಿಲ್ಲವೆಂದೋ ತಾನು ಅತಿಥಿಗಳನ್ನು ಸರಿಯಾಗಿ ಗೌರವಿಸಲಿಲ್ಲವೆಂದೋ ಏನಾಕಾರಣ ಕೊರಗಬಹುದು. ಕೊರಗುವ ಸ್ವಭಾವದ ಇವರಿಗೆ ಇಂಥ ಹಲವಾರು ಕಾರಣಗಳು ಇದ್ದೇ ಇರುತ್ತವೆ. ಮುಖ್ಯವಾಗಿ ಇಗ್ನೇಶಿಯಾ– ಸ್ತ್ರೀಯ ಬುದ್ಧಿ ಮನಸ್ಸುಗಳು ಅತಿಯಾಗಿ ಓದಿ, ಅತಿಯಾಗಿ ವಿಚಾರ ಮಾಡಿ ಅಶಕ್ತವಾಗಿರುತ್ತವೆ. ಅವಳು ತನ್ನ ಮನದ ಮೇಲಿನ ಹಿಡಿತವನ್ನೇ ಕಳೆದು ಕೊಂಡಿರುತ್ತಾಳೆ. ಅತಿ ಅಭ್ಯಾಸ ಅತಿ ವಿಚಾರ, ನೃತ್ಯ, ಮೊದಲಾದ ಕಲೆಗಳಲ್ಲಿ ಅತ್ಯಾಸಕ್ತಿ, ಅತಿ ಸುಸಂಸ್ಕೃತ ನಡತೆ ಇಂಥವುಗಳು ಅವಳನ್ನು ಅವಳಿಗೆ ಗೊತ್ತಿಲ್ಲದಂತೆಯೇ ದಣಿಸಿ ಬಿಟ್ಟಿರುತ್ತವೆ. ಆದ್ದರಿಂದ ಯಾವ ಮಾನಸಿಕ ಆಘಾತವನ್ನೂ ತಾಳಿಕೊಳ್ಳಲಾರದಂಥ ಸ್ಥಿತಿ ಅವಳ ದಾಗಿರುತ್ತದೆ. ಇಂಥ ಸೌಮ್ಯ, ಸೂಕ್ಷ್ಮ ಮನದ ವಿದ್ಯಾವಂತ ಸುಸಂಸ್ಕೃತ ಮಹಿಳೆಯನ್ನು ಇಗ್ನೇಶಿಯಾ ಖಚಿತವಾಗಿಯೂ ಗುಣಪಡಿಸಬಲ್ಲದು. ಇದು ಅವಳ ಮಾನಸಿಕ ಸ್ಥಿತಿಯನ್ನೂ ಅದರ ಪರಿಣಾಮವಾಗಿ ಉಂಟಾಗಿರಬಹುದಾದ ಅಗ್ನಿ ಮಾಂದ್ಯ, ತಲೆನೋವು, ಗಂಟಲು ಬೇನೆ, ಕೆಮ್ಮು, ಋತುಸ್ರಾವದ ಅನೇಕ ತಕರಾರುಗಳು, ಅವಯವದಲ್ಲಿಯ ಕಂಪನ, ನಿದ್ರಾನಾಶ ಮೊದಲಾದ ಅನೇಕಾನೇಕ ಶಾರೀರಿಕ ವ್ಯಾಧಿಗಳನ್ನೂ ಗುಣಪಡಿಸಬಲ್ಲುದು.

ಇಗ್ನೇಶಿಯಾಕ್ಕೆ ತೀರ ಸಮೀಪವಾದ ಆದರೆ ಹೆಚ್ಚು ಆಳವಾಗಿ ಕೆಲಸ ಮಾಡುವ ಔಷಧಿಯೆಂದರೆ ನೇಟ್ರಂಮ್ಯೂರಿಯೇಟಂ. ಈ ಔಷಧವು ಹಾಗೆ ನೋಡಿದರೆ ಅಂಥ ಮಹಾ ವಸ್ತುವಲ್ಲ. ಅದು ಸಾಮಾನ್ಯ ಉಪ್ಪು. ಆದರೆ ಈ ಸಾಮಾನ್ಯ ಉಪ್ಪಿನಿಂದಲೇ ಹೋಮಿಯೋಪಥಿ ಶಾಸ್ತ್ರದ ಪ್ರಕಾರ ತಯಾರಿಸಿದ ನೇಟ್ರಂಮ್ಯೂರ್ ಔಷಧದ ಉಪಯುಕ್ತತೆ ಮಾತ್ರ ಅಸಾಮಾನ್ಯವಾಗಿದೆ. ಇಗ್ನೇಶಿಯಾದಲ್ಲಿರುವಂತೆಯೇ ಮಾನಸಿಕ ಸ್ಥಿತಿಯ, ನರದೌರ್ಬಲ್ಯದ ಸ್ತ್ರೀಯರಿಗೆ ಇದು ಹೆಚ್ಚು ಉಪಯುಕ್ತವಾಗಿದೆ. ಇಗ್ನೇಶಿಯಾದ ಲಕ್ಷಣಗಳಲ್ಲಿ ಹೆಚ್ಚಿನವು ಉನ್ಮಾದ ರೋಗಿಯಲ್ಲಿ ಕಂಡು ಬರುತ್ತವೆಯಾದರೂ ಇಗ್ನೇಶಿಯಾ ಉನ್ಮಾದ ರೋಗವನ್ನು ಗುಣಪಡಿಸಲಾರದು. ಆದರೆ ನೇಟ್ರಂಮ್ಯೂರ್ ಸಮರ್ಥವಾಗಿದೆ. ನೇಟ್ರಂಮ್ಯೂರ್ ರೋಗಿಯೂ ದುಃಖ, ಚಿಂತೆ, ಉದ್ವಿಗ್ನತೆಗಳಿಗೆ ಸಹಜವಾಗಿ ಒಳಗಾಗುತ್ತಾಳೆ, ಆದರೆ ಈ ಕಾಲಕ್ಕೆ ಯಾರಾದರೂ ಅವಳನ್ನು ಸಂತೈಸಿದರೆ ಅವಳ ದುಃಖದ ಕಟ್ಟೆಯೇ ಒಡೆದು ಅದು ಇನ್ನೂ ತೀವ್ರತರವಾಗುತ್ತದೆ. ಮನೆ ಬಾಗಿಲು ಹಾಕಿದ ಸಪ್ಪಳ, ಕರೆಗಂಟೆಯ ಧ್ವನಿ, ದೂರದ ರೇಡಿಯೋದಿಂದ ತೂರಿ ಬರುವ ಸಂಗೀತ ಇಂಥವುಗಳು ಕೂಡ ಅವಳನ್ನು ಇನ್ನೂ ರೊಚ್ಚಿಗೆಬ್ಬಿಸುತ್ತವೆ. ಇವಳು ಕೂಡ ಇಗ್ನೇಶಿಯಾ ತರುಣಿಯಂತೆ ಅಪಾತ್ರರಲ್ಲಿ ಪ್ರೀತಿಯನ್ನು ತೋರಿ, ಅನುತಾಪ ಪಡುವಂಥವಳೇ. ಮದುವೆಯಾದ ಗೃಹಸ್ಥನನ್ನೋ ಟ್ಯಾಕ್ಸಿ ಡ್ರೈವರನನ್ನೋ ಪ್ರೇಮಿಸುವುದು ಮೂರ್ಖತನವೆಂದು ಅವಳ ಬುದ್ಧಿಗೆ ತಿಳಿದರೂ ಅವಳ ಮನಸ್ಸು ಅವಳ ಕೈಯಲ್ಲಿ ಉಳಿಯುವುದಿಲ್ಲ. ಕೊನೆಗೆ ಅವಳು ಉನ್ಮಾದ ರೋಗಕ್ಕೆ ಬಲಿಯಾಗಬಹುದು. ಅಂಥವಳ ತಾಳ ತಪ್ಪಿದ ಮನವನ್ನು ನೇಟ್ರಂಮ್ಯೂರ್ ಖಚಿತವಾಗಿಯೂ ಹತೋಟಿಗೆ ತರಬಲ್ಲುದು. ಆ ಮೇಲೆ ಅವಳು ತನ್ನ ಹುಚ್ಚುತನದ ಕೆಲಸವನ್ನು ನೆನೆದು, ಅಂಥ ಮೂರ್ಖತನದ ಕೆಲಸವನ್ನು ತಾನು ಹೇಗೆ ಮಾಡಿದೆನೆಂದು ತಾನೇ ಅಚ್ಚರಿಪಡಬಹುದು.

ಆದರೆ ನೇಟ್ರಂಮ್ಯೂರ್ ಸ್ವಭಾವದವರೆಲ್ಲರೂ ಅಪಾತ್ರ ಪ್ರೇಮದ ಪಾಶದಲ್ಲಿ ಸಿಲುಕಿ ಬಳಲುತ್ತಾರೆ ಎಂದಲ್ಲ ಅಥವಾ ಉನ್ಮಾದ ರೋಗಕ್ಕೆ ಬಲಿಯಾಗುತ್ತಾರೆ ಎಂದೂ ಅಲ್ಲ. ಅವರ ಮನಃಸ್ಥಿತಿ ಆ ತರದ್ದಿರುತ್ತದೆ, ಅಷ್ಟೇ. ಇಂಥ ಸೂಕ್ಷ್ಮ ಸ್ವಭಾವದ ತರುಣಿಯರು ಅಥವಾ ಸ್ತ್ರೀಯರು ಅನೇಕ ರೀತಿಯ ಶಾರೀರಿಕ ಬವಣೆಗಳಿಗೆ ಗುರಿಯಾಗುತ್ತಾರೆ. ಶಾಲೆಗೆ ಹೋಗುವ ಹದಿವಯಸ್ಸಿನ ಹುಡುಗಿ ದಿನಾಲೂ ಅರೆತಲೆನೋವಿನಿಂದ ಬಳಲುತ್ತಾಳೆ. ಬಹುಶಃ ಎಡ ಭಾಗದ ಈ ಅರೆತಲೆನೋವು ಮುಂಜಾನೆ ೧೦ ಗಂಟೆಯ ಸುಮಾರಿಗೆ

ಆರಂಭವಾಗಿ ಮಧ್ಯಾಹ್ನದಲ್ಲಿ ಉಗ್ರರೂಪ ತಾಳಿ ಸೂರ್ಯಾಸ್ತಕ್ಕೆ ಕಡಿಮೆಯಾಗುತ್ತದೆ. ಕಳಾ ಹೀನ ಮುಖದ, ಅರಿಷಿಣ ವರ್ಣದ ಸ್ನಿಗ್ಧ ತ್ವಚೆಯ ಈ ಹುಡುಗಿ ಚೆನ್ನಾಗಿ ತಿನ್ನುತ್ತಿದ್ದರೂ ಸೊರಗುತ್ತ ಹೋಗುವಳು. ನೇಟ್ರಂಮ್ಯೂರ್- ಸ್ತ್ರೀಯರು ಸಾಮಾನ್ಯವಾಗಿ ಉಳಿದವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಉಪ್ಪನ್ನು ಸೇವಿಸುವರು. ಉಪ್ಪನ್ನೇ ತಿನ್ನದಿದ್ದರೂ ಸಿಹಿ ಪದಾರ್ಥಗಳಿಗಿಂತ ಉಪ್ಪು ಖಾರದ ಪದಾರ್ಥಗಳು ಇವರಿಗೆ ಹೆಚ್ಚು ಇಷ್ಟವಾದವುಗಳು. ಇವರ ಋತುಚಕ್ರವು ಅತಿ ಅನಿಯತವಾಗಿರುತ್ತದೆ. ಇವರು ಹೆಚ್ಚಾಗಿ ರಕ್ತಹೀನತೆಯಿಂದ ಬಳಲುತ್ತಲೇ ಇರುವರು. ಕೈ ಬೆರಳು ಕೊಯ್ದರೆ ಬರುವ ರಕ್ತ ಕೂಡ ನೀರು ನೀರಾಗುತ್ತದೆ. ಹೀಗೆ ಆಳವಾಗಿ ಬೇರೂರಿದ ಹಲವಾರು ರೋಗಗಳನ್ನು ಈ ಹೋಮಿಯೋ ಔಷಧವು– ಕ್ರಮವರಿತು ಪ್ರಯೋಗಿಸಿದರೆ– ನಿರ್ಮೂಲ ಮಾಡಬಲ್ಲುದು.

ಸ್ತ್ರೀಯರಿಗಾಗಿಯೇ ಹೇಳಿ ಮಾಡಿಸಿದಂತಹ ಇನ್ನೊಂದು ಅತಿ ಪ್ರಮುಖ ಹೋಮಿಯೋ ಔಷಧವೆಂದರೆ ಪಲ್ಸೇಟಿಲಾ. ಇಗ್ನೇಶಿಯಾ ಸ್ತ್ರೀಯರು ಕೃಷ್ಣವೇಣಿಯರಾದರೆ ಪಲ್ಸೇಟಿಲಾ ಸ್ತ್ರೀಯರ ಕೂದಲು ಬಂಗಾರದ ಬಣ್ಣದವು.* ಇವರ ವರ್ಣವೂ ಗೌರವರ್ಣವೇ. ಇವಳನ್ನು ಕಣ್ಣೀರಿನ ಗೌರಾಂಗಿಯೆಂದೇ ಕರೆಯಲಾಗಿದೆ. ಅಳುಬರುಕತನ, ಪುಕ್ಕಲುತನ ಮತ್ತು ಸೌಮ್ಯತೆ ಇವಳ ಸ್ವಭಾವವಾದರೂ ಇವಳನ್ನು ಬಹು ಸುಲಭವಾಗಿಯೇ ಕೆರಳಿಸಬಹುದು. ಈ ಪುಕ್ಕಲು ತರುಣಿಯನ್ನು ಯಾರೂ ಸಹಜವಾಗಿ ತಾತ್ಸಾರ ಮಾಡಬಹುದು. ಇವಳು ತನ್ನನ್ನು ಯಾರಾದರೂ ಎಲ್ಲಿ ಅನಾದರ ಮಾಡುವರೋ ಎಂದು ಯಾವಾಗಲೂ ಹೆದರುವಂಥವಳು. ಅದರಂತೆ ಮನೆಯಲ್ಲಿ ಒಬ್ಬಳೇ ಇರಲಿಕ್ಕೆ ಬಹಳೇ ಭಯಪಡುವ ಈಕೆ ಕತ್ತಲೆಗೂ ಹೆದರುತ್ತಾಳೆ. ಭೂತಗಳ ಕಲ್ಪನೆಯೇ ಇವಳನ್ನು ಅಧೀರಳನ್ನಾಗಿ ಮಾಡುತ್ತದೆ. ಪುರುಷರ ಜೊತೆಗೆ ಸ್ನೇಹವೇ ಕೆಟ್ಟದೆಂದು ಅವಳು ನಂಬುವಳು. ಪುರುಷರ ಜೊತೆಗೆ ಒಂದು ರೀತಿಯ ಭಯದಿಂದಲೇ ವ್ಯವಹರಿಸುವಳು. ತಲೆಯಲ್ಲಿ ಹಲವು ರೀತಿಯ ತಪ್ಪು ಕಲ್ಪನೆಗಳನ್ನು ತುಂಬಿಕೊಂಡ ಇವಳ ಕಲ್ಪನೆಗಳೂ ಬಹು ವಿಚಿತ್ರವಾಗಿರುತ್ತವೆ. ಯಾವುದೋ ಒಂದು ಪದಾರ್ಥವನ್ನು ತಿನ್ನುವದು ಹಾನಿಕರವೆಂದಾಗಲಿ, ದೇವರ ಪೂಜೆಯನ್ನು ತಪ್ಪಿಸಿದರೆ ಅನಾಹುತವೇ ಆಗುವದೆಂದಾಗಲಿ, ಲೈಂಗಿಕ ಕ್ರಿಯೆಯೇ ಪಾಪಕರವೆಂದಾಗಲಿ ಇಂಥ ತಳಬುಡವಿಲ್ಲದ ಕಲ್ಪನೆಗಳು ಅವಳ ಪಾಪಪ್ರಜ್ಞೆಯನ್ನು ಕೊರೆಯುತ್ತಲೇ ಇರುತ್ತವೆ. ಧರ್ಮಭೀರು ಸ್ವಭಾವದ ಇವಳಿಗೆ ಅದರ ಹುಚ್ಚೇ ಹಿಡಿದರೂ ಅಚ್ಚರಿಯಿಲ್ಲ.

ಆದರೆ ಪಲ್ಸೇಟಿಲಾ ಸ್ತ್ರೀಯು ಬಹು ಪ್ರಶಂಸಾಪ್ರಿಯಳು. ಅವಳಿಗೆ ಆದರ, ಪ್ರೀತಿ, ಮುದ್ದು ಬಹುಪ್ರಿಯ. ತನ್ನ ಸಂಗಾತಿ ಮೃದವಾಗಿ ಲಾಲನೆ ಮಾಡಬೇಕೆಂದು ಬಹುವಾಗಿ ಆಶಿಸುವಳು. ಆತ ಒಮ್ಮೆ ಮಾತನಾಡದಿದ್ದರೂ ಆತ ತನ್ನನ್ನು ಅನಾದರ ಮಾಡುವನೆಂದೂ ಆತನಲ್ಲಿ ತನ್ನ ಬಗ್ಗೆ ಪ್ರೀತಿಯೇ ಇಲ್ಲವೆಂದೂ ಭಾವಿಸಿ ವ್ಯಾಕುಲಗೊಳ್ಳುವಳು, ಕಣ್ಣೀರು ಸುರಿಸುವಳು.

ಪಲ್ಸೇಟಿಲಾ ಸ್ತ್ರೀಯು ಇಂಥ ಎಲ್ಲ ಮಾನಸಿಕ ಒತ್ತಡಗಳಿಂದ ಶಾರೀರಿಕ ಸ್ವಾಸ್ಥ್ಯವನ್ನು ಬಹು ಬೇಗ ಕಳೆದುಕೊಂಡು ರೋಗಿಯಾಗಿ ನರಳಬಹುದು. ಸಾಮಾನ್ಯವಾಗಿ ಪ್ರೌಢಾವಸ್ಥೆಗೆ ಕಾಲಿಕ್ಕುವ ಸಮಯಕ್ಕೆ ಆರಂಭವಾಗುವ ಅನೇಕಾನೇಕ ಶಾರೀರಿಕ ತಕರಾರುಗಳು ಅವಳನ್ನು

---

* ಇಲ್ಲಿ ಗಮನಿಸಬೇಕಾದ ಒಂದು ಮಾತೆಂದರೆ ಹೋಮಿಯೋಪಥಿಯ ಯಾವುದೊಂದು ಔಷಧವನ್ನು ಪರಿಣಾಮಕಾರಿಯಾಗಿ ಉಪಯೋಗಿಸಬೇಕಾದಾಗ ಅದರವೆಂದು ಹೇಳಲಾದ ಎಲ್ಲ ಲಕ್ಷಣಗಳೂ ರೋಗಿಯಲ್ಲಿರಬೇಕೆಂದಿಲ್ಲ; ಪ್ರಮುಖ ಲಕ್ಷಣಗಳು ಹೆಚ್ಚಾಗಿ ಇದ್ದರೆ ಸಾಕಾಗಬಹುದು. ಉದಾಹರಣಾರ್ಥ, ಪಲ್ಸೇಟಿಲಾ ರೋಗಿಗಳೆಲ್ಲರೂ ಬಂಗಾರ ಬಣ್ಣದ ಕೂದಲುಳ್ಳವರೇ ಆಗಿರಲೇಬೇಕೆಂದೇನೂ ಇಲ್ಲ. ಈ ಅಂಶ ಇಲ್ಲಿ ಬಂದಿರುವುದಕ್ಕೆ ಕಾರಣ ಸಾಕಷ್ಟು ಪ್ರಮಾಣದಲ್ಲಿ ಬಂಗಾರ ಬಣ್ಣದ ಕೂದಲುಳ್ಳ ಜನರಿರುವ ಯುರೋಪಿನಲ್ಲೇ ಈ ಶಾಸ್ತ್ರ ಹುಟ್ಟಿ ಬೆಳೆದಿರುವುದಾಗಿದೆ.

ಕೊನೆಯವರೆಗೂ ಕಾಡುತ್ತಲೇ ಇರುವುದು. ಋತುಚಕ್ರ ಅನಿಯಮಿತವಾಗಿರುತ್ತದೆ– ಅಂದರೆ ಸಾಮಾನ್ಯವಾಗಿ ತಡವಾಗಿಯೇ ಆಗುತ್ತದೆ. ಎಲುಬಿನ ಸಂದುಗಳಲ್ಲಿ ನೋವು ಕಾಣಿಸಿಕೊಂಡು ಅದು ಆಗಾಗ ತನ್ನ ಸ್ಥಳವನ್ನು ಬದಲಿಸುತ್ತದೆ. ಬೆನ್ನು ಅಂಗಾಲು ಮೊದಲಾದವು ಸದಾಕಾಲವೂ ನೋಯುತ್ತಿರುತ್ತವೆ. ಹದಿವಯಸ್ಸಿನ ಮುಖದ ಮೇಲಿನ ಮೊಡವೆ, ಅಪರಾಹ್ನದ ಅನಿವಾರ್ಯ ನಿದ್ರೆ, ರಾತ್ರಿಯ ಒಣ ಕೆಮ್ಮು, ಗುರುಗುಟ್ಟುವ ಹೊಟ್ಟೆ, ಆಗಾಗ ಆಗುವ ಅಪಚನದ ತೊಂದರೆ, ಬಾಯಿ ಒಣಗಿದರೂ ನೀರಡಿಕೆಯಿಲ್ಲದಿರುವಿಕೆ, ಅಧರದ ಮಧ್ಯಭಾಗದ ನೋವು–ಅಲ್ಲಿ ಸುಲಿಯುವ ತೊಗಲು, ಕಾಲಕಾಲಕ್ಕಾಗುವ ಕಣ್ಣು ಚಿಟ್ಟಿ (Stye), ಆಗಾಗ ತೊಂದರೆ ಕೊಡುವ ತಲೆನೋವು – ಇಂಥ ಹಲವಾರು ಶಾರೀರಿಕ ವ್ಯಾಧಿಗಳಿಂದ ನರಳುವ ಈ ಸ್ತ್ರೀ ಸದಾಕಾಲ ಎತ್ತರದ ತಲೆದಿಂಬನ್ನು ಉಪಯೋಗಿಸುವ ಚಟದವಳು. ಇಂಥ ವಿಚಿತ್ರ ಸ್ವಭಾವದ ಇವಳನ್ನು ಪಲ್ಸೇಟಿಲಾ ನೇರಗೊಳಿಸಲು ಸಮರ್ಥವಾಗಿದೆ.

ಹೀಗೆ ಹೋಮಿಯೋಪಥಿಯು ಸ್ತ್ರೀಯರ ಸ್ವಭಾವವನ್ನು ಅತಿ ಸೂಕ್ಷ್ಮವಾಗಿ ನಿರೀಕ್ಷಿಸಿ, ಅವರ ಸ್ವಭಾವದೋಷಗಳನ್ನು ನಿವಾರಿಸುವ ಅನೇಕ ಔಷಧಿಗಳನ್ನು ಕಂಡುಹಿಡಿದಿದೆ. ಅಡಿಗೆ ಮನೆಯಲ್ಲಿ ಸದಾಕಾಲ ಪಾತ್ರೆಗಳನ್ನು ಚೆಲ್ಲುವ, ಕಪ್ಪು ಬಸಿಗಳನ್ನು ಆಗಾಗ ಬೀಳಿಸಿ ಒಡೆಯುವ ಅಗ್ಯಾರಿಕಸ್ ಸ್ತ್ರೀ; ಸಂಶಯ ಅಸೂಯೆಗಳಿಂದ ತುಂಬಿ ತುಳುಕುವ, ದೇಹದ ಎಡ ಭಾಗದ ಅವಯವಗಳ ತೊಂದರೆಯಿಂದ ಬಳಲುವ ಲ್ಯಾಕೇಟಿಸ್ ಸ್ತ್ರೀ; ಇನ್ನೊಬ್ಬರನ್ನು ಕಂಡು ಕುರುಬುವ, ಸದಾ ಜಗಳ ತೆಗೆಯುವ, ಅಶ್ಲೀಲ ಹಾವಭಾವದ, ಯಾರಾದರೂ ತನಗೆ ವಿಷ ಹಾಕುವರೆಂದು ಸದಾಕಾಲ ಎಲ್ಲರನ್ನೂ ಸಂದೇಹದಿಂದಲೇ ನೋಡುವ ಹಾಯೋಸಿಯಾಮಸ್ ಸ್ತ್ರೀ; ಹೀಗೆ ಹಲವಾರು ವಿಚಿತ್ರವಾದರೂ ವಿಶಿಷ್ಟ ಸ್ವಭಾವಗಳನ್ನೂ ಅದರಿಂದಾಗಿಯೇ ಅವರು ಅನುಭವಿಸುವ ಶಾರೀರಿಕ ವ್ಯಾಧಿಗಳನ್ನೂ ಹೋಮಿಯೋಪಥಿಯ ಹಿರಿಯರು ಕಂಡು ಹಿಡಿದಿರುವರು.

ಈ ಮೇಲೆ ಹೇಳಿದ ಕೆಲವು ನಿದರ್ಶನಗಳಿಂದ ಮಾನವನ ಶಾರೀರಿಕ ಮತ್ತು ಮಾನಸಿಕ ವ್ಯಾಧಿಗಳ ನಡುವೆ ನೇರವಾದ ಕಾರ್ಯ–ಕಾರಣ ಸಂಬಂಧವಿದೆಯೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಹೋಮಿಯೋಪಥಿ ವೈದ್ಯಶಾಸ್ತ್ರವು ಮಾನಸಿಕ ಸ್ವಭಾವವನ್ನು ಹೇಗೆ ಪದರು ಪದರುಗಳಲ್ಲಿ ವಿಶ್ಲೇಷಿಸಿ ಅದನ್ನು ಗುಣಪಡಿಸುವ ವಿಧಾನವನ್ನು ಕಂಡುಹಿಡಿದಿದೆಯೆಂಬುದು ಸೂಚಿತವಾಗುತ್ತದೆ. ನಮ್ಮ ಆರೋಗ್ಯಕ್ಕೆಯಂತೆ ಸ್ವಭಾವವು ದುರತಿಕ್ರಮವಾದರೂ, ಯೋಗ್ಯ ಹೋಮಿಯೋ ಔಷಧಿಯ ಸಮರ್ಪಕವಾದ ಉಪಯೋಗದಿಂದ ಸ್ವಭಾವದೋಷಗಳನ್ನು ಕೆಲ ಮಟ್ಟಿಗಾದರೂ ಗುಣಪಡಿಸಿಕೊಂಡು ಮಾನವನು ಮಾನಸಿಕವಾಗಿಯೂ ಶಾರೀರಿಕವಾಗಿಯೂ ನೆಮ್ಮದಿಯನ್ನು ಪಡೆಯಬಹುದೆಂಬುದು ಹೋಮಿಯೋಪಥಿ ತೋರಿಸಿಕೊಟ್ಟಿದೆ. ✡



ಗಂಡನಿಗೆ ಬಡಿಸುತ್ತಿದ್ದ ಹೆಂಡತಿ, ಆತ ಏನೋ ಕೇಳಿದ್ದನ್ನು ಆಲಿಸಿ, "ಏನೆಂದಿರಿ?" ಎಂದಳು. ಪತಿ ಮೆಲ್ಲನೆ "ತುಪ್ಪ ಹಾಕು ಎಂದ." ಅವಳಿಗೆ ಸರಿಯಾಗಿ ಕೇಳಿಸಲಿಲ್ಲ. "ನೀವು ಕೇಳಿದ್ದೇನು?" ಮತ್ತೆ ಪ್ರಶ್ನಿಸಿದಳು. ಈಗ ಗಂಡ "ಉಪ್ಪು" ಎಂದ. "ಜೋರಾಗಿ ಹೇಳ್ರಿ" ಹೆಂಡತಿ ಗುಡುಗಿದಳು.

"ಅನ್ನ ಬಹಳ ಬಿಸಿಯಾಗಿತ್ತು. 'ಉಫ್' ಎಂದೆ ಅಷ್ಟೆ" ಪತಿ ಉತ್ತರಿಸಿದ.

–ಟಿ. ಎಸ್. ಪದ್ಮನಾಭರಾವ್

ರಾಜು ಹಳ್ಳಿಗೆ ಬಂದ...

ಡಿ. ಆರ್. ಬಾಲು

ಬೆಳಿಗ್ಗೆ ಎಂಟೂವರೆ ಗಂಟೆ ಸಮಯ. ದೇವಪುರದ ಪ್ರಾಥಮಿಕ ಶಾಲೆಯ ಇಂದಿನ ಚಟುವಟಿಕೆಗಳು ಪ್ರಾರಂಭವಾಗಿ ಈಗಾಗಲೇ ಅರ್ಧ ಗಂಟೆ ಕಳೆದಿತ್ತು. ನಾಲ್ಕನೆಯ ತರಗತಿಯ ವಿದ್ಯಾರ್ಥಿಗಳು ಗದ್ಯ ಓದುತ್ತಿದ್ದರು; ಮೂರನೇ ಕ್ಲಾಸಿನವರು ಪದ್ಯ ಹೇಳುತ್ತಿದ್ದರು. ಎರಡನೆ ಕ್ಲಾಸಿನವರು ಮಗ್ಗಿ ಗಟ್ಟಿ ಮಾಡುತ್ತಿದ್ದರು; ಒಂದನೆ ಕ್ಲಾಸಿನವರು ಕಾಗುಣಿತ ಹೇಳುತ್ತಿದ್ದರು. ಎಲ್ಲ ಮಕ್ಕಳೂ ಒಟ್ಟಿಗೆ ಎತ್ತರದ ಧ್ವನಿಯಲ್ಲಿ ಅರಚುತ್ತಿದ್ದರು. ಈ ವಿವಿಧ ಸ್ವರಗಳ ಮೇಳ ಸ್ಕೂಲಿನ ಕೋಣೆಯನ್ನು ತುಂಬಿದ್ದೇ ಅಲ್ಲದೆ ಹೊರಗೂ ನಾಲ್ಕು ದಿಕ್ಕುಗಳಲ್ಲಿ ಸಾಕಷ್ಟು ದೂರ ಹಬ್ಬಿತ್ತು. ಈ ಸದ್ದುಗದ್ದಲಗಳ ನಡುವೆ ಶಾಲೆಯ ಏಕೈಕ ಮಾಸ್ತರ ತಿರುಮಲಾಚಾರ್ಯರು ತಮ್ಮ ಸಿಂಹಾಸನದಲ್ಲಿ (ಒಂದು ಕೈ ಇಲ್ಲದ ಮುರುಕಲು ಕುರ್ಚಿ) ಆಸೀನರಾಗಿ ಹಾಯಾಗಿ ತೂಕಡಿಸುತ್ತಿದ್ದರು. ಪಕ್ಕದ ಹಳ್ಳಿಯಲ್ಲಿ ಹರಿಕಥೆ ಕೇಳುತ್ತಾ ರಾತ್ರಿ ಪೂರ ನಿದ್ದೆಗೆಟ್ಟಿದ್ದ ಅವರಿಗೆ ಬೆಳಿಗ್ಗೆ ಸ್ಕೂಲಿಗೆ ಬಂದೊಡನೆ ತಡೆಯಲಾರದ ನಿದ್ದೆ ತೂಕಡಿಕೆ ಬಂದುಬಿಟ್ಟಿತ್ತು. ಮಕ್ಕಳಿಗೆ ಅವರವರ ಕೆಲಸ ಹಚ್ಚಿ ತಾವು ನಿದ್ದೆಯಲ್ಲಿ ಮುಳುಗಿದ್ದರು.

ಸ್ಕೂಲಿನ ಕಾರ್ಯಕ್ರಮಗಳು ಹೀಗೆ ಸರಾಗವಾಗಿ ಸಾಗುತ್ತಿರಲು ವಯಸ್ಸಾದವರೊಬ್ಬರು ಒಳಗೆ ಪ್ರವೇಶಿಸಿದರು. ಅವರ ಹಿಂದೆಯೇ ಸುಮಾರು ಎಂಟೊಂಬತ್ತು ವಯಸ್ಸಿನ ಒಬ್ಬ ಹುಡುಗನೂ ತರಗತಿಯಲ್ಲಿ ಕಾಲಿಟ್ಟ. ಹಿರಿಯರ ಹೆಸರು ರಾಮಯ್ಯ. ಈ ಊರಿನ ಪಟೇಲ. ಅವರ ಜತೆಯಲ್ಲಿ ಬಂದಿದ್ದವ ಅವರ ಮೊಮ್ಮಗ. ಹೆಸರು ರಾಜಶೇಖರ. ಅವನು ನಿನ್ನೆ ಸಂಜೆ ತಾನೆ ಈ ಊರಿಗೆ ಬಂದಿದ್ದ. ಈಗ ಸ್ಕೂಲಿಗೆ ಸೇರುವವನಿದ್ದ. ಬೆಂಗಳೂರಿನಲ್ಲೇ ಹುಟ್ಟಿ ಬೆಳೆದು ಹಳ್ಳಿಯ ಜೀವನಕ್ಕೆ ತೀರ ಅಪರಿಚಿತನಾಗಿದ್ದ ಈ ಹುಡುಗ. ಈ ಊರಿನಲ್ಲಿ ಕಾಲಿಟ್ಟ ಕ್ಷಣದಿಂದ ಇಲ್ಲಿನ ಪರಿಸರಕ್ಕೆ ಸುಲಭವಾಗಿ ಹೊಂದಿಕೊಳ್ಳಲಾಗದೆ ಒಂದೇ ಬಗೆಯ ಪರಕೀಯತೆಯನ್ನು ಅನುಭವಿಸುತ್ತಿದ್ದ. ತಾತ ರಾಮಯ್ಯನವರ ಮನೆಯಲ್ಲಿ ವಿದ್ಯುದ್ದೀಪಗಳಿರಲಿಲ್ಲ. 'ಈ ಎಣ್ಣೆ ಲ್ಯಾಂಪಿನ ಮಂದ ಬೆಳಕಿನಲ್ಲಿ ನಾನು ಹೇಗಪ್ಪ ಇನ್ನು ಮುಂದೆ ನನ್ನ ಪಾಠಗಳನ್ನು ಓದಿಕೊಳ್ಳಲಿ?' ಎಂಬ ಚಿಂತೆಯಲ್ಲಿ ಹಿಂದಿನ ರಾತ್ರಿ ಸುಮಾರು ಹೊತ್ತು ನಿದ್ದೆಗೆಟ್ಟಿದ್ದ. ಇಂದು ಬೆಳಿಗ್ಗೆ ಎದ್ದೊಡನೆ ಶೌಚ ಮಾಡಲು ಬಯಲು ಪ್ರದೇಶದಲ್ಲಿ. ಬಂಡೆಗಳ ಹಿಂದೆ ಹೋಗಿ ಕೂಡ



ಬೇಕಾದಾಗ ದಾರಿಹೋಕರು ಯಾರಾದರೂ ತನ್ನನ್ನು ಈ ಸ್ಥಿತಿಯಲ್ಲಿ ನೋಡಿಬಿಟ್ಟರೆ ? ಎಂಬ ಯೋಚನೆಯಿಂದ ಅವನಿಗೆ ತೀರ ಸಂಕೋಚವೂ ಮಜುಗರವೂ ಆಗಿತ್ತು. ಅರ್ಥಂಬರ್ಥ ಮಾಡಿ ಎದ್ದು ಬಂದಿದ್ದ. ಈಗ ಸ್ಕೂಲು ಎನ್ನಿಸಿಕೊಂಡ ಈ ಸ್ಥಳವೂ ಅಷ್ಟೆ, ಅವನ ಕಣ್ಣಿಗೆ ಸ್ವಲ್ಪ ವಿಚಿತ್ರವಾಗಿಯೇ ಕಂಡುಬಂತು. ಅವನು ಮೊನ್ನೆಯವರೆಗೂ ಹೋಗುತ್ತಿದ್ದ ಬೆಂಗಳೂರಿನ ಕಾನ್ವೆಂಟ್ ಸ್ಕೂಲಿನ ವ್ಯವಸ್ಥೆ ಒಂದು ರೀತಿ ಇದ್ದರೆ ಇಲ್ಲಿನದೇ ಒಂದು ರೀತಿ ಇದ್ದಿತ್ತು. ಇಲ್ಲಿ ಸುಮಾರು ಮೂವತ್ತು ಮೂವತ್ತೈದು ವಿದ್ಯಾರ್ಥಿಗಳು ಇದ್ದಂತೆ ಕಂಡು ಬಂದರೂ ಈ ಕೋಣೆಯಲ್ಲಿದ್ದುದು ಕೇವಲ ಮೂರೇ ಬೆಂಚುಗಳು. ಧಾಂಡಿಗರಂತ್ತಿದ್ದ ಕೆಲವು ಹುಡುಗರನ್ನು ಬಿಟ್ಟು ಬೇರೆ ಎಲ್ಲ ಹುಡುಗ ಹುಡುಗಿಯರೂ ನೆಲದ ಮೇಲೆ ಕುಳಿತಿದ್ದರು. ಈ ವ್ಯವಸ್ಥೆಯಲ್ಲಿ ಒಂದು ಸರಿಯಾದ ಕ್ರಮ ಇದ್ದಂತೆ ತೋರಲಿಲ್ಲ. ಏಕೆಂದರೆ, ಮೂವರು ಕಪ್ಪು ಹುಡುಗರು ಹಜಾರದ ಒಂದು ಮೂಲೆಯಲ್ಲಿ ಬೇರೆ ವಿದ್ಯಾರ್ಥಿಗಳಿಂದ ದೂರ ಕುಳಿತ್ತಿದ್ದರು. ಈ ಮೂವವರು ಮಾತ್ರ ಇತರ ಎಲ್ಲ ಹುಡುಗರ ಜತೆ ಕೂಡ ಆಡದೆ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ಏಕೆ ಕುಳಿತಿದ್ದಾರೋ ಈ ಹುಡುಗನಿಗೆ ಅರ್ಥವಾಗಲಿಲ್ಲ. ತಾತನನ್ನು ಕೇಳಬೇಕು, ಎಂದುಕೊಂಡ. ಇಲ್ಲಿನ ವಿದ್ಯಾರ್ಥಿಗಳೂ ಅಷ್ಟೆ. ಬೆಂಗಳೂರಿನ ಕಾನ್‌ವೆಂಟ್ ಸ್ಕೂಲಿನ ವಿದ್ಯಾರ್ಥಿಗಳಿಗಿಂತ ತೀರ ಭಿನ್ನವಾಗಿದ್ದಂತೆ ತೋರಿದರು. ಒಬ್ಬನೂ ತನ್ನಂತೆ ಶುಭ್ರವಾದ ಇಸ್ತ್ರಿ ಮಾಡಿದ ಯೂನಿಫಾರಂ ತೊಟ್ಟಿರಲಿಲ್ಲ; ಹೊಳೆಯುವ ಪಾಲಿಶ್ ಉಳ ಕಪ್ಪು ಬಣ್ಣದ ಬೂಟುಗಳನ್ನು ಕಾಲಿಗೆ ಹಾಕಿರಲಿಲ್ಲ. ಕೆಲವರು. ಕೊಳಕಾದ ಹರಕಲು ಅರಿವೆಗಳನ್ನು ತೊಟ್ಟಿದ್ದರು. ಇನ್ನು ಕೆಲವರ ಮುಖಗಳಲ್ಲಿ ಬೆಳಿಗ್ಗೆ ಸ್ನಾನ ಮಾಡಿದ ಲಕ್ಷಣಗಳೇ ಕಂಡುಬರಲಿಲ್ಲ. ಒಬ್ಬನಂತೂ ಸಿಂಬಳ ಬುರುಕ. ತನ್ನ ಮೂಗಿನಿಂದ ಸೋರುತ್ತಿದ್ದ ಸಿಂಬ



ಳದ ಧಾರೆಯನ್ನು ಆಗಾಗ್ಗೆ ನಾಲಿಗೆಯಿಂದ ತೊಡೆದು ಅದರ ರುಚಿ ನೋಡುತ್ತಿದ್ದ ಅವನನ್ನು ನೋಡಿ ಮುಖ ಕಿವಿಚುವಂತಾಯಿತು ಈ ಹುಡುಗನಿಗೆ. ಇನ್ನು ಈ ಮಾಸ್ತರೋ ಕಿವುಡಾಗಿಸುವ ಈ ಗದ್ದಲದ ನಡುವೆಯೂ ಸ್ಥಿತಪ್ರಜ್ಞರಂತೆ ಹಾಯಾಗಿ ನಿದ್ದೆ ಹೊಡೆಯುತ್ತಿದ್ದಾರೆ. ಇದನ್ನೆಲ್ಲಾ ನೋಡಿ ಈ ಹುಡುಗನಿಗೆ ಒಂದು ಸ್ಕೂಲು ಹೀಗೂ ಇರಲು ಸಾಧ್ಯವೇ ಎನ್ನಿಸಿ ಅದರ ಬಗ್ಗೆ ಅವನಲ್ಲಿ ಒಳ್ಳೆಯ ಅಭಿಪ್ರಾಯ ಖಂಡಿತ ಮೂಡಲಿಲ್ಲ.

ಇವರಿಬ್ಬರೂ ತರಗತಿಯಲ್ಲಿ ಕಾಲಿಟ್ಟು ಈಗಾಗಲೇ ಎರಡು ಮೂರು ನಿಮಿಷ ಕಳೆದಿತ್ತು. ಎಲ್ಲ ವಿದ್ಯಾರ್ಥಿಗಳೂ ತಮ್ಮ ವ್ಯಾಸಂಗವನ್ನು ನಿಲ್ಲಿಸಿ ಪಟ್ಟಣದಿಂದ ಬಂದಿದ್ದ ಬೆಳ್ಳನೆಯ ಸೊಗಸುಗಾರ ಹುಡುಗನನ್ನು ಮಿಕಮಿಕನೆ ನೋಡುತ್ತಾ ಕುಳಿತಿದ್ದರು. ಸುತ್ತಲೂ ನಿಶ್ಶಬ್ದ. ಇಷ್ಟಾದರೂ ತಿರುಮಲಾಚಾರ್ಯರು ಮಾತ್ರ ಇನ್ನು ತೂಕಡಿಸುತ್ತಲೇ ಇದ್ದರು. ಶಾಲೆಯ ಮಾನಿಟರ್ ಶಂಕರ ಎದ್ದು ನಿಂತು, "ಸಾರ್, ಸಾರ್, ಶಾಮಯ್ಯ ತಾತ ಬಂದಿದ್ದಾರೆ ಸಾರ್" ಎಂದು ಗಟ್ಟಿಯಾಗಿ ಹೇಳಿದಾಗಲೇ ಅವರು ಎಚ್ಚರಗೊಂಡಿದ್ದು ಕಣ್ಣು ಬಿಟ್ಟವರೇ ಎದುರಿಗೆ ನಿಂತಿದ್ದ ಅಜಾನುಬಾಹು ಶಾಮಯ್ಯನವರನ್ನು ನೋಡಿ ಒಂದು ಕ್ಷಣ ತಬ್ಬಿಬ್ಬಾದರು. ಆದರೂ ಸಾವರಿಸಿಕೊಂಡು ಧಡ

ಕ್ಕನೆ ಎದ್ದು ನಿಂತು. ಏನೋ ತಪ್ಪು ಮಾಡಿ ಮಾಸ್ತರ ಕೈಗೆ ಸಿಕ್ಕಿಕೊಂಡ ವಿದ್ಯಾರ್ಥಿಯಂತೆ ಹಲ್ಲು ಕಿಸಿದು, "ರಾತ್ರಿಯೆಲ್ಲಾ ನಿದ್ದೆಗೆಟ್ಟಿದ್ದು..." ಎಂದೆಲ್ಲಾ ಏನೇನೋ ಅಸ್ಪಷ್ಟವಾಗಿ ಗೊಣಗಿ, "ನಿಂತೇ ಇದೀರಲ್ಲ ಕೂತ್ಕೊಳ್ಳಿ, ಕೂತ್ಕೊಳ್ಳಿ" ಎಂದು ಪಟೇಲರನ್ನು ಸ್ವಾಗತಿಸಿದರು. ರಾಮಯ್ಯನವರು ಒಂದು ಮುಸಿನಗೆ ಬೀರಿ (ಆಗಲಿ ಪರವಾಗಿಲ್ಲ ಎನ್ನುವಂತೆ) ಮಾಸ್ತರ ಕುರ್ಚಿಯ ಬದಿಗೆ ಇದ್ದ ಈ ಶಾಲೆಯ ಭೇಟಿ ಕೊಡುವವರು ಮಾಮೂಲಾಗಿ ಕೂಡುವ ಅಗಲವಾದ ಜಾಯಿಕಾಯಿ ಪೆಟ್ಟಿಗೆಯ ಮೇಲೆ ಆಸೀನರಾದರು.

ಮುಂದೆ ಕೆಲವೇ ಕ್ಷಣಗಳಲ್ಲಿ ಈ ಹಿರಿಯರಿಬ್ಬರ ನಡುವೆ, ಈಗ ಮೂರು ದಿನಗಳ ಹಿಂದೆ ಪಕ್ಕದ ಹಳ್ಳಿಯೊಂದರಲ್ಲಿ ನೆರವೇರಿದ್ದ ಮದುವೆಯಲ್ಲಿ ಹೆಣ್ಣಿನ ಕಡೆಯವರು ಅತಿಥಿಗಳನ್ನು ನಡೆಸಿಕೊಂಡ ರೀತಿಯ ಬಗ್ಗೆ ಒಂದು ಹುರುಪಿನ ಚರ್ಚೆ ಶುರುವಾಯಿತು. ಒಬ್ಬರನ್ನೊಬ್ಬರು ಮೀರಿಸುವಂತೆ ಇಬ್ಬರೂ ವಧುವಿನ ಕಡೆಯವರನ್ನು ಬಾಯಿತುಂಬಾ ತೆಗಳಿದರು. ಇವರ ಮಾತಿನಿಂದ ರಾಜನಿಗೆ ಬೇಸರವಾಯಿತು. ಅಷ್ಟೇ ಅಲ್ಲ; ಬಂದ ಕೆಲಸವನ್ನು ಮರೆತು. ಏನೋ ಕಾಡುಹರಟೆಯಲ್ಲಿ ತೊಡಗಿದ್ದ ತಾತನ ಮೇಲೆ ತುಸು ಅಸಮಾಧಾನವೂ ಆಯಿತು. ಆದರೆ ಅವನು ಹೇಗೆ ತಾನೆ ತನ್ನ ಕಿರಿಕಿರಿಯನ್ನು ತೋರಿಸಿಕೊಳ್ಳಬಲ್ಲ? ಸಮಯ ತಳ್ಳಲು ಬೇರೆ ಏನೂ ತೋಚದೆ ಅವನು ತನ್ನ ದೃಷ್ಟಿಯನ್ನು ಮಾಸ್ತರರ ಮೇಲೆ ಕೇಂದ್ರೀಕರಿಸಿ ಅವರ ವೇಷಭೂಷಣಗಳನ್ನು ಗಮನಿಸತೊಡಗಿದ.

ಐವತ್ತರ ಪ್ರಾಯ ದಾಟಿದ ತಿರುಮಲಾಚಾರ್ಯರದು ಮೊದಲ ನೋಟದಲ್ಲೆ ಮಕ್ಕಳ ಕಣ್ಸೆಳೆಯುವಂತಹ ರೂಪವೇನಲ್ಲ. ಸಾಧಾರಣ ಎತ್ತರ ಬೆಳ್ಳನೆಯ ಮೈಕಟ್ಟು. ದುಂಡು ಮುಖ. ಬೋಳು ಹಣೆಯ ಮೇಲೆ ಅಡ್ಡಕ್ಕೆ ಬಳಿದ ಹೊಳೆಯುವ ಕೆಂಪು ನಾಮ; ಅರ್ಧ ಕ್ಷೌರವಾಗಿರುವ ತಲೆ; ತಲೆಯ ಹಿಂಬದಿಯಲ್ಲಿ ದೊಡ್ಡ ಮುಡಿಗಂಟು; ಮುಖದ ಮೇಲೆ ಕುರುಚಲು ಗಡ್ಡ. ಕಚ್ಚೆ ಹಾಕಿದ ಕೊಳೆ ಪಂಚೆ. ಮಾಸಲು ಬಣ್ಣದ ಕೋಟು. ನಿನ್ನೆಯವರೆಗೆ ಸೂಟುಬೂಟುಗಳನ್ನು ಧರಿಸಿ ಸ್ಮಾರ್ಟ್ ಆಗಿ ಕಾಣಿಸಿಕೊಳ್ಳುವ ಮಾಸ್ತರುಗಳ ಪರಿಚಯ ಮಾತ್ರವೇ ಇದ್ದ ರಾಜನಿಗೆ ಈ ಹಳ್ಳಿಯ ಮಾಸ್ತರ ತಿರುಮಲಾಚಾರ್ಯರು 'ಕೊಳಕು ಮನುಷ್ಯ'ನಾಗಿ ಕಂಡುಬಿಟ್ಟರು.

ಹರಟೆ ಕೊಚ್ಚುತ್ತಿದ್ದ ಮಾಸ್ತರು ಮಾತಿನ ಮಧ್ಯೆ ಒಮ್ಮೆ ಇದ್ದಕ್ಕಿದ್ದಂತೆ "ಸ್ವಲ್ಪ ನಸ್ಯ ಇದ್ದರೆ ಕೊಡ್ತೀರಾ? ನನ್ನ ಡಬ್ಬಿ ಖಾಲಿಯಾಗಿದೆ." ಎಂದು ರಾಮಯ್ಯನವರ ಮುಂದೆ ಕೈ ಚಾಚಿದರು. ಪಟೇಲರು ತಮ್ಮ ನಸ್ಯದ ಡಬ್ಬಿಯನ್ನು ಅವರ ಮುಂದೆ ಹಿಡಿದಾಗ ಮಾಸ್ತರು ಅದರಿಂದ ಒಂದು ಚಿಟಿಕೆ ನಸ್ಯವನ್ನು ತೆಗೆದು ಅತ್ಯಂತ ಸೊಗಸಾದ ರೀತಿಯಲ್ಲಿ ಅದನ್ನು ಮೂಗಿಗೇರಿಸಿ "ಹ್ಹಾಂ," "ಹ್ಹಾಂ" ಎಂಬ ಉದ್ಗಾರಗಳೊಡನೆ ಅದರ ಸವಿಯನ್ನು ಹೀರಿ "ಬಲು ಭೇಷ್ ಆಗಿದೆ! ಎಲ್ಲಿ ತಗೊಂಡ್ರಿ? ಬೆಂಗಳೂರಿಂದ ನಿಮ್ಮ ಅಳಿಯ ಕಳಿಸಿದ್ದಿರಬೇಕು," ಅಂದರು. ಒಂದೆರಡು ಕ್ಷಣ ಕಳೆದು, "ನಸ್ಯ ಅಂದರೆ ನನ್ನ ಮೆದುಳಿಗೆ ಟಾನಿಕ್ ಥರ ನೋಡಿ. ಬೆಳಿಗ್ಗೆ ಒಂದು ಚಿಟಿಕೆ ಏರಿಸಿದ ಹೊರತು ನನ್ನ ತಲೆ ಕೆಲಸವೇ ಮಾಡಲ್ಲ ಹ್ಹಿ. ಹ್ಹಿ" ಎಂದು ಈ ಕಿವಿಯಿಂದ ಆ ಕಿವಿಯವರೆಗೆ ದೊಡ್ಡದಾಗಿ ಹಲ್ಲು ಕಿರಿದರು.

ಮಾಸ್ತರರು ಹೇಳಿದಂತೆಯೇ ಒಂದು ಚಿಟಿಕೆ ನಸ್ಯ ಅವರ ಮೇಲೆ ತನ್ನ ಪ್ರಭಾವವನ್ನು ಬೀರಿತು. ಅರ್ಥಾತ್ ಅವರಲ್ಲಿ ಕರ್ತವ್ಯಪ್ರಜ್ಞೆ ಉಂಟುಮಾಡಿತು. ಪರಿಣಾಮವಾಗಿ ತಿರುಮಲಾಚಾರ್ಯರ ಮುಖ ಇದ್ದಕ್ಕಿದ್ದಂತೆ ಗಂಭೀರವಾಯಿತು. ತಮ್ಮ ಕಾಡುಹರಟೆಯನ್ನು ಒಮ್ಮೆಲೆ ಬಂದು ಮಾಡಿ ಒಂದು ದೊಡ್ಡ ಶಾಲೆಯ ಮುಖ್ಯೋಪಾಧ್ಯಾಯನ ಗತ್ತಿನಲ್ಲಿ. "ಇವನೇನಾ ನಿಮ್ಮ ಮೊಮ್ಮಗ? ಏನಪ್ಪಾ ನಿನ್ನ ಹೆಸರು ?" ಎಂದು ರಾಜನನ್ನು ಉದ್ದೇಶಿಸಿ ಕೇಳಿದರು. ಹುಡುಗ ವಿನಯಶೀಲನಾಗಿ ತನ್ನ ಹೆಸರು ಹೇಳಿದ. ನಂತರ ಮಾಸ್ತರು ರಾಮಯ್ಯನವರ ಕಡೆ ತಿರುಗಿ, "ಹುಡುಗನ ಅಡ್ಮಿಷನ್. ಟಿ. ಸಿ. ಮಾರ್ಕ್ಸ್ ಕಾರ್ಡ್ ವಗೈರೆ ತಂದಿದ್ದೀರಿ ತಾನೆ? ಎಲ್ಲಿ ಕೊಡಿ. ನೋಡೋಣ" ಅಂದರು. ಸರ್ಟಿಫಿಕೇಟ್‌ಗಳನ್ನು ಅವರ ಕೈಗೆ ಕೊಟ್ಟೊಡನೆ ಒಂದೊಂದನ್ನೂ ತನ್ನ ಕಣ್ಣುಗಳಿಗೆ ತೀರ ಹತ್ತಿರ, ಅಂಟಿಕೊಂಡಂತೆ (ನೋಡುವವರಿಗೆ

ಅವರ ಕಣ್ಣುಗಳಿಗೂ, ಅವರ ಕೈಲಿದ್ದ ಕಾಗದಗಳಿಗೂ ನಡುವೆ ಏನಾದರೂ ಖಾಲಿ ಜಾಗ ಬಿಟ್ಟಿದೆಯೋ ಇಲ್ಲವೋ ಎಂಬ ಸಂಶಯ ಬರುವಷ್ಟು ಹತ್ತಿರ) ಹಿಡಿದು ಸೂಕ್ಷ್ಮವಾಗಿ ಪರಿಶೀಲಿಸತೊಡಗಿದರು. ಕಿಸ್ ಎಂದು ಉಕ್ಕಿ ಬಂದ ನಗೆಯನ್ನು ಹೇಗೋ ಕಷ್ಟಪಟ್ಟು ತಡೆದುಕೊಂಡ ರಾಜ.

ಸುಮಾರು ಐದು ನಿಮಿಷ ಕಾಲ ಎಲ್ಲ ಕಾಗದಗಳನ್ನೂ ತದೇಕಚಿತ್ತರಾಗಿ ಮೆಲುಧ್ವನಿಯಲ್ಲಿ ಪಠಿಸಿದ ನಂತರ ತಿರುಮಲಾಚಾರ‍್ಯರು ಮೆಚ್ಚಿಗೆಯಿಂದ ತಲೆದೂಗಿ, "ಹೂಂ, ಪರವಾಗಿಲ್ಲ. ಹುಡುಗ ಒಳ್ಳೆಯ ಬುದ್ಧಿಶಾಲಿಯಾಗಿದ್ದಾನೆ. ಒಳ್ಳೆ ಮಾರ್ಕ್ ತೆಗೆದಿದ್ದಾನೆ." ಅಂದರು. "ಅವನ ಕ್ಲಾಸಿನಲ್ಲಿ ಯಾವತ್ತೂ ಅವನೇ ಫಸ್ಟ್ ಸ್ವಾಮಿ" ಎಂದು ಹೇಳಿ ಶಾಮಯ್ಯ ಹೆಮ್ಮೆಯಿಂದ ಮೊಮ್ಮಗನ ಕಡೆ ನೋಡಿದರು. ಮುಂದೆ ಕೆಲವೇ ನಿಮಿಷಗಳಲ್ಲಿ ರಾಜ ದೇವಪುರದ ಶಾಲೆಯ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿಬಿಟ್ಟ. ತರಗತಿಯ ಹಾಜರಿ ಪುಸ್ತಕದಲ್ಲಿ ಅವನ ಹೆಸರನ್ನು ಸೇರಿಸಲಾಯಿತು.

ಈಗ ಹೊಸದಾಗಿ ಸೇರಿದ ಈ ಹುಡುಗನಿಗೆ ಕೊಡಲು ಒಂದು ಸ್ಥಳ ಕೊಡಬೇಕಾಗಿತ್ತು. ರಾಜ ಹಳ್ಳಿಯ ಹೈದನೆ ಆಗಿದ್ದಲ್ಲಿ ಮಾಸ್ತರು ಅವನನ್ನು ಯಾವ ಮುಲಾಜೂ ಇಲ್ಲದೆ ನೆಲದ ಮೇಲೆ ನಾಲ್ಕನೆ ತರಗತಿಯವರ ಜತೆ ಕೂಡೆಂದು ಸಲೀಸಾಗಿ ಹೇಳಿಬಿಡುತ್ತಿದ್ದರು. ಆದರೆ ಪಟ್ಟಣದಿಂದ ಬಂದಿರುವ ಬೂಟು. ಯೂನಿಫಾರಂಧಾರಿಯಾದ ಈ ಹುಡುಗನಿಗೂ ಅದೇ ಮರ್ಯಾದೆ ಕೊಡುವುದು ಉಚಿತವೆ ? ಹಾಗೆ ಮಾಡುವುದು ತಮ್ಮ ಘನತೆ ಗೌರವಗಳಿಗೇ ಕುಂದಲ್ಲವೇ? ಇವನೂ ಒಂದೇ ಹಳ್ಳಿಗಾಡಿನ ಹುಡುಗರೂ ಒಂದೆಯೇ? ಎಂದು ಯೋಚಿಸುತ್ತಾ ಮಾಸ್ತರು ನಾಲ್ಕನೆಯ ತರಗತಿಗೆ ಮೀಸಲಾಗಿದ್ದ ಬೆಂಚಿನ ಮೇಲೆ ಒಮ್ಮೆ ಕಣ್ಣಾಡಿಸಿದರು. ಬೆಂಚು ಭರ್ತಿಯಾಗಿತ್ತು. ಧಾಂಡಿಗ ಹುಡುಗರು ಆಕ್ರಮಿಸಿಕೊಂಡುಬಿಟ್ಟಿದ್ದರು. ಆ ಹುಡುಗರನ್ನೇ ಉದ್ದೇಶಿಸಿ ಮಾಸ್ತರು. "ಲೋ. ನಿಮ್ಮಲ್ಲಿ ಯಾವನಾದರೊಬ್ಬ ಎದ್ದು ರಾಜನಿಗೆ ಒಂದು ಸ್ವಲ್ಪ ಜಾಗ ಮಾಡಿಕೊಡ್ರೋ". ಅಂದರು. ಹುಡುಗರು ಒಬ್ಬರ ಮುಖ ಒಬ್ಬರು ನೋಡಿಕೊಂಡರೇ ಹೊರತು ಒಬ್ಬನೂ ತನ್ನ ಜಾಗ ಬಿಟ್ಟು ಕದಲಲಿಲ್ಲ. ಹೊಡೆದಾಡಿ ಬಡಿದಾಡಿ ಜಗಳ ಕಾಯ್ದು ಗಿಟ್ಟಿಸಿಕೊಂಡಿದ್ದ ಜಾಗವನ್ನು ಬಿಟ್ಟು ಕೊಡಲು ಯಾವನಿಗೆ ತಾನೇ ಇಷ್ಟ? ಯಾವನೂ ಮುಂದೆ ಬರದಿದ್ದುದನ್ನು ನೋಡಿ ಮಾಸ್ತರು, ಆ ಬೆಂಚಿನ ಒಂದು ಕೊನೆಯಲ್ಲಿ ಕುಳಿತಿದ್ದ ಸಿಡುಬು ಕಲೆಯ ಮುಖದ ಹುಡುಗನನ್ನು ಆಯ್ದು, "ಲೋ ಸುಬ್ಬು, ನೀನು ಎದ್ದು ನೆಲದ ಮೇಲೆ ಕೂತ್ಕೊಳ್ಳೊ" ಅಂದರು. ಸುಬ್ಬು ವಿಧೇಯನಂತೆ ಎದ್ದು ನಿಂತ,ಆದರೆ ತನ್ನ ಜಾಗವನ್ನು ಬಿಡಲು ತಯಾರಿದ್ದಂತೆ ತೋರಲಿಲ್ಲ. ಏನೋ ಅಸ್ಪಷ್ಟವಾಗಿ ಗೊಣಗಿದ.

"ಹೇಳಿದ್ದು ಕೇಳಿಸಲಿಲ್ವೇನೋ" ಮಾಸ್ತರರು ಅರಚಿದರು. ಸುಬ್ಬು ಸೊಟ್ಟ ಮೂತಿ ಮಾಡಿ, "ಇದು ನನ್ನ ಜಾಗ ಸಾರ್, ನಾನು ಮೊದಲಿನಿಂದ ..." ಎಂದೇನೋ ಪುನಃ ಅಂಜುತ್ತ ಗೊಣಗಿದ.

"ಹೇಳಿದಷ್ಟು ಮಾಡು ಕತ್ತೆ. ಎದುರು ಮಾತಾಡಬೇಡ," ಮಾಸ್ತರರು ಅಬ್ಬರಿಸಿದರು. ಸುಬ್ಬು ವಿಧಿಯಿಲ್ಲದೆ ತನ್ನ ಜಾಗ ಬಿಟ್ಟುಕೊಡಬೇಕಾಯಿತು. "ನೀನು ಹೋಗಿ ಅಲ್ಲಿ ಕೂತ್ಕೊಳ್ಳೊ" ಎಂದು ರಾಜನಿಗೆ ಅಪ್ಪಣೆ ಮಾಡಿದರು ಮಾಸ್ತರು. ರಾಜ ಬೆಂಚಿನೆಡೆಗೆ ಹೆಜ್ಜೆ ಹಾಕುತ್ತಿರಲು ಈಗ ನೆಲದ ಮೇಲೆ ಕೂತಿದ್ದ ಸುಬ್ಬುವನ್ನು ಒಮ್ಮೆ ನೋಡಿದ. ಸುಬ್ಬುವಿನ ಸಿಡುಬು ಕಲೆಯ ಮುಖ ಅವಮಾನ ಅಸೂಯೆಗಳಿಂದ ವಿಕಾರಗೊಂಡಿತ್ತು. ಅವನ ಕಣ್ಣುಗಳು ದ್ವೇಷ ಕಾರುತ್ತಿದ್ದುದು ರಾಜನಿಗೆ ಏಕೋ ಕಸಿವಿಸಿಯಾಯಿತು. 'ಬೆಂಚಿನ ಸೀಟು ಬೇಡ ಅನ್ನಬೇಕಾಗಿತ್ತು.' ಎಂದುಕೊಂಡ.

ತಾತ ಹೊರಟುಹೋದರು. ಮಾಸ್ತರು ಮೂರನೇ ಕ್ಲಾಸಿನವರಿಗೆ ಮೂರು ಲೆಕ್ಕಗಳನ್ನು ಬಿಡಿಸಲು ಕೊಟ್ಟು, ನಾಲ್ಕನೇ ಕ್ಲಾಸಿನವರಿಗೆ ಪದ್ಯ ಹೇಳಿಕೊಡಲು ಶುರುಮಾಡಿದರು. "ಇಂದಿನ ಪದ್ಯ 'ತಿರುಕನ ಕನಸು'. ತಿರುಕನೊಬ್ಬನ ಊರ ಮುಂದೆ ಮುರುಕು ಧರ್ಮಶಾಲೆಯಲ್ಲಿ" ಎಂದು ಎತ್ತರದ ಧ್ವನಿಯಲ್ಲಿ ಓದುತ್ತಾ ಹೋದರು. ಅವರ ಕಂಠ ಇಂಪಾಗಿತ್ತು. ರಾಜನಿಗೆ ತುಂಬಾ ಹಿಡಿಸಿತು. ಪದ್ಯವನ್ನು ಒಮ್ಮೆ ಮೊದಲಿನಿಂದ ಕೊನೆಯವರೆಗೂ ಹಾಡಿದ ನಂತರ ಪುಸ್ತಕವನ್ನು ಮುಚ್ಚಿಟ್ಟು "ಈಗ ತಿರುಕನ ಕತೆ ಹೇಳುತ್ತೇನೆ ಕೇಳಿ". ಎಂದರು. ಮಕ್ಕಳೆಲ್ಲಾ ಮೈ ಕೈ ನಿಮಿರಿಸಿ ಆಲಿಸತೊಡಗಿದರು.

ಹರಿಕಥಾಸಂಗದಲ್ಲಿ ಪ್ರವೀಣರಾದ ತಿರುಮಲಾಚಾರ್ಯರು ಕತೆ ಹೇಳುವುದರಲ್ಲಿ ನಿಸ್ಸೀಮರು. ಅವರು ಕತೆ ಹೇಳುತ್ತಿದ್ದರೆ ವಿದ್ಯಾರ್ಥಿಗಳು ಮಂತ್ರಮುಗ್ಧರಾಗಿ ಮಿಸುಕಾಡದೆ ಬಾಯಿ ಬಿಟ್ಕೊಂಡು ಕೇಳುತ್ತಾರೆ. ಇಂದು ರಾಜನೂ ಅಷ್ಟೆ. ಇತರ ಮಕ್ಕಳಂತೆ ತಾನೂ ತಿರುಕನ ಕತೆಯಲ್ಲಿ ತಲ್ಲೀನನಾಗಿಬಿಟ್ಟ. ಇಷ್ಟು ರಸವತ್ತಾಗಿ ಕತೆ ಹೇಳುವ ಮಾಸ್ತರನ್ನು ಇದಕ್ಕೆ ಮೊದಲು ಅವನು ಕಂಡಿದ್ದೇ ಇಲ್ಲ. ಬೆಂಗಳೂರಿನ ಕಾನ್‌ವೆಂಟ್ ಸ್ಕೂಲಿನ ಮಾಸ್ತರುಗಳೆಲ್ಲಾ ಈ ಮಾಸ್ತರ ಮುಂದೆ ತೀರಾ ಸಪ್ಪೆ ಎನಿಸಿತು. ಇಷ್ಟು ಹೊತ್ತು ಒಂದು ತಮಾಷೆಯಾಗಿ ಕಂಡ ಮಾಸ್ತರರು ಈಗ ಒಮ್ಮಿಂದೊಮ್ಮೆಲೆ ಅವನಿಗೆ ತುಂಬಾ ಹಿಡಿಸಿಬಿಟ್ಟರು.

'ತಿರುಕನ ಕನಸ'ನ್ನು ಮುಗಿಸಿ ಮೂರನೇ ಕ್ಲಾಸಿನವರಿಗೆ ಕೊಟ್ಟಿದ್ದ ಲೆಕ್ಕಗಳನ್ನು ಬೋರ್ಡಿನ ಮೇಲೆ ಬಿಡಿಸುತ್ತಿದ್ದಂತೆ ಯಾರೋ ವಯಸ್ಸಾದವರೊಬ್ಬರು ಒಳಗೆ ಕಾಲಿಡಲು ಮಾಸ್ತರ ಪಾಠಕ್ಕೆ ಭಂಗ ಉಂಟಾಯಿತು. ಈ ಸಾರಿ ಬಂದವರು ಪೆಟ್ಟಿಗೆಯ ಮೇಲೆ ಕೂತೊಡನೆ, ಹುಡುಗಿ ಜಾತಕ, ಹುಡುಗನ ಜಾಟಕ ಸಂಬಂಧ ಎಂದು ಏನೇನೋ ಹೇಳತೊಡಗಿದರು. ರಾಜನಿಗೆ ಅವರ ಮಾತು ಒಂದೂ ಅರ್ಥವಾಗಲಿಲ್ಲ. ಬದಲು 'ಥೂ ಇದೇ ಸಪ್ಪ ಈ ಮೇಸ್ಟ್ರು ಶಾಲೆಯ ಹೊತ್ತಿನಲ್ಲಿ ಬೇರೆ ಏನೇನೋ ವ್ಯವಹಾರಗಳನ್ನು ಇಟ್ಟುಕೊಂಡು ಕಾಲ ಹರಣ ಮಾಡುತ್ತಿದ್ದಾರಲ್ಲ!' ಅನಿಸಿತು. ಕೆಲವು ನಿಮಿಷಗಳ ನಂತರ ಹಿರಿಯರಿಬ್ಬರೂ ಇದ್ದಕ್ಕಿದ್ದಂತೆ ಎದ್ದು ನಿಂತರು, ಮಾಸ್ತರು, "ಗಲಾಟೆ ಮಾಡದೆ ಓದಿಕೊಳ್ತಾ ಇರಿ; ಈಗ್ಲೆ ಬಂದುಬಿಡ್ತೀನಿ," ಎಂದು ಗಟ್ಟಿಯಾಗಿ ತಮ್ಮ ವಿದ್ಯಾರ್ಥಿಗಳಿಗೆ ಆಜ್ಞಾಪಿಸಿ, ವೃದ್ಧರೊಡನೆ ಹೊರಗೆ ನಡೆದುಬಿಟ್ಟರು.

ಅತ್ತ ಮಾಸ್ತರು ಅದೃಶ್ಯರಾದುದೇ ತಡ, ಇತ್ತ ಮಕ್ಕಳ ಗುಜು ಗುಜು ಶುರುವಾಯಿತು. ಗುಜುಗುಜುವಾಗಿ ಶುರುವಾದದ್ದು ಕೆಲವೇ ಕ್ಷಣಗಳಲ್ಲಿ ರಂಪಾಟದ ರೂಪ ತಾಳಿಬಿಟ್ಟಿತು.

ಪುಂಡ ಹುಡುಗರಿಗೆ ತಮ್ಮ ಪೌರುಷವನ್ನು ಪ್ರದರ್ಶಿಸಲು ಇದು ಒಂದು ಒಳ್ಳೆಯ ಅವಕಾಶ. ಇಂತಹ ಒಂದು ಅವಕಾಶಕ್ಕಾಗಿ ಅಸಹನೆಯಿಂದ ಕಾಯುತ್ತಿದ್ದ ಸುಬ್ಬು ಈಗ ಮೆಲ್ಲನೆ ತನ್ನ ಜಾಗದಿಂದ ಎದ್ದು ರಾಜನ ಎದುರು ಬಂದು ನಿಂತ. ಅವನನ್ನು ದುರುಗುಟ್ಟಿ ನೋಡುತ್ತಾ, ಒಂದು ಚಿಟಿಕೆ ಹಾರಿಸಿ, ತನ್ನ ಮಾಮೂಲು ಗಡುಸುಧ್ವನಿಯಲ್ಲಿ, "ಲೋ, ಈ ಜಾಗ ಬಿಟ್ಟೇಳೋ" ಎಂದು ಆಜ್ಞಾಪಿಸಿದ. ತನಗಿಂತಲೂ ಎತ್ತರಕ್ಕೆ ದಪ್ಪಕ್ಕೆ ಇದ್ದು ತನ್ನನ್ನು ತಿಂದು ಬಿಡುವಂತೆ ನೋಡುತ್ತಿದ್ದ ಈ ಧಾಂಡಿಗನನ್ನು ಕಂಡು ರಾಜನಿಗೆ ಒಂದು ಕ್ಷಣ ಬೆದರಿಕೆಯಾಯಿತು. ಆದರೂ ಧೈರ್ಯಗೆಡದೆ. "ನಾನು ಯಾಕೆ ಏಳಬೇಕು? ಇದು ನನ್ನ ಜಾಗ. ಮೇಸ್ಟ್ರು ನನಗೆ ಇಲ್ಲಿ ಕೂತ್ಕೊ ಅಂತ ಹೇಳಿದ್ದಾರೆ," ಅಂದ "ಕೇಳಿದಿರೇನ್ರೊ!" ತನ್ನ ಸುತ್ತಲೂ ನೆರೆದು ತಮಾಷೆ ನೋಡುತ್ತಾ ನಿಂತಿದ್ದ ಹುಡುಗರ ಕಡೆ ತಿರುಗಿ ಸುಬ್ಬು ಹೇಳಿದ, "ಮೇಷ್ಟ್ರು ಕೂತ್ಕೊ ಅಂದ್ರಂತೆ, ಇವನು ಕೂತ್ನಂತೆ. ಹ್ಹ ಹ್ಹ. ಪಾಪ ಇನ್ನೂ ಏನೂ ಗೊತ್ತಿಲ್ಲ ಅಲ್ವಾ ಇವನಿಗೆ. ಮೇಷ್ಟ್ರು ಹೇಳುವ ಹಾಗೇ ನಡೆಯುವ ಹುಡುಗ ಅಲ್ವಾ ಇವನು! (ಪುನಃ ರಾಜನ ಕಡೆ ತಿರುಗಿ) ನಾನು ಆರು ತಿಂಗಳಿಂದ ದಿನಾ ಇಲ್ಲಿ ಕೂತ್ಕೋತಾ ಇದ್ದೀನಿ. ನೀನು ಸೂಟು ಬೂಟು ಹಾಕ್ಕೊಂಡು ಬೆಂಗಳೂರು ಪಟ್ಟಣದಿಂದ ಬಂದು ಬಿಟ್ಟೇಂತ ನಿನಗೆ ನನ್ನ ಜಾಗ ಬಿಟ್ಟುಕೊಡಬೇಕೋ? ಸಾಕು ತಿಕ ಮುಚ್ಕೊಂಡು ಏಳೋ ಲೇ," ಎಂದು ಗದರಿಸಿದ.

"ನಿನಗೆ ಈ ಜಾಗ ಬೇಕಾದ್ರೆ ಮೇಷ್ಟ್ರನ್ನೇ ಕೇಳು ಹೋಗು."

"ಹ ಹ ಮೇಸ್ಟ್ರರನ್ನು ಕೇಳ್ಬೇಕಂತೆ ಮೇಸ್ಟ್ರನ್ನು. ಮರ್ಯಾದೆಯಾಗಿ ಏಳ್ತೀಯೋ ಇಲ್ವೊ?"

"ಏಳೊಲ್ಲ ಅಂದ್ರೆ ಏನು ಮಾಡ್ತೀಯಾ?"

"ಏನು ಮಾಡ್ತಿನಾ? ತೋರಿಸ್ತೀನಿ ಇರು ನನ್ಮಗನೆ."

ಇದ್ದಕ್ಕಿದ್ದಂತೆ ರಾಜನ ಧೈರ್ಯವೆಲ್ಲಾ ಉಡುಗಿ ಹೋಗಿ ಎದೆಯಲ್ಲಿ ಪುಕ ಪುಕ ಶುರುವಾಯಿತು. ಈ ಧಡಿಯ ತನ್ನ ಮೇಲೆ ಕೈ ಮಾಡಿದರೆ ಏನು ಗತಿ ಎಂದು ಭಯವಾಯಿತು. ಇವನೇನಾದರೂ ತನ್ನನ್ನು ಹೊಡೆದರೆ ಅವನಿಗೆ ತಿರುಗಿ ಹೊಡೆಯುವ ತಾಕತ್ತು ತನಗಿಲ್ಲ. ಏಟು ತಿಂದು ಸುಮ್ಮನಿದ್ದರೆ ತನಗೆಷ್ಟು ಅವಮಾನ! ಎಲ್ಲರೂ ತನ್ನನ್ನು ಹೇಡಿ ಕೈಲಾಗದವನು ಎಂದು ಹೀಯಾಳಿಸಿ ಲೇವಡಿ ಮಾಡುವ ಪ್ರಸಂಗ ಬಂದೀತು. ಹಾಗೆ ಅನ್ನಿಸಿಕೊಳ್ಳುವುದೂ ತನಗೆ

ಇಷ್ಟವಿಲ್ಲ. ಹೇಗೆ ಇವನನ್ನು ಎದುರಿಸುವುದು? ಕೋಣೆಯಲ್ಲಿ ಈಗ ಸಂಪೂರ್ಣ ಮೌನ. ಎಲ್ಲರ ಕಣ್ಣು ಸುಬ್ಬುವಿನ ಮೇಲೆ. 'ಇರು ತೋರಿಸ್ತೀನಿ ಎಂದ ನಲ್ಲ. ಹೇಗೆ ತೋರಿಸುತ್ತಾನೋ' ಎಂದು ನೋಡು ವ ಕುತೂಹಲ.

ಆದರೆ ಸುಬ್ಬು ರಾಜನ ಮೇಲೆ ದಾಳಿ ಮಾಡಲೇ ಇಲ್ಲ. ಬದಲು ಅವನಿಂದ ತುಸು ಹಿಂದಕ್ಕೆ ಸರಿದ. ಎಲ್ಲರಿಗೂ ಒಂದು ಕ್ಷಣ (ರಾಜನಿಗೂ ಕೂಡ) ಸೋಜಿಗವಾಯಿತು, ನಿರಾಸೆಯೂ ಕೂಡ. 'ಇದೇ ನಿದು ಇವನು ಹೀಗೆ ತೆಪ್ಪಗೆ ಬಿಟ್ಕೊಡ್ತಿದ್ದಾನೆ,ಎಂದು ಎಲ್ಲರೂ ಅಂದುಕೊಳ್ಳುತ್ತಿದ್ದಂತೆಯೇ ಸುಬ್ಬು ಬೆಂಚಿನ ಕೊನೆಯಲ್ಲಿ ಅರ್ಧ ಕುಂಡಿಯೂರಿ ಕುಳಿತ. (ರಾಜ ಕುಳಿತದ್ದು ಇನ್ನೊಂದು ಕೊನೆಯಲ್ಲಿ) ಕುಳಿ ತವನೆ ತನ್ನ ಪಕ್ಕದಲ್ಲಿ ಕೂತಿದ್ದ ಹುಡುಗನನ್ನು ಭುಜ ದಿಂದ ಬಲವಾಗಿ ತಳ್ಳಲಾರಂಭಿಸಿದ. ಪಕ್ಕದವನು ಮೂರನೆಯವನ್ನು ತಳ್ಳಿದ. ಹೀಗೆ ಸುಬ್ಬುವಿನ ಒತ್ತಡ ಬಹು ಬೇಗ ರಾಜನನ್ನು ಮುಟ್ಟಿತು. ರಾಜ ನಿಗೆ ಬೆಂಚಿನ ಮೇಲೆ ಕೂಡುವುದೇ ಕಷ್ಟವಾಯಿತು. ಕುಂಡೆ ಹೊಸೆಯುತ್ತಾ ತನ್ನಲ್ಲಿದ್ದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಕ್ಷಣ ಕ್ಷಣಕ್ಕೂ ಜೋರಾಗುತ್ತಿದ್ದ ಒತ್ತಡವನ್ನು ತಡೆಯಲು ಪ್ರಯತ್ನಿಸಿದ. ಎಷ್ಟು ತಡೆದರೂ ತನ್ನ ಜಾಗವನ್ನು ಕಾಪಾಡಿಕೊಳ್ಳಲಾಗ ಲಿಲ್ಲ. ನೆಲದ ಮೇಲೆ ಧಪ್ ಎಂದು ಕುಸಿದು ಬಿದ್ದ.

ಸುತ್ತ ನೆರೆದಿದ್ದವರೆಲ್ಲ ಹೋ ಎಂದು ಕೇಕೆ ಹಾಕಿ ಚಪ್ಪಾಳೆ ತಟ್ಟಿದರು. ರಾಜನಿಗೆ ವಿಪರೀತ ಅವ ಮಾನವಾಗಿ ಗಲ್ಲ ಕೆಂಪೇರಿತು. ಎಷ್ಟು ತಡೆದರೂ ಸಾಧ್ಯವಾಗದೆ ಕಣ್ಣಲ್ಲಿ ನೀರು ತುಂಬಿ ಕೆನ್ನೆಗಳ ಮೇಲೆ ತೊಟ್ಟಿಕ್ಕಿತು. ಎದ್ದು ನಿಂತು, ತನ್ನ ಬಗ್ಗೆ ಸ್ವಲ್ಪವೂ ಸಹಾನುಭೂತಿ ತೋರಿಸದೆ ಸುಮ್ಮನೆ ನಿಂತು ತಮಾಷೆ ನೋಡುತ್ತಿದ್ದ ಹುಡುಗರನ್ನು ಉದ್ದೇಶಿಸಿ, "ಹೊಸದಾಗಿ ಬಂದವರ ಜತೆ ನೀವು ಹೀಗೇ ಏನ್ರೀ ನಡಕೊಳ್ಳೋದು? ಮೇಷ್ಟ್ರು ಬರಲಿ ಇರಿ" ಎಂದು ಅರಚಿದ.

"ನಾವೇನು ಮಾಡಿದ್ವಿ? ನಾವು ಸುಮ್ಮನೆ ನೋಡ್ತಾ ಇದ್ವಿ, ಅಷ್ಟೇ. ಯಾವನು ನಿನ್ನ ಬೀಳಿಸಿ ದೋನೋ ಅವನ್ನೇ ಕೇಳು" ಅಂದ. ಆ ಗುಂಪಿನಲ್ಲಿ ಒಬ್ಬ. ತಮಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ ಎನ್ನುವಂತೆ ಆ 'ಯಾವನು ಬೀಳಿ ಸಿದವನೋ' ಅವನು ಈಗ ವಿಜಯೋನ್ಮಾದದ ನಗೆ ಬೀರುತ್ತ ತಾನು ವಶಪಡಿಸಿಕೊಂಡಿದ್ದ ಜಾಗ ದಲ್ಲಿ ಕೂತಿದ್ದ. ರಾಜ ಅವನನ್ನು ಒಂದು ಕ್ಷಣ ದುರು ಗುಟ್ಟಿ ನೋಡಿದ. 'ನನಗೆ ಸಾಕಷ್ಟು ಬಲ ಇದ್ದಿದ್ದರೆ...' ರಾಜ ನಿಸ್ಸಹಾಯಕತೆಯಿಂದ ಉಗುಳು ನುಂಗಿದ.

ಎರಡು ನಿಮಿಷ ಕಳೆಯಿತು. ಸುಬ್ಬು ಕುಳಿತಲ್ಲೆ ಕುಳಿತಿದ್ದ. ರಾಜ ಒಂದು ಕಂಬಕ್ಕೆ ಒರಗಿ ನಿಂತಿದ್ದ. ಬೇರೆ ಮಕ್ಕಳು ಯಥಾಪ್ರಕಾರ ಕಪಿ ಚೇಷ್ಟೆಗಳಲ್ಲಿ ತೊಡಗಿದ್ದರು. ಇದ್ದಕ್ಕಿದ್ದಂತೆ ಹೊರಗಡೆಯಿಂದ ಮಾಸ್ತರ ದನಿ ಕೇಳಿಸಿತು. ಒಡನೆ ಸುಬ್ಬು ಚಂಗನೆ ಬೆಂಚಿನಿಂದ ಕೆಳಕ್ಕೆ ಜಿಗಿದ. ರಾಜ ಮಾತ್ರ ತನ್ನ ಜಾಗ ಬಿಟ್ಟು ಕದಲಲಿಲ್ಲ.

ತಿರುಮಲಾಚಾರ್ಯರು ಒಳಗೆ ಬಂದ ಕೆಲವೇ ಕ್ಷಣಗಳಲ್ಲಿ ಅವರಿಗೆ ತಮ್ಮ ಗೈರು ಹಾಜರಿಯಲ್ಲಿ ನಡೆದಿದ್ದ ರಂಪವೆಲ್ಲಾ ತಿಳಿಯಿತು. ರಾಜನೇ ಎಲ್ಲಾ ಸವಿವರವಾಗಿ ಹೇಳಿದ. ಮಾಸ್ತರ ಮುಖ ಉಗ್ರ ನರಸಿಂಹನ ರೂಪ ತಾಳಿತು. ಸುಬ್ಬುವನ್ನೇ ದುರು ದುರನೇ ನೋಡುತ್ತಾ, "ಸೂಳೆಮಗನೆ ಬಾರೋ ಇಲ್ಲಿ" ಎಂದು ಗುಡುಗಿದರು. ಸ್ಕೂಲಿಗೆ ಸ್ಕೂಲೇ ನಡುಗಿತು. ಸುಬ್ಬು ಥರಥರ ಕಂಪಿಸುತ್ತಾ ಎದ್ದು ಬಂದು ಅವರ ಮುಂದೆ ನಿಂತ. "ಹಂ, ಕೈ ತೋರಿಸು." ಎಂದು ಅಪ್ಪಳಿಸುತ್ತಾ (ಸುಬ್ಬುವಿನಂತಹ ಹುಡು ಗರಿಗೆ ಮೀಸಲಾಗಿದ್ದ) ಹಸಿ ಹುಣಸೆ ಸೆಬ್ಬೆಯನ್ನು ಕೈಗೆತ್ತಿಕೊಂಡು ಸುಬ್ಬು ಭಯಭೀತನಾಗಿ ಅಳು ಮೋರೆ ಮಾಡಿ, "ಬೇಡಿ ಸಾ... ಬೇಡಿ ಇನ್ಮೇಲೆ ಮಾಡೊಲ್ಲ ಸಾ..." ಎಂದು ಅಂಗಲಾಚಿದರೂ ಸ್ವಲ್ಪವೂ ಕರಗದೆ ಛಟೀರ್ ಛಟೀರ್ ಎಂದು ಈ ಕೈಗೆ ನಾಲ್ಕು ಆ ಕೈಗೆ ನಾಲ್ಕು ಬಾರಿಸಿ ದರು. ತುಂಟ ಹುಡುಗರಿಂದ ಕಲ್ಲಿನ ಏಟು ತಿಂದು, "ಕುಂಯ್ಯೊ ಕುಂಯ್ಯೊ"ಎಂದು ನೋವಿನಿಂದ ನರಳು ವ ನಾಯಿ ಕುನ್ನಿಯಂತೆ ಸುಬ್ಬು ಕೈ ಒದರುತ್ತಾ ಪಿಳಿಪಿಳನೆ ಒದ್ದಾಡಿದ. ಇದಾದ ನಂತರ ಮಾಸ್ತರು, "ಇನ್ನು ಮುಂದೆ ಸಣ್ಣ ಹುಡುಗರ ಮೇಲೆ ನಿನ್ನ ಪೌರುಷ ತೋರಿಸೀಯಾ ಜೋಕೆ; ಸಿಗಿದು ತೋರಣ ಕಟ್ಟಿಬಿಡ್ತೀನಿ, ರಾಸ್ಕಲ್!" ಎಂದು ಸುಬ್ಬುವನ್ನು ಎಚ್ಚರಿಸಿ ತನ್ನ ಜಾಗಕ್ಕೆ ಹೋಗಿ ಕೂಡುವಂತೆ ಆಜ್ಞಾಪಿಸಿದರು.

ಸುಬ್ಬುವನ್ನು ಮಾಸ್ತರರು ದಂಡಿಸುತ್ತಿದ್ದಾಗ ರಾಜನಿಗೆ ಸಮಾಧಾನವೂ ಮತ್ತು ಒಂದು ಬಗೆಯ ಕ್ರೂರತೃಪ್ತಿಯೂ ಉಂಟಾಗಿತ್ತು. ಆದರೆ ಅದೇ ಈಗ ಅವನ ಸ್ಥಿತಿ ನೋಡಿ 'ಅಯ್ಯೋ ಪಾಪ' ಅನಿಸಿತು. ತಾನು ದೂರು ಹೇಳಬಾರದಾಗಿತ್ತೇನೋ ಅಂದುಕೊಂಡ. ಹಾಗೆ ನೋಡಿದರೆ ಸುಬ್ಬು ತನ್ನನ್ನು ಹೊಡೆದಿರಲಿಲ್ಲ, ಬಡಿದಿರಲಿಲ್ಲ. ಅವನು ಮಾಡಿದ್ದು ಅಷ್ಟು ದೊಡ್ಡ ಅಪರಾಧವೇನಲ್ಲ. ಇಷ್ಟಕ್ಕೆಲ್ಲ ಈ ಮೇಸ್ಟ್ರು ಹುಡುಗರನ್ನು ಹೀಗೆ ಹೊಡೆದು ಸಾಯಿಸ್ತಾರೆ ಅಂತ ತನಗೆ ಗೊತ್ತಿದ್ರೆ ತಾನು ಅವರಿಗೆ ಹೇಳುತ್ತಲೇ ಇರಲಿಲ್ಲ. ಅಬ್ಬಾ ಕೋಪ ಬಂದಾಗ ಈ ಮೇಷ್ಟ್ರನ್ನು ಕಣ್ಣೆತ್ತಿ ನೋಡಲೂ ಭಯವಾಗುತ್ತದೆ. ಒಟ್ಟಿನಲ್ಲಿ ಇವರೊಬ್ಬ ವಿಚಿತ್ರ ಮಾಸ್ತರು. ಈಗಂತೂ ಚಾಡಿ ಹೇಳಿ ತಾನು ಸುಬ್ಬುವಿನ ಮಾತ್ರವಲ್ಲ ಶಾಲೆಯ ಎಲ್ಲ ಹುಡುಗರ ದೃಷ್ಟಿಯಲ್ಲಿ ಕೀಳಾಗಿಬಿಟ್ಟೆ. ಅವರೆಲ್ಲಾ 'ತಿರುಗಿ ಹೊಡೆಯೋಕೆ ತಾಕತ್ತು ಇಲ್ಲದೆ ಮೇಸ್ಟ್ರಿಗೆ ಚಾಡಿ ಹೇಳಿ ಹೊಡಿಸಿದ. ಹೆಣ್ಗಿಗ' ಎಂದು ತನ್ನನ್ನು ಆಡಿಕೊಂಡು ನಗುತ್ತಾರೆ. ಥತ್ ನಾನೊಬ್ಬ ಹೆಣ್ಣಿಗನೇ ಸರಿ' ಎಂದು ಅವನಿಗೆ ತನ್ನ ಮೇಲೇ ತಿರಸ್ಕಾರ ಉಂಟಾಯಿತು.

ಮುಂದೆ ಸುಮಾರು ಅರ್ಧ ಗಂಟೆ ಹೊತ್ತು ಬೇರೆ ಯಾವ ಅಡಚಣೆ ಇಲ್ಲದೆ ಪಾಠಗಳು ಮುಂದುವರಿದವು. ಬಸ್ಸ್ಯಾರ್ ಮೋಟರ್ ಸರ್ವಿಸ್ ಹಾರನ್ ಸದ್ದು ಕೇಳಿಬರುತ್ತಲೇ ತಿರುಮಲಾಚಾರ್ಯರು ಪಾಠವನ್ನು ತಟ್ಟನೆ ನಿಲ್ಲಿಸಿ ಎದ್ದುನಿಂತರು. "ಮಧ್ಯಾಹ್ನ ಸ್ಕೂಲಿಲ್ಲ" ಎಂದು ಕ್ಲಾಸಿಗೆ ಘೋಷಿಸಿ ಜಾಯಿಕಾಯಿ ಪೆಟ್ಟಿಗೆಯಿಂದ ತಮ್ಮ ಕೈಚೀಲವನ್ನು ಹೊರತೆಗೆದು ಹೆಗಲಿಗೆ ನೇತುಹಾಕಿಕೊಂಡವರೆ ದಡದಡನೆ ಸ್ಕೂಲಿನ ಸಮೀಪದಲ್ಲಿ ಇದ್ದ ಬಸ್ ನಿಲ್ಲುವ ಸ್ಥಳದ ಕಡೆ ಧಾವಿಸಿದರು. ಈಗ ಅವರು ಹಳ್ಳಿಯ ನಾಟಿ ವೈದ್ಯನ ರೂಪ ತಾಳಿ ಇನ್ನೇನು ಈಗಲೋ ಆಗಲೋ ಎನ್ನುವಂತಿದ್ದ ತೊಂಬತ್ತು ಮುದುಕನ ರೋಗಿಯೊಬ್ಬನನ್ನು ಉಪಚರಿಸಲು ಪಕ್ಕದ ಹಳ್ಳಿಗೆ ಅರ್ಜೆಂಟಾಗಿ ಹೋಗಬೇಕಾಗಿತ್ತು.

ಸ್ಕೂಲಿಂದ ಹೊರಗೆ ಬಂದವನೇ ರಾಜ, ಸುಬ್ಬು ಸ್ವಲ್ಪ ದೂರದಲ್ಲೇ ರಸ್ತೆಯ ಅಂಚಿನಲ್ಲಿ ನಿಂತು ತನ್ನ ಬರುವನ್ನೇ ಎದುರು ನೋಡುತ್ತಿರುವುದನ್ನು ಕಂಡ. ಹಸಿದ ತೋಳ ಬೇಟೆಗಾಗಿ ಹೊಂಚು ಹಾಕಿ ಕಾಯುತ್ತಿರುವಂತೆ ನಿಂತಿದ್ದಾನೆ ರಾಕ್ಷಸ. ಈಗ ತಾನೇನು ಮಾಡಬೇಕು ಎಂದು ಕ್ಷಣ ಯೋಚಿಸಿದ. ನಿರ್ಲಕ್ಷ್ಯದ ತೋರಿಕೆಯಿಂದ ಅವನ ಮುಂದೆಯೇ ಹಾದು ಹೋಗಿ (ಅವಶ್ಯವಾದಲ್ಲಿ ಅವನ ದಾಳಿಯನ್ನು ಎದುರಿಸಿ) ತಾನೇನೂ ಹೇಡಿಯಲ್ಲ ಎಂದು ನಿರೂಪಿಸಿಬಿಡಲೇ ಎಂಬ ಆಸೆ ಮನಸ್ಸಿನಲ್ಲಿ ಮೂಡಿತು. ಆದರೆ ಅದೇಕೋ ಈಗಲೂ ಧೈರ್ಯ ಬರಲಿಲ್ಲ. 'ಈಗ ಬೇಡ ಇನ್ಯಾವಾಗಲಾದರೂ ತೋರಿಸೋಣ' ಎಂದುಕೊಂಡು ಹುಡುಗರ ಗುಂಪೊಂದರ ಮಧ್ಯ ತೂರಿಕೊಂಡು ಸುಬ್ಬುವನ್ನು ತಾನು ನೋಡಲೇ ಇಲ್ಲ ಎಂಬಂತೆ ನಟಿಸುತ್ತಾ ಮುಂದೆ ನಡೆದ. ಹುಡುಗರ ಈ ಗುಂಪು ತನ್ನನ್ನು ಸಮೀಪಿಸಿದಂತೆ ಸುಬ್ಬು ನಿಂತಲ್ಲಿಂದಲೇ ಶಂಕರ ಎಂಬ ಹುಡುಗನಿಗೆ ಹೇಳುವಂತೆ, "ಲೋ ಶಂಕ್ರು, ಅದ್ಯಾಕೆ ತಲೆಮರಿಸಿಕೊಂಡು ಬರ್ತಿದಾನೆ ಕೇಳೋ, ಧೈರ್ಯ ಇದ್ದರೆ ಮುಂದೆ ಬಾ ಅಂತ ಹೇಳೋ" ಎಂದು ಜೋರಾಗಿ ಹೇಳಿದ.

"ಯಾರನ್ನೊ?" ಅಂದ ಶಂಕ್ರು, ಏನೂ ಗೊತ್ತಿಲ್ಲದವನಂತೆ. "ಅದೇ ಬೆಂಗಳೂರಿಂದ ಬಂದಿದೆಯಲ್ಲ ಒಂದು ಹೆಣ್ಣಿನ ಮುಂಡೇದು ಅದನ್ನೆ". "ನಾನು ಹೇಳಲ್ಲಪ್ಪ. ನೀನೆ ಬೇಕಾದರೆ ಹೇಳು" ಅಂದ ಶಂಕ್ರು. ರಾಜನ ಎದೆಯಲ್ಲಿ ಕ್ಷಣ ಕ್ಷಣಕ್ಕೂ ರೋಷ ಉಕ್ಕುತ್ತಿತ್ತು. ಅವನನ್ನು ಇನ್ನಷ್ಟು ಕೆಣಕಲೆಂದೇ ಸುಬ್ಬು ತನ್ನ ಕೊಂಕು ಮಾತನನ್ನು ಮುಂದುವರೆಸಿದ. "ಥತ್, ಹೆಣ್ಣು ಮುಂಡೆವು ಫೈಟಿಂಗ್ ಮಾಡೊಕೆ ತಾಕತ್ತು ಇಲ್ಲದೆ ಮಾಸ್ತರಿಗೆ ಚಾಡಿ ಹೇಳ್ತವೆ. ಹಾಗೆ ನೋಡಿದರೆ ಹುಡುಗಿಯರೇ ವಾಸಿ. ಅನಷ್ಟು ಅವರವರಲ್ಲೇ ಗುದ್ದಾಡಿಕೊಂಡು ತಮ್ಮ ವಾಜ್ಯಗಳನ್ನು ಶೆಟ್ಲು ಮಾಡಿಕೊಳ್ತಾರೆೊ".

ರಾಜನಿಗೆ ತಡೆಯಲಾಗಲಿಲ್ಲ. ಗುಂಪಿನಿಂದ ಹೊರಗೆ ಬಂದು, "ನನ್ನ ಸುಮ್ಮನೆ ರೇಗಿಸಬೇಡ, ಬಾಯ್ಮುಚ್ಚು" ಅಂದ. "ಮುಚ್ಚದಿದ್ದರೆ ಏನು ಮಾಡ್ತೀಯೋ ನನ್ಮಗನೆ" ಸುಬ್ಬು ರಾಜನ ಎದುರು ಬಂದು ನಿಂತು ಸೊಂಟದ ಮೇಲೆ ಕೈಯಿಟ್ಟು ಸವಾಲು ಹಾಕಿದ. "ಹೋಗೊ". ಅಂದ ರಾಜ ತಿರಸ್ಕಾರ ತುಂಬಿದ ಧ್ವನಿಯಲ್ಲಿ. "ಹ್ಞ ಹ್ಞ, ಅಷ್ಟೆ ನೀನು ಮಾಡೋದು ನನಗೆ ಗೊತ್ತಿಲ್ಲವೇ ನೀನು ಏನು ಮಾಡಬಲ್ಲೆ ಅಂತ. ಈಗ ನಾನು ನಿನ್ನನ್ನು ಏನು ಮಾಡ್ತೀನಿ ನೋಡು," ಎಂದು ಸುಬ್ಬು ಕೈ ಎತ್ತಿದ. ಸುಬ್ಬುವಿನ ಹೊಡೆತದಿಂದ

ತಪ್ಪಿಸಿಕೊಳ್ಳಲೆಂದು ರಾಜ ಒಂದು ಪಕ್ಕಕ್ಕೆ ಜಿಗಿದಾಗ ಆಯ ತಪ್ಪಿ ಒಬ್ಬ ಹುಡುಗನ ಮೇಲೆ ಬಿದ್ದುಬಿಟ್ಟ. ಆ ಹುಡುಗ ಇವನನ್ನು ಬಿಗಿಯಾಗಿ ಹಿಡಿದುಕೊಳ್ಳದಿದ್ದರೆ ರಾಜ ಖಂಡಿತ ರಸ್ತೆಯಂಚಿನಲ್ಲಿದ್ದ ಹಳ್ಳದೊಳಗೆ ಉರುಳಿ ಬೀಳುತ್ತಿದ್ದ; ರಾಜನ ಮೈ ಆ ಹುಡುಗನ ಮೈಗೆ ತಾಗಿದ್ದೇ ತಡ ಸುಬ್ಬು ಹೋ ಎಂದು ಕೇಕೇ ಹಾಕಿ, "ಹೊಲೆಯನನ್ನು ಮುಟ್ಟಿಸಿಕೊಂಡುಬಿಟ್ಟ ಕಣ್ರೊ, ಹೊಲೆಯನನ್ನು ಮುಟ್ಟಿಬಿಟ್ಟ." ಎಂದು ಒಂದೇ ಉಸಿರಿನಲ್ಲಿ ಅರಚಿದ. ಹಿಂದೆಯೇ ಬೇರೆ ಎಲ್ಲ ಹುಡುಗರೂ ಕೂಡ "ಹೊಲೆಯನನ್ನು ಮುಟ್ಟಿಸಿಕೊಂಡಿದಾನ್ರೊ" ಎಂದು ಒಟ್ಟಿಗೆ ಅರಚಿದರು, ಕೆಲವರು "ಅವನನ್ನು ಮುಟ್ಟಿಸ್ಕೊಬೇಡ್ರೊ. ಮೈಲಿಗೆ ಆಗಿದೆ" ಎಂದು ಕಿರುಚುತ್ತಾ ರಾಜನಿಂದ ದೂರ ಸರಿದರು. ಮತ್ತೊಮ್ಮೆ ರಾಜನ ಕಣ್ಣು ತುಂಬಿ ಬಂತು. ಸಹಾನುಭೂತಿ ಇಲ್ಲದ ಈ ಪೊರಟು ಹುಡುಗರ ಎದುರು ಅಳಲು ನಾಚಿಕೆಯಾಗಿ ಅವನು ಮನೆಯ ಕಡೆ ಓಡಲು ಶುರುಮಾಡಿದ. ಆದರೆ ದಾರಿಯುದ್ದಕ್ಕೂ ಸುಬ್ಬು ಮತ್ತು ಇನ್ನೂ ಕೆಲವು ಹುಡುಗರು, "ಹೊಲೆಯನನ್ನು ಮುಟ್ಟಿದ್ದಾನೆ, ಮುಟ್ಟಿಸ್ಕೊಬೇಡ್ರೊ" ಎಂದು ಕಿರುಚುತ್ತಾ ಅವನ ಬೆನ್ನಟ್ಟಿ ಓಡಿಬಂದರು.

ಮನೆ ಮುಟ್ಟಿದ. ಹಜಾರದಲ್ಲಿ ಕುಳಿತು 'ಹರಟೆ ಕೊಚ್ಚುತ್ತಿದ್ದ ಮನೆಯವರೆಲ್ಲರೂ ಬೆಚ್ಚಿಬೀಳುವಂತೆ ರಭಸದಲ್ಲಿ ಒಳಗೆ ನುಗ್ಗಿದ. ತನ್ನ ಸ್ಕೂಲು ಚೀಲವನ್ನು ಒಂದು ಮೂಲೆಗೆಸೆದು ತುಂಬಾ ಸುಸ್ತಾದವನಂತೆ ಗೊಡೆಗೆ ಒರಗಿ ನೆಲದ ಮೇಲೆ ಕುಸಿದು ಕುಳಿತ. ಇಷ್ಟು ಹೊತ್ತು ತನಕ ಒಳಗಿದ್ದ ದುಃಖ ಈಗ ಒಮ್ಮೆಲೆ ಕಟ್ಟೆಯೊಡೆದು ಉಕ್ಕಿ ಹರಿಯಿತು. ಮಂಡಿಗಳ ಮಧ್ಯ ತಲೆ ಹುದುಗಿಸಿ ಬಿಕ್ಕಿ ಬಿಕ್ಕಿ ಅಳತೊಡಗಿದ. ಇವನ ವರ್ತನೆಯಿಂದ ದಿಗ್ಮೂಢರಾಗಿದ್ದ ಮನೆಯವರು "ಏನಾಯಿತು ಮರಿ? ಯಾಕೆ ಹೀಗೆ ಅಳ್ತಿದ್ದೀಯಾ?" ಎಂದು ಪದೇ ಪದೇ ಕೇಳಿದರು. ಆದರೆ ಇವನು ಮಾತ್ರ ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತಲಿಲ್ಲ, ತನ್ನ ರೋದನವನ್ನು ನಿಲ್ಲಿಸಲೂ ಇಲ್ಲ. ಕೊನೆಗೆ ಶಾಮಯ್ಯನವರು ಪಕ್ಕದ ಮನೆಯ ಹುಡುಗನನ್ನು ಕರೆದು ಅವನಿಂದ ಎಲ್ಲಾ ತಿಳಿದುಕೊಳ್ಳಬೇಕಾಯಿತು. ರಾಜ ಹೊಲೆಯನನ್ನು ಮುಟ್ಟಿದ್ದಾನೆ ಎಂದು ಕೇಳಿದಾಕ್ಷಣವೇ ಶಾಮಯ್ಯನವರ ಅಕ್ಕ ವಿಧವೆ ಸುಬ್ಬಮ್ಮ– ಮಡಿಹೆಂಗಸು– ಕೆಂಡ ಕುಳಿದವರಂತೆ ಹಾರಾಡಿದರು. "ಅಯ್ಯೊ ಮನೆಹಾಳ, ಮಾದಿಗನನ್ನು ಮುಟ್ಟಿ ಸ್ನಾನ ಮಾಡದೆ ಒಳಗೆ ಬಂದು ಕುಕ್ಕುರಿಸಿದಿಯಲ್ಲ. ನಿನಗೇನು ಬಂತೋ ಕೇಡು!" ಎಂದರು.

ರಾಜನ ಅಮ್ಮನೂ ಅಷ್ಟೆ, "ಮನೆ ಒಳಗೆ ಕಾಲಿಡೊಕೆ ಮುಂಚೆ ಹೇಳೋಕೇನಾಗಿತ್ತೋ ನಿನಗೆ ಧಾಡಿ? ಅಷ್ಟು ಗೊತ್ತಿಲ್ವೇನೋ ಚಂಡಾಲ" ಎಂದು ಸಿಡುಕಿದರು. ಮನೆಯವರು ಎನ್ನಿಸಿಕೊಂಡವರಾದರೂ ತನ್ನ ಸ್ಥಿತಿಗೆ ಮರುಗಿ ಅಲ್ಪಸ್ವಲ್ಪ



"ನೀವು ಹಿರಿಯರು ಉದ್ದ ಕೂದಲಿನ ಬಗ್ಗೆ ಕಮೆಂಟ್ ಮಾಡಲು ತೆಗೆದುಕೊಳ್ಳುವ ಸಮಯದಲ್ಲಿ ಏನಾದರೂ ಒಳ್ಳೆ ಕೆಲಸ ಮಾಡಿದ್ದರೆ ನಮ್ಮ ದೇಶ ಎಂದೋ ಉದ್ಧಾರವಾಗುತ್ತಿತ್ತು"

ಸಹಾನುಭೂತಿ ತೋರಿಸಿ ಘಾಸಿಗೊಂಡಿದ್ದ ತನ್ನ ಆತ್ಮವನ್ನು ಸಂತೈಸಲು ಪ್ರಯತ್ನಿಸುತ್ತಾರೆಂದು ಎಣಿಸಿದ್ದ ರಾಜನಿಗೆ, ಈಗ ಇವರೂ ತನ್ನನ್ನು ದೂರುತ್ತಿರುವುದನ್ನು ನೋಡಿ ಸಹಿಸಲಾರದಷ್ಟು ರೇಗಿತ್ತು. "ಹೊಲೆಯನನ್ನು ಮುಟ್ಟಿಸ್ಕೊಂಬಿಟ್ರೆ ಏನಾಯಿತಂತೆ ಈಗ?" ಎಂದು ಅರಚಿ, "ಬೆಂಗಳೂರಲ್ಲಿ........." ಎಂದು ಇನ್ನೇನೋ ಹೇಳಲು ಹೊರಟ. ತಕ್ಷಣ ಅಮ್ಮ ಮಧ್ಯೆ ಬಾಯಿ ಹಾಕಿ, "ತಲೆ ಎಲ್ಲಾ ಹರಟಬೇಡ. ಎದ್ದು ಬಚ್ಚಲ ಮನೆಗೆ ಹೋಗಿ ಬಟ್ಟೆ ಬಿಚ್ಚಿಹಾಕು; ನಾಲ್ಕು ಚೆಂಬು ತಲೆ ಮೇಲೆ ನೀರು ಸುರೀತೀನಿ," ಎಂದು ಗದರಿಸಿದರು.

"ನಾನು ಕೊಳಕ್ಕೆ ಹೋಗಿ ನಾಲ್ಕು ಮುಳುಗಿ ಬರ್ತೀನಮ್ಮ. ಇನ್ನೂ ಊಟಾನೂ ಆಗಿಲ್ಲ ಆವಾಗ್ಗ ನಾಲ್ಕು ಸರ್ತಿ ಸ್ನಾನ ಆಯಿತು ಇವತ್ತು. ಏನು ಹಾಳೋ, ಎಲ್ಲ ನನ್ನ ಕರ್ಮ!" ಎಂದು ಗೊಣಗುತ್ತಾ ಸುಬ್ಬಮ್ಮ ಕೊಳದ ಕಡೆ ಧಾವಿಸಿದರು.


ಇಡೀ ದಿನವೆಲ್ಲಾ ರಾಜ ಮಂಕು ಬಡಿದವನಂತೆ ಮನೆಯಲ್ಲೇ ಕೂತು ಏನೋ ಗಾಢಯೋಚನೆಯಲ್ಲಿ ಮುಳುಗಿದ್ದ. ನಿನ್ನೆ ಸಂಜೆ ಈ ಊರಿನಲ್ಲಿ ಕಾಲಿಟ್ಟ ಕ್ಷಣದಿಂದ ಇದುವರೆಗೆ ಒಳಗಾಗಿದ್ದ ಒಂದೊಂದು ಅನುಭವವೂ ಪದೇ ಪದೇ ಅವನ ಸ್ಮೃತಿಪಟಲದಲ್ಲಿ ಮರುಕಳಿಸಿ ಅವನ ಮನಸ್ಸನ್ನು ಕಲಕಿತು. ಅಪ್ಪನ ಮಾತನ್ನು ಕೇಳಿ ಹಳ್ಳಿಯ ಜೀವನದ ಬಗ್ಗೆ ಏನೇನೋ ಸವಿಗನಸುಗಳನ್ನು ಹೊತ್ತು ಬಂದಿದ್ದ ಅವನಿಗೆ ಬಂದ ಮೊದಲ ದಿನವೇ ಭ್ರಮನಿರಸನವಾಗಿ ಈ ಊರಿನ ಬಗ್ಗೆ ಇಲ್ಲಿನ ಸ್ಕೂಲಿನ ಬಗ್ಗೆ ಇಲ್ಲಿಯ ಜನರ ಬಗ್ಗೆ ಹೇಸಿಗೆಯುಂಟಾಯಿತು. ನಾಳೆಯೇ ಇಲ್ಲಿಂದ ಬೆಂಗಳೂರಿಗೆ ವಾಪಸ್ಸು ಹೋಗಿಬಿಡಬೇಕು ಅನಿಸಿತು. ಎಲ್ಲಕ್ಕಿಂತ ಮುಖ್ಯವಾಗಿ ಅವನನ್ನು ಕಾಡಿದ್ದ ಪ್ರಶ್ನೆಯೆಂದರೆ ಆ ಕರಿಯ ಹುಡುಗನನ್ನು ಮುಟ್ಟಿದಾಕ್ಷಣ ಎಲ್ಲ ಹುಡುಗರೂ ತಾನೇನೋ ಮಹಾ ಅಪರಾಧ ಮಾಡಿಬಿಟ್ಟಂತೆ ತನ್ನನ್ನು ಏಕೆ ಹಾಗೆ ಗೇಲಿಮಾಡಿದರು, ಮನೆಯಲ್ಲಿ ಹಿರಿಯರು ಕೂಡ ಏಕೆ ಅದರ ಬಗ್ಗೆ ಅಷ್ಟು ಗಲಾಟೆ ಮಾಡಿದರು, ಅದರಲ್ಲೂ ಅಮ್ಮನ ಆರ್ಭಟ ಅವನಿಗೆ ದೊಡ್ಡ ಒಗಟಾಯಿತು. ಬೆಂಗಳೂರಲ್ಲಿ ಸಹ ಈ ಹೊಲೆಯರೆನಿಸಿಕೊಂಡವರು ತಮ್ಮ ಮನೆಯ ಎದುರಿಗೆ ವಾಸವಾಗಿದ್ದರು. ಆ ಮನೆ ಆಂಟಿ ತಮ್ಮ ಮನೆಗೆ ಎಷ್ಟು ಬಾರಿ ಬಂದಿಲ್ಲ? ಅವರು ಬಂದು ಹೋದ ನಂತರ ಅಮ್ಮ ಒಂದು ದಿನವೂ ಸ್ನಾನ ಮಾಡಿದ ನೆನಪು ತನಗಿಲ್ಲ. ಆ ಮನೆಯ ಹುಡುಗ ಮೋಹನದಾಸನೊಡನೆ ಆಟ ಆಡುತ್ತಿದ್ದಾಗ ತಾನು ಎಷ್ಟು ಬಾರಿ ಅವನನ್ನು ಮುಟ್ಟಿಲ್ಲ, ಆದರೆ ಅಮ್ಮ "ಹಾಗೆ ಮಾಡಬಾರದು" ಎಂದು ಒಮ್ಮೆಯೂ ತನಗೆ ಹೇಳಿರಲಿಲ್ಲ; ಅವನ ಮೈ ತಾಗಿದರೆ ಮೈಲಿಗೆಯಾಗುತ್ತದೆ ಎಂಬ ಪ್ರಜ್ಞೆಯನ್ನು ತನ್ನಲ್ಲಿ ಉಂಟುಮಾಡಿರಲಿಲ್ಲ. ಇಂದೇಕೆ ಹೀಗೆ ವಿಚಿತ್ರವಾಗಿ ಆಡಿಬಿಟ್ಟಳು ಅಮ್ಮ? ಹೊಲೆಯರನ್ನು ಏಕೆ ಮುಟ್ಟಬಾರದು? ರಾತ್ರಿ ಬಹಳ ಹೊತ್ತು ಅವನು ನಿದ್ದೆ ಮಾಡದೆ ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದ; ಅದು ಸಿಗಲಿಲ್ಲ. ✡

ಸ್ವರ್ಗ

ವೇನಿಸ್ (ಇಟಲಿ) ನಗರದ ಶಾಸನಸಭೆಯು ಭವ್ಯ ಭವನವನ್ನು ಅಲಂಕರಿಸಲು 'ಸ್ವರ್ಗ'ದ ಚಿತ್ರ ಬರೆಯಲು ಮುಂದೆ ಬಂದವರಲ್ಲಿ ೭೦ ವರ್ಷದ ವೃದ್ಧ ಕಲಾವಿದ ಟಿಂಟೊರೆಟ್ಟೊನೂ ಒಬ್ಬ. ಆದರೆ ಸಭೆಯ ಸದಸ್ಯರಿಗೆ ಇಂಥ ವೃದ್ಧನಿಗೆ ಈ ಭವ್ಯ ಕಲಾಕೃತಿಯನ್ನು ಸರಿಯಾಗಿ ಪೂರ್ತಿಗೊಳಿಸಲು ಸಾಧ್ಯವಾದೀತೆ ಎಂದು ಶಂಕೆ.

ಅದನ್ನು ತಿಳಿದ ಟಿಂಟೊರೆಟ್ಟೊ ಸಭೆಗೆ ಪ್ರಾರ್ಥಿಸಿದ: "ಮಹನೀಯರೆ, ನನಗೆ ಈ ಜನ್ಮದಲ್ಲೇ 'ಸ್ವರ್ಗ'ವನ್ನು ದಯಪಾಲಿಸಿ; ಪರಲೋಕದಲ್ಲಿ ಏನಾದೀತೋ ನಾ ಕಾಣೆ."

ಆ ಕಾರ್ಯ ಅವನಿಗೆ ಒಪ್ಪಿಸಲ್ಪಟ್ಟಿತು. ಪರಿಣಾಮ: ಅದು ಅವನ ಅತಿ ಶ್ರೇಷ್ಠ ಕಲಾಕೃತಿ.



ವಿಶ್ವಮಾನವ ದೃಷ್ಟಿ, ವಿಶ್ವಭ್ರಾತೃತ್ವ, ವಿಶ್ವಶಾಂತಿ ಮತ್ತು ವಿಶ್ವಧರ್ಮದ ಬಗ್ಗೆ ಮಾತನಾಡಿದವರು ಹಲವರು. ಆದರೆ ಈ ಗುರಿಯನ್ನಿಟ್ಟುಕೊಂಡು ಒಂದು ಸಂಘವನ್ನು, ಒಂದು ಧರ್ಮವನ್ನು ಸ್ಥಾಪಿಸಿದ [illegible] ನೂರು ವರ್ಷ [illegible].

"ಮಾನವ ಜನಾಂಗವೆಲ್ಲ ಒಂದೇ. ದೇಶ-ಧರ್ಮದ ತಾರತಮ್ಯ ಭಾವ ಸಲ್ಲದು. ಮಾನವರೆಲ್ಲ ಒಂದೇ ಜನಾಂಗದ, ಒಂದೇ ಧರ್ಮದ ಮಕ್ಕಳು. ನಾವೆಲ್ಲ ಭಗವಂತನ ಮಕ್ಕಳು. ಅವನ ಅನುಗ್ರಹದಲ್ಲಿ ಎಲ್ಲರೂ ಭರವಸೆಯಿಟ್ಟಿರಬೇಕು. ಒಟ್ಟಾಗಿ ಬಾಳಬೇಕು. ದೇವ-ಧರ್ಮ ಮತ್ತು ಮಾನವ [illegible] ಸಾಧ್ಯ

'ಬಹಾಯಿ'
ವಿಶ್ವಬಂಧುತ್ವ ಸಾರುವ ಹೊಸ ಧರ್ಮ

ಕುಮಾರಿ ರಾಣಿ ಜಿ.

[illegible]." ಈ [illegible] ವಿಶ್ವ ಧರ್ಮದ [illegible] ತರಬು ಮಾಡಿದೆ [illegible].

ಬೇರೆ ಬೇರೆ ಧರ್ಮಗಳು, ಬೇರೆ ಜಾತಿಗಳು, ಬೇರೆ ವರ್ಣಗಳ ಜನ, ಬಡವ-ಬಲ್ಲಿದರೆಲ್ಲ ಮರೆತುಬಿಟ್ಟು ಒಂದೇ ಮನೋಧರ್ಮದವರಾಗಿ ಬಾಳುವ ಕಲ್ಪನೆ ಅದೆಷ್ಟು ಸುಂದರ! ಅಂಥದೊಂದು ಹೊಸ ಧರ್ಮ ಹುಟ್ಟಿದಾಗ ಅದಕ್ಕೊದಗುವ ಕಷ್ಟ ಕೋಟಲೆಗಳು ಸಾವಿರಾರು. ಬಹುಶಃ ಕ್ರಾಂತಿ, ಸುಧಾರಣೆ, ಪುನರುಜ್ಜೀವನಗಳು ಸೆರೆಮನೆಯ ಸರಳುಗಳ ಹಿಂದೆಯೇ ಹುಟ್ಟುತ್ತವೇನೋ. ಮೇಲೆ ಹೇಳಿದಂಥ ಒಂದು ಸುಂದರ ಕಲ್ಪನೆ ಬಹು ಮಟ್ಟಿಗೆ ಸಾಕ್ಷಾತ್ಕಾರವಾದ್ದು 'ಬಹಾಯಿ' ಧರ್ಮದಲ್ಲಿ. ವಿಶ್ವಧರ್ಮ, ವಿಶ್ವಶಾಂತಿಯ ಉದಾತ್ತ ವಿಚಾರದವರು ಬಹಾಯಿ ಪಂಥೀಯರು.

"ಮಾನವ ಜನಾಂಗವನ್ನು ಒಂದೇ [illegible] ಮತ್ತು ಒಂದೇ ವ್ಯವಸ್ಥೆಯಡಿ ಸಂಘಟಿಸಬೇಕಾದದ್ದು ಇಂದಿನ ಯುಗದ ಆವಶ್ಯಕತೆ" ಎನ್ನುತ್ತಾರೆ 'ಬಹಾಯಿ'ಯ ದೃಷ್ಟಾರ ಬಹಾವುಲ್ಲಾ [illegible]. ಇಂಥ ಒಂದು ಸಂಘಟಿತ ಧರ್ಮ ಸಮಾಜ ಮತ್ತು ಸಂಸ್ಕೃತಿಗೊಂದು ದೊಡ್ಡ ಕೊಡುಗೆ ಎಂಬುದು ಅವರ ನಂಬಿಕೆ.

ಮನುಷ್ಯ-ಮನುಷ್ಯರ ನಡುವೆ ಪ್ರೀತಿ, ವಿಶ್ವಾಸ, ಜನಾಂಗಗಳ ನಡುವೆ ಸೌಹಾರ್ದ, ಧರ್ಮಗಳ

ನಡುವೆ ಏಕತೆಯ ಭಾವನೆ ಇವೆಲ್ಲ ಬಹಾಯಿ ಧರ್ಮದ ಪ್ರಮುಖ ತತ್ತ್ವಗಳು. "ಭಗವಂತ ಓರ್ವ ಕೃಪಾಳು ಕುರುಬನಿದ್ದ ಹಾಗೆ. ಕುರಿ ಯಾವುದೇ ಬಣ್ಣದ ಚರ್ಮದ್ದಿರಲಿ ಅದನ್ನು ಪ್ರೀತಿಸುವ ಹಾಗೆ, ಭಗವಂತ ನಾವು ಯಾವುದೇ ದೇಶದ, ಯಾವುದೇ ವರ್ಣದ, ಯಾವುದೇ ಬಣ್ಣದವರಿರಲಿ ಪ್ರೀತಿಸುತ್ತಾನೆ. ಆತ ನಿಷ್ಪಕ್ಷಪಾತಿ. ಹೀಗಿರುವಾಗ ನಾವು ಒಬ್ಬರನ್ನೊಬ್ಬರು ಅರಿತು ಒಂದಾಗಿ ಬಾಳಬಾರದೇಕೆ?" ಎಂದು ಕೇಳುತ್ತಾರೆ ಬಹಾವುಲ್ಲಾ.

ಅಂಧಾನುಕರಣೆಯನ್ನು ತೊರೆದು ಸ್ವತಂತ್ರವಾಗಿ ಸತ್ಯಾನ್ವೇಷಣೆ ನಡೆಸುವುದು, ಧರ್ಮ ಮತ್ತು ವಿಜ್ಞಾನಗಳಲ್ಲಿ ಪರಸ್ಪರ ಹೊಂದಾಣಿಕೆ ಸಾಧಿಸುವುದು, ಪೂರ್ವಾಗ್ರಹಗಳನ್ನು ತೊರೆಯುವುದು, ಸ್ತ್ರೀ ಪುರುಷ ಸಮಾನತೆ, ವಿಶ್ವಶಾಂತಿ, ಜಗತ್ತಿನ ಮಕ್ಕಳಿಗೆಲ್ಲ ಏಕರೂಪಿ ಶಿಕ್ಷಣ, ಬಡವ– ಬಲ್ಲಿದ ಭೇದ ಭಾವದ ಅಳಿವು, ವಿಶ್ವಶಾಂತಿಗಾಗಿ ವಿಶ್ವಸರಕಾರ, ವಿಶ್ವನ್ಯಾಯಾಲಯ ಸ್ಥಾಪನೆ, ಇವು ಬಹಾಯಿ ಧರ್ಮದ ಗುರಿ.

ಸುಮಾರು ೩೫೦ ದೇಶಗಳಲ್ಲಿ ಹರಡಿಕೊಂಡಿರುವ 'ಬಹಾಯಿ' ಧರ್ಮ ೧೯ನೆಯ ಶತಮಾನದ



ಅಮೇರಿಕದಲ್ಲಿರುವ ಬಹಾಯಿ ದೇವಸ್ಥಾನ

ಪೂರ್ವಾರ್ಧದಲ್ಲಿ ಹುಟ್ಟಿತು. ಒಂದು ದೃಷ್ಟಿಯಿಂದ ಅದರ ಹುಟ್ಟು ಧಾರ್ಮಿಕ ಕ್ರಾಂತಿಯೇ ಸರಿ. ಅದನ್ನು ಹತ್ತಿಕ್ಕಲು ನಡೆದ ಯತ್ನಗಳು ಬಹಳ. 'ಬಾಬ್‌ವಾದ' ಅಥವಾ 'ಬಾಬಿಯಿಸಂ' ಈ ಬಹಾಯಿ ಧರ್ಮದ ಮೂಲ ಸ್ವರೂಪ 'ಬಾಬ್' ಎಂದು ಕರೆದುಕೊಂಡ ಮಿರ್ಜಾ ಅಲಿ ಮಹಮ್ಮದ ಇಬ್ನ ರಧೀಕ್ ಬಾಬಿಯಿ ಸಂಸ್ಥಾಪಕ.

ಅರಬ್ಬಿ ಭಾಷೆಯಲ್ಲಿ ಬಾಬ್ ಎಂದರೆ 'ಮಹಾದ್ವಾರ' ಎಂದರ್ಥ. ೧೮೪೪ರ ಮೇ ೨೩ ರಂದು ಮಿರ್ಜಾ ಇಬ್ನ ರಧೀಕ್ ಪರ್ಶಿಯಾದ ಶಿರಾಜ್ ಪಟ್ಟಣದಲ್ಲಿ ತನ್ನನ್ನು ಬಾಬ್ ಎಂದು ಕರೆದುಕೊಂಡ. ಆತ ಒಬ್ಬ ತೇಜಸ್ವಿ ತರುಣ. ಪವಿತ್ರ ಧರ್ಮಗ್ರಂಥಗಳು ನುಡಿದಂತೆ, "ಭಗವಂತ ವಿಶ್ವ ಪ್ರವಾದಿಯಾಗಿ ಅವತರಿಸಲಿದ್ದಾನೆ," ಎಂದು ಬೋಧಿಸತೊಡಗಿದ ಬಾಬ್, ಆ ಅವತಾರದಿಂದ ಮಾನವ ಜನಾಂಗವೆಲ್ಲ ಒಂದುಗೂಡಿ ಶಾಂತಿಯುಗ ಸ್ಥಾಪಿಸಲ್ಪಡುತ್ತದೆ ಎಂದೂ ಹೇಳತೊಡಗಿದ.

ಪೈಗಂಬರ ವಂಶಜ ಈ ಬಾಬ್. ತನ್ನ ಇಪ್ಪತ್ತೈದರ ತರುಣದಲ್ಲಿ ಕುರಾನನ್ನು ಅರಗಿಸಿ ಕುಡಿದಿದ್ದ. ಚಿಕ್ಕಂದಿನಲ್ಲೇ ತಂದೆಯನ್ನು ಕಳೆಕೊಂಡು ಸೋದರ ಮಾವನ ಆಶ್ರಯದಲ್ಲಿ ಬೆಳೆದ. ಆತ ಅವತಾರ ಪುರುಷ ಎಂದು ಜನ ನಂಬುವಂತಾಗಲು ಸ್ವತಃ ಸೋದರ ಮಾವನು ಕಾರಣ. ಪವಿತ್ರ ಗ್ರಂಥಗಳಲ್ಲಿ ಹೇಳಿದಂತೆ 'ಇಸ್ಲಾಂ ಧರ್ಮದ ಭರವಸಿಗ' (Promised One) ಎಂದು ಬಾಬ್ ಅವರನ್ನು ಅವರ ಶಿಷ್ಯ ಮುಲ್ಲಾ ಹುಸೇನ್ ಸಾರಿದ. ತಮ್ಮ ಶಿಷ್ಯ ಹುಸೇನ್‌ನನ್ನು 'ಬಾಬುಲ್ ಬಾಬ್' ಎಂದರೆ ಬಾಗಿಲಿನ ಬಾಗಿಲು ಎಂದು ಕರೆದರು. ೧೮೪೪ರಿಂದಲೇ ಬಹಾಯಿ ಪಂಚಾಂಗ (ಕ್ಯಾಲೆಂಡರ್) ಪ್ರಾರಂಭವಾಗುತ್ತದೆ.

ಬಾಬ್ ಅವರಿಗೆ ಕೆಲದಿನಗಳಲ್ಲಿಯೇ ಹದಿನೇಳು ಜನ ಶಿಷ್ಯರಾದರು. ಮೊದಲ ಶಿಷ್ಯ ಹುಸೇನನೂ ಸೇರಿದಂತೆ ಈ ಹದಿನೆಂಟೂ ಜನರನ್ನು 'ಜೀವಂತ ಅಕ್ಷರಗಳು' (Letters of the Living) ಎಂದು ಬಾಬ್ ಹೆಸರಿಸಿದರು. ಪ್ರಸಿದ್ಧ ಕವಯಿತ್ರಿ ತಾಹಿರಿ, ಸ್ವಪ್ನವೊಂದರಲ್ಲಿ ಬಾಬ್ ಅವರು ಪವಾಡ ಪುರುಷರೆಂಬುದನ್ನು ಅರಿತು ಅವರಿಗೊಂದು ಕಾಗದ ಬರೆದಳು. ತಾಹಿರಿಯನ್ನೂ

ಬಾಬ್ ಜೀವಂತ ಅಕ್ಷರಗಳಲ್ಲೊಬ್ಬಳನ್ನಾಗಿ ಸ್ವೀಕರಿಸಿದರು.

ಕೇವಲ ಆರು ವರ್ಷಗಳ ಅವಧಿಯಲ್ಲಿ ಸಾವಿರಾರು ಅನುಯಾಯಿಗಳನ್ನು ಗಳಿಸಿದ ಬಾಬ್ ಅವರ ಸಂದೇಶ ಪರ್ಶಿಯ ದೇಶದಲ್ಲೆಲ್ಲ ಹರಡಿತು. ಹೆಚ್ಚೆಚ್ಚು ಜನ ಬಾಬ್ ಅವರ ಅನುಯಾಯಿಗಳಾಗಲು ತೊಡಗಿದಂತೆಯೇ ಸಂಪ್ರದಾಯಸ್ಥರಿಗೆ ಮತ್ತು ಕೆಲವು ಸರಕಾರಿ ಅಧಿಕಾರಿಗಳಿಗೆ ದಿಗಿಲಾಯಿತು. ಸರಕಾರ ಅವರನ್ನು ಸೆರೆಮನೆಗೆ ಕಳಿಸಿತು. ೧೮೫೦ರ ಜುಲೈ ೯ರಂದು ಬಾಬ್ ಅವರಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಅವರನ್ನು ಗಲ್ಲಿಗೇರಿಸಲು ಕರೆದೊಯ್ಯಲೆಂದು ಕೊತವಾಲ ಬಂದ. ಬಾಬ್ ಆ ಸಮಯದಲ್ಲಿ ಶಿಷ್ಯನೋರ್ವನಿಗೆ ತಮ್ಮ ಕೊನೆಗಳಿಗೆಯ ಸಂದೇಶ ಹೇಳುತ್ತಿದ್ದರು. ತಮ್ಮ ಸಂದೇಶ ಪೂರ್ಣಗೊಳ್ಳುವವರೆಗೆ ತಮ್ಮನ್ನು ಕರೆದೊಯ್ಯಬಾರದೆಂದು ಹೇಳಿದರೂ ಕೇಳದೆ ಕೊತವಾಲ ಅವರನ್ನೆಳೆದೊಯ್ದ. ಬಾಬ್ ಅವರ ದೇಹತ್ಯಾಗಕ್ಕೆ ಸಂಬಂಧಿಸಿದಂತೆ ಒಂದು ಪವಾಡ ಸದೃಶ ಘಟನೆಯನ್ನು ಬಹಾಯಿಗಳೆಲ್ಲ ನಂಬುತ್ತಾರೆ.

ಸಾವಿರಾರು ಜನರೆದುರು ಬಾಬ್ ಅವರಿಗೆ ಗುಂಡುಹಾರಿಸಿ ಕೊಲ್ಲುವ ಆಜ್ಞೆ ಸರಕಾರದ್ದು. ಬಾಬ್ ಅವರಿಗೆ ಗುಂಡು ಹಾರಿಸಬೇಕೆಂಬಷ್ಟರಲ್ಲಿಯೇ ಅವರ ಶಿಷ್ಯ ಮಹಮ್ಮದ ಅಲಿ ಜುನುಜಿ ತಾನೂ ಗುರುವಿನೊಂದಿಗೆ ಸಾಯುತ್ತೇನೆಂದು ಹಟ ಹಿಡಿದು ಅವರನ್ನಪ್ಪಿಕೊಂಡು ನಿಂತ. ಗುಂಡು ಹಾರಿಸಲು ತಯಾರಾಗಿ ನಿಂತಿದ್ದ ನೂರು ಜನ ಸೈನಿಕರಿಗೆ ಆಜ್ಞೆಯಾಯಿತು. ಬಂದೂಕಿನ ನಳಿಗೆಗಳಿಂದ ಗುಂಡಿನ ಸಪ್ಪಳಿನ ಜತೆಗೇ ಬಂದ ಹೊಗೆ ಬೆಟ್ಟದಾಕಾರದಲ್ಲಿ ಸುತ್ತುಗಟ್ಟಿತ್ತು. ನಾಲ್ಕೈದು ನಿಮಿಷ ಕಳೆದಿರಬೇಕು, ಹೊಗೆ ಹಾರಿಹೋಗಿತ್ತು. ಬಾಬ್ ಅವರ ಶಿಷ್ಯ ಗುರುವಿನ ಎದೆಯ ಮೇಲೆ ತಲೆ ಇಟ್ಟ ಹಾಗೇ ನಿಂತುಕೊಂಡಿದ್ದ. ಆತನಿಗೇನೂ ಆಗಿರಲಿಲ್ಲ. ಬಾಬ್ ಮಾತ್ರ ಅಲ್ಲಿರಲಿಲ್ಲ.

ಜೇಲಿಗೆ ಹೋಗಿ ನೋಡಲು ಬಾಬ್ ತಮ್ಮ ಕೋಣೆಯಲ್ಲಿ ಹಸನ್ಮುಖರಾಗಿ ಶಿಷ್ಯನಿಗೆ ಸಂದೇಶದ ಕೊನೆಯ ಭಾಗ ಹೇಳುತ್ತ ಕುಳಿತಿರುವುದು ಕಂಡಿತು. ಕೋತವಾಲನಿಗೆ ಹೇಳುವುದು ಮುಗಿದ ಮೇಲೆ ಕೋತವಾಲನೆಡೆ ತಿರುಗಿ ನುಡಿದರು ಬಾಬ್, "ನನ್ನ ಕೆಲಸ ಈ ಜಗತ್ತಿನಲ್ಲಿ ಮುಗಿಯಿತು. ನಾನು ಹೇಳಬೇಕಾಗಿದ್ದ ಸಂದೇಶವನ್ನೂ ಹೇಳಿಯಾಯಿತು. ಈಗ ನನ್ನ ಜೀವವನ್ನು ಬಲಿಕೊಡಲು ಸಿದ್ಧ. ನಡೆಯಿರಿ."

ಮತ್ತೊಮ್ಮೆ ಬಾಬ್ ಅವರ ಮೇಲೆ ಗುಂಡು ಹಾರಿಸಲು ಆ ನೂರು ಸೈನಿಕರು ಮತ್ತು ಅವರ ದಳಪತಿ ಒಪ್ಪಲಿಲ್ಲ. ಅವರ ಬದಲಾಗಿ ಮತ್ತೊಂದು ತುಕಡಿಯನ್ನು ಕರೆತರಲಾಯಿತು. ಈ ಸಾರಿ ೭೫೦ ಗುಂಡುಗಳು ಒಮ್ಮೆಲೇ ಹಾರಬೇಕು. ಬಾಬ್ ನಗುನಗುತ್ತ ನಿಂತಿದ್ದಂತೆಯೇ ಆಜ್ಞೆಯಾಯಿತು. ಗುಂಡುಗಳು ಬಾಬ್ ಅವರ ದೇಹ ಹೊಕ್ಕವು. ದೇಹ ಛಿದ್ರವಾಯಿತು. ಮುಖದ ಮೇಲಿನ ಕಳೆಮಾತ್ರ ಕುಂದಲಿಲ್ಲ. ತಮ್ಮ ಗುರುವಿನ ಪ್ರಾಣಾರ್ಪಣೆ ಸಹಿಸದ ೨೦ ಸಾವಿರಕ್ಕೂ ಹೆಚ್ಚು ಅನುಯಾಯಿಗಳು ತಾವೂ ಜೀವ ತೊರೆದು ಹುತಾತ್ಮರಾದರು.

ಬಾಬ್ ಅವರ ನಂತರ ಏಪ್ರಿಲ್ ೨೫, ೧೮೬೩ರಂದು ಬಹಾವುಲ್ಲಾ ಬಾಬಿಗಳ ಗುರುವಾದರು. ಬಾಬ್ ಮೊದಲೇ ಘೋಷಿಸಿದ್ದಂತೆ ತಾವೇ ಆ ಅವತಾರ ಪುರುಷ ಎಂದು ಸಾರುವಾಗ ಅವರು ಪೆಲೆಸ್ಟೈನ್‌ನಲ್ಲಿ ಆಕ್ಕಾ ಎಂಬಲ್ಲಿಇಬ್ಬರ ಬಲಿಷ್ಠ ಅರಸರ ಸೆರೆಯಾಳಾಗಿದ್ದರು. ಇದಕ್ಕೆ ೪೬ ವರ್ಷ ಮುನ್ನ ಪರ್ಶಿಯಾದ ಅರಸರ ಪ್ರಧಾನ ವಜೀರನ ಮಗನಾಗಿ ಬಹುವುಲ್ಲಾ ತೆಹರಾನಿನಲ್ಲಿ ಜನಿಸಿದ್ದರು. ಇವರ ೨೨ನೇ ವಯಸ್ಸಿನಲ್ಲಿ ತಂದೆಕಾಲವಾದರು. ಮುಂದೆ ಪರ್ಶಿಯದ ಸರಕಾರ, ತಂದೆಯಂತೆಯೇ ಮಗನೂ ವಜೀರನಾಗಬೇಕೆಂದು ಆಹ್ವಾನಿಸಿತಾದರೂ ಅವರಿಗೆ ಪ್ರಾಪಂಚಿಕ ವ್ಯ



ಪಶ್ಚಿಮ ಜರ್ಮನಿಯಲ್ಲಿಯದು

[illegible] ಆಸಕ್ತಿಯಿಲ್ಲದ್ದರಿಂದ ಅವರು ಸಿರಾ [illegible]ದ್ದರು.

ತಮ್ಮ [illegible]ನೆಯ ವಯಸ್ಸಿನಲ್ಲಿಯೇ ಬಾಬ್ ಅವರ ನಿಷ್ಠ ಅನುಯಾಯಿಗಳಾಗಿದ್ದ ಬಹಾವುಲ್ಲಾ [illegible]ಗೆ ಬಾಬ್ ಪ್ರಾಣಾರ್ಪಣೆಯ ದಿನದಿಂದಲೇ [illegible] ಪೀಡೆ ಪ್ರಾರಂಭವಾದದ್ದು. ಚಿತ್ರ[illegible] ಸೆರೆವಾಸಗಳಿಂದಾಗಿ [illegible] ಕೊರ[illegible] ತಮ್ಮ ತತ್ತ್ವಗಳನ್ನು ಇದ್ದಲ್ಲಿಂದಲೇ ಪ್ರಸಾರ ಮಾಡು[illegible]ದರು. ಬಹಾವುಲ್ಲಾ. ಅವರನ್ನು [illegible] ನೆಲಮಾಳಿಗೆಯೊಂದರಲ್ಲಿ. ಗಾಳಿ–ಬೆಳಕಿನ ಪ್ರ[illegible]ವೇ ಅಲ್ಲಿರಲಿಲ್ಲ. ಅದಲ್ಲದೇ ಸರಪಳಿಯಿಂದ ಕೈ[illegible]ಗಳಿಗೆ ಬಂಧ ಬೇರೆ. ಆದರೆ ಒಂದು ದಿನ [illegible]. "ನಿನ್ನ ಲೇಖನಿಯ ಮೂಲಕವೇ [illegible] ವಿಜಯಿಯಾಗುತ್ತೇವೆ. [illegible] ಸತ್ಯ" [illegible] ವಾಣಿ ಹೊಳಗಿದಂತಾಗಿಯಿತೆಂದು ಬಹಾ[illegible] ಬರೆದಿದ್ದಾರೆ.

[illegible] ಸೆರೆಮನೆಯಲ್ಲಿ ಕಾಲ ಕಳೆಯುತ್ತಿದ್ದ ಬಹಾವುಲ್ಲಾ ಅವರ ಆಸ್ತಿಯನ್ನೆಲ್ಲ ಇತ್ತ ಸರಕಾರ ಮುಟ್ಟು[illegible] ಹಾಕಿ ವಶಪಡಿಸಿಕೊಂಡಿತು. ಕೊರೆಯುವ [illegible]ದಲ್ಲಿ ಬಹಾವುಲ್ಲಾ ಬಿಡುಗಡೆಯಾದರು. ಮತ್ತೆ ಗಡೀಪಾರು. ನೂರಾರು ಮೈಲು ನಡೆದು [illegible]ವನ್ನು ತಲುಪಿದ ಬಹಾವುಲ್ಲಾ ಬೇಗನೇ ಇರಾಣ–ಇರಾಕ್‌ಗಳಲ್ಲಿದ್ದ ಬಾಬಿಗಳಿಗೆ ಸ್ಫೂರ್ತಿ [illegible]ದರು. ಅವರ ತಮ್ಮ [illegible]ನಿಗೆ [illegible] ಇದನ್ನು ಸಹಿಸಲಾಗಲಿಲ್ಲ. ಆತ ಕತ್ತಿ ಮಸೆಯುತ್ತಲೇ ಇದ್ದ. ಬಾಬಿಗಳಲ್ಲಿಯೇ ಕೆಲವರನ್ನು [illegible]ಕೊಂಡ. ಬಹಾವುಲ್ಲಾರ ಅನುಯಾಯಿಗಳಲ್ಲಿ [illegible] ಪಂಗಡಗಳಾದವು. ತಮ್ಮನ ಕಾರಸ್ಥಾನ ಮತ್ತು ಅವನ ಹಿಂದೆ ಬಿದ್ದ ತಮ್ಮ ಜನರಿಂದಾಗಿ [illegible] ಬಹಾವುಲ್ಲಾ ಬಗದಾದಿನಿಂದ ಹೊರಟು [illegible]ಗೆ ತಲುಪಿದರು. ಗುಹೆಯೊಂದರಲ್ಲಿ [illegible] ಯಾರಿಗೂ ಗೊತ್ತಾಗದಂತೆ ಕಾಲಕಳೆದರು. ಈ "ಹೆಸರಿಲ್ಲದ ಮಹಾತ್ಮ" ಅಲ್ಲಿಯ ಜನರ ನಾಲಗೆಯ ಮೇಲೆ ನಲಿಯುತೊಡಗಿದ.

[illegible] ಬಹಾ ಬಹಾವುಲ್ಲಾರ ಮಗ. [illegible]ಸ್ಥಾನದಲ್ಲಿರುವ ವಿಷಯ ಗೊತ್ತಾಗಿ [illegible] ಧಾರಿಗಳೊಡನೆ ತಂದೆಯನ್ನು [illegible]ಗೆ ಕರೆಸಿಕೊಂಡ. ಅದುವರೆಗೂ ಕಂಗಾಲಾಗಿದ್ದ ಬಾಬ್ ಅನುಯಾಯಿಗಳಿಗೆ ಸಂತೋಷವಾಯಿತು. ಆದರೆ ಮುಲ್ಲಾಗಳಿಗೆ ಮಾತ್ರ ಇದು ಸಹಿಸದ ವಿಚಾರ. ಬಹಾವುಲ್ಲಾರಿಂದ ಮುಸ್ಲಿಂ ಜನ [illegible]ಗಳಾಗಿ [illegible] ಹೆದರಿಕೆಯಿಂದ ಅವರು ಚಕ್ರವರ್ತಿಗಳಿಗೆ ದೂರು ಕೊಟ್ಟರು. ಇರಾನಿನ ಸರಕಾರ ಮತ್ತು ತುರ್ಕಿ ಸಾಮ್ರಾಜ್ಯದ ಅಧಿಕಾರಿಗಳು ಸೇರಿಕೊಂಡು ಬಹಾವುಲ್ಲಾ ಅವರನ್ನು ಕಾನ್‌ಸ್ಟಾಂಟಿನೋಪಲ್‌ಗೆ ಕಳುಹಿಸಿಕೊಟ್ಟವು. ಅಲ್ಲಿಯೂ [illegible] ಪೀಡೆ, ಇದರಿಂದಾಗಿ ಅವರನ್ನು ಅಡ್ರಿಯನೋಪಲ್‌ಗೆ ಕಳಿಸಲಾಯಿತು. ಕೆಲದಿನಗಳ ನಂತರ [illegible]ರು, ಕ್ರೈಸ್ತರು. ಮುಸಲ್ಮಾನರು–ಈ ಎಲ್ಲರಿಗೂ 'ಪವಿತ್ರ [illegible]' [illegible] [illegible]. ಅಲ್ಲಿಯ [illegible]. ಗಾಳಿ ಬೆಳಕಿಲ್ಲದ [illegible]ದರಲ್ಲಿ [illegible] ಬಹಾವುಲ್ಲಾ. [illegible] [illegible] ಪಡಿಸಿ ಅಲ್ಲಿಗೆ ಕಳಿಸಲಾಗುತ್ತಿತ್ತು. ಈ ಚಿಕ್ಕ ಕೋಣೆಯಿಂದಲೇ ಬಹಾವುಲ್ಲಾ [illegible] ಚಕ್ರವರ್ತಿಗಳಿಗೆ. ಅರಸರಿಗೆ ಪತ್ರಗಳನ್ನು ಬರೆದು, "ಭಗವಂತನ ಕರೆಯನ್ನು ಒಪ್ಪಿಕೊಳ್ಳಿ" ಎಂದು ಹೇಳಿದರು.

ಈ ಸೆರೆಮನೆಯಿಂದಲೇ [illegible] ಬಹಾವುಲ್ಲಾ. [illegible] ವನ್ನು ಮೊಗೆದತ್ತಿ [illegible]. [illegible] ತಮ್ಮ ವಿರುದ್ಧ ಕತ್ತಿ [illegible] ಅವರನ್ನೆಲ್ಲ [illegible]. ಸೆರೆಮನೆಯ [illegible] ಮೇಲೆ ಪ್ರಭಾವ [illegible] ಅವರ ಅನುಯಾಯಿಗಳ ಸಂಖ್ಯೆ ಹೆಚ್ಚಲು ಕಾರಣವಾಯಿತು. [illegible] ಈ ಧರ್ಮಕ್ಕೆ [illegible] ಧರ್ಮ ಎಂದೂ ಹೆಸರು [illegible].

[illegible] ಸೆರೆಮನೆ [illegible] [illegible] [illegible] ಬಿಟ್ಟರು. [illegible] [illegible] [illegible] ಹೊಂದಿದ್ದ ಅವರು [illegible] ಕಾಲವನ್ನು ಆಕ್ಕಾ ಸಮೀಪದ [illegible] ಸುಂದರ ಪ್ರದೇಶದಲ್ಲಿ

ಕಳೆದರು. ಬಹಾಯಿ ಧರ್ಮಕ್ಕೊಂದು ಸ್ವರೂಪ ನೀಡಿದ ಈ ಮಹಾ ಪುರುಷ ೧೮೯೨ರ ಮೇ ೨೯ರಂದು ಸ್ವರ್ಗಸ್ಥರಾದರು.

ಬಹಾವುಲ್ಲಾ ಅಂದಂದಿನಿಂದ ಬಹಾಯಿಗಳ ಪವಿತ್ರಭೂಮಿಯಾಗಿರುವ ಅಕ್ರಾ ಬಂದು ಯಾತ್ರಾಸ್ಥಳವಾಗಿ ಪರಿಣಮಿಸಿತು. ಅವರ ಸಮಾಧಿಯೇ ಇರುವ ಮೌಂಟ್ ಕಾರ್ಮೆಲ್ ಎಂಬ ಪರ್ವತದ ಮೇಲೆ ಬಾಬ್ ಅವರ ಸಮಾಧಿಯನ್ನು ಸ್ಥಾಪಿಸಲಾಗಿದೆ.

ತಂದೆಯ ಮರಣಾನಂತರ ಧರ್ಮರಥದ ಸೂತ್ರವನ್ನು ತಂದೆಯ ಇಚ್ಛೆಯಂತೆ ಅಬ್ದುಲ್ ಬಹಾ ವಹಿಸಿಕೊಂಡರು. ಬಹಾವುಲ್ಲಾರ ಹಿರಿಯ ಮಗ ಅವರು. ಬಾಬ್ ತಮ್ಮ ಸಂದೇಶವನ್ನು ಘೋಷಿಸಿದ ಸಂದರ್ಭದಲ್ಲಿಯೇ ಅಬ್ದುಲ್ ಬಹಾರ ಜನನವಾಯಿತಂತೆ. ತಮ್ಮ ನಂತರ ತಮ್ಮ ಹಿರಿಯ ಮಗನೇ Center of Covenant ಅರ್ಥಾತ್ ಅನುಯಾಯಿಗಳಿಗೆ ಬಂದ ಮಾರ್ಗದ ಶಂಕೆಗಳನ್ನು ನಿವಾರಿಸಲು ಸಮರ್ಥ ವ್ಯಕ್ತಿ ಎಂದು ಬಹಾವುಲ್ಲಾ ತಮ್ಮ ಮೃತ್ಯುಪತ್ರದ ಮೂಲಕ ನಿರ್ದೇಶಿಸಿದ್ದರು.

ಬಹಾವುಲ್ಲಾರ ಬೋಧನೆಗಳನ್ನು ವಿವರಿಸುವ ಹೊಣೆಯೇ ಅಬ್ದುಲ್ ಬಹಾರಿಗೆ ಈ ಉದಾತ್ತ ಧರ್ಮದ ತತ್ವಗಳ ಪರಿಚಯವಾಗಿತ್ತು. ತಂದೆಯೊಂದಿಗೆ ಬಹುಕಾಲ ಕಳೆದು ಬಹಾಯಿ ಧರ್ಮದ ಬಗ್ಗೆ ಅರಿತುಕೊಂಡಿದ್ದ ಅವರು ತಮ್ಮ ಜೀವನವನ್ನು ಧರ್ಮಕ್ಕಾಗಿಯೇ ಮುಡಿಪಾಗಿಡುವ ಶಪಥ ತೊಟ್ಟಿದ್ದರು. ತಂದೆಯ ಮರಣಾನಂತರ ದಿನಗಳಲ್ಲಿ ಬಿಕ್ಕಟ್ಟಾಗುವ ಸೂಚನೆಗಳು ಕಂಡುಬಂದವಾದರೂ ಬಹಾವುಲ್ಲಾರ ಮೃತ್ಯುಪತ್ರ ಎಲ್ಲವನ್ನೂ ಬಗೆಹರಿಸಿತ್ತು. ಆದರೆ ಮಾತ್ಸರ್ಯಕ್ಕೆ ಸ್ಥಳಭೇದ, ಸ್ಥಾನ ಭೇದ ಒಂದೂ ಇರುವಂತಿಲ್ಲ. ಹಿಂದೆ ಬಹಾವುಲ್ಲಾರ ಸೋದರ ಯಾಹ್ಯಾನಂತೆ ಅಬ್ದುಲ್ ಬಹಾರ ಸೋದರ ಮಹಮ್ಮದಾಲಿಗೂ ಅಣ್ಣನ ಏಳ್ಗೆ ಸೇರದಾಯಿತು. ಬಹಾಯಿಗಳಲ್ಲಿ ಒಡಕುಂಟು ಮಾಡಲು ಅವ ಪ್ರಯತ್ನಿಸಿ ವಿಫಲನಾದ. ಅಬ್ದುಲ್ ಬಹಾ ಸರಕಾರದ ವಿರುದ್ಧ [illegible] ಅಧಿಕಾರಿಗಳಿಗೆ ತಿಳಿಸಿದ. ಮೌಂಟ್ ಕಾರ್ಮೆಲ್‌ನಲ್ಲಿ ಪೂಜಾ ಮಂದಿರವೊಂದನ್ನು [illegible] ಗ. ಮಹಮ್ಮದಾಲಿ. ಸರಕಾರದ ವಿರುದ್ಧ [illegible] ಕಟ್ಟಿ ಸೈನ್ಯ ತರಬೇತಿ ಮಾಡಲು ಅಬ್ದುಲ್ ಬಹಾ ಯತ್ನಿಸುತ್ತಿದ್ದಾರೆಂದೂ ಕೂಗಿಕೊಂಡ. ಇದರಿಂದಾಗಿ ತುರ್ಕಿ ಸರಕಾರ ವಿಚಾರಣಾಧಿಕಾರಿಯನ್ನು ನೇಮಿಸಿದಾಗ ಲಂಚ ನೀಡಿ, ಅಧಿಕಾರಿ ಸುಳ್ಳು ವರದಿ ಮಾಡುವಂತೆ ಮಾಡಿದ. ಅಬ್ದುಲ್ ಬಹಾರನ್ನು ಬಂಧಿಸಿ ನಗರದ ಹೊರಗೆ ಗಲ್ಲಿಗೇರಿಸುವುದಾಗಿ ಸುದ್ದಿ ಬಂತು. ಬಹಾಯಿಗಳು ಅಬ್ದುಲ್ ಬಹಾರಿಗೆ ಪಾರಾಗಿ ಓಡುವಂತೆ ಕೇಳಿಕೊಂಡರು. "ನನಗೆ ಸೆರೆಮನೆಯೇ ಸ್ವಾತಂತ್ರ್ಯ; ಬಂಧನವೇ ವಿಮೋಚನೆ; [illegible] ಸಾವೇ ಜೀವನ." ಎಂದರು [illegible] ಚಿಂತಿತರಾಗಿದೆ.

ಸಾವಿರಾರು ಲೇಖನಗಳಲ್ಲಿ ಬಹಾಯಿ ಧರ್ಮದ ತತ್ವವನ್ನು ವಿವರಿಸಿದರು ಅಬ್ದುಲ್ ಬಹಾ. ಇವುಗಳಿಂದ ಬಹಾಯಿಗಳಿಗೆ [illegible] ಜತೆಗೆ ಬಹಾಯಿಗಳ ಕಾರ್ಯದ [illegible] ಗಮನಿಸುತ್ತಿದ್ದರು.

ಅಬ್ದುಲ್ ಬಹಾರ ಬಂಧನದ ನಂತರ ಕೆಲವು ದಿನಗಳಲ್ಲಿಯೇ ತುರ್ಕಿ ಸರಕಾರವು ಪತನಗೊಂಡಿತು. ಇದರಿಂದಾಗಿ ಅಬ್ದುಲ್ ಬಹಾರವರ ವಿರೋಧಿಗಳು ಸಮೂಲ ನಾಶಗೊಳ್ಳುವಂತಾಯಿತು. ಅವರು ಈಗ ಬಂಧ ಮುಕ್ತರು. ೧೯೦೮ರ ಬಿಡುಗಡೆಯ ನಂತರ ಪಾಶ್ಚಾತ್ಯ ಬಹಾಯಿಗಳ ಕೋರಿಕೆಯಂತೆ ಈಜಿಪ್ತ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೇರಿಕಗಳಿಗೆ ಪ್ರವಾಸ ಮಾಡಿ ಬಹಾಯಿ ಧರ್ಮದ ಸಂದೇಶವನ್ನು ಸಾರಿದರು. ಅಮೇರಿಕದಲ್ಲಿ ಬಹಾಯಿ ಪ್ರಚಾರಕರನ್ನು ಆರಿಸಿ ಧರ್ಮ ಪ್ರಸಾರದ ಕಾರ್ಯ ನಿರಂತರವಾಗಿ ಸಾಗುವಂತೆ ಮಾಡಿದರು. ಪ್ರಥಮ ಬಹಾಯಿ ಪೂಜಾ ಮಂದಿರ ಕಟ್ಟಿಸಿದರು. ೧೯೨೧ರ ನವೆಂಬರ ೨೮ ರಂದು ಇಹಲೋಕ ತ್ಯಜಿಸಿದ ಅವರ ಸಮಾಧಿ ಈ ಪೂಜಾಮಂದಿರದ ಬಳಿ ಇದೆ.

ಬಹಾವುಲ್ಲಾ ತಮ್ಮ ಮಗ ಅಬ್ದುಲ್ ಬಹಾರನ್ನು "ಭಗವಂತನ ರಹಸ್ಯ"ವೆನ್ನುತ್ತಿದ್ದರು. ಬಹಾಯಿ

ತತ್ತ್ವಗಳ ಅಮೂಲ್ಯ ಪಾದಯಿದರು.

ಅವರ ನಿಧನಾನಂತರ ಬಹಾಯಿಗಳನ್ನು ಮುನ್ನಡೆಸಿ ಧರ್ಮಪ್ರಚಾರಕ್ಕೆ ದೊಡ್ಡ ಕೊಡುಗೆ ನೀಡಿದವರು ಶೋಘಿ ಎಫೆಂಡಿ. ಅಬ್ದುಲ್ ಬಹಾ ಅವರ ಹಿರಿಯ ಮೊಮ್ಮಗ (ಮಗಳ ಮಗ) ಅವರು. ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಇಂಗ್ಲಂಡಿನ ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದಲ್ಲಿ ಓದುತ್ತಿದ್ದ ಶೋಘಿ ಎಫೆಂಡಿ ಬಹಾಯಿಧರ್ಮದ ಬರೆಹಗಳನ್ನೆಲ್ಲಾ ಇಂಗ್ಲೀಷಿಗೆ ಅನುವಾದಿಸಿದ್ದು ಇತರ ಬಹಾಯಿಗಳಿಗೆ ಬಲು ಅನುಕೂಲವಾಯಿತು. ಅರಬ್ಬಿ, ಪರ್ಶಿಯನ್ ಭಾಷೆ ಅರಿಯದ ಬಹಾಯಿಗಳಿಗೆ ಶೋಘಿಯವರ ಈ ಕೆಲಸ ಒಂದು ಉಪಕಾರವೇ ಸರಿ.

ತಾವು ಮುಂದಾಳುವಾಗಿದ್ದ ಮೂವತ್ತಾರು ವರ್ಷಗಳಲ್ಲಿ ಧರ್ಮದ ಪ್ರಗತಿಗಾಗಿ ದುಡಿದ ಎಫೆಂಡಿ ಈ ಅವಧಿಯ ಬಹುಕಾಲವನ್ನು ಅನುವಾದ ಕಾರ್ಯಕ್ಕಾಗಿಯೇ ವಿನಿಯೋಗಿಸಿದರು. ಸ್ಥಳೀಯ ಹಾಗೂ ರಾಷ್ಟ್ರೀಯ ಮಂಡಳಿಗಳ ಮೂಲಕ ಹೇಗೆ ಒಟ್ಟಾಗಿ ಕೆಲಸ ಮಾಡಬೇಕೆಂಬುದನ್ನು ಬಹಾಯಿಗಳಿಗೆ ಕಲಿಸಿದವರೆ ಅವರು. ತಯಾರಾದ ಬಹಾಯಿಗಳನ್ನು ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಕಳುಹಿಸಿ ಧರ್ಮಪ್ರಸಾರಕ್ಕೆ ಅನುವುಮಾಡಿದರು. ಈ ಪ್ರಯತ್ನದಿಂದಾಗಿ ಬಹಾಯಿ ಧರ್ಮ ೨೫೧ ದೇಶಗಳಿಗೆ ಪಸರಿಸಿತು.

ಧರ್ಮದ ಪ್ರಸಾರಕ್ಕೆ ಅವರು ರೂಪಿಸಿಕೊಂಡ ಯೋಜನೆ ಹತ್ತು ವರ್ಷದ್ದು. ಆದರೆ ಈ ದಶವಾರ್ಷಿಕ ಯೋಜನೆ ಪೂರ್ತಿಯಾಗುವ ಮೊದಲೇ ಅಂದರೆ ೧೯೫೭ರ ನವಂಬರ ೪ರಂದು ಎಫೆಂಡಿ ಸ್ವರ್ಗಸ್ಥರಾದರು. ಅದಕ್ಕೂ ಮುಂಚೆಯೇ ಪ್ರಪಂಚದಾದ್ಯಂತ ೪೨೦೦ ಬಹಾಯಿ ಕೇಂದ್ರಗಳು ಸ್ಥಾಪಿತವಾಗಿದ್ದವು. ಬಹಾಯಿ ಸಾಹಿತ್ಯ ೨೦೦ ಭಾಷೆಗಳಿಗೆ ಅನುವಾದಗೊಂಡಿತ್ತು. ಹತ್ತು ವರ್ಷದ ಯೋಜನೆ ಪೂರ್ತಿಗೊಂಡದ್ದು ೧೯೬೩ರಲ್ಲಿ.

ಬಾಬ್ ಸಮಾಧಿಯ ಮೇಲೊಂದು ಗೋಪುರ ನಿರ್ಮಾಣ, ಬಾಬ್ ಮತ್ತು ಬಾಹಾವುಲ್ಲಾರವರ ಬರವಣಿಗೆಗಳನ್ನು ಅವಶೇಷಗಳನ್ನು ರಕ್ಷಿಸಿಡಲು ಅಂತಾರಾಷ್ಟ್ರೀಯ ಸಂಗ್ರಹಾಲಯದ ಸ್ಥಾಪನೆ ಶೋಘಿ ಮಾಡಿದ ಚಿರಂತನ ಕಾರ್ಯ.

ಧರ್ಮ ರಕ್ಷಣೆಗಾಗಿ ೨೭ ಜನರನ್ನು ಪ್ರಧಾನ ನೇತಾರನ್ನಾಗಿ ನಿಯಮಿಸಿದ ಎಫೆಂಡಿ ಬಹಾವುಲ್ಲಾರ ತತ್ತ್ವಗಳ ಪ್ರಸಾರ ನಿರಂತರವಾಗಿ ನಡೆಯುವ ವ್ಯವಸ್ಥೆ ಮಾಡಿದರು. ಶೋಘಿಯವರ ನಿಧನಾನಂತರ ಪ್ರಧಾನ ನೇತಾರರಲ್ಲಿ ಒಂಬತ್ತು ಜನರನ್ನು ಆಯ್ಕೆಮಾಡಿದರು. ಈ ಒಂಬತ್ತು ಜನರಿಗೆ ಕಸ್ಟೋಡಿಯನ್ ಎಂಬ ಗೌರವ ಹುದ್ದೆ.

ದಶವಾರ್ಷಿಕ ಯೋಜನೆಯ ನಂತರ ವಿಶ್ವದ ಬಹಾಯಿಗಳೆಲ್ಲರೂ ಧರ್ಮಶತಮಾನೋತ್ಸವದ ನಿಮಿತ್ತ ಅಂತಾರಾಷ್ಟ್ರೀಯ ನ್ಯಾಯಮಂದಿರವನ್ನು ಚುನಾಯಿಸಿದರು. ಈ ಸಂದರ್ಭದಲ್ಲಿ ಲಂಡನ್ನಿನಲ್ಲಿ ಎಪ್ರಿಲ್ ೨೮ರಿಂದ ಮೇ ೨ರವರೆಗೆ ಆಚರಿಸಲ್ಪಟ್ಟ ಉತ್ಸವಕೂಟದಲ್ಲಿ ವಿವಿಧ ವರ್ಗಗಳ, ವೇಷಭೂಷಣಗಳ ಸುಮಾರು ೬೫೦೦ ಬಹಾಯಿಗಳು ಭಾಗವಹಿಸಿದ್ದರು.

೧೯೭೫ರ ಜುಲೈನಲ್ಲಿ ನಡೆದ ಗಣತಿಯ ಪ್ರಕಾರ ಬಹಾಯಿ ಧರ್ಮದ ಬಗ್ಗೆ ತಿಳಿದು ಬರುವ ಅಂಶಗಳು ಇಷ್ಟು: ಬಹಾಯಿ ರಾಷ್ಟ್ರೀಯ ಆಧ್ಯಾತ್ಮಿಕ ಸಭೆಗಳು ೧೧೯, ಧರ್ಮವು ಹರಡಿರುವ ದೇಶಗಳು ೩೩೫, ಬಹಾಯಿ ಕೇಂದ್ರಗಳು ೭೦ ಸಾವಿರ, ಬಹಾಯಿ ಸಾಹಿತ್ಯ ಅನುವಾದಗೊಂಡ ಭಾಷೆಗಳು ೬೦೦ ಮತ್ತು ಗುಡ್ಡುಗಾಡು, ಕೆಳವರ್ಗದ ಬಹಾಯಿ ಅನುಯಾಯಿಗಳು ೧೭೦೦. ✡

ಶುಕ್ರವಾರಕ್ಕೂ ೧೩ ನೆಯ ತಾರೀಖಿಗೂ ಬಲವಾದ ನಂಟು. ೧೯೭೭ರ ಹಾಗೆ ೨೩೭೭ನೆಯ ವರ್ಷವೂ ಶನಿವಾರದಿಂದಲೇ ಪ್ರಾರಂಭವಾಗುತ್ತದೆ. ಅಷ್ಟೇ ಅಲ್ಲ, ಆ ವರ್ಷದಲ್ಲಿ ಒಂದೇ ಒಂದು ಶುಕ್ರವಾರ ೧೩ನೆಯ ತಾರೀಖಿಗೆ ಬರುತ್ತದೆ.

ನಾಲ್ಕುನೂರು ವರ್ಷದ ಅವಧಿಯಲ್ಲಿ ೧೩ ನೆಯ ತಾರೀಖನ್ನುಳ್ಳ ೬೮೮ ಶುಕ್ರವಾರಗಳೂ, ೬೮೭ ರವಿವಾರ ಅಥವಾ ಬುಧವಾರಗಳು, ೬೮೫ ಸೋಮವಾರ ಇಲ್ಲವೇ ಮಂಗಳವಾರಗಳು ಮತ್ತು ೬೮೪ ಗುರುವಾರ ಇಲ್ಲವೇ ಶನಿವಾರಗಳು ಇದ್ದರೆ ಒಟ್ಟು ೪೮೦೦ ಬಾರಿ ೧೩ನೇ ತಾರೀಖುಗಳು ಬರುತ್ತವೆ.

ಮಾರೀ ಹೋಳಿ

ಎಸ್. ಎನ್. ಗುಬ್ಬಿ


ಟೆಲಿಗ್ರಾಮ್ ಇಂಗ್ಲೀಷಿನಲ್ಲಿತ್ತು. ಕೇವಲ ಐದಾರು ಪದಗಳು. "ಗೌರಜ್ಜಿಗೆ ಕಾಯಿಲೆ. ನಿನ್ನನ್ನು ಕನವರಿಸುತ್ತಿದ್ದಾಳೆ. ತಕ್ಷಣ ಬಾ" ಎಂಬರ್ಥದ ತಂತಿ. ಅವನಿಗೆ ದಿಗಿಲಾಯಿತು. ಆಫೀಸಿನಲ್ಲಿ ರಜೆ ಚೀಟಿ ಕೊಟ್ಟು ಮನೆಯಿಂದ ಬಸ್‌ಸ್ಟ್ಯಾಂಡಿನ ಕಡೆಗೆ ಭರಭರ ಹೆಜ್ಜೆ ಹಾಕುವಾಗ, ತಂತಿಯನ್ನು ನೋಡಿದ ತಕ್ಷಣ ಬಿಂಬಿತವಾಗಿರದ ಒಳ ಅರ್ಥ ತಂತಾನೇ ಮನಸ್ಸಿನಾಳಕ್ಕೆ ಇಳಿಯತೊಡಗಿತು. ಅಜ್ಜಿ ಮರಣಶಯ್ಯೆಯಲ್ಲಿ ಇರಬಹುದು. ಕಣ್ಮುಚ್ಚುವ ಮೊದಲು ತನ್ನ ಮುಖ ನೋಡಲು ಆಸೆಪಡುತ್ತಿದ್ದಾಳೆ ಎನ್ನುವದು ಸ್ಪಷ್ಟವಾಗತೊಡಗಿದಾಗ, "ಕನವರಿಸುತ್ತಿದ್ದಾಳೆ" ಎಂಬ ಪದ ತನ್ನ ಮನಸ್ಸಿನ, ಹೃದಯದ ಮೂಲೆ ಮೂಲೆಗಳಿಂದ ಹೆಕ್ಕಿ, ಹಳೆಯ ಹೊಸ ಸಾವಿರ ಚಿತ್ರಗಳನ್ನು ಬಗೆಗಣ್ಣಿನ ಮುಂದೆ ನಾಗಾಲೋಟ ಓಡಿಸಿದಾಗ ಆ ಪದದ ಅರ್ಥ ವ್ಯಾಪ್ತಿಯ ಬಗ್ಗೆ ಆಶ್ಚರ್ಯವಾಯಿತು. ಚಡಪಡಿಕೆ ಶುರುವಾಯಿತು. ಹಾಳು ಅನಿಯಮಿತ ಬಸ್ಸುಗಳಿಗಾಗಿ ಕಾಯುವದು ದೈವ ದ್ರೋಹವೆಂಬಷ್ಟು ಅಪರಾಧವೆನಿಸಿ ಈಚೆ ಬಂದು ಹೆದ್ದಾರಿಯಲ್ಲಿ ಬುಸುಗುಡುತ್ತ ಓಡುವ ಲಾರಿಗಳಿಗೆ, ಕಾರುಗಳಿಗೆ ಅಡ್ಡಕೈ ಮಾಡತೊಡಗಿದ. ಅರ್ಧಗಂಟೆಯಾದರೂ ಒಂದೂ ವಾಹನ ನಿಲ್ಲಲಿಲ್ಲ. ಕೊನೆಗೊಬ್ಬ ಸರ್ದಾರಜೀ ಮುಖ ಈಚೆ ಚಾಚಿ, "ಕಿಧರ್ ಜಾನೇಕಾ?" ಅಂದ. "ರಾಣೇಬೆನ್ನೂರು" ಅಂದ ಕೂಡಲೇ "ಆವ್" ಅಂದ. ಹತ್ತಿದರೆ ಕ್ಯಾಬಿನ್ನಿನಲ್ಲಿ ಉಸಿರಾಡಲು ಜಾಗವಿಲ್ಲದಂತೆ ಜನ ತುಂಬಿದ್ದರು. ಸುಡುವ ಎಂಜಿನ್ನ ಮುಚ್ಚಳದ ಮೇಲೆ ತಳವೂರಿ ಕುಳಿತ. ತಳದಂತೆ ಎದೆಯೂ ಉರಿಯುತ್ತಿತ್ತು. "ಜರಾ ಜಲ್ದೀಮೇ ಹಂ" ಅಂದದ್ದಕ್ಕೆ ಸರ್ದಾರಜೀ, "ಹಮ್ ಕ್ಯಾ ಕರನೇ ಕಾ?" ಅಂತ ಉದಾಸೀನ ಮಾಡಿದ. ಲಾರಿ ಬಸವನ ಹುಳುವಿನಂತೆ ತೆರಳುತ್ತಿದೆ ಅನ್ನಿಸಿ ಚಡಪಡಿಕೆ ತಾರಕಕ್ಕೇರಿತು. ಅಜ್ಜಿಗೆ ಏನಾಗಿರಬಹುದು? ಎರಡು ತಿಂಗಳ ಹಿಂದೆ ಹೋದಾಗ ಚೆನ್ನಾಗಿದ್ದಳು. ಹೊರಜಗುಲಿಯಲ್ಲಿ ಕುಳಿತು ಕೌದಿ ಹೊಲಿಯುತ್ತಿದ್ದಳು. "ನೋಡೂ೯೯ ಸೂಜಿಬನಾತ್ತು ತಯಾರ ಮಾಡಿಟ್ಟಿದ್ದೀನಿ. ನನಗೊಂದು ಮೊಮ್ಮಗನ್ನ ಯಾವಾಗ ಕೊಡ್ತೀ ?" ಅಂತ ಚೇಷ್ಟೆಮಾಡಿದ್ದಳು. ಏನಾಗಿರಬಹುದು? ಛೀ ಹಾಸಿಗೆಯ ಮೇಲೆ ಅಜ್ಜಿ ನನ್ನ ಹೆಸರು ಹಿಡಿದು ಕ್ಷೀಣವಾಗಿ 'ಬಂದಾ? ಬಂದ್ನಾ?' ಎಂದು ಕೇಳುತ್ತಿರಬಹುದೆನಿಸಿ ಸಂಕಟವಾಗತೊಡಗಿತು. ರಾಣೆಬೆನ್ನೂರಿನ ಬಸ್‌ಸ್ಟ್ಯಾಂಡ್ ಬಳಿ ಸರ್ದಾರಜೀಯ ಕೈಗೆ ಎರಡು ರೂಪಾಯಿ ತುರುಕಿ, ಕೆಳಗೆ ಜಿಗಿದು ಬಸ್‌ಸ್ಟ್ಯಾಂಡ್ ಒಳಗೆ ಓಡಿದ. ಓಡುತ್ತಲೇ ಅಲ್ಲಿ ನಿಂತ ಎಲ್ಲ ಬಸ್ಸುಗಳ ಫಲಕಗಳನ್ನು ನೋಡಿ ನೋಡಿ ರಟ್ಟೀಹಳ್ಳಿಯ ಬಸ್ಸಿಗಾಗಿ ಕಾಯತೊಡಗಿದ. ಕಾಯುವದು



ಅಸಹನೀಯವಾಗತೊಡಗಿತು. ನಿಮಿಷಗಳು ಹಿಗ್ಗಿಕೊಂಡು ವರ್ಷಗಳಾಗತೊಡಗಿದಂತೆ ಕೊನೆಗೊಮ್ಮೆ ಬಸ್ಸು ಹೊರಟಿತು. ಊರು ತಲುಪಿದಾಗ ಮಧ್ಯಾಹ್ನ ಹನ್ನೆರಡಾಗಿತ್ತು. ಮನೆಯ ಹೊರಗೂ ಜನ ಕುಳಿತಿದ್ದರು. ಒಳಗೆ ಕತ್ತಲಲ್ಲಿ ಇದ್ದವರು ಯಾರೋ ಗುರುತಾಗಲಿಲ್ಲ. ಸಣ್ಣಗೆ ಅಳುವ ಧ್ವನಿ. ಗಲಿಬಿಲಿ. ಮಾತುಗಳು. ಜ್ವರ ಬಂದವನಂತೆ ತತ್ತರಿಸುತ್ತ ಒಳಗೆ ನುಗ್ಗಿದಾಗ ಮಂಚದ ಮೇಲೆ ಅಜ್ಜಿಯ ದೇಹ ಅಂಗಾತವಾಗಿತ್ತು. ಅಷ್ಟು ಬಿಳಿಯ ಕೂದಲು. ಸುಕ್ಕುಗಟ್ಟಿದ ಮುಖ. ಮುಚ್ಚಿದ ಕಣ್ಣು. "ಏನಾಯ್ತು?" ಅಂದರೆ "ಈಗ ಒಂದು ಅರ್ಧಗಂಟೆಯಾಗಿರಬಹುದು" ಎಂದು ಯಾರೋ ಉತ್ತರಿಸಿದರು. ಅವನ ಗಂಟಲಿನಲ್ಲಿ ಉಬ್ಬಿ ಹೊಟ್ಟೆಯ ತಳದಿಂದ ಏನೋ ಒಂದು ಕಹಿ ಗಂಟು ಮೇಲೇರಿ ಬಾಯಿಗೆ ಬಂದಂತೆ. ಎದೆಯಲ್ಲಿ ಹುರುಹುರು. ಕಣ್ಣಲ್ಲಿ ನೀರು ತುಂಬಿತು. ಮುಖ ಮುಚ್ಚಿಕೊಂಡು ಅತ್ತು ಬಿಟ್ಟ. ಸುಮಾರು ಹೊತ್ತಿನ ನಂತರ. ಸಣ್ಣ ಹುಡುಗನಂತೆ ಯಾವ ಸಂಕೋಚವೂ ಇಲ್ಲದೆ ತಾನು ಅತ್ತುದರ ನೆನಪಾಗಿ ಅಜ್ಜಿಯ ಮಂಚದ ಕೆಳಗೆ ಕುಳಿತಿದ್ದ ಅತ್ತೆ, ಹಾಗೂ ಮಾವ—ಉಳಿದವರನ್ನು ನೋಡಿದ. ಎಲ್ಲರ ಕಣ್ಣುಗಳೂ ತನ್ನ ಮೇಲೆಯೇ. ಅಜ್ಜಿಗೆ ತಾನು ಮುಖ ತೋರಿಸಲಾಗಲಿಲ್ಲ. ಅಜ್ಜಿಯ ಕೊನೆ ಗಳಿಗೆಯಲ್ಲಿ ಅವಳ ಬಳಿ ತಾನಿರಲಿಲ್ಲ ಎನಿಸಿ ಅವನಿಗೆ ಮತ್ತೊಮ್ಮೆ ದುಃಖ ಉಮ್ಮಳಿಸಿತು.

ಆಗಲೇ ಮುಂದಿನ ಸಿದ್ಧತೆಗಳು ನಡೆದಿದ್ದವು. 'ಬಾಳಿದ್ಲು, ಬದುಕಿದ್ಲು. ಎಲ್ಲಾ ಆಯ್ತು. ನಡೆದ್ಲು. ಸುಮ್ನೇ ಯಾಕೆ ಕಣ್ಣೀರು ಹಾಕ್ತೀರಿ?' ಅಂತ ಯಾರೋ ಇನ್ನಾರನ್ನೋ ಸಮಾಧಾನ ಮಾಡುತ್ತಿದ್ದರು. ಅಲ್ಲಿಂದ ಇಲ್ಲಿಂದ ಎಲ್ಲ ಸಂಬಂಧಿಕರು ಬಂದಾದ ಮೇಲೆ ಚಟ್ಟ ಎತ್ತಿದಾಗ ಸಂಜೆ ಆರು ಗಂಟೆಯಾಗಿತ್ತು.

ನದಿಯ ಮೇಲ್ಭಾಗದ ರುದ್ರಭೂಮಿಯಲ್ಲಿ ಅಜ್ಜಿಯ ಶವಸಂಸ್ಕಾರ ಮುಗಿದಾಗ ರಾತ್ರಿ ಏಳೂವರೆ ಎಂಟಾಗಿರಬಹುದು. ತಣ್ಣಗೆ ಬೆಳದಿಂಗಳು. ಅದೇ ಕುಮುದ್ವತಿ ನದಿ. ಅದೇ ದಡಗಳು. ಅದೇ ನೀರು. ಅದೇ ರಭಸ. ಅದೇ ನಿರ್ಲಿಪ್ತತೆ. ಎಲ್ಲರೂ ನೀರಿನಲ್ಲಿ ಒಂದು ಮುಳುಗು ಹಾಕಿ ಮನೆಯ ಕಡೆಗೆ ನಡೆದರು. ಅವನು ಮತ್ತಷ್ಟು ಸಮಯ ನದಿಯ ಬಂಡೆಯೊಂದರ ಮೇಲೆ ಕಾಲು ನೀರಿಗೆ ಇಳಿಬಿಟ್ಟು ಕುಳಿತ. ಮನಸ್ಸು [illegible].



ಆತುರ. ಕೆಂಪು ಪ್ರವಾಹದ ಅಟ್ಟಹಾಸ. ಮೇಲ್ಗಡೆಯ ಪ್ರದೇಶದಲ್ಲಿ ನಿನ್ನೆ ಮೊನ್ನೆ ಚೆನ್ನಾಗಿ ಮಳೆ ಬಿದ್ದಿರಬೇಕು. ಜುಲೈ ತಿಂಗಳ ಮಧ್ಯಭಾಗ. ಈ ಪ್ರವಾಹ. ಈ ಬಂಡೆಗಲ್ಲು. ಮಡುವು. ಸುಳಿಗಳು ಅವನಿಗೆ ತನ್ನ ಧ್ವನಿಯಷ್ಟೇ ಪರಿಚಿತ. ಬಾಲ್ಯದ. ಹದಿಹರೆಯದ ಇಪ್ಪತ್ತು ವರ್ಷಗಳಲ್ಲಿ ಈ ಪ್ರವಾಹದ ಮಡಿಲಲ್ಲಿ ಅದೆಷ್ಟು ಸಲ ಮೈ ಚೆಲ್ಲಿ ತೇಲಿ ಈಜಾಡಿಲ್ಲ! ಅದೆಷ್ಟು ಸಲ ಮಾವನ ಕೈಯಿಂದ ಹೊಡೆತ ತಿಂದಿಲ್ಲ!

ಹೊಳೆಯ ಈ ಭಾಗಕ್ಕೆ ಮಾರೀಹೊಳೆಯೆಂದು ಹೆಸರು. ಅಲ್ಲಿ ಮೇಲೆಯೇ ಇರುವ ಮಾರಿ ದೇವಿಯ ಹಾಳು ಗುಡಿಯಿಂದಲೋ ಅಥವಾ ಈ ಹೊಳೆಯ ಮಾರೀ ರಭಸ. ಹಾವಳಿಗಳಿಂದಲೋ ಆ ಹೆಸರು ಅನ್ವರ್ಥಕವಾಗಿತ್ತು. ಹೊಸಬರು ಯಾರಾದರೂ ಇಲ್ಲಿ ಈಜಲು ಇಳಿದರೆ ಆಯ್ತು: ಅವರು ಮಾರಿಗೆ ಆಹುತಿಯಾದಂತೆಯೇ. ಅಂಥ ಕಡಿದಾದ ಪ್ರವಾಹ ಮಾರ್ಗವದು. ಎರಡು–ಮೂರು ಫರ್ಲಾಂಗಿನಷ್ಟು ಘೋರ್ ಎಂದು ರಾಕ್ಷಸಾಕಾರದ ಬಂಡೆಗಲ್ಲುಗಳನ್ನು ಸುಳಿಸುಳಿಯಾಗಿ ತೀಡಿಕೊಂಡು, ಬಳಸಿಕೊಂಡು ಓಡಿ, ಒಮ್ಮೆಲೇ ತಿರುವಿನಲ್ಲಿ ತಿರುಗಿ, ಮಡಗುಟ್ಟಿ ನಿಶ್ಶಬ್ದವಾಗುವ ಈ ಭಾಗ ಎಷ್ಟು ಗಂಡಾಂತರಕರವೊ ಅಷ್ಟೇ ಆಕರ್ಷಕವೂ ಹೌದು. ಹೊಳೆಯಲ್ಲಿ ಹಾರಾಡುವದೆಂದರೆ ಅವನಿಗೊಂದು ಹುಚ್ಚು. ಅಜ್ಜಿಯ ಪ್ರೀತಿಯ ಆತಂಕವಾಗಲಿ. ಮಾವನ ಬೆತ್ತದ ಏಟುಗಳಾಗಲಿ ಅವನ ಹಾಗೂ ಈ ಹೊಳೆಯ ವಿಲಕ್ಷಣ ಸಂಬಂಧಕ್ಕೆ. ಸ್ನೇಹಕ್ಕೆ ಅಡ್ಡಿಯಾಗಲು ಎಂದೂ ಸಮರ್ಥವಾಗಲಿಲ್ಲ. ಈ ರಭಸದಲ್ಲಿ ಹುಲ್ಲು ಕಡ್ಡಿಯಂತೆ ತೇಲಿ. ಅದೇ ವೇಗದಲ್ಲಿ ಸಾಗುತ್ತಿರುವಾಗಲೇ ತಿರುವಿನ ಮೂಲೆಯ ದೊಡ್ಡ ಬಂಡೆಯನ್ನು ಹಾರುವಂತೆ ಅಪ್ಪಿ ಮೇಲೇರುವದೊಂದು ಸಾಹಸ. ಆ ಬಂಡೆಯ ಆಸರೆ ತಪ್ಪಿದರೆ ತಿರುಗಿ ಆಚೆಯ ದಂಡೆಗೆ ಈಜಿ. ದಂಡೆಗುಂಟ ಮೂರು ಫರ್ಲಾಂಗು ಮೇಲಕ್ಕೆ ನಡೆದು, ಇಳಿದು ಈಜಿ. ಈ ಕಡೆಗೆ ಬರಬೇಕು. ತಿರುಗಿ ಅದೇ ಬಂಡೆಯನ್ನು ಹಿಡಿಯಬೇಕು. ಬೇರೆ ಮಾರ್ಗವೇ ಇಲ್ಲ. ಕೈ ತಪ್ಪಿ ಮುಂದೆ ಸಾಗಿದರೆ ಅಲ್ಲಿಯೇ 'ಮಾರಿ ಮಡು'. ಅಜ್ಜಿಯ ಊರು ಬಿಟ್ಟು ಕಾಲೇಜಿಗೆಂದು. ನಂತರ ನೌಕರಿಗೆಂದು ಹತ್ತು ವರ್ಷದಿಂದ ಪಟ್ಟಣ ಸೇರಿದ್ದರೂ ಅಜ್ಜಿಯ ಊರು ಮರೆತೀತೇ?

ಈ ಬಾರಿನ ಮಾರೀ ಹೊಳೆ ಮರೆತೀತೆ?

ಆದರೆ ಇಂದು ಹೊಳೆ ಎಂದಿನ ಅದೇ ಆವೇಗದಲ್ಲಿಯೇ ಹರಿಯುತ್ತಿದೆ. ಹೊಳೆ ಇಲ್ಲಿಯೇ ಹೀಗೇ ಸಾಗುತ್ತಿರುತ್ತದೆ. ಅಜ್ಜಿ ಮಾತ್ರ ಇಲ್ಲ. ಅವಳ ತೇಲಾಟ ಮುಗಿದು ಮಾರೀ ಮಡುವಿನಲ್ಲಿ ತಿರುಗಣೆ ತಿರುಗಿ ಕೆಳಗಿಳಿದು ಪಾತಾಳ ಸೇರಿದ್ದಾಳೆ. ಆದರೂ ಈ ಹೊಳೆಗೇಕೆ ಇಂಥ ಸ್ವಾನುರಕ್ತಿ? ಇಂಥ ಬಾಹ್ಯನಿರ್ಲಿಪ್ತತೆ?

ಅವನ ಅಜ್ಜಿಗೆ ಅವನ ತಾಯಿ ಒಬ್ಬಳೇ ಹೆಣ್ಣು ಮಗಳು. ಅದಕ್ಕಾಗಿಯೇ ಅಥವಾ ತಾಯಿ ಸತ್ತ ಮಗುವೆಂದೋ ಏನೋ ಇವನ ಮೇಲೆ ಅಜ್ಜಿ ಬದುಕ್ಕೆಲ್ಲಿಲ್ಲದ ಪ್ರೀತಿ, ಮಮತೆ. ಅವನು ಅಜ್ಜಿಯಸೆ ರಗಿನಲ್ಲಿ ಅವಿತುಕೊಂಡು ಸೋದರ ಮಾವನ ಛಡಿ ಏಟುಗಳಿಂದ ತಪ್ಪಿಸಿಕೊಂಡಿದ್ದಾನೆ. ಅಜ್ಜಿಯ ಮೊಳಕಾಲುಗಳನ್ನು ಎರಡೂ ಕೈಯಿಂದ ಬಳಸಿ ತಬ್ಬಿಕೊಂಡು ಅವಳ ಸೀರೆಯ ನಿರಿಗೆಗಳಲ್ಲಿ ಮುಖ ಹುದುಗಿಸಿ ಅತ್ತಿದ್ದಾನೆ. ಅವಳು ಬಾಗಿ ಪಡಸಾಲೆಯ ಕಸ ಗುಡಿಸುವಾಗ ಅವಳ ಕುತ್ತಿಗೆಯನ್ನು ಬಳಸಿ ಬೆನ್ನ ಮೇಲೆ ಜೋತಾಡಿದ್ದಾನೆ. ಹಟ್ಟಿಯಲ್ಲಿ ಹಾಲು ಕರೆಯುವಾಗ ಪಕ್ಕದಲ್ಲಿಯೇ ಕುಕ್ಕರಗಾಲಿನಿಂದ ಕುಳಿತಿದ್ದು ಹಾಲು ಅಡಿಗೆ ಮನೆ ಮುಟ್ಟುವ ಮೊದಲೇ ಒಂದು ಲೋಟ ನೊರೆ ನೊರೆಯಾದ ಹಾಲು ಗಿಟ್ಟಿಸಿದ್ದಾನೆ. ಬೆತ್ತಲೆ ನಿಲ್ಲಿಸಿ ನೆತ್ತಿಯಿಂದ ಅಂಗಾಲವರೆಗೆ ತಪತಪ ಎಣ್ಣೆ ಹಚ್ಚಿ ತಿಕ್ಕಿ ಮೈ ಚುರುಗುಟ್ಟುವಂತೆ ಸುಡುಸುಡುವ ನೀರು ಹೊಯ್ಯುವಾಗ ರಂಪ ಮಾಡಿದ್ದಾನೆ.

ಅಜ್ಜಿಯ ಬದುಕೂ ಅಷ್ಟೆ. ಹಟ್ಟಿಯಲ್ಲಿಯ ಬಿಳಿಹಸುವಿನಂತೆ. ಮನೆಗೆಲಸ, ಮೊಮ್ಮಕ್ಕಳು, ಶಿವ ಪೂಜೆ, ನಿದ್ರೆ. ಜಗಳವಿಲ್ಲ. ಎಂದೂ ಧ್ವನಿ ಏರಿಸಿದ ನೆನಪಿಲ್ಲ. ತೀರ ಸಿಟ್ಟಿನ ಪ್ರಸಂಗಗಳಲ್ಲಿ ಬಚ್ಚಲು ಮನೆಯಲ್ಲಿಯ ಮೈಲಿಗೆ ಅರಿವೆಗಳನ್ನು ತುಂಬಿಕೊಂಡು ಹೊಳೆಯ ಪಾವಟಿಗೆಗಳ ಮೇಲೆ ರಪರಪ ಬಡಿದು ಸೆಳೆಯುತ್ತಿದ್ದುದು ಎಷ್ಟೋ ಅಷ್ಟೆ. ಅಜ್ಜ ಬದುಕಿದ್ದಾಗ ಅವನು ಬಳಸುತ್ತಿದ್ದ ತಾಂಬೂಲದ ಚಂಚಿ ಯಾವಾಗಲೂ ಅಜ್ಜಿಯ ಬಳಿಯಿರುತ್ತಿತ್ತು.

ಶವಸಂಸ್ಕಾರ ಮುಗಿಸಿ ನೀರಲ್ಲಿ ಮುಳುಗಿ ಮನೆ ಸೇರಿದ ಜನರಿಗೆ ಈಗಾಗಲೇ ನಾಳಿನ ಬದುಕು, ಮನೆಗಳ ಚಿಂತೆ ಶುರುವಾಗಿರಬಹುದು. ಇಂದು ಅಜ್ಜಿ ಸತ್ತಳು. ಇಂದಿನ ದಿನ ಸತ್ತಿತು. ಆಯ್ತು ಅಷ್ಟೇನೇ? ಇಷ್ಟು ಸುಲಭವಾಗಿ? ಕೊನೆಯಲ್ಲಿ ಎಲ್ಲವೂ ಮರೆವಿನ ಪದರುಗಳಿಗೆ ಆಸ್ತಿ; ಅಥವಾ ಸಂಬಂಧಗಳ ನೆನಪಿನ ತೀವ್ರತೆಗೆ ಜಂಗು. ಮುಂದೊಂದು ದಿನ ನಾನೂ ಹೀಗೆ ಅಜ್ಜಿಯನ್ನು...? ಸಂಕಟವಾಯಿತು. ನೀರಿನಿಂದ ಕಾಲು ಮೇಲೆಳೆದುಕೊಂಡಾಗ ಜವುಗು ಹಿಡಿದಂತಾಗಿ ಕಾಲು ಮರಗಟ್ಟಿದ್ದವು.

ಮನೆಗೆ ಬಂದಾಗ ಎಲ್ಲರೂ ಅವನಿಗಾಗಿ ಕಾಯುತ್ತಿದ್ದರು, ಮಾವ "ಯಾಕೆ ಇಷ್ಟೊತ್ತು?" ಅಂದ. ಇವನು ಉತ್ತರ ಕೊಡದೆ ಒಳಗೆ ನಡೆದ. ಅತ್ತೆ "ಊಟ ಮಾಡುಬಾ!" ಅಂದಳು. ಅಂದು ಬಹುಶಃ ಯಾರೂ ಊಟ ಮಾಡಿಲ್ಲ ಎಂಬುದು ಅವನಿಗೆ ಗೊತ್ತು. ಆದರೂ ಶಿಷ್ಟಾಚಾರಕ್ಕೆಂದು ಊಟಕ್ಕೆ ಕರೆದಿರಬಹುದೆನಿಸಿತು. ಅತ್ತೆಯ ಮುಖ ನೋಡಿದ. ಸಿಟ್ಟು ಬಂತು. ಅಜ್ಜಿ ಹೋಗಿ ಇನ್ನೂ... ತಕ್ಷಣ ಇದೆಂಥ ಮೂರ್ಖತನ ಎನಿಸಿ ತನ್ನ ಮೇಲೂ ಕೋಪ ಹೊಗೆಯಾಡಿತು. ಯಾರು ಸತ್ತರೆ ಯಾಕೆ ಊಟ ಬಿಡಬೇಕು? ಬಿಟ್ಟರೂ ಎಷ್ಟು ದಿನ ಬಿಡಲು ಸಾಧ್ಯ? ಈ ಬೂಟಾಟಿಕೆ ಯಾಕೆ ಮತ್ತೆ? ಹೇಗೂ ಮುಂಜಾನೆ ತಾರು ಕೈಗೆ ಸಿಕ್ಕಿದಾಗಿನಿಂದ ಹೊಟ್ಟೆಗೆ ಏನೂ ಹಾಕಿರಲಿಲ್ಲ. ಯಾರು ಏನಾದರೂ ತಿಳಿದುಕೊಳ್ಳಲಿ. ಯಾರಿಂದ ನನಗೇನು? ಎಂದುಕೊಂಡು ಎದ್ದು ಬಚ್ಚಲಿಗೆ ಹೋಗಿ ಕೈಕಾಲು ತೊಳೆದು ಬಂದು ಅಡಿಗೆ ಮನೆಯಲ್ಲಿ ತಾನೇ ಮಣೆ ಹಾಕಿಕೊಂಡು ಕುಳಿತ. ಮನೆಯ ತುಂಬ ಏನೋ ಹಸಿಗಸಿ ವಾಸನೆ ತುಂಬಿದುತಿತ್ತು. ಅತ್ತೆ ಊಟಕ್ಕೆ ಕರೆದ ಶಾಸ್ತ್ರ ಮಾಡಿ ಆಗಲೇ ಕೋಣೆ ಸೇರಿದ್ದಳು. ಇವನು "ಶಾರೀ"ಎಂದು ಅರ್ಧಮರ್ಧ ಚೀರುವ ದನಿಯಲ್ಲಿ ಹೆಂಡತಿಯನ್ನು ಕೂಗಿದ. ಅವಳು ಅವಸರವಸರವಾಗಿ ಬಂದು ಒಂದು ಕ್ಷಣ ಇವನ ಮುಖ ನೋಡಿ ಅನುಮಾನಿಸುತ್ತ ನಿಂತಳು. ಸಿಟ್ಟಿನಿಂದಲೋ, ಹಸಿವೆಯಿಂದಲೋ ಅಥವಾ ದುಃಖದಿಂದಲೋ ಅವನ ಮುಖ ಕೆಂಪಗಾಗಿತ್ತು. ಗಂಡನ ಕೋಪ ತಾಪಗಳು ಅವಳಿಗೆ ಹೊಸವಲ್ಲ. ಅವನು ಸಿಟ್ಟಿಗೆದ್ದಾಗ ಅವಳ ಕಣ್ಣಿಗೆ ಇನ್ನೂ ಅಪರಿಚಿತನಾಗಿ ಕಾಣುತ್ತಾನೆ. ಅವಳು ಅನ್ನ ಬಡಿಸಿದಳು. ಅನ್ನ ತಣ್ಣಗಿತ್ತು. ಅಜ್ಜಿಯ ಸಾವಿಗೆ

ಶಾರದೆಯೇ ಕಾರಣವೆಂಬಂತೆ ಅವಳನ್ನು ದುರುಗುಟ್ಟಿದ. ಪಟದಿಂದ ನಾಲ್ಕು ತುತ್ತು ಗಬಗಬ ನುಂಗಿದ. ಅಲ್ಲಿಗೆ ಹೊಕ್ಕುಳಿಂದ ಗಂಟಲವರೆಗಿನ ಎಲ್ಲ ಜಾಗ ತುಂಬಿದಂತಾಗಿ ಗಂಗಾಳನ್ನು ಸರಿಸಿ ನೀರು ಕುಡಿದು ಮೇಲೆದ್ದ. ಅಜ್ಜಿ, ಶಾರದೆಗೂ ಅಜ್ಜಿಯಲ್ಲವೇ? ತನ್ನ ತಂದೆಯ ತಾಯಿ. ತನ್ನ ಗಂಡನ ಹಾಗೂ ಅಜ್ಜಿಯ ನಡುವಿನ ವಾತ್ಸಲ್ಯ ಅವಳಿಗೆ ಗೊತ್ತಿಲ್ಲವೇ? ಆದರೆ ಇವರೇಕೆ ಹೀಗೆ ತನ್ನ ಮೇಲೆ ಹರಿಹಾಯಬೇಕು?

ರಾತ್ರಿ ಎಡದಿಂದ ಬಲಮಗ್ಗುಲಿಗೆ, ಬಲದಿಂದ ಎಡಕ್ಕೆ ಹೊರಳಾಡಿ ಇನ್ನೊಮ್ಮೆ ಅಂಗಾತ, ಮತ್ತೊಮ್ಮೆ ಬೋರಲು ಮಲಗಿ ಉರುಳಾಡಿದರೂ ನಿದ್ರೆಯಿಲ್ಲ. ಒಂದು ರೀತಿಯ ಮಂಪರು ತಳಮಳ. ಸ್ತ್ರೀ ಜಗತ್ತಿನೊಡನೆ ತನಗಿದ್ದ ಏಕೈಕ ಆತ್ಮೀಯ ಎಳೆ ಹರಿದ ಅನುಭವ, ನಿಗೂಢ ಸ್ಮೃತಿಯಲ್ಲಿ ಸುಳಿದಾಡಿದಂತೆ. ಈಗ ಉಳಿದಿರುವದು ಬರಿಯ ದ್ವೇಷ, ಕಳವಳ–ಯಾರೋ ಹೆಡೆಯ ಮೇಲೆ ಹೆಜ್ಜೆ ಇಟ್ಟಂತೆ ಯಾರದು? ಲಕ್ಷ್ಮಿಘೂ–ಊಹೂಂ, ತಕ್ಷಣ, ವಿಲಕ್ಷಣ ಆಸೆ. ಕ್ರೌರ್ಯ ರತಿಯ ಉತ್ಕಟತೆ. ಕಣ್ಣು ಮುಚ್ಚಿ ಮುಖ ಮೇಲೆ ಮಾಡಿ ಅಂಗಾತ ಮಲಗಿದ ಲಕ್ಷ್ಮಿ. ಅದೇ ರಕ್ತವರ್ಣದ ಕೆನ್ನೆ. ನೀಳ ಮೂಗು. ಮೂಗಿನ ಹೊರಳೆಗಳೇಕೆ ವ್ಯತ್ಯಸ್ತ? ಮೈಕಾವು ಏರಿ ತಡೆಯಲಾರದ ಸೆಟೆ. ಝಾಡಿಸಿ ಒದ್ದು, ಮಹಡಿಯಿಂದ ಕೆಳಕ್ಕೆ ಬೋರಲು ಬಿದ್ದ ತನ್ನನ್ನು ನೋಡಿ ಗಹಗಹಿಸುವ ಲಕ್ಷ್ಮಿಯ ಮುಖ. ಪಕಪಕ ನಗುವಾಗ ಏರಿಳಿಯುವ ಅದೇ ವಿಕೃತ ಹೊರಳೆಗಳು–ಕತ್ತಲಲ್ಲಿ ಕೈಚಾಚಿದ. ಕೈಗೆಸಿಕ್ಕ ಶಾರದೆಯ ರಟ್ಟೆ ಕಂಪಿಸಿದ್ದು ಜ್ವರದಿಂದ ತೀವ್ರವಾದ ಇವನ ಅಂಗೈಗೂ ತಿಳಿದಿರಲಾರದು. ಮಗ್ಗುಲಾಗಿ ಇನ್ನೊಂದು ಕೈಯನ್ನು ಅವಳ ಎದೆಯ ಮೇಲಿಂದ ಚಾಚಿ ಕಂಕುಳ ಕೆಳಗೆ ತೂರಿಸಿ ಬಲವಾಗಿ ತನ್ನೆಡೆಗೆ ಎಳೆದುಕೊಂಡ. ಶಾರದೆ ದಿಗ್ಗನೇ ಎದ್ದು ಕುಳಿತಳು. ಗಂಡ ನಿದ್ರೆಯಲ್ಲಿ ಕನಸಿನಲ್ಲಿರಬಹುದೆಂದು ತಿಳಿದು ಅವನ ಮೈ ಹಿಡಿದು ಅಲುಗಾಡಿಸತೊಡಗಿದಳು. "ಅಂ...ಹೂಂ ಏಳ್ರಿ, ಏಳ್ರಿ ಯಾಕ ಏನು?" ಎಂದು ತೊದಲಿದಳು. ಕೊಸರಾಡಿ ಅವನ ಆಕ್ಟೋಪಸ್ ಹಿಡಿತದಿಂದ ಬಿಡಿಸಿಕೊಂಡು ಗೋಡೆಯೆಡೆಗೆ ಸರಸರ ತೆವಳಿ ಕೈ ಮೇಲೆ ಚಾಚಿ ಸ್ವಿಚ್ ಅದುಮಿದಳು. ಝಗ್ಗನೇ ದೀಪ ಹತ್ತಿತ್ತು. ಗಂಡನ ಜ್ವರದಿಂದ ತೊಯ್ದು ಹಣೆ, ಏದುಸಿರು ಬಿಡುವ ಎದೆ, ನೋವಿನ ಪ್ರವಾಹವನ್ನು ಅಣೆಕಟ್ಟಿನಂತೆ ತಡೆಹಿಡಿದು ಬಿಗಿದ ತುಟಿಗಳು. ಕೆಂಪುಗೋಲಗಳಂತೆ ಹೊರಳಾಡುವ ಕಣ್ಣುಗುಡ್ಡೆ. ಅವಳು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಊಹೂಂ... ಗಂಡನ ಈ ಯಾತನೆಯ ಕಣ್ಣುಗಳು ಅವಳಿಗೆಂದೆಂದೂ ಅರ್ಥವಾಗುವದಿಲ್ಲ. ಎಂದೂ ಇಲ್ಲ... ಎಂದೂ...

ಲಾವಾರಸದಂತೆ ಅವನು ಬಹು ನಿಧಾನವಾಗಿ ತಣ್ಣಗಾಗತೊಡಗಿದ. ಅವಳನ್ನು ಸಮಾಧಾನಪಡಿಸುವ ಗೋಜಿಗೆ ಹೋಗದೆ ತಲೆದಿಂಬಿನ ಪಕ್ಕದಲ್ಲಿದ್ದ ಪ್ಯಾಕಿನಿಂದ ಸಿಗರೇಟೊಂದನ್ನು ಹಚ್ಚಿ ಹೊಗೆ ಉಗುಳತೊಡಗಿದ. ಎದ್ದು ಕಿಡಕಿಯ ಆಚೆಗಿನ ಕತ್ತಲನ್ನು ಸೀಳುವವನಂತೆ ನೋಡುತ್ತ ನಿಂತ. ನಿಧಾನವಾಗಿ ಹಿಂತಿರುಗಿ ನೋಡಿದ. ಗೋಡೆಗೆ ಆತುಕೊಂಡು ಕಣ್ಣಿಗೆ ಸೆರಗೊತ್ತಿಕೊಂಡು ಬಿಕ್ಕುವ ಶಾರದೆಯ ಸೆರಗು ಸರಿದಿದ್ದರಿಂದ ಎಂಟು ತಿಂಗಳು ತುಂಬಿದ ಬಸಿರು ಬಿಳಿಬಿಳಿಯಾಗಿ ಕಾಣಿಸಿತು. ಅವಳು ಬಿಕ್ಕಿದಾಗೆಲ್ಲ ಇನ್ನಷ್ಟು ಉಬ್ಬಿ ಇಳಿಯುವ ತುಂಬು ಬಸಿರು. ಅವನಿಗೆ ಸ್ವಯಂ ಭರ್ತ್ಸನೆಯುಂಟಾಗಿ ನಾಚಿಕೆಯಾಯಿತು. ಎರಡು ತಿಂಗಳ ಹಿಂದೆ ಹೆರಿಗೆಗೆಂದು ತವರಿಗೆ ಬಂದ ಮೇಲೆ ಅವಳಿಗೊಂದು ಕಾಗದವನ್ನೂ ಬರೆದಿರಲಿಲ್ಲ. ಅವಳು ಬರೆದ ಕಾಗದಗಳಿಗೆ ಉತ್ತರ ಸಹ ಗೀಚಿರಲಿಲ್ಲ. ಸಿಗರೇಟು ತುಂಡನ್ನು ಕಿಡಕಿಯ ಹೊರಗೆ ಎಸೆದು ತನ ಮಾನಸಿಕ ಪೇಚಾಟವನ್ನು ಮುಚ್ಚಿಕೊಳ್ಳಲೋ ಎಂಬಂಥ ಸೆಟೆಯಲ್ಲಿಯೂ ತುಂಬ ಹೊದೆದು ಉದ್ದಗೆ ಕಾಲು ಚಾಚಿ ಮಲಗಿದ.

ಬೆಳಗು ಮುಂಜಾನೆ ಐದು ಗಂಟೆಯ ಸುಮಾರಿಗೆ ಹೊಡೆದೆಬ್ಬಿಸಿದಂತೆ ಅವನಿಗೆ ಎಚ್ಚರವಾಯಿತು. ಸ್ವಲ್ಪ ಹೊತ್ತು ಕತ್ತಲೆಗೆ ಕಣ್ಣು ಹೊಂದಿಕೊಂಡ ನಂತರ ಹೊರಳಿ ನೋಡಿದರೆ ಅಲ್ಲಿಯೇ ಗೋಡೆಯ ಪಕ್ಕದಲ್ಲಿ ಬರಿನೆಲದ ಮೇಲೆ ಶಾರದೆ ಮುದ್ದೆಯಂತೆ ಮುದುಡಿಕೊಂಡಿದ್ದಳು. ಚುರುಕುಮುಟ್ಟಿದಂತಾಗಿ ಇವನು ಎದ್ದು ಅವಳ ಸಮೀಪ ಬಂದ. ಎಬ್ಬಿಸಿದರೆ ಅವಳಿಗೆ ತಿರುಗಿ ನಿದ್ದೆ ಹತ್ತಲಿಕ್ಕಿಲ್ಲ ಎನಿಸಿ ರಗ್ಗು ತಂದು ಅವಳಿಗೆ ಮೈತುಂಬ ಹೊದಿಸಿದ. ಕ್ಷಣ ಹೊತ್ತು ಹಾಗೇ ನಿಂತಿದ್ದು ಕತ್ತಲೆಯಲ್ಲಿಯೇ ಕದ ತೆಗೆದು ಹೊರಗೆ ಬಂದ. ಬೀದಿಗಿಳಿದು ಮುಂದೆ

ಸಾಗಿದ. ಅಲ್ಲೊಂದು ಇಲ್ಲೊಂದು ನಾಯಿಗಳ ಬೌಬೌ ಸದ್ದು ಇವನ ಕಿವಿಗೆ ಬೀಳಲಿಲ್ಲ. ತಲೆ ತಗ್ಗಿಸಿ ಹಾಗೇ ನಡೆದು ಎಲ್ಲೋ ಒಂದು ಕಡೆ ಗಕ್ಕನೇ ನಿಂತ. ಕಣ್ಣೆದುರಿಗೆ ಮತ್ತೆ ಅದೇ ಆತುರದ ಘೋರ್ ಘೋರ್ ರವಗುಟ್ಟುವ ಹೊಳೆ. ತಣ್ಣಗಿನ ಗಾಳಿ. ಚಳಿಯಾಗ ತೊಡಗಿತು. ಹಿಂತಿರುಗಿ ಹೊಳೆಗೆ ಬೆನ್ನು ಮಾಡಿ ನಿಂತಾಗ ಎತ್ತರದಲ್ಲಿ ದಿಬ್ಬದ ಮೇಲೆ ಕದಂಬೇಶ್ವರನ ಕಲ್ಲು ದೇವಸ್ಥಾನ ಕಾಣಿಸಿತು. ದಿಬ್ಬ ಏರ ತೊಡಗಿದಾಗ ಕಾಲಲ್ಲಿ ಮೆಟ್ಟುಗಳಾಗಲಿ ಹೆಗಲ ಮೇಲೆ ವಸ್ತ್ರವಾಗಲಿ ಇಲ್ಲದುದು ಗಮನಕ್ಕೆ ಬಂತು. ಗುಡಿಯನ್ನು ತಲುಪಿ ಅರಳೀ ಮರದ ಕಾಂಡದಂತೆ ಅಗಾಧವಾದ ಸುತ್ತಳತೆಯ ಕಲ್ಲುಗಂಭವೊಂದಕ್ಕೆ ಆತುಕೊಂಡು ಕುಳಿತ. ಹತ್ತಾರು ಇಂಥ ಕಂಬಗಳು ಮಾಳಿಗೆಯ ಕಡೆಯಿಂದ ಕೆಳಕ್ಕೆ ಇಳಿದು ಭೂಮಿಯಲ್ಲಿ ಬೇರು ಬಿಟ್ಟಂತೆ ಕಂಡವು. ಗರ್ಭಗುಡಿಯವರೆಗೆ ಎಂದೂ ಯಾರೂ ಹೋಗಿರಲಿಕ್ಕಿಲ್ಲ. ಹಾಡು ಹಗಲಿನಲ್ಲಿಯೇ ಒಳಗೆ ಸರಿರಾತ್ರಿಯ ಕತ್ತಲೆ ತುಂಬಿರುತ್ತದೆ. ಎಲ್ಲಿ ನೋಡಿದಲ್ಲಿ ಜೇಡನ ಬಲೆಗಳು, ತೊಗಲುಬಾವಲಿಗಳು, ಗುಬ್ಬಿ ಕಾಗೆಗಳ ಗೂಡುಗಳು, ಪುಂಡು ದನಗಳ ಶೆಗಣಿಯ ವಾಸನೆ. ಇದು ಜಕ್ಕಣಾಚಾರಿ ಒಂದೇ ರಾತ್ರಿಯಲ್ಲಿ ಕಟ್ಟಿದ ಗುಡಿಯಂತೆ! ನಮ್ಮ ನಾಡಿನಲ್ಲಿ ಎಲ್ಲ ಗುಡಿ ಮಠಗಳೂ ಜಕ್ಕಣ್ಣ ಕಟ್ಟಿದವುಗಳೇ. ಅದೂ ಒಂದೊಂದು ರಾತ್ರಿಯಲ್ಲಿ! 'ಈ ಜನರ ನಂಬಿಕೆಗಿಷ್ಟು ಶೆಗಣಿ ಹಾಕಾ' ಎಂದುಕೊಳ್ಳುತ್ತಿದ್ದಂತೆ ಇವನು ಕುಳಿತ ಕಂಬದ ಆ ಬದಿಗೆ ಏನೋ ಸರಪರ ಸದ್ದಾದಂತಾಯ್ತು. ಗೋಣು ಚಾಚಿ ಕಣ್ಣು ಅಗಲಿಸಿದರೆ ಎರಡು ಅರೆ ಕತ್ತಲೆ ದೇಹಗಳು ಹರಕುಪರಕು ಹಾಸಿಗೆಯ ಮೇಲೆ ಒಂದಕ್ಕೊಂದು ಹಾವಿನಂತೆ ತಳಕು ಹಾಕಿ ಮಲಗಿದ್ದವು. ಸಮೀಪದಲ್ಲಿ ಮೂರು ಕಲ್ಲಿನ ಒಲೆ. ಒಂದೆರಡು ಪಾತ್ರೆ. ಮಡಕೆ. ಮೂಟೆ ಗಂಟುಗಳು. ಭಿಕ್ಷುಕರಿರಬಹುದು. ಇನ್ನೂ ಯಾವ ಯಾವ ಕಂಬದ ಮಗ್ಗುಲಿಗೆ ಯಾರ್ಯಾರು ಮಗ್ಗುಲಾಗಿದ್ದಾರೋ! ಎನಿಸಿ ಎದ್ದು ಗುಡಿಯ ಮೆಟ್ಟಲುಗಳನ್ನಿಳಿದು ಕೊನೆಯ ಪಾವಟಿಗೆಯ ಮೇಲೆ ಮತ್ತೆ ಕುಳಿತ. ಅತಿ ಹೆಚ್ಚು ಮಳೆಯಾದ ವರುಷ ಈ ಮೆಟ್ಟಿಲವರೆಗೆ ಕುಮದ್ವತಿ ಏರಿ ಬರುತ್ತಾಳೆ ಎಂದು ನೆನಪಿಸಿಕೊಂಡ. ಅಷ್ಟರಲ್ಲಿ ಹೊಳೆಯಲ್ಲಿ ಮುಳುಗುಹಾಕಿ ಕೊಡಪಾನ ಹೆಗಲಿಗೇರಿಸಿ ಒದ್ದೆ ಬಟ್ಟೆಯಲ್ಲಿ ಮಣ ಮಣ ಗುಣುಗುತ್ತ ಕದಂಬೇಶ್ವರನ ದಿಕ್ಕಿನಲ್ಲಿ ಒಂದು ಬೊಗಸೆ ನೀರು ಉಗ್ಗಿ ತಲೆ ಬಾಗಿ ಮುಂದೆ ಸಾಗುವ ಒಂದಿಬ್ಬರು ಕರ್ಮಠರು ಹಾದುಹೋದರು. ಇವರ ವಂದನೆಗಳನ್ನು ಸ್ವೀಕರಿಸಲು ಯಾರು ಜೀವಂತವಿದ್ದಾರೆ ಗುಡಿಯಲ್ಲಿ, ಆ ಮೈಥುನನಿರತ ಭಿಕ್ಷುಕರನ್ನುಳಿದು ?

ಅವನು ಚಳಿಯಲ್ಲಿ ಹಾಗೇ ಕುಳಿತಿದ್ದ. ನಿನ್ನೆ ರಾತ್ರಿ ಅಜ್ಜಿಯನ್ನು ಹೂಳಿದ ಜಾಗೆಗೆ ಹೋಗಬೇಕೆನ್ನುವ ಆಸೆಯನ್ನು ಅಂದಿನ ಬುಡಕ್ಕೆ ಹಾಕಿಕೊಂಡು ಕುಳಿತಿದ್ದ. ಬೆಳಗಾಗತೊಡಗಿದಂತೆ ಹೊಳೆಗೆ ಬರುಹೋಗುವವರ ಸಂಖ್ಯೆ ಹೆಚ್ಚಾಯಿತು. ಒಬ್ಬಿಬ್ಬರು ಇವನ ಕಡೆಗೆ ವಿಚಿತ್ರವಾಗಿ ನೋಡುತ್ತ ಸಾಗಿದರು. ತಾನೂ ಗುಡಿಯೊಳಗಿನ ಭಿಕ್ಷುಕರಂತೆ ಕಾಣಿಸುತ್ತೇನೆಯೋ ಎಂದು ಸಂಶಯದಿಂದ ಮುಖದ ಮೇಲೆ ಕೈಯಾಡಿಸಿಕೊಂಡ. ಎರಡು ದಿನದ ಗಡ್ಡ ಬಿರುಸಾಗಿ ಚುಚ್ಚಿತು. ಮೇಲೆದ್ದು ಜನರು ಮುಳುಗು ಹಾಕುತ್ತಿದ್ದ ಕಡೆಗೆ ಬಂದ. ಎಳೆಯ ಕೆಂಪು ಸೂರ್ಯನ ಮಗ್ಗದೆಳೆಗಳು ಹೊಳೆಯ ಕೆಂಪು ನೀರಿನಲ್ಲಿ ಮುಳುಗಿ ಏಳುತ್ತಿದ್ದವು. ಮುಳುಗುಹಾಕುತ್ತಿದ್ದವರಲ್ಲಿ ನಾಲ್ಕಾರು ಮುಂಡಕೇಶಿಯರೂ ಹತ್ತಾರು ಹರೆಯದ ಹೆಂಗಸರೂ ಇದ್ದರು. ಎಲ್ಲ ಯೋಚನೆಗಳನ್ನೂ ಉದುರಿಸುವಂತೆ ಒಮ್ಮೆ ತಲೆ ಕೊಡವಿ ಒದ್ದೆ ಹೆಂಗಸರ ಉಬ್ಬು ತಗ್ಗುಗಳಲ್ಲಿ ದೃಷ್ಟಿಯನ್ನು ಕೀಲಿಸಿದ. ತನಗೂ ನೀರಿಗಿಳಿಯೋಣವೆನಿಸಿತು. ಆದರೆ ಬದಲಾಯಿಸಲು ಬೇರೆ ವಸ್ತ್ರಗಳಿಲ್ಲ. ಹಾಗೇ ನಿಂತ. ಚಳಿ ಬೇರೆ.

ಆಗ ಆ ಕ್ಷಣದಲ್ಲಿ ಅಲ್ಲಿಯೇ ಇನ್ನೊಂದು ಆಶ್ಚರ್ಯ, ಒಂದು ರೀತಿಯ ತಲ್ಲಣ ಅವನಿಗಾಗಿ ಕಾದಿತ್ತು. ನಿನ್ನೆ ತಂತಿ ಸಿಕ್ಕಾಗಿನಿಂದ ಜರುಗಿದ ಎಲ್ಲ ಘಟನೆಗಳನ್ನೂ, ಎಲ್ಲ ಮನೋವ್ಯಾಪಾರಗಳನ್ನು ತುಚ್ಛವಾಗಿಸಿದ ಆ ದೃಶ್ಯವನ್ನು ಅವನು ಅವಳನ್ನು ಅಲ್ಲಿ–ನಿರೀಕ್ಷಿಸಿರಲಿಲ್ಲ. ಆತನೀಗ ಒಂದು ರೀತಿಯ ನಿರ್ಲಕ್ಷ್ಯದಿಂದ, ಸಂದೇಹದಿಂದ ಆ ಅನಿರೀಕ್ಷಿತ ಘಟನೆಯನ್ನು ಎದುರಿಸಲು ಸಿದ್ಧನಾಗ ತೊಡಗಿದ. ಊಹೂಂ. ಅವಳು ಬೇರೆ ಯಾರೂ ಅಲ್ಲ. ಅವಳೇ. ಹೌದು. ಸಂಶಯವೇ ಇಲ್ಲ. ಆದರೆ ಹೀಗೆ ಮುದಿ ಹೆಂಗಸರಂತೆ; ಇಷ್ಟು ಬೇಗ ಹೊಳೆ

ಯಲ್ಲಿ ಮೀಯುವದೆಂದರೆ... ಆಶ್ಚರ್ಯ, ಅವಳ ಕೊರಳನ್ನು ಪರೀಕ್ಷಿಸಿದ. ಊಹೂಂ, ಹಾಗೇ–ಸಮಾಧಾನವಾಯಿತು? ಅವಳು ದಂಡೆಗೆ ಹತ್ತಿ ಬಾಗಿ ಸೀರೆಯ ನೀರನ್ನು ಅದುಕಿ ಹಿಂಡಿ ತಲೆ ಮೇಲೆತ್ತಿ ಒಮ್ಮೆ ಕೂದಲನ್ನು ಹಿಂದಕ್ಕೆ ಝಾಡಿಸಿ ಹಿಂದಿಟ್ಟ ಸೀರೆಯನ್ನು ಹೆಗಲಿಗೆ ಹಾಕಿ, ತಾಮ್ರದ ಸಣ್ಣ ಕೊಡವನ್ನು ಸೊಂಟಕ್ಕೆ ಏರಿಸಿ ಇತ್ತ ಬರತೊಡಗಿದಳು. ಇವನು ಗರಬಡಿದವನಂತೆ ನೋಡುತ್ತಲೇ ಇದ್ದ. ಅದೇ ಕೆಂಪು ಕೆಂಪು ಕಪೋಲಗಳು. ನೀಳವಾದ ಮೂಗು. ಬೆಸರೂಪದ ಹೊರಳೆಗಳು. ಏನೂ ಬದಲಾಗಿಲ್ಲ. ಅದೇ ಯೌವನ. ಅದೇ ಮಾದಕತೆ. ಅದೇ ಸೊಕ್ಕಿನ ನಡಿಗೆ. ಅದೇ ಆತ್ಮವಿಶ್ವಾಸ. ಹಮ್ಮು ಹೊರಸೂಸುವ ದೃಷ್ಟಿ. ತಟ್ಟನೆ ಅವಳು ಇವನೆದುರಿಗೆ ನಿಂತಳು. ಆಶ್ಚರ್ಯವನ್ನು ಹೊರಸೂಸಿದವು ಕಣ್ಣುಗಳು. ಕ್ಷಣದಲ್ಲಿ ಎರಡೂ ದೃಷ್ಟಿಗಳ ಮಿಲನ.

"ಅರೇ ನೀವು?"

"ಹೌದು ನಾನೇ," ಅಂದ ಸ್ವಲ್ಪ ತಡವರಿಸಿ.

"ಸ್ನಾನಕ್ಕೆ ಬಂದೀರಾ?"

"ಇಲ್ಲ. ಸ್ನಾನ ಮಾಡುವ ಹೆಂಗಸರನ್ನು ನೋಡೋಕ್ಕೆ." ಅವಳು ಮಾದಕವಾಗಿ ನಕ್ಕಳು. "ನೋಡಿಯಾಯ್ತಲ್ಲಾ. ಬನ್ನಿ. ಸಾಕು" ಎಂದು ಮುಂದೆ ಹೆಜ್ಜೆಯಿಟ್ಟಳು. ಇವಳನ್ನು ಝಾಡಿಸಿ ಒದೆಯಬೇಕೆನಿಸಿತವನಿಗೆ. ಹೊರಳಿ ಅವಳೊಡನೆ ಹೆಜ್ಜೆ ಹಾಕಿದ. "ನಾನ್ಹೇಗೆ ಇಲ್ಲಿ ಅಂತ ಕೇಳಲಿಲ್ವಲ್ಲಾ ನೀವು?"

"ಯಾವನಾದರೂ ಬಾಯ್‌ಫ್ರೆಂಡ್ ಇರಬಹುದು"

"ಇರಲಿಲ್ಲ. ಈಗ ನೀವು ಸಿಕ್ರಲ್ಲಾ," ಮತ್ತೊಂದು ನಗು. "ನಮ್ಮ ಭಾವ ಇಲ್ಲಿ ಹೈಸ್ಕೂಲಿನಲ್ಲಿ ಮೇಷ್ಟ್ರು. ಒಂದು ತಿಂಗಳು ಸರೆಂಡರ್ ರಜ ಹಾಕಿದ್ರು. ಈ ಊರಲ್ಲಿ ಮಜವಾಗಿ ಕಾಲ ಕಳೆಯೋಣ ಅಂತ ಬೆಂಗಳೂರಿಂದ ಬಂದದ್ದಾಯ್ತು. ಬೆಂಗಳೂರಿನಲ್ಲಿ ಕಾವೇರಿ ಕಾಂಪ್ಲೆಕ್ಸ್‌ನಲ್ಲಿ ನಮ್ಮಾಫೀಸು. ನಮ್ಮ ಅಕ್ಕನ ಮನೆ ಇಲ್ಲೇ ಕದಂಬೇಶ್ವರ ದೇವಸ್ಥಾನದ ಹಿಂದಿನ ಕೇರಿಯಲ್ಲಿ. ಈ ಕಡೆಯಿಂದ ಮೂರನೇ ಮನೆ. ಇಲ್ಲಿಗೆ ಬಂದಾಗಿನಿಂದ ನಿಮ್ಮದೇ ನೆನಪು. ನಿಮ್ಮದೇ ಊರಲ್ವಾ ಇದು? ಕಾಲೇಜು ಬಿಟ್ಟಮೇಲೆ ಎಷ್ಟು ವರ್ಷ–ಊಂ–ಐದಾರು ವರ್ಷ ಆಯ್ತಲ್ವಾ ನಿಮ್ಮನ್ನ ಕಂಡು. ನೋಡೀ, ನೀವು ನಂಬ್ತೀರೋ ಇಲ್ವೋ, ನಿನ್ನೆ ರಾತ್ರಿ ನಿಮ್ಮ ಕನಸು ಬಿದ್ದಿತ್ತು, ಇವತ್ತು ನಸುಕಿಗೇ ನೀವು ಹೀಗೆ ಭೇಟಿಯಾದ್ರಿ. ನಿಮಗೆ ವಿಚಿತ್ರ ಅನ್ನಿಸೋದಿಲ್ವಾ...?"

ಅವಳ ಏಕಪಾತ್ರಾಭಿನಯ ನಡೆದೇ ಇತ್ತು. 'ಲಕ್ಷ್ಮೀ ನನಗೀಗ ನಿನ್ನ ಬಗ್ಗೆ ಯಾವದೂ ವಿಚಿತ್ರ ಅನ್ನಿಸುವದಿಲ್ಲ' ಎನ್ನಬೇಕು. 'ನಿನ್ನ ಹಸಿ ಮಾತು ಒಣಬಿನ್ನಾಣ ಯಾವದೂ–ಯಾಕೆ ನೀನು ಉಕ್ಕಡಗಾತ್ರಿ ಜಾತ್ರೆಯಲ್ಲಿ ದೆವ್ವ ಬಡಿದವರಂತೆ ನಟಿಸಿ ಸೀರೆ ಬಿಚ್ಚಿ ಗಾಳಿಗೆ ತೂರಿ ಬರಿಬತ್ತಲೆಯಾಗಿ ಪೊಲೆ ಕುಣಿಸುತ್ತ ಗುಡಿಗೆ ಸುತ್ತುಹಾಕಿದರೂ ನನಗೀಗ ಆಶ್ಚರ್ಯವೆನಿಸುವದಿಲ್ಲ. ಥ್ರಿಲ್‌ಗಾಗಿ ಬದುಕುವವಳಲ್ಲವೇ ನೀನು?' ಅನ್ನಬೇಕು. 'ಥ್ರಿಲ್‌ಗಾಗಿ ಕಾಲೇಜು, ಥ್ರಿಲ್‌ಗಾಗಿ ಪ್ರೇಮ,ಥ್ರಿಲ್‌ಗಾಗಿ ನೌಕರಿ, ಈ ನಿನ್ನ ಒಂಟಿ ಸರಸ ಜೀವನ ಎಲ್ಲವೂ... ಕಡೆಗೆ ಈ ಚುಮು ಚುಮು ನಸುಕಿನಲ್ಲಿ ಹೊಳೆಯಲ್ಲಿ ಮೀಯುವದರಿಂದ ಹಿಡಿದು ಎಲ್ಲವೂ ಥ್ರಿಲ್ಲಿಗಾಗಿ' ಎನ್ನಬೇಕು. ಆದರೆ ಅವನು ಏನೂ ಅನ್ನಲಿಲ್ಲ. ಸುಮ್ಮನೆ ದಾರಿ ಸವೆಸಿದ "ನಿಮ್ಮ ಮದುವೆ ಯಾಯ್ತಂತೆ, ಯಾಕೆ ನನಗೊಂದು ಲಗ್ನಪತ್ರ ಕಳಿಸಲಿಲ್ಲ? ನಾನೇನು ಬಂದು ನಿಮ್ಮನ್ನ ರಿಕ್ಲೇಮ್ ಮಾಡುತ್ತಿರಲಿಲ್ಲ," ಎನ್ನುತ್ತ ಮತ್ತೆ (ಇದು ಎಷ್ಟನೇ ಸಾರಿ?) ನಕ್ಕಳು.

"ಯಾಕೆ ಮಾತಾಡೋದಿಲ್ಲಾ? ನೀವು ಏನೇ ಅಂದರೂ ನಾನು ಕೋಪ ಮಾಡ್ಕೋಳ್ಳೋದಿಲ್ಲ" (ಅದು ನನಗೆ ಗೊತ್ತಿಲ್ಲವೇ–ಕೋಪ ತಾಪಗಳೆಲ್ಲ ಸಹಜ ಬದುಕಿಗೆ. ನಿನ್ನ ಭಾವನೆಗಳೆಲ್ಲ ಲೆಕ್ಕಾಚಾರದಿಂದ ಹೊರಟವುಗಳು–) "ಹೂಂ ಮಕ್ಕಳೆಷ್ಟು? ಇನ್ನೂ ಇಲ್ವಾ? ಜೀವ ಬಿಡಿ. ಏನವಸರ? ಇನ್ನೂ ಸೊಲ್ಪ ದಿನ ಹೀಗೇ ಮಜವಾಗಿರ್ರಿ," ಮತ್ತೆ ನಗು. ಮಜಾ... ಮಜಾ... ಲಕ್ಷ್ಮೀ ನಿನ್ನ ಮಜಾದ ಕಲ್ಪನೆಗೆ ಕೆರದಿಂದ ಹೊಡೀಬೇಕು...

ಅವರಿಬ್ಬರೂ ಕದಂಬೇಶ್ವರನ ದೇವಸ್ಥಾನದೆದುರು ಬಂದಾಗಿತ್ತು. ಅವನು ಎಡವಟ್ಟಾಗಿ ಸುಮ್ಮನೆ ಅವಳನ್ನು ನೋಡುತ್ತ ನಿಂತ. ಅವಳು ಆತ್ಮೀಯ ದನಿಯಲ್ಲಿ, ಕುಣಿಸುವ ಖಿಮ್ಮತ್ತಿನಲ್ಲಿ ಹೇಳಿದಳು. "ನೋಡಿ, ನಾಳೆಗೆ ನನ್ನ ರಜ ಮುಗೀತು. ನಾಳೀನೇ ಇಲ್ಲಿಂದ ಹೊರಡಬೇಕು. ಎಷ್ಟೋ ವರ್ಷದ ಮೇಲೆ

ಸಿಕ್ಕಿದ್ದೀರಿ, ತುಂಬ ಮಾತಾಡೋದಿದೆ. ಸಂಜೆಗೆ ಅಗೋ ನೋಡಿ, ಹೊಳೆಯ ಮೇಲ್ಗಡೆ ಮಾವಿನ ತೋಪಿದೆಯಲ್ಲ, ಅಲ್ಲಿಗೆ ಬನ್ನಿ. ತಪ್ಪಿಸಬಾರದು, ಆಂ" ಎನ್ನುತ್ತ ತಿರುಗಿ ಅವನ ಮಾತಿಗೂ ಕಾಯದೆ ಮುಂದೆ ನಡೆದಳು. ಅದೇ ನಡಿಗೆ. ದೇಹದ ಪ್ರತಿ ಅಂಗುಲದಲ್ಲೂ ತುಂಬಿ ತುಳುಕಾಡುವ ಹೆಣ್ತನ. ಗಂಡಿನ ಹೃದಯವನ್ನು "ಗಜಂ" ನಿಲ್ಲಿಸುವ ಆಕೃತಿ. 'ಏಯ್ ಲಕ್ಷ್ಮೀ ನಿಲ್ಲು. ನನಗೀಗ ಹೆಂಡತಿ ಯಿದ್ದಾಳೆ. ಅವಳು ತನ್ನ ಗಂಡನನ್ನು ಪ್ರೀತಿಸು ತ್ತಾಳೆ. ಅವಳಿಗೆ ನಿನ್ನಂತೆ ಮಾಜಿ ಪ್ರೇಮಿಗಳಿಲ್ಲ; ಹಾಲಿಸ್ನೇಹಿತರಿಲ್ಲ' ಎಂದು ಕೂಗಿ ಹೇಳಬೇಕೆನಿ ಸಿತು. ಆದರೂ ಅವಳ ದೇಹದ ಚಲನೆಯಲ್ಲಿಯ ಲಾಸ್ಯವನ್ನು ಭಂಡ ಹೃದಯ ಹೀರುತ್ತಿತ್ತು. ಅವಳು ಮರೆಯಾಗುವವರೆಗೆ ಕಲ್ಲಿನ ಕಂಬದಂತೆ ಹಾಗೇ ನಿಂತಿದ್ದ.

ಇದೀಗ ಅವನ ಮನಸ್ಸಿನಲ್ಲಿ ಉಂಟಾದ ಸಂದಿಗ್ಧತೆ ಹಿಂದೆಂದೂ ಎದ್ದಿರಲಿಲ್ಲ. ಅಂತಿಮವಾಗಿ ಲಕ್ಷ್ಮೀಯ ಬಗ್ಗೆ ತನ್ನ ಭಾವನೆಗಳಾದರೂ ಏನು? ಸಂಜೆಗೆ ಬರಲಾಗುವದಿಲ್ಲ ಎಂದೇಕೆ ತಾನು ಹೇಳಲಿಲ್ಲ? ನೀನು ಬಂದೇ ಬರುತ್ತೀ ಎಂಬ ವಿಶ್ವಾಸದಿಂದ ಅವಳು ಮಾತನಾಡಿದಾಗ ನಿನ್ನ ಮೈ ಉರಿಯು ಲಿಲ್ಲವೇ? ಅಥವಾ ಈಗಲೂ ತನ್ನ ಕಣ್ಣುಗಳಲ್ಲಿ ಯಾಚನೆ ತುಂಬಿತ್ತೇ? ಮೈಗೆಲ್ಲಾ ವ್ಯಾಪಿಸಿದ ರೋಷ. ತಿರಸ್ಕಾರಗಳನ್ನು ಕ್ರೋಢೀಕರಿಸಿ ಉಗುಳೋಣ. ಎಂದರೆ ಬಾಯಿ ಒಣಗಿ ಬಿಟ್ಟಿತ್ತು.

ಮನೆ ತಲುಪಿದ ನಂತರವೂ ಅವನ ಕಣ್ಣುಗಳು ಕಂಡವರನ್ನು ಸುಟ್ಟುಬಿಡುವಂತೆ ನೋಡುತ್ತಿದ್ದವು. ಎಷ್ಟೋ ಹೊತ್ತಿನ ನಂತರ. ಈ ದ್ವೇಷ–ರೋಷ ಗಳೂ ಸಹ ಪ್ರೀತಿಯ ಇನ್ನೊಂದು ಮಗ್ಗುಲಾಗಿರ ಬಹುದೇ? ಅವಳ ಬಗೆಗಿನ ಪ್ರೀತಿಯು ಮೂಲದಲ್ಲಿ ಇನ್ನೂ ಬತ್ತಿಲ್ಲವೇನೋ ಎಂಬ ಅನುಮಾನ ಹುಟ್ಟಿ ಕೊಂಡಾಗ ಅವನಿಗೆ ಮೈ ಪರಚಿಕೊಳ್ಳುವಂತಾ- ಯಿತು. "ತುಂಬ ಮಾತನಾಡುವದಿದೆ" ಎಂಬುದರ ಅರ್ಥ ತನಗೆ ಗೊತ್ತಿಲ್ಲವೇ? ಕಾಲೇಜು ದಿನಗಳಲ್ಲಿ ಅವಳು ತುಂಬ ಮಾತನಾಡುವದಿದೆ ಎಂದಾಗ ತನ್ನ ಹೃದಯ ಹುಚ್ಚೆದ್ದು ಕುಣಿಯುತ್ತಿತ್ತು. ಲಕ್ಷ್ಮೀ ಲಕ್ಷ್ಮೀ ಎಂದು ಮನಸ್ಸು ಬುದ್ಧಿಗಳೆರಡೂ ಗಳಿಗೆ ಗೊಮ್ಮೆ ಜಪ ಮಾಡುತ್ತಿದ್ದವು. 'ತುಂಬ ಮಾತ ನಾಡಿದ "ದಿನಗಳ ನೆನಪು ಕಾಡತೊಡಗಿತು. ಮುಖ ಮೇಲೆ ಮಾಡಿ ಅಂಗಾತ ಮಲಗಿದ ಲಕ್ಷ್ಮಿ ರಕ್ತ ವರ್ಣದ ಕೆನ್ನೆಗಳು, ಅರ್ಧ ನಿಮಿರಿತವಾದ ಕತ್ತಿನ ಕೆಳಗೆ ಬೆನ್ನ ಹಿಂದೆಲ್ಲ ಹರಡಿದ ಕಪ್ಪು ಕೂದಲ ಹಾಸಿಗೆ. ಮೂಗಿನ ಹೊರಳೆಗಳಲ್ಲಿ ಆಕಾರ ಸಾಮ್ಯತೆ ಏಕಿಲ್ಲ? (ಆ ಆಕಾರ ವಿಷಮತೆಯೇ ಅವಳಲ್ಲಿ ತುಂಬಿ ತುಳುಕುವ ಕಾಮೋದ್ದೀಪನಕ್ಕೆ ಕಾರಣವಾಗಿದೆ) ಅವಳೂ ಅಷ್ಟೇ ಪ್ರೀತಿಸು ತ್ತಿದ್ದಳು. ಅವನ ಪ್ರೀತಿಯ ತೀವ್ರತೆಯನ್ನು. ಅವನ ಆರಾಧನೆಯನ್ನು. ಅವನು ಅವಳಿಗಾಗಿ ಏನು ಬೇಕಾದರೂ ಏನೇ ಆದರೂ ಮಾಡಲು ಸಿದ್ಧನಿದ್ದ. ಅವಳಿಗಾಗಿ ಏನೇ ಆಗಲೂ ತಯಾರಿದ್ದ. ಅವನ ಪ್ರೀತಿಯ ಹುಚ್ಚಿನಿಂದ ಅವಳ ಅಹಂಭಾವ ಬಲೂನಿನಂತೆ ಉಬ್ಬುತ್ತಿತ್ತು. ಗಂಡಿನ ಪ್ರೇಮ ದೃಷ್ಟಿಯ ಕೇಂದ್ರಬಿಂದುವಾಗಿರುವದು ಯಾವ ಹೆಣ್ಣಿಗೆ ಇಷ್ಟವಾಗುವದಿಲ್ಲ!

ಹಂ–ಇಂದು ಸಂಜೆ ನನ್ನೊಂದಿಗೆ ತುಂಬ ಮಾತ ನಾಡುವಳು, ಅರ್ಪಿಸಿಕೊಳ್ಳುವಳು, ಪುಕ್ಕಟೆಯಾಗಿ ನನಗಾಗಿ. ಹಳೆಯ ಸ್ನೇಹದ ಸವಿನೆನಪಿಗಾಗಿ. ಪ್ರೇಮದ ಋಣಭಾರವನೆಲ್ಲ ಇಳಿಸಲಿಕ್ಕಾಗಿ. ಕೇವಲ ಇಪ್ಪತ್ತು ನಿಮಿಷಗಳಲ್ಲಿ. ಹಂ–ನನ ಇಷ್ಟು ವರ್ಷದ ಯಾತನೆಗೆ ಪ್ರತಿಯಾಗಿ ಇಪ್ಪತ್ತು ನಿಮಿಷದ ಪರಿಹಾರ. ಅಲ್ಲಿಗೆ ಲೆಕ್ಕವೆಲ್ಲಾ ಚುಕ್ತಾ ಆದಂತೆ. ಪ್ರೇಮದ ಲೆಕ್ಕ ಚುಕ್ತಾ. ದ್ರೋಹ, ಪಲಾಯನ ಎಲ್ಲದರ ಜಮಾ–ಖರ್ಚು ಚುಕ್ತಾ. ಎಷ್ಟು ಸುಲಭ! ಆಂ! ಮಾರೀ ಹೊಳೆಯ ಸೆಳವಿ ನಲ್ಲಿ ಹುಲ್ಲುಕಡ್ಡಿ ತೇಲಿದಂತೆ–ಅಷ್ಟು ಸುಲಭ?

ಲಕ್ಷ್ಮೀ ಲಕ್ಷ್ಮೀ ನಿನ್ನ ಪ್ರೇಮಘಾತುಕತನಕ್ಕೆ ಏನಾದರೂ ಬಲವಾದ ಕಾರಣಗಳನ್ನು ಸೃಷ್ಟಿಸು. ನನ್ನ ಬಿಟ್ಟು ನಿನಗೆಷ್ಟು ನೋವಾಗಿದೆಯೆಂಬುದನ್ನು ಬಣ್ಣಿಸಿ ನನ್ನನು ನಂಬಿಸು. ನನ್ನ ಎದೆಯಲ್ಲಿ ಮುಖ ಹುದುಗಿಸಿ ಪಶ್ಚಾತ್ತಾಪದ ಕಣ್ಣೀರು ಹರಿಸು. ಇಲ್ಲವೆ ನಿನ್ನ ಎದೆಯ ಬೆಣ್ಣೆಯಲ್ಲಿ ನನ್ನ ಹುದು ಗಿಸಿ ತಲೆ ನೇವರಿಸು. ನಿನ್ನ ಸಾಂತ್ವನವನ್ನು ನಾನು ನಂಬುತ್ತೇನೆ, ನಂಬಬಯಸುತ್ತೇನೆ. ಲಕ್ಷ್ಮೀ, ಸಂಜೆಗೆ ನಾನು ಬಂದೇ ಬರುತ್ತೇನೆ. ನಾನು ನಿನ್ನನ್ನು ಬಿಡಲಾರೆ. ನೀನು ಅಮೃತಮತಿಯಂತಾ ಗಬೇಡ. ಇನ್ನು ಏಸು ಜನ್ಮ ಕಳೆದರೂ ನಾನು

ಯಶೋಧರನೇ. ನಿನ್ನ ಯಶೋಧರ. ನಿನ್ನ ಪ್ರೇಮ–ಪದ ಸುಳಿಯಲ್ಲಿ ಗಿರಿ ಗಿರಿ ಸುತ್ತುವ ಯಶೋಧರ.

ತನ್ನ ನಿರ್ಧಾರದ ಬಗ್ಗೆ ಅವನಿಗೀಗ ಒಂದು ರೀತಿ–ಯ ಸಮಾಧಾನವುಂಟಾಯಿತು. ಅವಳ ಹಾಗೂ ತನ್ನ ಸಂಬಂಧ ಮತ್ತೆ ಮೊದಲಿನಂತೆ. ಕಾಲೇಜು ರಸನಿಮಿಷಗಳಂತೆ ಚಿಗುರುತ್ತದೆ ಎನಿಸಿ, ಅವಳ ಕ್ರೌರ್ಯಗಳನ್ನೆಲ್ಲಾ ಕ್ಷಮಿಸೆಂದು ಭಾವಿಸಿಕೊಂಡು ದೊಡ್ಡತನಕ್ಕೆ ಪಕ್ಕಾದ. ಸಂಜೆಯ ಸುವರ್ಣ ಗಳಿಗೆಗಳಿಗಾಗಿ, ಅವಳ ಮಿಲನಕ್ಕಾಗಿ ಮೈ ಮನಗಳು ಕಾತರಗೊಂಡವು. ಎದುರು ನೋಡಿದವು, ಊಟದ ಶಾಸ್ತ್ರ ಮಾಡಿ ಸುಮ್ಮನೆ ಹಾಸಿಗೆಯಲ್ಲಿ ಉರುಳಾಡಿದ 'ಲಕ್ಷ್ಮೀ ನನ್ನ ಲಕ್ಷ್ಮೀ,' ಇಷ್ಟು ವರ್ಷಗಳ ಹಸಿವು ನೀರಡಿಕೆಗಳಿಗೆ ಕಾಮಧೇನುವಾಗಿ ಬಂದ ಲಕ್ಷ್ಮೀ ...ಹಾಗೆಯೇ ಒಂದು ರೀತಿಯ ಜೋಂಪು ಹತ್ತಿತು. ಬಿಗಿದ ನರಗಳ ಮೇಲೆ ಲಕ್ಷ್ಮಿ ಕೈಯಾಡಿಸಿ ನಿಧಾನ ವಾಗಿ ನೀವಿ ನೀವಿ ಬೆರಳಿನಿಂದ ಬೆನ್ನ ಹುರಿಯನ್ನು ತೀಡಿದಾಗ ಮೈ ಅರಳಿದಂತೆ ಸಡಿಲಾದಂತೆ... ಕಪ್ಪು ಕೂದಲ ರಾಶಿಯ ಹಾಸಿಗೆಯ ಮೇಲೆ ಅಂಗಾತ ಮಲಗಿದ ಲಕ್ಷ್ಮಿಯ ನಸುಗೆಂಪು ದೇಹ... ಇದೇನು? ಅಜ್ಜಿಯ ಅಚ್ಚ ಬಿಳಿಕೂದಲ ಮೇಲೆ ಸಲಿಕೆಯಿಂದ ಯಾರೋ ಮಣ್ಣೆಳೆಯುತ್ತಿದ್ದಾರೆ. ಮುಖದ ಸುಕ್ಕುಗಳು ಮರೆಯಾದವು. ಅಚ್ಚ ಬಿಳಿ–ಯ ಕೂದಲನ್ನು ಮಣ್ಣು ಮುಚ್ಚುತ್ತಿದೆ. ಅಜ್ಜಿ ಗುದ್ದಿನೊಳಗೆ; ಮಣ್ಣು ಅಜ್ಜಿಯ ಮೇಲೆ... ಅಜ್ಜಿಯ ಮುಖದ ಮೇಲೆ, ಕಣ್ಣು ಮೂಗುಗಳ ಮೇಲೆ ಮಣ್ಣು...ಊಂ ಊಂ ಊಂ ಊಂ... ಉಸಿರುಗಟ್ಟಿ ಧಿಗ್ಗನೇ ಅವನು ಎದ್ದು ಕುಳಿತ. ಮನೆ ಎಲ್ಲ ಸ್ತಬ್ಧ. ನಿಶ್ಶಬ್ದವಾಗಿ ಘಾಘಾ ಎನ್ನು ತ್ತಿತ್ತು. ಒಂದು ಥರಾ ತೀವದ ವೇಗದ ವಾಸನೆ. ಎದ್ದು ಮುಖ ಸಹ ತೊಳೆಯದೆ ದೊಡ್ಡಿಯ ದಾಟಿ ನಡೆದ. ಹಾಗೆಯೇ ಅಪ್ರಯತ್ನಕವಾಗಿ ಕಾಲು ಗಳು ಅವನನ್ನು ಹೊಳೆಯೆಡೆಗೆ ಕರೆದೊಯ್ದವು. ಮುಂಜಾನೆ ಲಕ್ಷ್ಮಿ ಮೀದ ಸ್ಥಳದೆಡೆ ಬಂದು ನಿಂತ. ಇನ್ನೂ ಬಿಸಿಲು ಸುಡುತ್ತಿತ್ತು. ಸಮಯ ವೆಷ್ಟಿರಬಹುದು...ಮುಂಗೈ ಕಡೆಗೆ ಕಣ್ಣು ಹೊರಳಿಸಿದ. ವಾಚು ಇರಲಿಲ್ಲ. ಮನೆಯಲ್ಲಿಯೇ ಉಳಿಯಿತೇನೊ?

ಬಿಸಿಲಿನ ಶಾಖ ಇನ್ನೂ ಸಾಕಷ್ಟಿತ್ತು. ಸೂರ್ಯ ಆಯಾಸವಾಗಿರುತ್ತಿತ್ತು. ಹೊಳೆಯಲ್ಲಿ ಕೆಲ ಸಮಯ ಈಜಾಡಬೇಕೆ ಎಂದು ಅವನಿಗನಿಸಿತು. ಬಟ್ಟೆ ಕಳಚಿ ದಂಡೆಯ ಮೇಲಿನ ಮಟ್ಟಿನ ಮೇಲೆ ಮಡಚಿಟ್ಟು ಒಂದು ಸಣ್ಣ ಕಲ್ಲು ಹೇರಿ ಅವನು ಚಡ್ಡಿಯ ಮೇಲೆ ನೀರಿಗಿಳಿದ. ಹಾಯೆನಿಸಿತು. ಮುಂಜಾನೆ ಲಕ್ಷ್ಮಿ ಇಲ್ಲಿಯೇ ಮುಳುಗು ಹಾಕಿದ್ದು. ಕೈಕಾಲು ಬೀಸುತ್ತ ಹಾಗೆಯೇ ಮುಂದೆ ಸಾಗಿದ. ನೀರಿನ ಸೆಳೆತ ಈ ಭಾಗದಲ್ಲಿ ಹೆಚ್ಚು ಇರಲಿಲ್ಲ. ನಿಧಾನವಾಗಿ ಪ್ರವಾಹ ಮೆರವಣಿಗೆಗೆ ಹೊರಟಂತೆ ಮಂದ ವಾಗಿ ಸಾಗುತ್ತಿತ್ತು. ಅವನು ಪ್ರವಾಹಕ್ಕೆ ಎದು ರಾಗಿ ಈಜ ತೊಡಗಿದ. ನಾಲ್ಕು ಬಾರಿ ಕೈ ಮುಂದೆ ಬೀಸಿದರೆ ಒಂದು ಮೊಳ ಮುಂದಕ್ಕೆ ತಲುಪು ತ್ತಿದ್ದ. ತುಂಬ ಮೋಜೆನಿಸಿತು. ದೃಢವಾಗಿ, ಆದರೆ ಮೆಲ್ಲ ಮೆಲ್ಲನೆ ಒಂದು ರೀತಿಯ ಅತಿಯಾದ ಆತ್ಮ ವಿಶ್ವಾಸದಿಂದ ಉದ್ಭವಿಸುವ ಉದಾಸೀನದಿಂದಲೋ ಎಂಬಂತೆ ಪ್ರವಾಹ ಅವನನ್ನು ತನ್ನೊಡನೆ ಹಿಂದ ಕ್ಕೊಯ್ಯಲು ಯತ್ನಿಸಿದರೆ ಅಷ್ಟೇ ದೃಢವಾಗಿ ಅದೊಂದು ಆಹ್ವಾನವೆಂದು ಈತ ಪ್ರವಾಹಕ್ಕೆದು ರಾಗಿ ಮುಂದೆ ಸಾಗುತ್ತಿದ್ದ. ಅರ್ಧ ಗಂಟೆ ಈ ರೀತಿ–ಯ ಜಗ್ಗಾಟ ಮಾಡುವದರೊಳಗಾಗಿ ಅವನಿಗೆ ಆಯಾಸವಾದಂತೆನಿಸಿತು. ಉಸಿರು ತೀವ್ರವಾಯಿತು. ಕೈ ಕಾಲು ಚೆಲ್ಲಿ ನೀರ ಮೇಲೆ ಶವಾಸನ ಹಾಕುವವ ರಂತೆ ಕಣ್ಣು ಮುಚ್ಚಿ ಅಂಗಾತ ಒರಗಿದ. ನೀರು ಅವನನ್ನು ಹೊತ್ತು ಮುಂದೆ ಸಾಗಿತು. ನೀರೆಂಬ ತೆಪ್ಪದ ಮೇಲೆ ಮೈ ಚೆಲ್ಲಿ ವಿಶ್ರಾಂತಿ ಪಡೆಯು ವದು ಎಷ್ಟು ಅಪ್ಯಾಯಮಾನ! ಅಜ್ಜಿಯ ಮಡಿಲಲ್ಲಿ ನಿದ್ದೆ ಮಾಡಿದಂತೆ. ಲಾಲಿ ಲಾಲಿ ಲಾಲಿ ಲಾಲಿ ಲಾಲಿ ಲಾರವ್ವ ಲಾಲೀ ಹಪ್ಪ್ಲಲಾಲೆ ಎಂದು ಮೋಡದೊಳಗಿಂದ ತೇಲಿ ಬಂದು ಕಿವಿಯೊಳ ಗಿಂದ ಒಳ ಸೇರಿ ಮನವನ್ನೆಲ್ಲಾ ವ್ಯಾಪಿಸುವ ಅಜ್ಜಿಯ ಮಧುರ ಕಂಠ. ...ಅಥವಾ ...ಪ್ರೇಮದ ಯಾತನೆಯಿಂದ ತುಟಿ ಕಚ್ಚಿ ಊಂ ಊಂ ಎಂದು ಮುಲುಗರೆಯುವ, ಸಣ್ಣಗೆ ಚೀತ್ಕರಿಸುವ ಲಕ್ಷ್ಮಿ–ಯ ಎದೆಯ ಹಂಸತೂಲಿಕಾತಲ್ಪದೊಳಗೆ ಮುಖ ಹುದುಗಿಸಿ ಮೆಲ್ಲಗೆ ಏರಿಳಿಯುವ ಎದೆ–ಯ ಭರತಿ ಓಹಟಿಯೊಡನೆ ಚೆಲ್ಲಾಟವಾಡಿದಂತೆ ಕಪ್ಪು ಕೇಶರಾಶಿಯ ಮೇಲೆ ಪವಡಿಸಿದ ಕೆಂಪು ದೇಹದ ಕಂಪನ; ಅರಳಿ ಇಳಿಯುದ ವೃತ್ತಸ್

ಹೊಸ ಪುಟ ಒಮ ಕೂದಲನ್ನು ಹಂತಹಂತವಾಗಿ ಮುಚ್ಚುವ ಮಣ್ಣು ಗುದ್ದಿಸೊಳಕ್ಕೆ ಮಣ್ಣೆಳೆಯುತ್ತಿರುವ ಸಲಿಕೆಯನ್ನು ಹಿಡಿದ ಕೈಗಳು. ಯಾರವು? ಓಯ್ ಓಹ್–ಊಂ ಊಂ ರಭಸ–ದಿಂದ ಯಾರೋ ಅವನನ್ನು ಪ್ರಪಾತಕ್ಕೆ ದಬ್ಬಿದಂತಾಗಿ ಸೆಳವಿನಲ್ಲಿ ಕೊಚ್ಚಿ ಹೋಗುವ ದೇಹವನ್ನು ಥಂಗನೇ ಪುಟಿಸಿ, ಹೊರಳಿ ಹುಚ್ಚು ಹುಚ್ಚಾಗಿ ಹೊಟ್ಟೆಯಡಿಗೆ ನೀರೆಳೆದುಕೊಳ್ಳುತ್ತ ಕಾಲು ಬಡಿಯುತ್ತ ಈಜತೊಡಗಿದ. ತಕ್ಷಣ ತಾನೀಗ ಮಾರೀ ಹೊಳೆಯ ಸೆಳವಿಗೆ ಸಿಕ್ಕಿಕೊಂಡದ್ದು ಗೊತ್ತಾಗಿ ತಾನಿಷ್ಟು ದೂರ ಬಂದದ್ದು ಹೇಗೆ? ಎಂದು ಭಯಾಶ್ಚರ್ಯಕ್ಕೊಳಗಾದ. ತಾನು ನೀರಿಗಿಳಿದ ಪಾವಟಣಿಗೆ ಕೊಳೆಯಿಂದ ಮಾರೀ ಹೊಳೆಗೆ ತಲುಪಬೇಕಾದರೆ ಅರ್ಧ ಮೈಲಿಗಿಂತ ಹೆಚ್ಚು ತಾನು ತೇಲಿರಬೇಕು. ಅಬ್ಬಾ! ಏನು ಸಾಹಸ ಮಾಡಿದರೂ ಅವನಿಗೆ ಸೆಳವಿನ ಸೆಲೆಯಿಂದ ಈಚೆಗೆ ಈಜುವದಾಗಲಿಲ್ಲ. ರಭಸದಿಂದ ತಾನು ಹುಲ್ಲು ಕಡ್ಡಿಯಂತೆ ಮುನ್ನುಗ್ಗುತ್ತಿರುವದರ ಅನುಭವವಾಗಿ ಮುಖಕ್ಕೆ ಅಪ್ಪಳಿಸುವ ನೀರಿನಿಂದ ಮುಖವನ್ನು ಮೇಲೆತ್ತಿ ನೋಡಿದರೆ ತಾನೀಗ ಮಾರೀ ಮಡುವಿನತ್ತ ಸಾಗುತ್ತಿದ್ದುದು ಅರಿವಾಗಿ ಯಾಕೋ ಭಯವಾವರಿಸಿತು. ಹಿಂದೆಂದೂ ಇಲ್ಲಿ ಅವನಿಗೆ ಈ ತರಹ ಭಯವಾಗಿರಲಿಲ್ಲ. ಮುನ್ನುಗ್ಗುವ ನೀರಿನಿಂದ ಅತ್ತಿತ್ತ ತಳ್ಳಲ್ಪಡುತ್ತ, ತೂರಲ್ಪಡುತ್ತ ಅಪ್ಪಳಿಸಲ್ಪಡುತ್ತ ಮುಂದೆ ಮುಂದೆ ತೀವ್ರವಾಗಿ ಓಡುವ ಲೀಲಾಜಾಲ ಅವನಿಗೆ ಆಕರ್ಷಕ ಸಾಹಸವೆನಿಸಿತ್ತು. ಆದರೆ ಈಗಾಗಲೇ ಅವನ ಕೈಕಾಲುಗಳು ಸೋತಂತೆ ಭಾಸವಾಯಿತು. ತಿರುವಿನಲ್ಲಿ ಮುಂದೆ ಚಾಚಿ ನಿಲ್ಲುಸಿಂತಿರುವ ಆ ಬಂಡೆ ಪ್ರಳಯ ಕಾಲದ ಕೂರ್ಮನಂತೆ ಕಂಡಿತು. ಹತ್ತಿರ ಹತ್ತಿರ ಬಂದೇ ಬಿಟ್ಟಿತು. ಅವನು ತನ್ನೆಲ್ಲ ಶಕ್ತಿಯನ್ನು ಬಳಸಿ ಅದಕ್ಕೆ ಡಿಕ್ಕಿ ಗಪ್ ಎಂದು ಬಡಿಯುವದನ್ನು ತಪ್ಪಿಸುವದರಲ್ಲಿ...ಒಂದೇ ಕ್ಷಣ. ತೋಳಿಗೆ ಪಾವಸಗಟ್ಟಿದ ಬಂಡೆ ತಾಗುತ್ತಲೋ ಇಲ್ಲವೋ ಅವನಾಗಲೇ ಅದನ್ನು ದಾಟಿ ಒಂದು ಮಾರು ಮುಂದೆ ದಬ್ಬಲ್ಪಟ್ಟಿದ್ದ. ಮರುಕ್ಷಣ ತಿರುವಿನಲ್ಲಿ ಮಡುವಿನ ವರ್ತುಳದ ಪರಿಧಿಯಲ್ಲಿ ಅವನ ದೇಹ ಸಿಕ್ಕಿಬಿಟ್ಟಿತು. ಸುತ್ತಲೂ ಜೀವನ ಬಲೆ ಸುತ್ತಿಕೊಂಡಂತಾಗಿ ಕಾಲಿಗೆ ಭಾರವಾದ ಕಲ್ಲು ಕಟ್ಟಿಕೊಂಡವರಂತೆ ಗಿರಿ ಗಿರಿ ಸುತ್ತುವ ನೀರಿನಲ್ಲಿ ಗುಳುಕ್ ಎಂದು ಒಮ್ಮೆ ಮುಳುಗಿದ. ಒಂದೇ ಕ್ಷಣ. ಸುತ್ತಲೂ ದಟ್ಟವಾದ ಕತ್ತಲು ಮುತ್ತಿಕೊಂಡು ಉಸಿರುಗಟ್ಟಿ ಕಿವಿ ಮೂಗಿನಲ್ಲಿ ನೀರು ತುಂಬಿಕೊಂಡಿತು. ನೆತ್ತಿಗೆ-ನೀರು ಹತ್ತಿ ತಲೆ ಗಿಂವ್ ಎನ್ನುತ್ತಿದ್ದಂತೆ ತನ್ನ ಬಲವನ್ನೆಲ್ಲ ಒಟ್ಟುಗೂಡಿಸಿ ಚಂಗನೇ ಮೇಲಕ್ಕೆ ಜಿಗಿದು ಮೀನಿನಂತೆ ಪುಟದು ಹಾರಿದ. ಅಷ್ಟೇ ತೀವ್ರಗತಿಯಿಂದ ಇನ್ನೂ ಮೂರು ಸಲ ಆ ಬದಿಗೆ ಹಾರಿದಾಗ ಗಿರಿ ಗಿರಿ ಸುತ್ತುವ ಮಡುವಿನ ಆಚೆಗೆ ಬಂದಿದ್ದ. ಆದರೂ ನೀರಿನ ಸೆಳವಿನಿಂದಾಗಿ ಇನ್ನೂ ಮುಂದೆ ಸಾಗತೊಡಗಿದ್ದ. ಈಗ ಹೊಳೆಯ ಆ ಕಡೆಯ (ಎದುರು) ದಂಡೆಗೆ ಈಜುವದೊಂದೇ ದಾರಿ. ಬೇರೆ ಮಾರ್ಗವಿಲ್ಲ ಎಂದು ಖಚಿತವಾದಾಗ ಜೀವದ ಹಂಗುತೊರೆದು ಜೀವಕ್ಕಾಗಿ ಈಜತೊಡಗಿದ. ಈಗಾಗಲೇ ಅವನ ಮೈ ಕೈಗಳು ಬಳಲಿ ಬಸವಳಿದಿದ್ದರೂ ಈಗ ಅವನಿಗೆ ಅದರ ಪರಿವೆಯಿರಲಿಲ್ಲ. ಹೀಗೆ ಅರ್ಧ ಗಂಟೆ ಈಜಿ ಈಜಿ ಎಲ್ಲೋ ಒಂದು ಕಡೆ ದಡೆ ತಲುಪಿ ಈಚಲ ಮರದ ಚಾಚದ ಗರಿಯೊಂದನ್ನು ಹಿಡಿದುಕೊಂಡು ಪ್ರಯಾಸದಿಂದ ಆ ಬದಿಯ ದಡೆಯನ್ನು ಏರಿದ. ಈಚಲು ತರಿದು ಅಂಗೈಗಳೆರಡೂ ಅಲ್ಲಲ್ಲಿ ರಕ್ತ ಒಸರುತ್ತಿದ್ದವು. ಮೈಯಲ್ಲಿಯ ಶಕ್ತಿಯೆಲ್ಲಾ ಸತ್ತುಹೋದಂತೆನಿಸಿತು. ದಂಡೆ ಮುಟ್ಟಿದ್ದೇ ತಡ, ಹುಲ್ಲಿನ ಮೇಲೆ ಅಂಗಾತ ಏದುಸಿರು ಬಿಡುತ್ತ ಬಿದ್ದುಕೊಂಡ.

ಪಶ್ಚಿಮದಲ್ಲಿ ಸೂರ್ಯ ಕೆಂಪು ಉಂಡೆಯಾಗಿ ಕೆಳಗಿಳಿಯುತ್ತಿದ್ದ. ಇನ್ನೇನು ಕತ್ತಲಾಗುವದು ತಡವಿಲ್ಲ ಎನಿಸಿ ಪ್ರಯಾಸದಿಂದ ಮೇಲೆದ್ದ. ಕಾಲೆಳೆಯುತ್ತ ಮೇಲಕ್ಕೆ ದಂಡೆಗುಂಟ ನಡೆಯತೊಡಗಿದ. ದೇಹ ಜೋಲು ಜೋಲಾದಂತೆ ಅನಿಸತೊಡಗಿತು. ಇನ್ನೂ ಮೇಲಕ್ಕೆ ಸಾಗಿದಾಗ ಅಲ್ಲೊಬ್ಬ ಮನುಷ್ಯ ಕುಳಿತಿದ್ದ. ಹತ್ತಿರದಲ್ಲಿಯೇ ಎರಡು ಘರ್ಜರಿ ಬತ್ತುಗಳು ಬಾಲ ಅಲ್ಲಾಡಿಸುತ್ತ ಮೇಯುತ್ತಿದ್ದವು. ಇವನು ಆಯಾಸವನ್ನು ಆದಷ್ಟು ಮುಖದಲ್ಲಿ ತೋರ್ಪಡಿಸದಂತೆ ಪ್ರಯತ್ನಿಸುತ್ತ 'ಹಂಗೋಲಿನವರೆಲ್ಲ ಕಾಣುವದಿಲ್ಲವಲ್ಲ' ಎಂದು ಕೇಳಿದ. ಆ ಮನುಷ್ಯನು ಸ್ವಲ್ಪ ಅನುಮಾನದಿಂದ ಇವನನ್ನು

ನೋಡುತ್ತ "ಹರಿಗೋಲ್ನ ನಾಳೆ ಹಾಕ್ತಾರೆ. ಅದು ಎರಡು ದಿನಕ್ಕೊಮ್ಮೆ" ಅಂದ. ಇವನಿಗ ತೀವ್ರ ನಿರಾಶೆಯಾಯಿತು ಅಲ್ಲದೆ. ಈಜು ಬಾರದೆ ನೀರಲ್ಲಿ ಇಳಿದವನೆಂದು ತನ್ನನ್ನು ಎಲ್ಲಿ ಆ ಮನುಷ್ಯ ತಿಳಿದು ಕೊಂಡನೋ ಏನೋ ಎಂದು ಕಿರಿಕಿರಿಯಾಗಿ ಏನೂ ಆಗದವನಂತೆ ನಟಿಸುತ್ತ ಇನ್ನೂ ಮುಂದಕ್ಕೆ ಸಾಗಿ ತೀರದಲ್ಲಿ ನಿಂತ. ಈಗ ಹೊಳೆಯ ಆ ಬದಿಯ ತೀರ ವನ್ನು ತಲುಪಿ ಮನೆ ಸೇರಲು ಈಜುವದನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ. ಅಲ್ಲದೆ ಎದುರುದಂಡೆಯ ಮೇಲೆ ತಾನು ಬಿಟ್ಟು ಬಂದ ಬಟ್ಟೆಗಳನ್ನು ಯಾರಾ ದರೂ ಗುರುತಿಸಿ ಮನೆಗೆ ತಲುಪಿದರೆ ಏನೇನೋ ಅರ್ಥ ಕಲ್ಪಿಸಿ ರಾದ್ಧಾಂತವಾಗುವದು ಅವನಿಗೆ ಬೇಡವಾಗಿತ್ತು. ಆಗಲೇ ಸಂಜೆಯೂ ಆಗಿಬಿಟ್ಟಿದೆ. ಆ ಎತ್ತು ಕಾಯುವ ಮನುಷ್ಯ ಇನ್ನೂ ಇವನ ಕಡೆಗೆ ನೋಡುತ್ತಲೇ ಇದ್ದ. ತಕ್ಷಣ ಇವನು ಒಂದು ಅವ ಸರದ ನಿರ್ಧಾರಕ್ಕೆ ಬಂದ. ಏನೇ ಆಗಲಿ ಈಜಿಯೇ, ಜಿಡುವ ಎಂದು ಇನ್ನಷ್ಟು ಮೇಲಕ್ಕೆ ನಡೆದು ಪಾವ ಟಣಿಗೆ ಹೊಳೆಯ ಭಾಗದ ಶಾಂತವಾದ ನೀರಿಗೆ ಇಳಿದು ಈಜತೊಡಗಿದ. ಆ ಕಡೆಯ ದಂಡೆಯ ಪಾವಟಿಗೆಗಳ ಬದಿಯಲ್ಲಿ, ಅಂದರೆ ಇಂದು ತಾನು ತಾಸೆರಡು ತಾಸುಗಳ ಹಿಂದೆ ಹೊಟ್ಟೆಹೊದಲು ನೀರಿಗಿಳಿದ ಸ್ಥಳಕ್ಕೆ, ವಕ್ರವಾಗಿ ಕ್ರಮಿಸಿ ಸೇರಿ. ಮೇಲೆ ಹತ್ತುವದು ಅವನ ಉದ್ದೇಶವಾಗಿತ್ತು. ಭರಭರ ದಿಂದ ಕೈಬೀಸುತ್ತಾ ಮುಂದೆ ಸಾಗಿದ. ಪ್ರವಾ ಹದ ಪರಿಚಿತ ಶಬ್ದವನ್ನುಳಿದು ಸುತ್ತಲೂ ನಿಶ್ಶಬ್ದತೆ ತಾನೇ ತಾನಾಗಿತ್ತು. ಅಲ್ಲಲ್ಲಿ ಗೂಡಿಗೆ ಮರಳಿದ ಪಕ್ಷಿಗಳ ಕಲರವ. ಇವನು ನೀರಿನಲ್ಲಿ ಕೈಬೀಸಿದಾಗೆಲ್ಲ ಸೊಪ್ ಸೊಪ್ ಎಂಬ ಸಪ್ಪಳ ಮಾತ್ರ ತಪ್ಪದೆ ಕೇಳಬರುತ್ತಿತ್ತು. ಮಧ್ಯ ಹೊಳೆಗೆ ಬರುವದರೊ ಳಗೆ ಎದುರು ದಂಡೆಯಲ್ಲಿ ತಾನು ತಲುಪಬೇಕಾಗಿ ರುವ ಸ್ಥಳ ಬಿಟ್ಟು ತಾನಾಗಲೇ ಮುಂದೆ ಸರಿದಿರು ವನು ಗಮನಕ್ಕೆ ಬಂತು. ಅತ್ಯುಮಗದಿಂದ ಬಂದು ನಿಮಿಷ ತಂತಾನೇ ಈಜುವಿಕೆಯ ರಭಸ ಹಿಂತಿತು. ಅಷ್ಟಕ್ಕೇ ಅವನು ಸೆಳವಿನ ಜೊತೆಗೆ ಇನ್ನೂ ಕೆಳಕ್ಕೆ ಸಾಗಿದ. ಈಗ ಅವನಿಗೆ ಮೇಲೇರಲು ಎದುರು ದಂಡೆಯಲ್ಲಿ ಯಾವ ಸುರಕ್ಷಿತ ಸ್ಥಾನಗಳೂ ಇರಲಿಲ್ಲ. ನದಿಯ ಈ ಮಂದಗತಿ ತೀರಿ ಮಾರೀ ಹೊಳೆಯ ಆರಂಭದ ಪ್ರವಾಹಕ್ಕೆ ಸಿಕ್ಕು ಸೊಂಯ್ ಎಂದು ಕ್ಷಣದಲ್ಲಿ ದಪ್ಪಿಸಿಕೊಂಡು ಮತ್ತೆ ತಿರುವಿನ ಮೂಲೆ ಯಲ್ಲಿಯ ಆ ಮಹಾಬಂಡೆಯನ್ನೇ ಹಿಡಿಯಬೇಕು. ಬೇರೆ ಜಾಗೆಗಳೇ ಇಲ್ಲ. ಇದ್ದಕ್ಕಿದ್ದಂತೆ ಅವನಿಗೆ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎನಿಸಿ ನೆತ್ತರು ಹೆಪ್ಪುಗಟ್ಟುವಂಥ ಭಯ ಮೈತುಂಬಾ ಆವರಿಸಿ ಈಗ ಅವನು ಆ ಬಂಡೆಯನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ. ಆದನ್ನು ಹಿಡಿದು ಮೇಲೇರಿಯೇ ತೀರುವೆನೆಂಬ ಭರವಸೆಯಾ ದರೂ ಏನು? ಹಾಂಸೆಗಟ್ಟಿದ ಆ ಬಂಡೆಯನ್ನು ಹಿಡಿಯುವದಾಗದಿದ್ದರೆ; ಅಬ್ಬಾ ಮುಂದಿನದನ್ನು ಊಹಿಸಲೂ ಆರ. ಈ ಸಲ ಆ ಮಡುವಿನಿಂದ ತಪ್ಪಿಸಿಕೊಳ್ಳುವದು ಅಸಾಧ್ಯವಾಗಬಹುದು. ಈಗ ಅವನು ಮಾರೀ ಹೊಳೆಯನ್ನೇ ನಂಬಲಾರ. ಕೂಡಲೇ ಅವನು ಹಿಂದಿರುಗಿ ತಾನು ಈಗ ಬಂದ ದಿಕ್ಕಿಗೆ ಆ ಎತ್ತು ಮೇಯಿಸುವವನಿರುವ ದಂಡೆಯೆಡೆಗೆ ಈಜತೊಡಗಿದ. ಸ್ವಲ್ಪ ಸಮಯದ ಮೊದಲು ಮಡುವಿನಿಂದ ತಪ್ಪಿಸಿಕೊಂಡು ಪ್ರಾಣಭಯ ದಿಂದ ಈಜಿದಂತೆ ಮತ್ತೆ ಎಲ್ಲಿಂದಲೋ ಕಾದಿರಿ ಸಿದ ಶಕ್ತಿಯನ್ನು ಮೈಗೂಡಿಸಿಕೊಂಡು ಯಮ ಭಯದಿಂದ ಮಾರು ಮಾರು ಹೊಟ್ಟೆಯಡಿಗೆ ನೀರೆಳೆದುಕೊಳ್ಳುತ್ತ ಮುಂದೆ ಮುಂದೆ ಸಾಗಿದ. ಆದರೂ ಮುತ್ತುತ್ತಿರುವ ನಸುಕತ್ತಲಲ್ಲಿ ತಾನು ಪ್ರವಾಹಕ್ಕೆ ಅಡ್ಡವಾಗಿ ಎತ್ತಸಾಗುತ್ತಿದ್ದೇನೆಂಬ ಅರಿವು ಅಸ್ಪಷ್ಟವಾಗತೊಡಗಿತು. ಹೊಟ್ಟೆ ತೊಳಸಿ ದಂತಾಗಿ ಗಂಟಲು ಕಟ್ಟಿಕೊಂಡು ಅಳುವದೊಂದು ಬಾಕಿಯುಳಿಯಿತು. ಹಾಗೆಯೇ ಕದುಬೇಶ್ವರನ ನೆನಪಾಯಿತು. ಹಾಳುಗುಡಿಯಾದರೇನಂತೆ? ದೇವ ರಿಲ್ಲವೇ ಅಲ್ಲಿ? ಮತ್ತೆ ರಭಸದಿಂದ ಈಜ ತೊಡಗಿದ. ಹಸಿರು ಹುಲ್ಲಿನಿಂದ ತುಂಬಿಕೊಂಡ ಆ ಕಡೆಯ ದಂಡೆ ಕಣ್ಣಿಗೆ ಕಪ್ಪು ಕಪ್ಪಾಗಿ ಕಾಣತೊಡಗಿತು. ಈಜಿಯೇ ಈಜಿದ. ಮೊಸಳೆ ಬೆನ್ನು ಹತ್ತಿ ದವನಂತೆ ಭಯದಿಂದ ಈಜಿದ. ಎಲ್ಲೋ ಎತ್ತು ಗಳ ಕೊರಳಿನ ಗಂಟೆಯ ಸಪ್ಪಳ. ಆ ಎತ್ತು ಕಾಯುವ ಮನುಷ್ಯ ಇನ್ನೂ ಇರಬಹುದೇ? ಈಗ ತನ್ನ ಅಸಾಯಕತೆಯ ಬಗ್ಗೆ ಅವನಿಗೆ ನಾಚಿಕೆ ಅನಿಸಲಿಲ್ಲ. ಮಾರೀ ಹೊಳೆ ಬಂದೇಬಿಟ್ಟಿತೋ ಎಂದು ಅವನಿಗೆ ಸಂಶಯಕಾಡಿತು. "ಹೋ ಯಜ ಮಾನಾ" ಎಂದು ಗಂಟಲು ಹರಿಯುವಂತೆ

ಕೂಗಿಯೇ ಕೂಗಿದ. ಕೈಕಾಲುಗಳು ತಕ್ಕಯು ಅಂತಿಮ ಯಾನವನ್ನು ಪ್ರಯಾಸತೊಡಗಿದ್ದವು. ಅನತಿ ದೂರದಲಿ ಬೆಳಕೊಂದು ಕಾಣಿಸಿತು. ಈಗ ಬೆಳಕಿನ್ನು ಹತ್ತಿರ ಬಳಿ ಬರುತ್ತಿರುವಂತೆ ಅನಿಸಿತು. "ಹೋಯ್ ಬರ್ರಿ ಬರ್ರಿ ಹೆದರಬ್ಯಾಡ್ರಿ." ಎಂದು ಆ ಕಡೆಯಿಂದ ಕೂಗು ಕೇಳಿಸಿದಂತಾಯಿತು. ಸ್ವಲ್ಪ ಧೈರ್ಯ ಬಂತು. ಮತ್ತಷ್ಟು ಜಿಗುಟುತನದಿಂದ ಈಜಿದ. ಈಜಿ ಈಜಿ ಕೈಸೋತು ಕೈಚೆಲ್ಲಿ ಪ್ರವಾಹಕ್ಕೆ ಶರಣಾದ. ತನಗೂ, ದಡದ ತುದಿಗೆ ಸಮಾಂತರದಲ್ಲಿ ತನ್ನೊಂದಿಗೆ ಓಡುತ್ತಿರುವ ಆ ಮನುಷ್ಯನಿಗೂ ಮತ್ತು ಮಾರುಗಳಷ್ಟು ಅಂತರವಿರುವುದೆನಿಸಿತು. ಇನ್ನೊಮ್ಮೆ ಕೂಗಿದ. ಆ ವ್ಯಕ್ತಿ "ಹೂಂ ಹಿಡ್ರಿ, ಹಿಡಕೊಳ್ರಿ" ಎಂದು ಏನನ್ನೋ ಇವನೆಡೆಗೆ ಎಸೆದ. ಆ ಎಸೆದ ವಸ್ತು 'ಚಪ್' ಎಂದು ಇವನ ಸಮೀಪದಲ್ಲಿಯೇ ನೀರಿಗೆ ಬಿದ್ದ ತಕ್ಷಣ ಇವನು ಜಿಗಿದು ಹಿಡಿದುಕೊಂಡ. ಅದೊಂದು ಮಾರು ಉದ್ದದ ಬಡಿಕಟ್ಟಿಗೆಯ ತುಂಡು. ಅದರ ಮಧ್ಯಕ್ಕೆ ಹಗ್ಗ ಬಿಗಿದಿತ್ತು. "ಹಿಡಕೊಂಡ್ರಾ?" ಎಂದು ಕೂಗಿತು ಆ ವ್ಯಕ್ತಿ. ಪುನರ್ಜನ್ಮ ಪಡೆದವನಂತೆ "ಹೂಂ ಹೂಂ" ಎಂದ ಇವನು.

ಎತ್ತಿನ ಮನುಷ್ಯ ಇವನನ್ನು ದಡೆಗೆ ಎಳೆದುಕೊಂಡು ಕೈ ಹಿಡಿದು ಮೇಲೆ ಹತ್ತಿಸಿ ಹುಲ್ಲಿನ ಮೇಲೆ ಮಲಗಿಸಿ, ನೀರು ಕುಡಿದಿದ್ದಾನೆಯೇ ಹೇಗೆ ಎಂಬುದನ್ನು ಪ್ರಶ್ನಿಸಿ, ಪರೀಕ್ಷಿಸಿ, ತನ್ನ ತಲೆಗೆ ಸುತ್ತಿಕೊಂಡಿದ್ದ ದೊಡ್ಡ ಪಂಜೆಯಿಂದ ಇವನನ್ನು ಒರೆಸಿದ. "ಇದನ್ನೇ ಉಟ್ಟುಕೊಳ್ರಿ" ಎಂದು ಪಂಜೆಯನ್ನು ಕೊಟ್ಟ. "ಭಾಳ ದಣಿವಾಗೈತಾ?" ಎಂದ. ಸ್ವಲ್ಪ ಹೊತ್ತು ವಿಶ್ರಮಿಸಿದ ನಂತರ ಅವನನ್ನು ಎಬ್ಬಿಸಿ"ನಡೆಯಿರಿ ಹೋಗೋಣ" ಎಂದ. "ಎಲ್ಲಿಗೆ?" ಅಂದದಕ್ಕೆ "ನಮ್ಮೂರಿಗೆ, ಅಗಾ ಅಲ್ಲಿ ಬೆಳಕು ಕಾಣ್ತದಲ್ಲಾ ಅದೇ ತ್ವೋಟಗಂಟಿ, ಒಂದೇ ಮೈಲು ನಡಿಯಾಕ್ಕ ಆಗ್ತದಾ?" ಎಂದು ಕೇಳಿದ. "ಹೂಂ" ಎಂದು ಇವನು ಹೆಜ್ಜೆ ಹಾಕಿದ. ಎತ್ತುಗಳು ಬಾಲ ಅಲ್ಲಾಡಿಸುತ್ತ ಗಂಟೆ ಗಿಲಿಗಿಲಿ ಮಾಡುತ್ತ ಮುಂದೆ, ಮುಂದೆ, ಇವರಿಬ್ಬರೂ ಹಿಂದೆ ಹಿಂದೆ. ಮಾತಾಡಿದ ಎತ್ತುಗಳು. "ರಟ್ಟಿಹಳ್ಳಿಯವರಾ?" "ಹೂಂ" ಮುಂಜಾನೆ ಹರಿಗೋಲಿ




ನಾಗ ಹೋಗಿರಂತೆ" ಎಂದು ಹೇಳಿದ ಯಜಮಾನ. ಅಷ್ಟೇ. ಮುಂದಿನ ದಾರಿ ಮೌನದಲ್ಲಿ ಸವೆಯಿತು. ಹೆಚ್ಚಿನ ಮಾತಿಲ್ಲ. ಪೀಡಿಸುವ ಪ್ರಶ್ನೆಗಳಿಲ್ಲ. ಮನೆಯೊಳಗೆ ಕಾಲಿಡುತ್ತಲೇ ಆತ ಹೆಂಡತಿಯನ್ನು ಕೂಗಿದ. ಮೂರ್ನ ಹುಡುಗಿಗಳು ಬಂದವು. ಒಳಗೆ ಬಾಗಿಲಿನ ಆಚೆ ಈಚೆ ಕದ ಕದ ಓಡುತ್ತ ಕುಳಿತ ಇಬ್ಬರು ಹುಡುಗರು ಕಣ್ಣಗಲಿಸಿ ಆಗಂತುಕನನ್ನು ನೋಡಿದರು. ಗೃಹಿಣಿ ಅವಸರದಿಂದ ಎರಡು ಕಪ್ಪು ತುಂಬಿಯ ಚಹಾ ತಯಾರಿಸಿಕೊಟ್ಟಳು. ಬೇಡ ಎಂದರೂ ಕೇಳದೆ ಒಲೆಯ ಮುಂದೆ ಕೂರಿಸಿ ತಲೆ ಕಾಯಿಸಿಕೊಳ್ಳಲು ಹಚ್ಚಿದಳು. ಊಟಕ್ಕೆ ಬಿಸಿಬಿಸಿ ಅನ್ನ, ತುಪ್ಪ, ಸುಗ್ಗೀಕಾಯಿ ಸಾರು, ಉಪ್ಪಿನಕಾಯಿ, ಹಪ್ಪಳ ಬಡಿಸಿದಳು. ಚಿಕ್ಕಹುಡುಗರಿಬ್ಬರೂ ತಂದೆಯ ಗಂಗಾಳದ ಸುತ್ತ ಕುಳಿತು ತಗ್ಗಿದ ದನಿಯಲ್ಲಿ ಮಾತನಾಡುತ್ತ ಉಂಡರು. ಇವನೂ ಸಂಕೋಚವಿಲ್ಲದೆ ಉಂಡ. ಮನೆ ತುಂಬ ಓರಣವಾಗಿತ್ತು. ಊಟದ ನಂತರ ಕಾಲು ಗಂಟೆ ತಾಂಬೂಲ ಜಗಿಯುತ್ತ ಇಬ್ಬರೂ ಮಾತನಾಡಿದರು. ಹುಡುಗರು ತಂದೆಯ ಮಡಿಲಲ್ಲೇ ನಿದ್ದೆ ಹೋದರು. ಯಜಮಾನ, ಇವನ [illegible]ತನವನ್ನು ಅರಿತು ಹಾಸ್ಯಮಾಡಲಿಲ್ಲ. ಅಷ್ಟರಲ್ಲಿ ಮನೆಯ ಯಜಮಾನಿ ಬಂದು "ಅವರಿಗೆ ಮಲಗಾಕ ಬಿಡ್ರಿ" ಎಂದು ಗಂಡನನ್ನು ಸಲುಗೆಯಿಂದ ಗದರಿಸಿದಳು. ಆಕೆಯ ಮಾತು, ನಡತೆಗಳಲ್ಲಿ ತಾನೇನು ಮಾಡುತ್ತಿದ್ದೇನೆಯೆಂಬುದರ ಸಂಪೂರ್ಣ ಅರಿವುಳ್ಳವರ ಆತ್ಮವಿಶ್ವಾಸ. ಆತುರದ ಅಭಾವ ಎದ್ದುಕಾಣುತ್ತಿತ್ತು.

ಮಲಗಿಕೊಂಡಾಗ ಇವನಿಗೆ ಯಾಕೋ ಎಲ್ಲಿಲ್ಲದ ನೆಮ್ಮದಿ ತುಂಬಿಕೊಂಡಿತು. ಈ ಚಿಕ್ಕ ಸಂಸಾರದಲ್ಲಿ ಯಾರಿಗೂ ನನ್ನಂತೆ ದ್ವಂದ್ವಗಳಿರಲಿಕ್ಕಿಲ್ಲ ಎನಿಸಿತು. 'ಹೊಂ ಎಂಥ ಒಳ್ಳೇ ಜನ' ಎಂದು ಈ ಮನೆಯವರ ಬಗ್ಗೆ ಕೃತಜ್ಞತೆ ಉಂಟಾಯಿತು. ಗೃಹಿಣಿಯ ಬಗ್ಗೆ ಗೌರವ ಮೂಡಿತು. ಕೂಡಲೇ ತನ್ನ ಹೆಂಡತಿಯ ನೆನಪಾಯಿತು. ಈಗ ನನ್ನ ಬಗ್ಗೆ ಎಷ್ಟು ಆತಂಕಪಡುತ್ತಿದ್ದಾಳೋ ಏನೋ ಎಂದು ಮನಸ್ಸು ಅವಳ ಕುರಿತು ಆರ್ದ್ರವಾಯಿತು. ತುಂಬು ಬಸುರಿ ಬೇರೆ. ಅಷ್ಟುಮಾಡಿ ಯಾಕೆ ಅವಸರದಿಂದ ಹೊರಟೆನೋ! ಇನ್ನೊಂದು ತಿಂಗಳಾದರೂ ತಡೆದಿದ್ದರೆ ಅವಳ ಸೂಜಿಬನಾತ್ರಿಗೆ (ಕೌದಿಗೆ) ತಕ್ಕಂಥ ಮಗನನ್ನು ಕೊಡುತ್ತಿದ್ದೆ ಎಂದುಕೊಂಡ.

ಹೀಗೇ ಮನೋವಿಚಾರಲಹರಿ ಸಾಗಿದ್ದಾಗಲೇ ದಟ್ಟವಾದ ಕಪ್ಪು ಮೋಡದೊಡಲಿಂದ ಫಳಫಳಿಸಿದ ಮಿಂಚಿನಂತೆ ತಟ್ಟನೆ ಅಚಿಂತಿತವಾಗಿ ಆ ವಿಚಾರ ಅವನ ತಲೆಯಲ್ಲಿ ಸ್ಫುರಿಸಿತು. ಇಂದಿನ ಈ ವಿಪತ್ತು ಸುಪ್ತ ಪ್ರಜ್ಞೆಯಿಂದಾಗಲಿ ಅಪ್ರಜ್ಞೆಯಿಂದಾಗಲಿ ಅಥವಾ ಪ್ರಜ್ಞಾತೀತತೆಯಿಂದಾಗಲಿ ನನ್ನ ಮೇಲೆ ನಾನೇ ತಂದುಕೊಂಡಿದ್ದಿರಬಹುದೇ? ಅವಳ ನಿಯೋಜಿತ ಭೇಟಿಯನ್ನು ತಪ್ಪಿಸಲು? ಲಜ್ಜೆಯಿಂದ ದೂರವಿರಲು? ಇರಬಹುದು.. ಇದ್ದರೂ ಇರಬಹುದು ಎನಿಸಿದಾಗ ಆ ಮಹಾರಿ ಹೊಳೆ. ಆ ಮಡುವಿನ ಸುಳಿ. ಆ ಗಂಡಾಂತರದ ಎಲ್ಲವೂ ಸಹಜವೆನಿಸಿದವು. [illegible]

☼



ಸ್ವಿಜರ್ಲಂಡಿನ ಎಂಟು ಸಾವಿರ ಅಡಿ ಎತ್ತರದ ಶಿಖರಗಳು ಈ ಹಳ್ಳಿಯನ್ನು ಸುತ್ತುವರೆದಿರುವುದರಿಂದ ಎಲ್ಮ್ಯಗ್ ಹಳ್ಳಿಗರು ಬೇಸಿಗೆಯಲ್ಲಿ ಕೂಡ ಸೂರ್ಯನ ದರ್ಶನ ಪಡೆಯಬೇಕಾದರೆ ಪರ್ವತವೊಂದರ ತುತ್ತತುದಿಗೇರಬೇಕಾಗುತ್ತದೆ. ಸೂರ್ಯ ಈ ಹಳ್ಳಿಯ ಮೇಲೆ ಬೆಳಕು ಬೀರುವುದು ವರ್ಷದಲ್ಲಿ ಕೇವಲ ಎರಡು ಬಾರಿ: ವಸಂತ ಋತುವಿನ ಮೊದಲೆರಡು ವಾರ ಹಾಗೂ ಶರತ್ ಋತುವಿನ ಕೊನೆ ಎರಡು ವಾರ.

ಶೂರರಲ್ಲಿ ಶೂರ, ಜಾಣರಲ್ಲಿ ಜಾಣ,
ಮೂರು ಸಾವಿರ ವರ್ಷಗಳ ನಂತರವೂ
ಆತನ ಕೀರ್ತಿಯು ಅಬಾಧಿತ

ಸೊಲೊಮನ್ ಬುದ್ಧಿಗೆ ಇನ್ನೊಂದು ಹೆಸರು

ಸಣ್ಣ ನಂಜೇಗೌಡ

ಅದೊಂದು ಸುಂದರ ಬೆಳಗು. ಸೂರ್ಯ ತನ್ನ ಮೃದು ಕಿರಣಗಳಿಂದ ಬೆಳಗಿನ ಹಿತವನ್ನು ಭೂಮಿಯ ಸಕಲ ಜೀವಿಗಳಿಗೂ ಹಂಚಿದ್ದ. ರಾಜನ ಒಡ್ಡೋಲಗದಲ್ಲಿ ಅದಮ್ಯ ಉತ್ಸಾಹ. ಪ್ರಾತಃಕಾಲದ ಸಭೆಗೆ ಎಲ್ಲರೂ ಸೇರಿದ್ದಾರೆ. ಸುಸಜ್ಜಿತ ವ್ಯವಸ್ಥೆಗಳಿಂದ ರಾಜಸಭೆ ಕಂಗೊಳಿಸುತ್ತಿದೆ. ರತ್ನಖಚಿತ ಸಿಂಹಾಸನದ ಇಕ್ಕೆಲಗಳಲ್ಲೂ ಸುವರ್ಣನಿರ್ಮಿತ ಸಿಂಹದಾಕೃತಿಗಳು. ರಾಜ ಸೊಲೊಮನ್ ಪೀಠವನ್ನಲಂಕರಿಸಿದ್ದಾನೆ. ಸಭಿಕರ ಕಣ್ಣುಗಳು ರಾಜನೆಡೆಗೇ ಕೇಂದ್ರೀಕೃತವಾಗಿವೆ. ಸಭೆಯಲ್ಲಿ ಒಂದು ರೀತಿಯ ಗಂಭೀರ ಮೌನ. ಇಂಥ ಮೌನವನ್ನು, ಸೀಳಿದಂತೆ ಇದ್ದಕ್ಕಿದ್ದಂತೆ ಹೊರಗೆ ಗದ್ದಲ. ಜೋರಾದ ಅಳು. ಓಡಿಬಂದ ಸೇವಕ ತಲೆಬಾಗಿ, "ಮಹಾಪ್ರಭು, ಯಾರೋ ಇಬ್ಬರು ಸ್ತ್ರೀಯರು ನ್ಯಾಯ ಯಾಚಿಸಿ ತಮ್ಮಲ್ಲಿಗೆ ಬಂದಿದ್ದಾರೆ."ಎಂದ. ರಾಜನ ಅಪ್ಪಣೆಯಂತೆ ಅವರಿಬ್ಬರನ್ನೂ ಸಭೆಗೆ ಕರೆತಂದ. ಇಬ್ಬರಲ್ಲಿ ಒಬ್ಬಳು ಅಳುತ್ತಾ, "ಪ್ರಭು ಅವಳು ಹಿಡಿದಿರುವ ಮಗು ನನ್ನದು; ನಾನು ಅದನ್ನು ಹೆತ್ತು ಹೊತ್ತು ಸಾಕಿದ್ದೇನೆ; ಅದು ನನಗೆ ಸೇರಬೇಕು. ದಯವಿಟ್ಟು ಅದನ್ನು ಕೊಡಿಸಿಕೊಡಿ" ಎಂದು ಹೇಳುವಷ್ಟರಲ್ಲಿ ಮತ್ತೊಬ್ಬಳು, "ಇಲ್ಲ ಸ್ವಾಮಿ, ಇವಳು ಹೇಳುತ್ತಿರುವುದು ಸುಳ್ಳು. ಈ ಮಗು ನ್ಯಾಯವಾಗಿ ನನಗೇ ಸೇರಬೇಕು; ನನ್ನ ಅಳಿವು-ಉಳಿವುಗಳು ಈ ಮಗುವಿನಿಂದಲೇ. ದಯಮಾಡಿ ನನ್ನ ಮಗು ನನಗೇ ಉಳಿಯುವಂತೆ ಮಾಡಿ" ಎಂದು ಅಂಗಲಾಚಿದ್ದಾಳೆ. ಶಾಂತಚಿತ್ತನಾಗಿ ಎಲ್ಲವನ್ನೂ ಆಲಿಸಿದ ಸೊಲೊಮನ್ ಒಮ್ಮೆಲೇ ಸೇವಕನ ಕಡೆ ದಿಟ್ಟಿಸಿ. "ಹರಿತವಾದ ಖಡ್ಗದಿಂದ ಈ ಮಗುವನ್ನು ಸಮವಾಗಿ ತುಂಡರಿಸಿ ಇವರಿಬ್ಬರಿಗೂ ಕೊಡು. ಎಂದು ಆಜ್ಞಾಪಿಸಿ ಎಲ್ಲರನ್ನೂ ದಿಗ್ಭ್ರಮೆಗೊಳಿಸಿದ. ಅವರಿಬ್ಬರಲ್ಲಿ ಒಬ್ಬಳು ನಡುಗುತ್ತಾ, "ಸ್ವಾಮಿ, ಈ ಹಸುಳೆಯನ್ನು ಕೊಲ್ಲುವುದು ತರವಲ್ಲ. ಈ ಮಗು ನನ್ನದಲ್ಲ; ಅವಳಿಗೇ ಕೊಡಿ" ಎಂದಳು. ರಾಜ ಹುಸಿನಗುತ್ತಾ ಮಗುವಿನ ಮಾತೆ ಯಾರೆಂಬುದನ್ನು ಪತ್ತೆಹಚ್ಚಿದ್ದಕ್ಕೆ ಒಳಗೊಳಗೇ ಹರ್ಷಪಟ್ಟ. ದೊರೆಯ ನ್ಯಾಯಚಾತುರ್ಯ ಸಭಿಕರಲ್ಲಿ ವಿಸ್ಮಯ, ಸಂತಸಗಳನ್ನು ಒಟ್ಟಿಗೆ ಉಂಟುಮಾಡಿತು. ಆದ್ದರಿಂದಲೇ ಬೈಬಲ್ "ಎಲ್ಲ

ಇಸ್ರೇಲಿಗರೂ ತೀರ್ಪು ನೀಡುವ ದೈವಜ್ಞಾನವನ್ನು ಆತನಲ್ಲಿ ಕಂಡರು" ಎಂದು ಹೇಳಿರುವುದು.

ಸೊಲೊಮನ್ನನ ಚಾತುರ್ಯ ಕುರಿತ ಮತ್ತೊಂದು ಪ್ರಸಂಗ: ಚೆಲುವೆ ಶೀಬಾದ ರಾಣಿ ಅವನ ವೈಭವದ ಬಗ್ಗೆ ಬಹಳಷ್ಟು ಕೇಳಿದ್ದಳು. ಅದನ್ನು ತಾನೇ ಕಣ್ಣಾರೆ ಕಂಡು ಅವನ ಸಂದರ್ಶನವನ್ನು ಪಡೆಯುವ ಅಭಿಲಾಷೆಯಿಂದ ಚಿನ್ನ, ಬೆಲೆಬಾಳುವ ವಸ್ತ್ರಗಳು, ಸಾಂಬಾರ ಪದಾರ್ಥಗಳೊಂದಿಗೆ ಒಂಟೆಯ ಸಾಲುಗಳೊಡಗೂಡಿ ಬಂದು ರಾಜನಿಗೆ ಅವನ್ನು ಕಾಣಿಕೆಯಾಗಿ ಅರ್ಪಿಸಿದಳು. ಆ ಸಮಯದಲ್ಲಿ ಅವನ ಬುದ್ಧಿಮತ್ತೆಯನ್ನು ಒರೆಗೆ ಹಚ್ಚಬೇಕೆಂದು ದೂರನೋಟಕ್ಕೆ ಸ್ವಲ್ಪವೂ ವ್ಯತ್ಯಾಸವಿರದ ಒಂದೇ ರೀತಿ ಕಾಣುವ ಎರಡು ಹೂವಿನ ಹಾರಗಳನ್ನು ಹಿಡಿದು ಅವುಗಳಲ್ಲಿ ನಿಜವಾದದ್ದು ಯಾವುದೆಂಬುದನ್ನು ಗುರುತಿಸಬೇಕೆಂದಳು. ಆಗ ಸೊಲೊಮನ್ ಸೇವಕರಿಗೆ ಎಲ್ಲ ಕಿಟಕಿ ಬಾಗಿಲುಗಳನ್ನು ತೆರೆಯುವಂತೆ ಹೇಳಿದ. ಸ್ವಲ್ಪ ಹೊತ್ತಿನಲ್ಲೇ ದುಂಬಿಗಳು ಒಳನುಗ್ಗಿ ನಿಜವಾದ ಹೂವಿನ ಹಾರದ ಸುತ್ತ ಝೇಂಕರಿಸಲಾರಂಭಿಸಿದವು. ರಾಜನ ತೀಕ್ಷ್ಣ ಬುದ್ಧಿಗೆ ಮಾರುಹೋದ ಶೀಬಾದ ರಾಣಿ ಕೊನೆಗೆ ಅವನ ಪ್ರಣಯ ಭಿಕ್ಷೆ ಯಾಚಿಸಿದಳು. ಐತಿಹ್ಯದ ಪ್ರಕಾರ ಇವರಿಬ್ಬರಿಗೆ ಜನಿಸಿದವನು ಇಥಿಯೋಪಿಯಾದ ರಾಜವಂಶದ ಮೂಲಪುರುಷನಾದ. ಸೊಲೊಮನ್ ಕುರಿತ ಈ ಬಗೆಯ ನೂರಾರು ಕಥೆಗಳು ಬೈಬಲ್ ಮತ್ತು ಇತರ ಪ್ರಾಚೀನ ಹೀಬ್ರೂ ಗ್ರಂಥಗಳಲ್ಲಿ ದೊರೆಯುತ್ತವೆ.

ಸುಮಾರು ಕ್ರಿ.ಪೂ. ೯೭೦ರಲ್ಲಿ ಸೊಲೊಮನ್ ಇಸ್ರೇಲಿನ ರಾಜ್ಯಭಾರ ವಹಿಸಿಕೊಂಡ. ಇವನ ತಂದೆ ಡೇವಿಡ್; ತಾಯಿ ಬತ್‌ಶೆಬಾ. ಡೇವಿಡ್‌ನ ನಾಲ್ಕನೆಯ ಮಗ. ಹುಟ್ಟಿದ್ದು ಜೆರೂಸಲೆಮ್‌ನಲ್ಲಿ. ತಂದೆ ಡೇವಿಡ್ ಈತನಿಗೆ ಉತ್ತರಾಧಿಕಾರ ವಹಿಸಬೇಕೆಂದು ಬಯಸುತ್ತಿದ್ದಾಗಲೇ ತನ್ನ ಇನ್ನೊಬ್ಬ ಮಗ ಅಡೊನಿಯ್ಯಾ ದಂಗೆ ಎದ್ದ. ಕೊನೆಗೆ ಧೈರ್ಯೋತ್ಸಾಹಗಳಿಂದ ತುಂಬಿದ್ದ ಸೊಲೊಮನ್ನನಿಗೇ ಸಿಂಹಾಸನ ದೊರಕುವಂತೆ ಮಾಡಿ ಡೇವಿಡ್ ತನ್ನ ಕೊನೆಯುಸಿರೆಳೆದ.

ಆದರೆ ಸೊಲೊಮನ್ ಅಧಿಕಾರಕ್ಕೆ ಬಂದಾಗ ಇಸ್ರೇಲಿನಲ್ಲಿ ಅರಾಜಕತೆ, ಬಡತನ, ಅಶಾಂತಿ ತಾಂಡವವಾಡುತ್ತಿದ್ದವು. ಇವೆಲ್ಲವನ್ನು ಕೊನೆಗೊಳಿಸಿ ಅಲ್ಲಿ ನೆಲೆಸಿದ್ದ ಎಲ್ಲ ಜನಾಂಗಗಳಲ್ಲಿ ಐಕ್ಯವನ್ನು ಉಂಟುಮಾಡಲು ಇಸ್ರೇಲ್ ಸುತ್ತಮುತ್ತಲಿನ ಹನ್ನೆರಡು ವಿಧದ ಕುಟುಂಬ ಜನಾಂಗಗಳಲ್ಲಿ ಪರಸ್ಪರ ಸ್ನೇಹ-ಸೌಹಾರ್ದಗಳು ಬೆಳೆಯುವಂತೆ ಮಾಡಿದ. ಅಲ್ಲದೆ ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಹಿಂದೆಂದೂ ಕಂಡಿರದ ರೀತಿಯಲ್ಲಿ ಸುಧಾರಿಸಿದ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಂಪೂರ್ಣವಾಗಿ ಯುದ್ಧಗಳ ಸದ್ದಡಗಿಸಿ ಶಾಂತಿಯಿಂದಲೇ ಸಾಮ್ರಾಜ್ಯ ಸ್ಥಾಪನೆ ಮಾಡುವುದರ ಮೂಲಕ ಜನರ ನೆಮ್ಮದಿಯ ಜೀವನಕ್ಕೆ ಕಾರಣನಾದ.

ಶತ್ರು ನಿರ್ಮೂಲನ ಹಾಗೂ ಸ್ನೇಹ ಸಂಪಾದನೆ—ಇವು ಸೊಲೊಮನ್‌ನ ರಾಜನೀತಿಯ ವ್ಯವಸ್ಥೆಯಲ್ಲಿದ್ದ ಬೀಜಮಂತ್ರಗಳು. ತನಗೆ ಶತ್ರುಗಳೆನಿಸಿದ್ದ ಅಡೊನಿಯ್ಯಾ, ಜೊಆಬ್, ಶಿಮೈ ಇವರುಗಳನ್ನು ಅಂತ್ಯಗೊಳಿಸಿದ. ತನ್ನ ರಾಜ್ಯದ ಸುತ್ತಮುತ್ತಲಿನ ಬಹುತೇಕ ಸಂಸ್ಥಾನಗಳಲ್ಲಿ ವೈವಾಹಿಕ ಸಂಬಂಧಗಳನ್ನು ಬೆಳೆಸುವುದರ ಮೂಲಕ ಸ್ನೇಹ ಸೌಹಾರ್ದಗಳ ವರ್ಧಿಸಲು ಕಾರಣನಾದ. ಯೂಫ್ರೆಟಿಸ್‌ನಿಂದ ಪ್ಯಾಲೆಸ್ಟೈನ್ ಮತ್ತು ಈಜಿಪ್ಟ್‌ನವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ತನ್ನ ದೇಶದ ಹಿಂದುಳಿದ ಪ್ರಜೆಗಳಿಗೆ ಕುಶಲಕೈಗಾರಿಕೆಗಳಲ್ಲಿ ಆಸಕ್ತಿ ಮೂಡಿಸಿ, ಆ ಮೂಲಕ ಏಳಿಗೆಯನ್ನು ತರಲು ಬಹುವಾಗಿ ಪ್ರಯತ್ನಿಸಿದ. ಇಸ್ರೇಲಿನ ಶತ್ರುವಾಗಿದ್ದ ಈಜಿಪ್ಟಿನ ದೊರೆ ಫೆರೋಹನ ಮಗಳನ್ನು ಕೈಹಿಡಿದಲ್ಲದೆ ಈಜಿಪ್ಟಿನ ಪ್ರಮುಖ ಕೋಟೆಯೊಂದನ್ನು ವರದಕ್ಷಿಣೆಯನ್ನಾಗಿ ಪಡೆದು ಈಜಿಪ್ಟಿನೊಂದಿಗಿದ್ದ ವೈರವನ್ನು ಕೊನೆಗೊಳಿಸಿದ. ಇಸ್ರೇಲಿಗರು ಫಿನೀಷಿಯನ್‌ರಿಂದ ತಾಮ್ರ ಶುದ್ಧಿ ಮಾಡುವುದು, ಕಲ್ಲನ್ನು ಸಿಂಗಾರಮಾಡುವುದು ಹಾಗೂ ನಯಮಾಡುವುದು, ಬತ್ತಳಿಮಾಡುವುದು, ಮರದಾಕೃತಿಗಳನ್ನು ತಯಾರಿಸುವುದು ಇವೇ ಮುಂತಾದ ಕುಶಲ ಕಲೆಗಳನ್ನು ಬಹುಬೇಗ ಕರಗತಮಾಡಿಕೊಂಡರು. ನೆರೆಯ ರಾಷ್ಟ್ರಗಳೊಡನೆ ವಾಣಿಜ್ಯ

ಬಿಡ್ಡಂಗಳು ಏರ್ಪಟ್ಟವು. ಗೋಧಿ ಮತ್ತು ಆಲಿವ್ ಎಣ್ಣೆಗಳಿಗೆ ಪ್ರತಿಯಾಗಿ ಕಚ್ಚಾ ವಸ್ತುಗಳನ್ನು ಬೇರೆ ದೇಶಗಳಿಂದ ಪಡೆದರು. ಇಸ್ರೇಲಿನ ನೌಕೆಗಳು ಆಫ್ರಿಕದ ದೇಶಗಳಲ್ಲದೆ ಅರೇಬಿಯ, ಭಾರತದಂತಹ ರಾಷ್ಟ್ರಗಳನ್ನು ತಲುಪಿ ಕರಕುಶಲ ವಸ್ತುಗಳನ್ನು ಮಾರಿ ಪ್ರತಿಯಾಗಿ ಹೇರಳ ಚಿನ್ನದೊಂದಿಗೆ ಹಿಂದಿರುಗುತ್ತಿದ್ದವು. ಕೆಲವೇ ವರ್ಷಗಳಲ್ಲಿ ಇಸ್ರೇಲ್ ಸಂಪದ್ಭರಿತ ವಾಯಿತು. ಆ ಕಾಲದಲ್ಲಿ ಇಸ್ರೇಲಿನಿಂದ ಹೊರಟ ಹಡಗುಗಳು ಮೂರು ವರ್ಷಗಳ ಸತತ ಸಮುದ್ರ ಯಾನ ಮಾಡಿ ದಕ್ಷಿಣ ಭಾರತದ ಮಲಬಾರ್ ತೀರವನ್ನು ತಲುಪಿ ಚಿನ್ನ, ಬೆಳ್ಳಿ. ದಂತ, ಮುತ್ತು ರತ್ನಗಳನ್ನಲ್ಲದೆ ನವಿಲು, ಮಂಗಗಳಂತಹ ಪ್ರಾಣಿಗಳೊಡನೆ ಹಿಂದಿರುಗುತ್ತಿದ್ದವು. "ಬೆಳ್ಳಿಯೇ ಜೆರೂಸಲಮ್‌ನಲ್ಲಿ ಕಲ್ಲಾಗಿರುವಂತೆ ಮಾಡಿದ" ಎಂಬ ಮಾತು ಸೋಲೊಮನ್ ಕಾಲದ ಸಂಪತ್ತಿನ ವೈಭವವನ್ನು ಪ್ರತಿಬಿಂಬಿಸುತ್ತದೆ. ಸೊಲೊಮನ್‌ನ ಕಾಲದಲ್ಲಿ ಎಲ್ಲೆಲ್ಲೂ ಘಮಘಮಿಸುವ ನಂದನವನಗಳು, ಅಪೂರ್ವ ಮೃಗಾಲಯಗಳು, ರಾಣಿವಾಸದ ಮನೆಗಳು, ಒಂದು ಐತಿಹ್ಯದ ಪ್ರಕಾರ ರಾಜನಿಗೆ ಏಳುನೂರು ಜನ ಹೆಂಡತಿಯರೂ ಮುನ್ನೂರು ಜನ ಸೂಳೆಯರೂ ಇದ್ದರಂತೆ. ಕುಡಿಯಲು ಬಳಸುತ್ತಿದ್ದ ಪಾತ್ರೆಗಳು ಬಂಗಾರದವು ಚಿನ್ನದಿಂದ ಮಾಡಿದವುಗಳಂತೆ!

ತನ್ನ ದೇಶದ ಆರ್ಥಿಕ ಅಭಿವೃದ್ಧಿಯ ಜೊತೆಗೆ ಸಾಂಸ್ಕೃತಿಕ ಬೆಳವಣಿಗೆಗೂ ಅತ ಹೆಚ್ಚು ಗಮನ ಹರಿಸಿದ. ಜೆರೂಸಲೇಮಿನ ಎತ್ತರದ ಒಂದು ಬಂಡೆಯ ಮೇಲೆ ಬೃಹತ್ ದೇಗುಲವನ್ನು ನಿರ್ಮಿಸಿ ಮೊದಲಬಾರಿಗೆ ಇಸ್ರೇಲಿನ ಎಲ್ಲ ಬುಡಕಟ್ಟು ಜನಾಂಗಗಳೂ ಅಲ್ಲಿ ಒಟ್ಟಾಗಿ ಸೇರಿ ಪ್ರಾರ್ಥನೆ ಸಲ್ಲಿಸಲು ಅವಕಾಶವಾಗುವಂತೆ ಮಾಡಿದ. ಈ ದೇವಾಲಯ ನಿರ್ಮಿತವಾಗಲು ಏಳು ವರ್ಷಗಳೇ ಹಿಡಿದವು. ದೇವದಾರು ಮತ್ತು ಸ್ಥಳೀಯ ಅಮೃತ ಶಿಲೆಯನ್ನು ಬಳಸಿ ನಿರ್ಮಿಸಿದ ಇದರ ಮುಖಮಂಟಪದಲ್ಲಿ - ಮೂವತ್ತೇಳು ಅಡಿ ಉದ್ದದ ಎರಡು ಭವ್ಯ ಹಿತ್ತಾಳೆ ಕಂಭಗಳು ಕಾವಲುಗಾರನೋಪಾದಿಯಲ್ಲಿ ಇದ್ದವಂತೆ! ಚಾಕಚಕ್ಯತೆಯಿಂದ ನಿರ್ಮಿಸಿದ ಜಾಲಾಂದ್ರಗಳು' ಗೋಡೆಯ ಮೇಲಿನ ಸೂಕ್ಷ್ಮ ಕೆತ್ತನೆಗಳು, ಗರ್ಭ ಗೃಹದ ಸುತ್ತಲೂ ಇದ್ದ ಮರದ ಕೆತ್ತನೆ, ಗರ್ಭ ಗೃಹದಲ್ಲಿ ಇರಿಸಿದ್ದ ಇಸ್ರೇಲಿನ ಆಸ್ತಿ "ಟೇಬಲ್ಸ್ ಆಫ್ ದಿ ಲಾ" ಎಂಬ ಧರ್ಮಗ್ರಂಥವನ್ನೊಳಗೊಂಡ ಪೆಟ್ಟಿಗೆ–ಇವು ಆ ದೇವಾಲಯದ ಗಮನ ಸೆಳೆಯುವಂಥವುಗಳಾಗಿದ್ದವು. ಈ ಅದ್ಭುತ ದೇವಾಲಯವನ್ನು ಉದ್ಘಾಟಿಸುತ್ತಾ, "ಸ್ವರ್ಗಗಳ ಸ್ವರ್ಗಕ್ಕೆ ಒಡೆಯನಾದ ಇಸ್ರೇಲಿನ ದೇವನಿಗೆ ಈ ಸಣ್ಣ ದೇಗುಲವನ್ನು ನಿರ್ಮಿಸಿರುವೆ" ಎಂದು ಸೊಲೊಮನ್ ನಮ್ರತೆಯಿಂದ ಹೇಳಿಕೊಂಡಿದ್ದಾನೆ.

ಸೋಲೊಮನ್ ಸತ್ತನಂತರ ಮತ್ತೆ ಇಸ್ರೇಲಿನ ಇತಿಹಾಸ ವಿಭಜನೆಗೊಂಡು ಉತ್ತರದಲ್ಲಿ ಇಸ್ರೇಲ್, ದಕ್ಷಿಣದಲ್ಲಿ ಜ್ಯೂಡಾ ರಾಷ್ಟ್ರಗಳಾಗಿ ಪರಿಣಮಿಸುತ್ತದೆ. ಬ್ಯಾಬಿಲೋನಿಯನ್ನರ ದಾಳಿಯಿಂದ ದೇವಾಲಯ ಸಂಪೂರ್ಣ ನಾಶಹೊಂದಿರುತ್ತದೆ. ಇದರ ಗೋಪುರವನ್ನು ಪ್ಯಾಲಸ್ಟೈನಿನ ಅರಬ್ ಆಕ್ರಮಣಕಾರರು ವಶಪಡಿಸಿಕೊಂಡರು. ಅವರು ನಿರ್ಮಿಸಿದ ಸಾವಿರದ ಇನ್ನೂರು ವರ್ಷಗಳಷ್ಟು ಹಳೆಯದಾದ, ಇಂದಿಗೂ ಇರುವ 'ಡೂಮ್ ಆಫ್ ದಿ ರಾಕ್' ಭವ್ಯ ಕಟ್ಟಡದಲ್ಲಿ ಈ ಗೋಪುರವನ್ನು ಅಳವಡಿಸಿದರು. ಮುಸಲ್ಮಾನರ ನಂಬಿಕೆಯ ಪ್ರಕಾರ ಈ ಗೋಪುರದ ಮೂಲಕವೇ ಮಹಮದ್ ಸ್ವರ್ಗಕ್ಕೆ ಹೋದನೆಂಬ ಪ್ರತೀತಿ ಇದೆ.

ಈಗಲೂ "ಸೊಲೊಮನ್‌ನಷ್ಟು ಬುದ್ಧಿವಂತ" ಎಂಬ ಉಕ್ತಿ ಬಳಕೆಯಲ್ಲಿರುವುದನ್ನು ಕಾಣುತ್ತೇವೆ. "ಚತುರರಲ್ಲಿ ಚತುರ" ಎಂದು ಬೈಬಲ್ ವರ್ಣಿಸಿದರೆ "ಅವನೊಬ್ಬ ಪ್ರಮುಖ ಪ್ರವಾದಿ" ಎಂದು ಖುರ್ ಆನ್ ಹೇಳುತ್ತದೆ. ತನ್ನ ನಾಲ್ಕು ದಶಕಗಳ ಆಳ್ವಿಕೆಯಲ್ಲಿ ನಿರ್ಮಿಸಿದ ಅತ್ಯಾಕರ್ಷ ಣೆಗಳ ಪ್ರಭಾವದಿಂದಾಗಿ ಇಸ್ರೇಲ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆಯುವ ಐತಿಹ್ಯಗಳಲ್ಲಿ ಬಹುಪಾಲು ಅವನಿಗೇ ನಾಯಕನ ಪಟ್ಟ. ಹಾಗೂ 'ಹಳೆಯ ಒಡಂಬಡಿಕೆ'ಯಲ್ಲಿ ಮಹತ್ತರ ಸ್ಥಾನ. ಬೈಬಲ್ ಪ್ರಕಾರ ಸೊಲೊಮನ್ ಮೂರು ಸಾವಿರ ಗಾದೆಗಳನ್ನು ಹೇಳಿದನಂತೆ ಮತ್ತು

ಸಾವಿರದೈದು ಹಾಡುಗಳನ್ನು ರಚಿಸಿದನಂತೆ.

"ಬುಕ್ ಆಫ್ ಪ್ರಾವರ್ಬ್ಸ್," "ಇಕ್ಲೀಸಿಯಾಸ್ಟಸ್" ಎಂಬ ಕ್ರೈಸ್ತಧರ್ಮ ಗ್ರಂಥ. ಸಾಂಗ್ ಆಫ್ ಸಾಲೊಮನ್ ಮತ್ತು ವಿಸ್‌ಡಮ್ ಆಫ್ ಸೊಲೊಮನ್–ಇವು ಸೊಲೊಮನ್‌ನಿಂದ ರಚಿತ-ವಾದವುಗಳು ಎಂಬ ಪ್ರತೀತಿ ಇದೆ. ಆದರೆ ವಿಮರ್ಶಕರಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯಗಳಿವೆ. 'ಬುಕ್ ಆಫ್ ಪ್ರಾವರ್ಬ್ಸ್'ನ ಸ್ವಲ್ಪ ಭಾಗ ಮಾತ್ರ ಇವನಿಂದ ರಚಿತವಾದದ್ದು ಎಂಬ ಅಭಿಪ್ರಾಯವೂ ಉಂಟು. 'ವಿಸ್‌ಡಮ್ ಆಫ್ ದಿ ಸೊಲೊಮನ್' ಹಳೆಯ ಒಡಂಬಡಿಕೆಯ ಒಂದು ಭಾಗವಾಗಿದ್ದು ರೋಮನ್ ಕ್ಯಾಥೊಲಿಕರ ಧಾರ್ಮಿಕ ಸಾಹಿತ್ಯವಾಗಿ ಪರಿಣಮಿಸಿದೆ.

ಜೂಯಿಷ್ ಮತ್ತು ಮಹಮದೀಯ ಬರವಣಿಗೆಗಳಲ್ಲಿ ಸೊಲೊಮನ್‌ನ ಕುರಿತು ಅನೇಕ ಕಥೆಗಳಿವೆ. ಅವನೊಬ್ಬ ಅದ್ಭುತ ಮಂತ್ರವಾದಿ ಎಂಬ ಸಾಮಾನ್ಯ ಅಂಶ ಈ ಎಲ್ಲ ಕಥೆಗಳಲ್ಲಿ ಕಂಡು ಬರುತ್ತದೆ. ಪ್ರಾಣಿಗಳ ಭಾಷೆಯನ್ನು ಆತ ಅರ್ಥಮಾಡಿಕೊಳ್ಳುತ್ತಿದ್ದನಂತೆ! ಮುಸ್ಲಿಂ ಸಂಪ್ರದಾಯದ ಕಥೆಯೊಂದರ ಪ್ರಕಾರ ಸೊಲೊಮನ್ ಹತ್ತಿರ ಒಂದು ಮಾಂತ್ರಿಕ ಉಂಗುರ ಇತ್ತು. ಆದರೆ ಒಮ್ಮೆ ಕೆಟ್ಟ ಸಮುದ್ರ ದೇವತೆ ಸಖರ್ (Sakhr) ಕೈಸೇರಲು ೪೦ ದಿನಗಳ ಕಾಲ ಸೊಲೊಮನ್ ರಾಜ ನಿರ್ಗತಿಕನಾಗಿ ಬೀದಿಪಾಲಾದ. ಆದರೆ ಸಖರ್‌ನಿಂದ ಆ ಉಂಗುರ ಕೈತಪ್ಪಿ ಅದನ್ನು ಮೀನೊಂದು ನುಂಗುತ್ತದೆ. ಅದು ಮತ್ತೆ ಸೊಲೊಮನ್ ಕೈಸೇರಿದಾಗ ಆತ ಹಿಂದಿನ ಸ್ಥಿತಿಗೆ ಬರುತ್ತಾನೆ.

ಒಮ್ಮೆ ತನ್ನ ಬಳಿಯಿದ್ದ ಮಾಂತ್ರಿಕ ರತ್ನಕಂಬಳಿ ಸಹಾಯದಿಂದ ಮಕ್ಕಾಕ್ಕೆ ಯಾತ್ರೆ ಹೋಗಿದ್ದನಂತೆ. ಆ ಸಮಯದಲ್ಲಿ ಹಕ್ಕಿ-ಪಕ್ಷಿಗಳು ತಮ್ಮ ರೆಕ್ಕೆಗಳಿಂದ ಬಿಸಿಲು ಬೀಳದಂತೆ ರಕ್ಷಣೆಕೊಟ್ಟವಂತೆ. ಸೊಲೊಮನ್ ಕುರಿತ ಅತಿಮಾನುಷ ಘಟನೆಗಳನ್ನೊಳಗೊಂಡ ಕಥೆಗಳು ಪ್ರಾಚೀನ ಪಾಶ್ಚಾತ್ಯ ಬರವಣಿಗೆಗಳಲ್ಲಿ ಮಾತ್ರವಲ್ಲ ಜನಪದ ಸಾಹಿತ್ಯದಲ್ಲೂ ಹೇರಳವಾಗಿ ದೊರೆಯುತ್ತದೆ. ✡



ಗುರಿ

ನನ್ನ ಕುದುರೆಯನ್ನು ಅಶ್ವಶಾಲೆಯಿಂದ ಹೊರಗೆತರಲು ಆಜ್ಞೆ ಇತ್ತೆ; ಸೇವಕನಿಗೆ ನನ್ನ ಆಜ್ಞೆ ಅರ್ಥವಾಗಲಿಲ್ಲ. ಆದಕ್ಕೆ ನಾನೇ ಅಶ್ವಶಾಲೆಗೆಹೋಗಿ, ಕುದುರೆಗೆ ಜೀನು ಹಾಕಿ ಮೇಲೆ ಹತ್ತಿಕುಳಿತೆ. ದೂರದಲ್ಲೆಲ್ಲೋ ಕಹಳವಾದಿದ ಧನಿ ಕೇಳಿಸಿತು; ಅದೇನೆಂದು ಸೇವಕನನ್ನು ಕೇಳಿದೆ; ಅವನಿಗೇನೂ ಕೇಳಿಸಿರಲಿಲ್ಲ. ಗೇಟಿನ ಬಳಿ ನನ್ನನ್ನು ತಡೆದು ಅವನು ಕೇಳಿದ, "ಎಲ್ಲಿಗೆ ಹೊರಟದ್ದೀರಿ, ಧನಿ?" "ನನಗೆ ಗೊತ್ತಿಲ್ಲ" ನಾನೆಂದೆ, "ಇಲ್ಲಿಂದ ಆಚೆಗೆ ಹೊರಡುವುದು, ಕೇವಲ ಇಲ್ಲಿಂದಾಚೆಗೆ, ಅಷ್ಟೆ. ಇದೇ ಒಂದು ದಾರಿ ನನಗೆ ಗುರಿ ಮುಟ್ಟಲು." ಅಂದರೆ, ನಿಮ್ಮ ಗುರಿ ಯಾವುದೆಂದು ನಿಮಗೆ ಗೊತ್ತೆ? "ಅವನು ಕೇಳಿದ." ಹೌದು "ಎಂದೆ," ಅದೇ ಹೇಳಿದೆನಲ್ಲ, ಇಲ್ಲಿಂದ ಹೊರಡುವುದು -ಅದೇ ನನ್ನ ಗುರಿ.'

ಮೂಲ: ಫ್ರಾಂಜ್ ಕಾಫ್ಕಾ

ಕನ್ನಡಕ್ಕೆ: ಎಚ್. ಕೆ. ಅನಂತೇಶರಾವ್

ಪ್ರಕೃತಿ - ಪುರುಷ



ಮಧ್ಯಭಾರತದ ಖಜುರಾಹೋ ಪುರಾತನ ಭಾರತೀಯ ವಾಸ್ತುಶಿಲ್ಪದ ಭಂಡಾರವೇ ಆಗಿದೆ. ಅಲ್ಲಿಯ ವಿಶ್ವನಾಥ ದೇವಾಲಯದ ದಕ್ಷಿಣ ಗೋಡೆಯ ಮೇಲಿನ ಈ ಮಿಥುನ ವಿಗ್ರಹ ನೋಡಿ. ಗಂಡು-ಹೆಣ್ಣುಗಳು ಸಮರಸರಾಗಿದುವುದನ್ನು, ಅಲ್ಲಲ್ಲ, ಸ್ತ್ರೀ-ಪುರುಷರ ಐಕ್ಯವನ್ನು ಭಾವೋತ್ಕಟತೆಗೆಷ್ಟೂ ಕುಂದು ಬಾರದಂತೆ ಕಲ್ಲಲ್ಲಿ ಸೆರೆಹಿಡಿಯಲಾಗಿದೆ ಇಲ್ಲಿ.



ಗೋವಿಂದಮೂರ್ತಿ ದೇಸಾಯಿ

ಸಿಂಹಾಸನವಿರುವಷ್ಟು ಕಾಲವೂ ಛತ್ರ, ಚಾಮರ, ಗಜ, ಹಯ, ಪಲ್ಲಕ್ಕಿಗಳನ್ನು ರಾಜ ವೈಭವದ ಸಂಕೇತಗಳೆಂದು ಗಣಿಸಲಾಗುತ್ತಿತ್ತು. ರಾಣಿಯರಲ್ಲಿ ಒಬ್ಬಳನ್ನಾಯ್ದುಕೊಂಡು ಪಟ್ಟ ಮಹಿಷಿಯನ್ನಾಗಿ ಮಾಡಿಕೊಳ್ಳುತ್ತಿದ್ದಂತೆ ಆನೆಗಳಲ್ಲಿ ಒಂದು ಶ್ರೇಷ್ಠ ಆನೆಯನ್ನಾಯ್ದು ಪಟ್ಟದಾನೆಯನ್ನಾಗಿ ಮಾಡಿಕೊಳ್ಳುವ ಸಂಪ್ರದಾಯವೂ ಇತ್ತು. ಗಜರಾಜನಿಗೆ ಅಂದು ಇದ್ದ ಬೆಲೆ ಇಂದಿರದಿದ್ದರೂ, ದೇವಾಲಯ ಹಾಗು ಮಠಗಳಲ್ಲಿ ಇಂದಿಗೂ ಆನೆಗಳನ್ನು ಕಟ್ಟುವ ಪರಿಪಾಠ ನಡೆದು ಬಂದಿದೆ... ಅದಲ್ಲದೆ, ದೇವರನ್ನು, ಧರ್ಮಗ್ರಂಥಗಳನ್ನು ಅಥವಾ ಧರ್ಮಗುರುಗಳನ್ನು ಆನೆಯ ಮೇಲೆ ಕೂಡಿಸಿ ಮೆರವಣಿಗೆ ತೆಗೆಯುವುದನ್ನು ಇಂದಿಗೂ ನಾವು ಅಲ್ಲಲ್ಲಿ ಕಾಣಬಹುದು. ಶ್ರಮಜೀವಿಗಳಲ್ಲಿ ಆನೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಅರಣ್ಯಗಳಲ್ಲಿ ಮುಂಡಿಗೆಗಳನ್ನು ಅತ್ತಿಂದ ಇತ್ತ ಎತ್ತಿಡಲು ಆನೆಯನ್ನು ಬಳಸಲಾಗುತ್ತದೆ. ಸರಕಾರ, ಸರ್ಕಸ್, ಪ್ರಾಣಿ–ಸಂಗ್ರಹಾಲಯ, ದೇವಾಲಯ ಅಥವಾ ಗುರುಮಠಗಳನ್ನು ಬಿಟ್ಟು ಆನೆಗಳನ್ನು ಸಾಕುವ ಶಕ್ತಿ ಸಾಮಾನ್ಯರಲ್ಲಿ ಇಲ್ಲದಾಗಿದೆ.

ಮೊಗಲ್ ಸಮ್ರಾಟರು ಭಾರತವನ್ನು ಆಳುದಷ್ಟು ಕಾಲವೂ ಆನೆಗಳನ್ನು ಸಾಕುತ್ತಿದ್ದರು. ಅಕಬರ ಚಕ್ರವರ್ತಿಯಿಂದ ಕೊನೆಯ ಸಮ್ರಾಟ

ಸಿರಾಜುದ್ದೀನ ಬಹದ್ದೂರಶಹನವರೆಗೂ ಮೊಗಲರ ಗಜಶಾಲೆಗಳಲ್ಲಿ ಆನೆಗಳಿದ್ದವು. ಅಕಬರನ ಕಾಲಕ್ಕೆ ಮೊಗಲರಲ್ಲಿ ಸಾವಿರಾರು ಆನೆಗಳಿದ್ದವಂತೆ. ಶಹಾಜಹಾನ್ ಬಿಳಿ ಆನೆಯೊಂದನ್ನು ಕೊಳ್ಳಲು ಲಕ್ಷಾವಧಿ ಹಣವನ್ನು ವ್ಯಯಿಸಿ, ಬಹು ಪ್ರಯಾಸದಿಂದ ಬ್ರಹ್ಮದೇಶದಿಂದ ಒಂದನ್ನು ಕೊಂಡನಂತೆ. ಔರಂಗಜೇಬನು ಜೀವಿಸಿರುವಾಗಲೇ ಮೊಗಲ್ ಸಾಮ್ರಾಜ್ಯದ ಅವಸಾನ ಕಾಲದ ನೆರಳು ಬಿದ್ದಿದ್ದರೂ ಅವನ ನೂರಾರು ಅವನ ಗಜಶಾಲೆಯಲ್ಲಿ ಆನೆಗಳಿದ್ದವಂತೆ!! ನಂತರ ಬಂದ ಸಮ್ರಾಟರಲ್ಲಿ ಆನೆಗಳನ್ನು ಕೊಳ್ಳುವುದಿರಲಿ, ಇದ್ದ ಆನೆಗಳನ್ನು ಸಾಕುವ ಸಾಮರ್ಥ್ಯವೂ ಇಲ್ಲದಾಯಿತು. ಎರಡನೇ ಅಕಬರಶಹ ಸಮ್ರಾಟನಾಗಿ ದಿಲ್ಲಿಯ ಸಿಂಹಾಸನವನ್ನೇರಿದಾಗ, ಖಜಾನೆ ಬರಿದಾಗಿತ್ತು. ಆದರೂ ಕೆಂಪು ಕೋಟೆಯ ಮುಂದೆ ಮಾರಾಟಕ್ಕಾಗಿ ಒಂದು ಬೃಹದಾಕಾರದ ಆನೆ ಬಂದಾಗ ಅವನಿಗೆ ಕೊಳ್ಳುವ ಆಶೆಯಾಯಿತು. ಎಷ್ಟೆಂದರೂ ಅವನ ಧಮನಿಗಳಲ್ಲಿ ಹರಿಯುತ್ತಿದ್ದ ರಕ್ತವು ಮೊಗಲರದಲ್ಲವೆ! ಬ್ರಹ್ಮದೇಶದಿಂದ ಬಂದ ಆ ಆನೆಯನ್ನು ಕೊಳ್ಳದೆ ಮರಳಿ ಕಳಿಸುವ ಮನಸ್ಸು ಅವನಿಗೆ ಆಗಲಿಲ್ಲ. ಅದನ್ನು ಕೊಂಡು ಅದಕ್ಕೆ 'ಮೌಲಾಬಕ್ಷ' ಎಂದು ನಾಮಕರಣ ಮಾಡಿದನು. ಸಮ್ರಾಟ ಅಕಬರಶಹನಿಗೆ ಆ ಆನೆಯ ಮೇಲೆ ಎಲ್ಲಿಲ್ಲದ ಪ್ರೀತಿ ಮೂಡಿತು. ಸಮ್ರಾಟನಷ್ಟೇ ಯುವರಾಜ ಅಬು ಜಾಫರನಿಗೆ ಕೂಡ ಮೌಲಾಬಕ್ಷನ ಮೇಲೆ ಅಮಿತ ಮಮತೆಯಾಯಿತು. ಯುವರಾಜ ಅಬು ಜಾಫರನೇ ಮುಂದೆ ಸಮ್ರಾಟ ಬಹದ್ದೂರಶಹ ಜಾಫರನಾಗಿ ಮೊಗಲ್ ಸಾಮ್ರಾಜ್ಯದ ಚರಮಗೀತೆಯನ್ನು ಹಾಡಿದನು.

ಸಮ್ರಾಟ ಅಕಬರಶಹನಿಗೆ ಮೌಲಾಬಕ್ಷ ಅತ್ಯಂತ ಸ್ವಾಮಿನಿಷ್ಠವಾಗಿತ್ತು. ಮೌಲಾಬಕ್ಷನ ಗುಣಗಳನ್ನು ಮೆಚ್ಚಿ ಅದನ್ನೇ ತನ್ನ ಪಟ್ಟದಾನೆಯನ್ನಾಗಿ ಮಾಡಿಕೊಂಡು ಸಮ್ರಾಟ ಫರಮಾನು ಹೊರಡಿಸಿದ. ಸದಾ ಅವನು ಮೌಲಾಬಕ್ಷನ ಮೇಲೆ ಕುಳಿತೇ ಮೆರವಣಿಗೆಗಳಲ್ಲಿ ಭಾಗವಹಿಸುತ್ತಿದ್ದನು. ಅಲ್ಲದೆ ಈದ್ ಹಬ್ಬಗಳಲ್ಲಿ ಈದಗಾ ಮೈದಾನಿನಲ್ಲಿ ನಡೆಯುತ್ತಿದ್ದ ಸಾರ್ವಜನಿಕ ನಮಾಜುಗಳಿಗೂ ಮೌಲಾಬಕ್ಷನ ಮೇಲೆ ಕುಳಿತೇ ಹೋಗಿ ಬರುತ್ತಿದ್ದ. ಅದು ಹಾದು ಹೋಗಬೇಕಾಗಿದ್ದ ಲಾಹೋರ ದರ್ವಾಜಾ ಸಣ್ಣದಾಗುವದೆಂದು ಮೌಲಾಬಕ್ಷನ ಎತ್ತರಕ್ಕೆ ತಕ್ಕಂತೆ ಆ ಅಗಸೆಯನ್ನೇ ಎತ್ತರಿಸಿ ಕಟ್ಟಿಸಿದನು.

ಸಮ್ರಾಟನು ಅಂಬಾರಿಯಲ್ಲಿ ಕುಳಿತಾಗ ಮಾವುತನ ಬೆನ್ನು ಕಂಡು ಅಗೌರವವಾಗುವುದೆಂದು ಮಾವುತನ ಬೆನ್ನಿಗೆ ಬೆನ್ನು ಹಚ್ಚಿ ಅವನ ಮುಖವು ಸಮ್ರಾಟರಿಗೆ ಎದುರಾಗುವಂತೆ ಆನೆಯ ಮೇಲೆ ಕುಳಿತುಕೊಳ್ಳಲು ಮಹಬತ್‌ಖಾನನೆಂಬ ತರುಣನಿಗೆ ಶಿಕ್ಷಣವನ್ನೀಯಲಾಯಿತು. ಆ ಕಾರ್ಯಕ್ಕಾಗಿ ಮಹಬತ್‌ಖಾನನಿಗೆ ಒಂದು ದೊಡ್ಡ ಜಹಾಗೀರಿಯನ್ನೇ ಹಾಕಿಕೊಡಲಾಯಿತು.

ಅದೊಂದು ದಿನ ಮೌಲಾಬಕ್ಷನಿಗೆ ಮದ ಏರಿತ್ತೇನೋ! ಆ ಭರದಲ್ಲಿ ಕೋಪಗೊಂಡು ಮೇಲೆ ಕುಳಿತ ಮಹಬತ್‌ಖಾನನನ್ನು ಕೆಳಕ್ಕೆಳೆದು ಕಚಕಚನೆ ತುಳಿದು ಕೊಂದು ಹಾಕಿ ಬಿಟ್ಟಿತು. ಇದನ್ನು ಕೇಳಿ ಅವನ ಹೆಂಡತಿ ಎರಡು ವರುಷದ ಮಗನಾದ ರಹಮತ್ ಅಲಿಯನ್ನು ಬಗಲಲ್ಲಿ ಕೂಡಿಸಿಕೊಂಡು ಮೌಲಾಬಕ್ಷನ ಮುಂದೆ ಬಂದು ರೋದಿಸಹತ್ತಿದಳು. ಮೌಲಾಬಕ್ಷನಿಗೆ ಆಗ ತಾನು ಮಾಡಿದ ತಪ್ಪಿನ ಅರಿವಾಯಿತೇನೋ! ತನಗಾದ ಪಶ್ಚಾತ್ತಾಪವನ್ನು ವ್ಯಕ್ತಪಡಿಸಲು ಮೌಲಾಬಕ್ಷ ರಹಿಮತ್ ಅಲಿಯನ್ನು ಸೊಂಡಿಲಿನಿಂದ ಎತ್ತಿ ಮೆಲ್ಲನೆ ಮತ್ತೆ ತಾಯಿಗೆ ಕೊಟ್ಟಿತು. ಮಹಬತ್‌ಖಾನನನ್ನು ಕೊಂದ ಆನೆ ಅವನ ವಿಧವೆ ಮತ್ತು ಮಗನನ್ನು ತನ್ನ ಮಕ್ಕಳಂತೆ ಪ್ರೀತಿಯಿಂದ ನೋಡಿತು. ಆ ಕ್ಷಣದಿಂದ ರಹಿಮತ್ ಅಲಿ ಮೌಲಾಬಕ್ಷನ ಸ್ನೇಹಿತನಾದನು. ಅವನು ಒಂದು ದಿವಸ ತನ್ನಲ್ಲಿಗೆ ಬರದೇ ಹೋದರೆ ಮೌಲಾಬಕ್ಷ ಅಸ್ವಸ್ಥವಾಗುತ್ತಿತ್ತು!

ಮೌಲಾಬಕ್ಷನ ವಾಸಸ್ಥಳವು, ಕೆಂಪು ಕೋಟೆಯ ಲಾಹೋರ ದರ್ವಾಜಾ ಮತ್ತು ಜಾಮಿ ಮಸೀದೆಯ ಪೂರ್ವದ್ವಾರದ ಮಧ್ಯದಲ್ಲಿತ್ತು. ಆ ಸ್ಥಳದಲ್ಲಿಯೇ ಅನಾಥ ಮಗು ರಹಿಮತ್ ಅಲಿ ಬೆಳೆಯುತೊಡಗಿದನು. ದಿನವೂ ರ

ಮತ್ ಅಲಿ ಗಂಟೆಗಟ್ಟಳೆ ಮೌಲಾಬಕ್ಷನ ಜೊತೆ ಆಡುತ್ತಿದ್ದನು. ಅವನ ಜೊತೆ ಅವನ ಸ್ನೇಹಿತರೂ ಬರುತ್ತಿದ್ದರು. ಅವರೆಲ್ಲರೂ ಈಗ ಮೌಲಾಬಕ್ಷನ ಗೆಳೆಯರಾದರು. ಮೌಲಾಬಕ್ಷ ಮೆರವಣಿಗೆಯಲ್ಲಿ ಹೋಗುತ್ತಿರುವಾಗಲೂ ತನ್ನ ಈ ಬಾಲಕ ಸ್ನೇಹಿತರನ್ನು ನೋಡಿ ಗುರುತು ಹಿಡಿದು ಸೊಂಡಿಲನ್ನಾಡಿಸುತ್ತಿತ್ತು. ಆಗ ಆ ಮಕ್ಕಳಿಗೆಲ್ಲಾ ಎಲ್ಲಿಲ್ಲದ ಆನಂದ. ಮೌಲಾಬಕ್ಷ ತನಗೆ ಕಬ್ಬು ಕೊಟ್ಟ ದಿವಸ, ಮಕ್ಕಳಿಗೆಲ್ಲಾ ಒಂದೊಂದು ತುಂಡನ್ನು ಕೊಡುತ್ತಿತ್ತು. ಮೌಲಾಬಕ್ಷನಿಗಾಗಿಯೇ ಮಾಡಿದ ದಪ್ಪ ರೊಟ್ಟಿಗಳನ್ನು ಮುರಿದು ಮಕ್ಕಳಿಗೆಲ್ಲಾ ಹಂಚಿಕೊಟ್ಟು ಅವರು ತಿಂದ ಮೇಲೆ ತಾನು ತಿನ್ನುತ್ತಿತ್ತು. ರಹಮತ್ ಅಲಿ ಮತ್ತು ಅವನ ಸ್ನೇಹಿತರು ಮೌಲಾಬಕ್ಷ ಕೊಟ್ಟ ರೊಟ್ಟಿಯನ್ನು ರುಚಿಯಾಗಿ ಮಾಡಿಕೊಂಡು ತಿನ್ನುತ್ತಿದ್ದರು. ಮಕ್ಕಳ ಆನಂದವನ್ನು ನೋಡಿ ಮೌಲಾಬಕ್ಷನಿಗೆ ಆಮೋದ. ಅವನ ಕಣ್ಣುಗಳನ್ನು ನೋಡಿದರೆ ಅವನಿಗಾದ ತೃಪ್ತಿ ಕಾಣುತ್ತಿತ್ತು! ಮಕ್ಕಳೆಲ್ಲಾ ಮೌಲಾಬಕ್ಷನ ಜೊತೆ ಹಲವಾರು ಆಟಗಳನ್ನು ಆಡುತ್ತಿದ್ದರು. ಅದರಲ್ಲಿ 'ಸಕ್ಕ' ಅನ್ನುವುದು ಒಂದಾಟ. ಆ ಆಟದಲ್ಲಿ ಒಬ್ಬ ಮಗು ಮೌಲಾಬಕ್ಷನಿಗೆ ಒಂದು ಕಾಲನ್ನೆತ್ತಿ ನಿಲ್ಲಲು ಹೇಳುತ್ತಿದ್ದನು. ಉಳಿದ ಮಕ್ಕಳೆಲ್ಲಾ ಆ ಕಾಲಿನ ಕೆಳಗೆ ಹಾಸಿ ಓಡಾಡುತ್ತಿದ್ದರು. ಗಂಟೆಗಟ್ಟಲೆ ಆ ಆನೆ ತನ್ನ ಕಾಲನ್ನು ಹಾಗೆಯೇ ಎತ್ತಿ ನಿಲ್ಲುತ್ತಿತ್ತು. ಯಾವ ಮಗು ಎತ್ತಲು ಹೇಳಿತ್ತೋ ಅದೇ ಮಗು ಪುನಃ ಕೆಳಗೆ ಬಿಡೆಂದು ಹೇಳುವವರೆಗೂ ಮೌಲಾಬಕ್ಷ ಮೂರೇ ಕಾಲುಗಳ ಮೇಲೆ ತನ್ನ ಭಾರವಾದ ದೇಹವನ್ನು ಹೊತ್ತುಕೊಂಡು ನಿಲ್ಲುತ್ತಿತ್ತು. ಬೇರಾವ ಮಗು ಹೇಳಿದರೂ ಮೌಲಾಬಕ್ಷ ತನಗಿತ್ತ ಆಜ್ಞೆಯಿಂದ ವಿಚಲಿತವಾಗುತ್ತಿರಲಿಲ್ಲ! ಮಕ್ಕಳ ಮೇಲೆ ಅದರಲ್ಲಿಯೂ ರಹಮತ್ ಅಲಿಯ ಮೇಲೆ ಮೌಲಾಬಕ್ಷನಿಗೆ ಅತ್ಯಧಿಕ ಪ್ರೀತಿ.

ಮುಹಮ್ಮದ್ ಯಾಸಿನ ನಂತರ ಬಂದ ಮಾವುತನು,



ಮೌಲಾಬಕ್ಷ ತನಗಿತ್ತ ಆಹಾರವನ್ನೆಲ್ಲಾ ಮಕ್ಕಳಿಗೆ ಹಂಚಿಕೊಡುವುದನ್ನು ಸಮ್ರಾಟರ ಕಿವಿಗಳವರೆಗೆ ಒಯ್ದನು. ಅದರ ಪರಿಣಾಮವಾಗಿ ಮೌಲಾಬಕ್ಷನಿಗೆ ಆಹಾರವನ್ನು ಕೊಡುವಾಗ ಅದರ ಬಳಿ ಯಾರೂ ಇರಬಾರದೆಂದು ಸರಕಾರದ ಆಜ್ಞೆ ಹೊರಬಂದಿತು. ಆಜ್ಞೆ ಹೊರ ಬಂದ ಮರುದಿವಸ, ಮೌಲಾಬಕ್ಷನಿಗೆ ಆಹಾರವನ್ನು ತಂದಾಗ ಯಾವ ಮಕ್ಕಳಿಗೂ ಅಲ್ಲಿ ಬರಲು ಅವಕಾಶವಿರಲಿಲ್ಲ. ಮಕ್ಕಳು ಬರದ್ದನ್ನು ನೋಡಿ ಮೌಲಾಬಕ್ಷ ಆಹಾರವನ್ನೇ ಸ್ವೀಕರಿಸಲಿಲ್ಲ. ಮಾವುತನು ಎಷ್ಟೇ ಪ್ರಯತ್ನಿಸಿದರೂ ಮೌಲಾಬಕ್ಷ ಮೂರು ದಿವಸಗಳ ಕಾಲ ಉಪವಾಸ ನಿಂತಿತು. ಮೌಲಾಬಕ್ಷನು ಆಹಾರವನ್ನು ನಿರಾಕರಿಸಿದ್ದನ್ನು ಕೇಳಿದ ಯುವರಾಜ ಅಬು ಜಾಫರನು ಧಾವಿಸುತ್ತ ಬಂದು, "ಮೌಲಾಬಕ್ಷ ನನ್ನಂತೆ ಫಕೀರನಿರುವನು. ತನಗೆ ಬಂದುದನ್ನು ಬೇರೆಯವರಿಗೆ ಹಂಚಿಕೊಟ್ಟು ತಿನ್ನುವುದು ಫಕೀರನ ಧರ್ಮ. ಸಮ್ರಾಟರಿಗೆ ಹೇಳಿ ನಾನು ಸರಕಾರಿ ಆಜ್ಞೆಯನು ರದ್ದುಪಡಿಸುತ್ತೇನೆ. ರಹಮತ್ ಅಲಿ ಮತ್ತು ಅವನ ಸ್ನೇಹಿತರನ್ನು ಕರೆದು ತನ್ನಿರಿ," ಎಂದು ಹೇಳಿ, ಮಕ್ಕಳು ಬಂದ ಮೇಲೆ ಮೌಲಾಬಕ್ಷ ತನ್ನ ಉಪವಾಸವನ್ನು ಮುರಿದದ್ದನ್ನು ನೋಡಿ ಹೋದ.

ಮೌಲಾಬಕ್ಷನಷ್ಟೇ ಎತ್ತರವಾದ ಆನೆಯೊಂದು ಫಿರೋಜಪುರ ಝಿರ್ಕಾ ನವಾಬನಾದ ಅಹಮ್ಮದ ಬಕ್ಷನ ಬಳಿ ಇತ್ತು. ಅವನಿಗೆ ತನ್ನ ಆನೆ ಮೌಲಾಬಕ್ಷನಿಗಿಂತಲೂ ಬಲಿಷ್ಠವಾದ ಆನೆ ಎಂಬ ಹೆಮ್ಮೆಯಿತ್ತು. ಅದ್ದರಿಂದ ಅವನಿಗೆ ತನ್ನ ಆನೆ ಮತ್ತು ಮೌಲಾಬಕ್ಷನ ಮಧ್ಯೆ ಕಾದಾಟವನ್ನು ಏರ್ಪಡಿಸಬೇಕೆಂದು ಆಸೆಯಾಯಿತು. ಕೂಡಲೇ ಸಮ್ರಾಟನಿಗೆ ಒಂದು ಕಾಗದ ಬರೆದ. ಆದರೆ ಸಮ್ರಾಟನಿಗೆ ನವಾಬನ ಈ ಸಲಹೆ ಸರಿಬರಲಿಲ್ಲ. ನವಾಬನನ್ನು ಕರೆದು, "ನಿಮ್ಮ ಆನೆ ಸೋತು ನಮ್ಮದು ಗೆದ್ದರೆ ನಿಮಗೆ ದುಃಖ. ಇನ್ನು ನಮ್ಮ ಆನೆ ಸೋತು ನಿಮ್ಮದು ಗೆದ್ದರೆ ನಮಗೆ ವ್ಯಥೆ. ಏತಕ್ಕಾಗಿ ಈ ಕಾದಾಟ ಬೇಕು?" ಎಂದು ಹೇಳಿ, ಸೂಚ್ಯವಾಗಿ ನವಾಬನ ಸೂಚನೆಯನ್ನು ತಿರಸ್ಕರಿಸಿದನು.

ಸಮ್ರಾಟರ ಉತ್ತರದಿಂದ ನಿರಾಶನಾದ ನವಾಬ ಮೌಲಾಬಕ್ಷ ನದಿಗೆ ಬಂದಾಗ ಒಂಟಿಯಾಗಿ ದೊರೆಯುವುದೆಸೋ ಎಂದು ನಿರೀಕ್ಷಿಸುತ್ತಿದ್ದ. ಒಮ್ಮೆ ಮೌಲಾಬಕ್ಷ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿರುವುದನ್ನು ನೋಡಿದ ನವಾಬ ತನ್ನ ಮಾವುತನಿಗೆ ತನ್ನ ಆನೆಯನ್ನು ಮೌಲಾಬಕ್ಷನ ಸಮೀಪಕ್ಕೆ ಒಯ್ದು ಅದನ್ನು ಕೆಣಕಲು ಹೇಳಿದ. ನವಾಬನ ಆನೆ, ಮೌಲಾಬಕ್ಷನ ಬಳಿ ಬಂದು ಕಿಡಿಗೇಡಿತನವನ್ನು ಮಾಡಹತ್ತಿತು. ಆದರೂ ಮೌಲಾಬಕ್ಷ ಗಂಭೀರವಾಗಿ ತನ್ನ ಸ್ನಾನದಲ್ಲಿಯೇ ಮಗ್ನವಾಯಿತು. ಮಾವುತನ ಚಿತಾವಣೆಯಿಂದ ನವಾಬನ ಆನೆಯು ಕಿಡಿಗೇಡಿತನವು ಹೆಚ್ಚಾಗಲು ಮೌಲಾಬಕ್ಷ ಕೋಪಗೊಂಡು ನವಾಬನ ಆನೆಗೆ ಒಂದು ಬಲವಾದ ಪೆಟ್ಟನ್ನಿತ್ತಿತು. ಆ ಆಘಾತವನ್ನು ನಿಸ್ತರಿಸಲು ಅಸಮರ್ಥವಾದ ನವಾಬನ ಆನೆಯು ಯಮುನಾ ನದಿಯಿಂದ ಹೊರಬಿದ್ದು ಓಡಹತ್ತಿತು. ಅದನ್ನು ಬೆನ್ನಟ್ಟಿ ಘೀಳಿಡುತ್ತ ಮೌಲಾಬಕ್ಷ ನವಾಬನ ಆನೆಯ ಹಿಂದೆಯೇ ಹೋಯಿತು. ಎರಡೂ ಆನೆಗಳು ಘೀಳಿಡುತ್ತ ಬೀದಿ, ಪೇಟೆಗಳಲ್ಲಿ ಧಾವಿಸುತ್ತಿರುವುದನ್ನು ನೋಡಿ ಜನರು ಭಯಭೀತರಾದರು. ನವಾಬನ ಆನೆ ಒಂದು ಮೂಲೆಗೆ ಹೋಗಿ ಸಿಗುವವರೆಗೂ ಮೌಲಾಬಕ್ಷ ಅದನ್ನು ಬೆನ್ನಟ್ಟಿ ಹೋಗಿ ಅದನ್ನು ಮೂಲೆಯಲ್ಲಿ ಹಾಕಿ ಹೊಡೆಯಹತ್ತಿತು. ಮೌಲಾಬಕ್ಷನ ಮಾವುತನು ಬಂದು ಬಿಡಿಸಲು ಎಷ್ಟು ಪ್ರಯತ್ನಿಸಿದರೂ ಮೌಲಾಬಕ್ಷ ಕೇಳಲಿಲ್ಲ. ಈ ಸುದ್ದಿ ಸಮ್ರಾಟನ ಕಿವಿಗೆ ಬಿದ್ದಾಗ, ಅವನು ಧಾವಿಸಿ ಬಂದು ಮೌಲಾಬಕ್ಷನಿಗೆ ಸಮಾಧಾನ ಹೇಳಿದ ಮೇಲೆ ಮೌಲಾಬಕ್ಷ ಶಾಂತವಾಯಿತು. ನವಾಬನ ಆನೆ ಮಣ್ಣು ಹಣ್ಣಾಗಿ ತನ್ನ ವಾಸಕ್ಕೆ ಮರಳಿತು.

ಯುವರಾಜ ಅಬು ಜಾಫರನು ಬಹದ್ದೂರ ಶಹನೆಂಬ ಅಭಿದಾನದಿಂದ ದಿಲ್ಲಿ ಸಿಂಹಾಸನವನ್ನು ಏರಿದಾಗ ರಹಮತ್ ಅಲಿ ಮೌಲಾಬಕ್ಷನ ಮಾವುತನಾದನು. ಬಹದ್ದೂರಶಹನು ಈಗ ಮೌಲಾಬಕ್ಷನ ಬದಲು ಮುಬಿನ್ ಎಂಬ ಇನ್ನೊಂದು ಆನೆಯನ್ನು ಪಟ್ಟದಾನೆಯನ್ನಾಗಿ ಆಯ್ಕೆ ಮಾಡಿ ಫರಮಾನು ಹೊರಡಿಸಿದನು. ರಹಮತ್

ಅಲಿ. ಸಮನ್ತ್ಯನಿಗೆ, "ಹೀಗೇಕೆ ಮಾಡಿದೆ?" ಎಂದು ಕೇಳಿದಾಗ ಮೌಲಾಬಕ್ಷ ಮುಂದಿರುವ ದಾಗಿದ್ದಂಥ ಮುಖಿನ್‌ನನ್ನು ಪಟ್ಟದಾನೆಯನ್ನಾಗಿ ಮಾಡಿದ್ದಾಗಿ ಉತ್ತರ ಬಂತು. ರಹಮತ್ ಅಲಿ ಮೌಲಾಬಕ್ಷನಿಗೆ ಈ ವೃತ್ತಾಂತ ಕಥೆಯನ್ನು ಹೇಳಿದನು. ಅದನ್ನು ಕೇಳಿದ ಮೌಲಾಬಕ್ಷ ಕೋಪಗೊಂಡು ನೇರವಾಗಿ ಮುಖಿನ್‌ನ ಬಳಿ ಹೋಗಿ

ಚಿನ್ನ ಹೊದಿಕೆಯ ಅಂಬಾರಿಯನ್ನು ಕಿತ್ತು ತನ್ನ ಬೆನ್ನ ಮೇಲೆ ಇಟ್ಟುಕೊಳ್ಳಲು ಪ್ರಯತ್ನಿಸಿತು. ಆದರೆ ಅದನ್ನು ಸಹಿಸದ ಮುಖಿನ್ ಮೌಲಾಬಕ್ಷನೊಡನೆ ಕಾದಾಡಹತ್ತಿತು. ಈ ಕಾದಾಟವನ್ನು ನೋಡಿ ಸಮನ್ತ್ಯನು ಬಂದು, "ನಾವು ಮುಖಿನ್‌ನ ಬದಲು ಮೌಲಾಬಕ್ಷನನ್ನೇ ಪಟ್ಟದಾನೆಯನ್ನಾಗಿ ಮುಂದುವರಿಸುತ್ತೇವೆ" ಎಂದಾಗ ಕಾದಾಟವು ನಿಂತಿತು. ಇದೇ ಸಮಯಕ್ಕೆ ಸ್ಟೀಮರ್ ಪಾರ್ಕ್ ಅಲಿಖಾನ ಎಂಬವನು ೫೦೦ ಹಕ್ಕಿಗಳಿಗೆ ತರಬೇತಿಯನ್ನಿತ್ತನು. ಸಮನ್ತ್ಯನು ಮೌಲಾಬಕ್ಷನ ಮೇಲೆ ಕುಳಿತು ಮೆರವಣಿಗೆಯಲ್ಲಿ ಹೋಗುವಾಗ, ಛತ್ರಿಗೆಯಂತೆ ಸಮನ್ತ್ಯನ ತಲೆಯ ಮೇಲೆ ಹಕ್ಕಿಗಳು ಹಾರುವಂತೆ ಮಾಡಿದ್ದನು. ಅವುಗಳು ಮೇಲೆ ಹಕ್ಕಿಗಳ ಛತ್ರದ ರೀತಿಗೆ ಹರಡಿಕೊಳ್ಳುತ್ತಿದ್ದವು. ಮೆರವಣಿಗೆಯ ಉದ್ದಕ್ಕೂ ಈ ಹಕ್ಕಿಗಳ ಛತ್ರ ಸಮನ್ತ್ಯನ ತಲೆಯ ಮೇಲೆ ಹಾರಾಡುತ್ತಿತ್ತು.

ವೃದ್ಧರು ಆಗಾಗ್ಗೆ ಮಹಾರಾಜರಾದ ಗೋವಿಂದ ಸಮನ್ತ್ಯ ಬಹದ್ದೂರರು ಜಾಫರನ್ನು ಬಂಧಿಸಿ ಸೆರೆಯಾಳನ್ನಾಗಿ ಒಯ್ಯುತ್ತಿರುವಾಗ ಮೌಲಾಬಕ್ಷನಿಗೆ ಮನವೇರಿತು. ಆಹಾರಗಳನ್ನು ತೊರೆದು ಎರಡು ದಿವಸಗಳ ಕಾಲ ಬಿಕ್ಕಿಯ ಬಿಕ್ಕಳಿಗಳನ್ನು ಅಳೆದು ತನ್ನ ಸ್ವಾಮಿ ಬಿಡುಗಡೆಯಾಗುವವರೆಗೂ ಕಣ್ಣಿಗೆ ಬೀಳುವ ನೀರೇ ಎಂದು ಮೌಲಾಬಕ್ಷ ತೋರಿಸಲು ಪ್ರಯತ್ನಿಸಿತು. ಕೊನೆಗೆ ಅದು ಥರಥರಿಸಿ ಕೊಟ್ಟಿದ್ದ ಬಳಿ ಸತ್ತು ಬಿದ್ದದ್ದನ್ನು ನೋಡಿ ಎಲ್ಲರೂ ಜನರು ಕಣ್ಣೀರಿಟ್ಟರು!

✡



ಯಾವ ಮನುಷ್ಯನೂ ಭವಿಷ್ಯದಲ್ಲಿ ಏನಾಗುವುದೆಂಬುದನ್ನು ಹೇಳುವ ಪ್ರವಾದಿಯಾಗಲಾರ. ಆದರೂ ರಚನಾತ್ಮಕವಾದ ಮತ್ತು ಸೃಜನಶೀಲವಾದ ಪ್ರಯತ್ನಕ್ಕೆ ಯಶವು ದೊರೆತೇ ತೀರುವುದೆಂಬ ಶ್ರದ್ಧೆಯನ್ನು ತಾಳಿ ಯಾವನೂ ತನ್ನ ಪ್ರಯತ್ನವನ್ನು ಫಲಪ್ರದಗೊಳಿಸಬಲ್ಲ. ಸ್ವ-ಪ್ರಯತ್ನ ಹಾಗೂ ಸಾಧಿಸಿಯೇ ತೀರುವೆನೆಂಬ ನಿಷ್ಠೆ ಇವುಗಳನ್ನೇ ಎಲ್ಲವೂ ಅವಲಂಬಿಸಿರುತ್ತದೆ. ಕೆಲವೊಂದು ಸಲ ದುರದೃಷ್ಟವು ನಮ್ಮ ಪ್ರಯತ್ನಕ್ಕೆ ಅಡ್ಡಿಯಾದರೂ ಬಲವಾದ ಇಚ್ಛಾಶಕ್ತಿಯಿದ್ದಲ್ಲಿ ಯಶಸ್ಸು ಕಟ್ಟಿಟ್ಟಂತೆಯೇ.

–ನೆಹರೂ

ಸಿಗ್ನಲ್‌ಮ್ಯಾನ್

ಆಂಗ್ಲ ಮೂಲ: **ಚಾರ್ಲ್ಸ್ ಡಿಕೆನ್ಸ್**

ಕನ್ನಡಕ್ಕೆ: **ಕೇಶವ ಎಸ್. ವಟಿ**

ಒಂದು ತಿಂಗಳ ರಜವನ್ನು ನಾನು ಹಳ್ಳಿಗಾಡಿನಲ್ಲಿಯೇ ಕಳೆದೆ. ನನ್ನ ಸ್ನೇಹಿತನೊಬ್ಬ ಪೆಸ್ತ್ರಾಂ ಹಳ್ಳಿ ಎಷ್ಟು ಶಾಂತತೆಯ ತಾಣವಾಗಿದೆ ಎಂದು ಹೇಳಿದ್ದ. ಅದು ಒಂದೇ ಒಂದು ಹೋಟೆಲಿದ್ದ ದೊಡ್ಡ ಹಳ್ಳಿ. ಅದು ಮುಖ್ಯ ರಸ್ತೆಯಿಂದ ಸುಮಾರು ಮೂರು ಮೈಲಿ ದೂರದಲ್ಲಿತ್ತು. ಒಮ್ಮೆ ಪೆಸ್ತ್ರಾಂ ಅನ್ನು ಬಿಟ್ಟು ನದಿಯ ಮೇಲಿನ ಮರದ ಸೇತುವೆಯನ್ನು ದಾಟಿ ಉತ್ತರ ದಿಕ್ಕಿನ ಹಾದಿಯನ್ನು ಹಿಡಿದರೆ ಯಾರನ್ನೂ ಕಾಣದಂತೆ ನಿರ್ಜನವಾದ ಪ್ರದೇಶದಲ್ಲಿ ಮೈಲುಗಳ ದೂರ ಹೋಗಬಹುದು. ಆ ಹಳ್ಳಿಯ ಪ್ರದೇಶ ಶೀತ ಗಾಳಿಯದು. ಆದರೆ ಅದು ನನಗೆ ಹೊಂದಿಕೊಂಡಿತ್ತು. ಅಲ್ಲಿನ ಹೋಟೆಲಿನ ಊಟ ಆರೋಗ್ಯಕರವಾಗಿಯೂ ಇತ್ತು. ಅಲ್ಲದೆ ಬೇಕಾದಷ್ಟು ಸಿಕ್ಕುತ್ತಿತ್ತು.

ಒಂದು ದಿನ ಸಂಜೆ ನಾನು ವಾಯುಸೇವನೆಗೆಂದು ಹೋಗಿದ್ದಾಗ ರೈಲ್ವೆ ರಸ್ತೆಗಾಗಿ ಗುಡ್ಡವನ್ನು ಕಡಿದು ಮಾಡಿದ್ದ ನೇರವಾದ ಗೋಡೆಯ ಮೇಲೆ ನಿಂತಿದ್ದೆ. ರೈಲ್ವೆ ಹಳಿಗಳು ಮುಂದೆ ಗುಡ್ಡವನ್ನು ಕಡಿದು ಮಾಡಿದ್ದ ಸುರಂಗದೊಳಗೆ ಹೋಗಿದ್ದವು. ಕಡಿದಾಗಿದ್ದ ಎರಡು ಗೋಡೆಗಳ ನಡುವೆ ನೋಡುತ್ತಿದ್ದಾಗ ರೈಲ್ವೆ ಹಳಿಯ ಕೆಳಭಾಗದಲ್ಲಿದ್ದ ಸಿಗ್ನಲ್ ಮ್ಯಾನನ ಕ್ಯಾಬಿನ್ನನ್ನು ನೋಡಿದೆ. ಕ್ಯಾಬಿನ್ನಿನ ಹಿಂದೆ ನೂರು ಅಡಿಗಳ ಅಂತರದಲ್ಲಿ ಕಪ್ಪು ಕತ್ತಲೆ ತುಂಬಿದ್ದ ಸುರಂಗವಿತ್ತು. ಅದರ ಬಾಯಿಯ ಬಳಿ ಸಿಗ್ನಲ್ ಕಂಬವಿತ್ತು. ಅದು ಹಸಿರು ದೀಪವನ್ನು ತೋರಿಸುತ್ತಿತ್ತು; ಅದರಿಂದ ರೈಲು ಬರುತ್ತಿರಬಹುದು ಎಂದುಕೊಂಡೆ.

ಸಿಗ್ನಲ್‌ಮ್ಯಾನ್ ತನ್ನ ಪುಟ್ಟ ಕ್ಯಾಬಿನ್ನಿನ ಬಾಗಿಲಲ್ಲಿ ಬಾವುಟವನ್ನು ಹಿಡಿದು ನಿಂತಿದ್ದ. 'ಬಡ ಪಾಪಿ. ಒಬ್ಬಂಟಿಗನಾಗೇ ಇದ್ದಾನೆ' ನನ್ನಷ್ಟಕ್ಕೆ ನಾನೇ ಅಂದುಕೊಂಡೆ. 'ಅವನ ಮನೆ ಬಹುಶಃ ಇಲ್ಲಿಂದ ಮೂರು ಮೈಲಿ ದೂರದಲ್ಲಿರಬೇಕು.' ನಾನು ಅವನನ್ನುದ್ದೇಶಿಸಿ ಕೂಗಿದೆ,

“ಓSSಯ್! ಯಾರಲ್ಲಿ?”

ಅವನು ನನ್ನ ಧ್ವನಿ ಎಲ್ಲಿಂದ ಬಂತೆಂದು ನೋಡಬೇಕಾಗಿತ್ತು. ಆದರೆ ಕಡಿದಾದ ಗೋಡೆಯ ಮೇಲೆ ನಿಂತ ನನ್ನೆಡೆಗೆ ನೋಡುವುದಕ್ಕೆ ಬದಲಾಗಿ ತಿರುಗಿ ರೈಲ್ವೆ ಹಳಿಯನ್ನು ನೋಡತೊಡಗಿದ.

“ಓಯ್! ಯಾರಲ್ಲಿ?”

ಅವನು ನನ್ನ ಕೂಗಿನತ್ತ ತಿರುಗಿ. ಕ್ಯಾಪನ್ನು



ಮೇಲೆ ನಿಂತಿದ್ದ ನನ್ನ ಆಕೃತಿಯನ್ನು ನೋಡಿದ.

"ನಿನ್ನೊಡನೆ ಮಾತಾಡಲು ಕೆಳಗೆ ಬರಲು ಯಾವುದಾದರೂ ದಾರಿ ಇದೆಯೆ?"

ಅವನು ನನ್ನತ್ತ ನೋಡಿದ. ಆದರೆ ಉತ್ತರಿಸಲಿಲ್ಲ. ಅಷ್ಟರಲ್ಲಿ ನೆಲದಲ್ಲಿ ಹಾಗೂ ಗಾಳಿಯಲ್ಲಿ ಕಂಪನಗಳುಂಟಾದವು. ತಕ್ಷಣ ಅದು ಜೋರಾದ ಅಲುಗಾಟವಾಗಿ ಮಾರ್ಪಟ್ಟು ನನ್ನನ್ನು ಹಿಮ್ಮೆಟ್ಟುವಂತೆ ಮಾಡಿತು. ರೈಲು ವೇಗವಾಗಿ ಬೆಟ್ಟವನ್ನು ಕಡಿದು ಮಾಡಿದ್ದ ದಾರಿಯನ್ನು ದಾಟಿ ದೂರದಲ್ಲಿ ಕಣ್ಮರೆಯಾಯಿತು. ನಾನು ಕೆಳಗೆ ನೋಡಿದೆ. ಅವನು ರೈಲಿಗೆ ತೋರಿಸುತ್ತಿದ್ದ ಬಾವುಟವನ್ನು ಮಡಿಸಿ ಇಡುತ್ತಿದ್ದ.

ಅವನು ನನ್ನತ್ತ ಒಂದು ನಿಮಿಷ ಪೂರ್ಣವಾಗಿ ನೋಡಿದ ನಂತರ ಬಾವುಟವನ್ನು ನಾನು ನಿಂತಿದ್ದ ಜಾಗದಿಂದ ನೂರು ಅಡಿಗಳಷ್ಟು ಆಚೆಗೆ ನಿರ್ದೇಶಿಸಿದ.

ನನಗೆ ಒಂದು ಅಂಕುಡೊಂಕಾದ ದಾರಿ ಕಾಣಿಸಿತು. ನಾನು ಇಳಿಯತೊಡಗಿದೆ. ಕಡಿದು ಮಾಡಿದ್ದ ಗೋಡೆ ಆಳವಾಗಿತ್ತು. ನೆನೆದು ಒದ್ದೆಯಾಗಿ ಜಾರುತ್ತಿದ್ದ ಕಲ್ಲುಗಳಿಂದ ಕೂಡಿತ್ತು. ನಾನು ರೈಲ್ವೇ ಹಳಿಯನ್ನು ತಲುಪಿದೆ. ಅವನು ನನ್ನನ್ನು ಕಾಯುತ್ತಾ ಹಳಿಗಳ ನಡುವೆ ನಿಂತಿದ್ದ. ಅವನು ಕಪ್ಪುವರ್ಣದ ಮನುಷ್ಯ. ಕಪ್ಪು ಗಡ್ಡವನ್ನು ಹೊಂದಿದ್ದ. ದಪ್ಪ ಹುಬ್ಬುಗಳಿದ್ದವು. ಅವನ ಕೆಲಸ ನಾನು ನೋಡದ ಅತ್ಯಂತ ಏಕಾಂತವಾದ ಕೆಲಸ. ಮೇಲೆ ಒಂದು ಚೂರು ಆಕಾಶವನ್ನು ಮಾತ್ರ ತೋರಿಸುತ್ತಿದ್ದ ಒರಟಾದ ಕಲ್ಲಿನ ಗೋಡೆ ಎರಡೂ ಪಕ್ಕದಲ್ಲಿ ನಿಂತಿತ್ತು. ಎಡಭಾಗಕ್ಕೆ ಕಪ್ಪು ಸುರಂಗ ನಿಂತಿತ್ತು. ಇಡೀ ಪ್ರದೇಶ ನಿರಾಶಾದಾಯಕವೂ ಹಾಗೂ ಭಯಾನಕವೂ ಆಗಿತ್ತು.

"ಇದು ಏಕಾಂತವಾದ ಕೆಲಸವಲ್ಲವೆ? ನೀನು ಇಲ್ಲಿ ಕೆಲವು ಸಂದರ್ಶಕರನ್ನು ಮಾತ್ರ ಕಾಣಬಹುದು. ನನ್ನ ಆಗಮನ ನಿನಗೆ ಅಪ್ರಿಯವಾಗಿಲ್ಲವಷ್ಟೆ?"

ಆತ ತೀವ್ರ ಕುತೂಹಲದಿಂದ ಸುರಂಗದ ಬಳಿ ಇದ್ದ ಕೆಂಪು ದೀಪದ ಕಡೆ ನೋಡಿದ, ಅದರ ಸುತ್ತಲೂ ಏನೋ ತಪ್ಪಿಸಿಕೊಳ್ಳುತ್ತಿದೆ ಎಂಬಂತೆ ನೋಡಿದ, ನಂತರ ನನ್ನತ್ತ ನೋಡಿದ.

"ಆ ದೀಪ ನಿನ್ನ ಅಧೀನದಲ್ಲಿಲ್ಲವೆ?" ನಾನು

ಕೇಳಿದೆ.

"ನಿಮಗೆ ಗೊತ್ತಿಲ್ಲವೆ?" ಆತನ ಮಾತು ವಿಚಿತ್ರವಾಗಿದ್ದವು. ಆತ ನನ್ನನ್ನು ನೋಡಿ ಹೆದರಿದಂತಿತ್ತು.

ಬಲವಂತವಾಗಿ ಮುಗುಳ್ನಗುತ್ತಾ ನಾನು ಕೇಳಿದ್ದೆ, "ನೀನು ನನ್ನನ್ನು ನೋಡಿ ಹೆದರಿದಂತೆ ಕಾಣುತ್ತೀಯೆ."

"ನಾನು ಆಶ್ಚರ್ಯಪಡುತ್ತಿದ್ದೇನೆ" ಅವನು ಉತ್ತರಿಸಿದ "ನಾನು ಈ ಮೊದಲು ನಿಮ್ಮನ್ನು ನೋಡಿದ್ದೇನೆ."

"ಎಲ್ಲಿ?"

ಅವನು ಕೆಂಪು ದೀಪದ ಕಡೆ ತೋರಿಸಿದ.

"ಅಲ್ಲಿ ನಾನು ಏನು ಮಾಡುತ್ತಿದ್ದೆ? ಪ್ರಮಾಣ ಮಾಡಿ ಹೇಳಬಲ್ಲೆ, ನಾನು ಅಲ್ಲಿಗೆ ಎಂದೂ ಬಂದಿಲ್ಲ."

ಅವನ ಮುಖ ತಿಳಿಯಾಯಿತು. ಆತ ನನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರ ಹೇಳಿದ. ಸಿಗ್ನಲ್ಲನ್ನು ಬದಲಾಯಿಸುವುದು. ದೀಪಗಳನ್ನು ಉರಿಸುವುದು ಆಗಾಗ ಕಬ್ಬಿಣದ ಹಿಡಿಯನ್ನು ತಿರುಗಿಸುವುದು ಅವನ ಕೆಲಸ. ಅವನು ತನ್ನ ಕೆಲಸ ಕಾಲದಲ್ಲಿ ಅನೇಕ ದೀರ್ಘ ಘಂಟೆಗಳನ್ನು ಏಕಾಂತವಾಗಿ ಕಳೆಯುತ್ತಿದ್ದ.

ನನ್ನನ್ನು ಅವನು ಕ್ಯಾಬಿನ್ನಿನ ಒಳಕ್ಕೆ ಕರೆದೊಯ್ದ. ಅಲ್ಲಿ ಅಗ್ಗಿಷ್ಟಿಕೆ ಇತ್ತು. ಇಳಿಜಾರು ಮೇಜೂ ಇತ್ತು, ಟೆಲಿಗ್ರಾಫ್ ಉಪಕರಣವಿತ್ತು, ಮತ್ತು ರೈಲಿನ ಆಗಮನವನ್ನು ಸೂಚಿಸಲು ಒಂದು ವಿದ್ಯುತ್ ಗಂಟೆ ಇತ್ತು.

ಮಾತನಾಡುತ್ತಿದ್ದಾಗ ನಡುವೆ ಎರಡುಬಾರಿ ಆತ ಹೊರಗೆ ಕೆಂಪುದೀಪದತ್ತ ನೋಡಿದ. ಎರಡನೇ ಬಾರಿ ನೋಡುವಾಗ "ನಾನು ತೊಂದರೆಗೀಡಾದ ಮನುಷ್ಯ ಸ್ವಾಮಿ, ಬಹಳ ತೊಂದರೆಗೀಡಾದ ಮನುಷ್ಯ," ಎಂದ.

"ನಿನಗೇನು ತೊಂದರೆ?"

"ಅದನ್ನು ಹೇಳಲು ಬಹಳ ಕಷ್ಟ ಸ್ವಾಮಿ, ಬಹಳ ಕಷ್ಟ. ನೀವು ಯಾವಾಗಲಾದರೂ ಮತ್ತೊಮ್ಮೆ ಭೇಟಿ ಇತ್ತರೆ ಹೇಳಲು ಪ್ರಯತ್ನಿಸುವೆ."

"ಆಯ್ತು ನಾನು ಇನ್ನೊಮ್ಮೆ ನಿನ್ನನ್ನು ಭೇಟಿ ಮಾಡುತ್ತೇನೆ." ನಾನು ಕೇಳಿದೆ.

"ನಾನು ಬೆಳಗ್ಗೆ ಬೇಗ ಹೊರಟು ಹೋಗುತ್ತೇನೆ. ಮತ್ತೆ ಸಂಜೆ ಏಳು ಗಂಟೆಗೆ ಬರುತ್ತೇನೆ. ನಿಮಗೆ ಅನುಕೂಲವಾದರೆ ಎಂಟು ಗಂಟೆಯ ನಂತರ ಬನ್ನಿ."

"ನಾನು ಒಂಬತ್ತು ಗಂಟೆಯ ನಂತರ ಬರುತ್ತೇನೆ."

ಅವನು ನನಗೆ ವಂದಿಸಿದ ನನ್ನ ಜೊತೆ ಹೊರಗಡೆ ಬಂದ "ನಾನು ನಿಮಗೆ ಬೆಳಕಿನ ದೀಪ ತೋರಿಸುತ್ತೇನೆ," ಆತ ತನ್ನ ವಿಚಿತ್ರವಾದ ಸಣ್ಣಗಿನ ಸ್ವರದಲ್ಲಿ ನುಡಿದ, "ನೀವು ತುದಿ ತಲುಪುವವರೆಗೂ ಕೂಗಿ; ತುದಿ ತಲುಪಿದ ನಂತರ ಕೂಗಬೇಡಿ!"

"ಒಳ್ಳೆಯದು."

"ಮತ್ತೆ ನೀವು ನಾಳೆ ರಾತ್ರಿಬಂದಾಗಲ ನನ್ನನ್ನು ಕೂಗಕೂಡದು. ನೀವು ಹೊರಡುವ ಮುನ್ನ ನಾನು ಒಂದು ಪ್ರಶ್ನೆ ಕೇಳುತ್ತೇನೆ. 'ಓ ಯಾರಲ್ಲಿ!' ಎಂದು ಕೂಗಿದಿರಲ್ಲ, ಹಾಗೆ ಕೂಗಲು ಪ್ರೇರಿಸಿದ್ದು ಯಾರು ?"

"ದೇವರಿಗೆ ಗೊತ್ತು. ಏನಾದರೂ ಕೂಗಲೇಬೇಕಿತ್ತಲ್ಲ........"

"ಹಾಗಲ್ಲ ಸಾಮಿ, ಆ ಮಾತುಗಳು ನನಗೆ ಚಿರಪರಿಚಿತ."

ಆತ ನನಗೆ ಶುಭರಾತ್ರಿಯನ್ನು ಕೋರಿದ. ತನ್ನ ದೀಪವನ್ನು ಎತ್ತಿ ಹಿಡಿದ. ನಾನು ರೈಲೊಂದು ಓಡಾಡಿಸುತ್ತಿದ್ದಂತೆ ಅಹಿತಕರ ಅನುಭವದೊಡನೆ ರೈಲೇ ಹಳಿಗಳ ಪಕ್ಕದಲ್ಲಿ ಗೋಡೆಯ ತುದಿಯವರೆಗೂ ನಡೆದೆ.

೨

ಮಾರನೆಯ ದಿನ ರಾತ್ರಿ ನನ ಗಡಿಯಾರದ ಒಂಭತ್ತು ಘಂಟೆ ತೋರಿಸುವ ವೇಳೆಗಾಗಲೆ ನಾನು ಅಂಕುಡೊಂಕಾದ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದೆ. ಸಿಗ್ನಲ್‌ಮ್ಯಾನ್ ನನಗಾಗಿ ತನ್ನ ದೀಪದೊಡನೆ ಕಾಯುತ್ತ ನಿಂತಿದ್ದ. ಕ್ಯಾಬಿನ್ನಿನ ಒಳಗೆ ಹೋದ ನಂತರ ಆತ ಕೇಳಿದ, "ಸ್ವಾಮಿ, ನೀವು ಮತ್ತೊಮ್ಮೆ ಪ್ರಶ್ನಿಸುವ ಮೊದಲೇ ನನ ತೊಂದರೆಯನು ಹೇಳುತ್ತೇನೆ. ನನನು ಆಗಾಗ ತೊಂದರೆಪಡಿಸುವವರು ನೀವೆಂದು ಭಾವಿಸುತ್ತೇನೆ."

"ಏನ ಸಂದೇಹ?"

"ಅಲ್ಲ, ಯಾರೋ ಒಬ್ಬರು."

"ಯಾರವರು?"

"ನನಗೆ ಗೊತ್ತಿಲ್ಲ."

"ನನ್ನಂತೆ?"

"ನನಗೆ ಗೊತ್ತಿಲ್ಲ. ನಾನು ಮುಖವನ್ನೇ ಕಂಡಿಲ್ಲ. ಎಡಗೈ ಯಾವಾಗಲೂ ಮುಖಕ್ಕೆ ಅಡ್ಡವಾಗಿರುತ್ತದೆ. ಮತ್ತು ಬಲಗೈ ಜೋರಾಗಿ ಬೀಸುತ್ತಿರುತ್ತದೆ. ಈ ರೀತಿ."

ನಾನು ಅವನ ಅಭಿನಯವನ್ನು ಗಮನಿಸುತ್ತಿದ್ದೆ. ಅದು ಯಾವುದೋ ತ್ವರೆಯ ಸಂಕೇತವನ್ನು ತೋರಿಸುತ್ತಿದ್ದಂತೆ ಕಂಡಿತು.

"ಅದು ದಯವಿಟ್ಟು ಜಾಗ ಬಿಡು ಅನ್ನುತ್ತದೆ."

"ಒಂದು ಬೆಳದಿಂಗಳ ರಾತ್ರಿಯಲ್ಲಿ." ಅವನು ಹೇಳಿದ, "ನಾನು ಒಂದು ಕೂಗು ಕೇಳಿದೆ. 'ಓss ಯಾರಲ್ಲಿ ನೋಡಲ್ಲಿ !' ನಾನು ದೀಪವನ್ನು ಎತ್ತಿಕೊಂಡು ಹೊರಟೆ. ಕೆಂಪು ದೀಪದ ಕೆಳಗೆ ಯಾರೋ ನಿಂತಂತೆ ಕಾಣಿಸಿತು. ನಾನು ಈಗ ತೋರಿಸಿದಂತೆ ಕೈ ಬೀಸುತ್ತಿತ್ತು. ಮತ್ತೊಂದು ಕೂಗು 'ಓ ಯಾರಲ್ಲಿ! ನೋಡಲ್ಲಿ!' ನಾನು ಆಕೃತಿ ಕೂಗಿದ ಕಡೆಗೆ ಓಡಿದೆ. ಏನು ತಪ್ಪಾಯಿತು? ಏನಾಯಿತು? ಎಲ್ಲಿ? ಅದು ಸುರಂಗದ ಕತ್ತಲಿನಿಂದ ಹೊರಗೆ ನಿಂತಿತ್ತು. ನಾನು ಅದರ ಮುಖದ ಮೇಲಿದ್ದ ಕೈಯನ್ನು ತೆಗೆಯಲು ಯತ್ನಿಸಿದೆ............ಅದು ಹೋಗಿತ್ತು."

"ಸುರಂಗದೊಳಕ್ಕೆ?" ನಾನು ಕೇಳಿದೆ.

"ಇಲ್ಲ, ನಾನು ಸುರಂಗದೊಳಗೆ ಇನ್ನೂರು ಅಡಿಗಳಷ್ಟು ದೂರ ಓಡಿದೆ. ನಿಂತು ನನ್ನ ದೀಪವನ್ನು ಎತ್ತಿ ಹಿಡಿದೆ. ಆದರೆ ಯಾರೂ ಕಾಣಿಸಲಿಲ್ಲ. ನಾನು ಒಳಕ್ಕೆ ಓಡಿದ್ದಕ್ಕಿಂತ ವೇಗವಾಗಿ ಹೊರಕ್ಕೆ ಓಡಿ ಬಂದೆ. ಏಕೆಂದರೆ ನಾನು ಇಲ್ಲಿಗೆ ಓಡಿಬಂದು ಎರಡು ಕಡೆಗೆ ಅಪಾಯವಿದೆ ಎಂದು ಎಚ್ಚರಿಕೆ ಕೊಟ್ಟೆ. ಎರಡೂ ಕಡೆಯಿಂದ ಎಲ್ಲ ಸರಿಯಾಗಿದೆ ಎಂದು ಉತ್ತರ ಬಂತು,"

ತಣ್ಣನೆಯ ಬೆರಳು ನನ್ನ ಬೆನ್ನುಹುರಿಯಮೇಲೆ ಓಡಾಡಿದಂತಾಯಿತು. "ನಿನ್ನ ಕಣ್ಣು ಬೆಳದಿಂಗಳಲ್ಲಿ ನಿನ್ನನ್ನು ಮೋಸಗೊಳಿಸಿರಬೇಕು."



ರಾಜಾಜಿಯವರು ಅಯ್ಯರರ ಮೇಲೆ
ತಾವೇ ಮೊಕದ್ದಮೆ ಹೂಡಿ ತಾವೇ
ಅವರ ಪರವಾಗಿ ವಾದಿಸಿದರು; ಏಕೆ ?

ರಾಜಾಜಿ ಮತ್ತು ಹರಿಹರ ಅಯ್ಯರ್ ಮೊಕದ್ದಮೆ

ಎಂ. ವಿ. ನಾಗರಾಜರಾವ್

ಚಕ್ರವರ್ತಿ ರಾಜಗೋಪಾಲಾಚಾರಿಯವರು ಸೇಲಮ್ಮಿನಲ್ಲಿ ವಕೀಲ ವೃತ್ತಿಯನ್ನು ನಡೆಸುತ್ತಿದ್ದರು.

ಬೆಳಗಿನ ಸಮಯ. ರಾಜಾಜಿಯವರು ಕೋರ್ಟಿಗೆ ಹೋಗಲು ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಹೊರಬಾಗಿಲಿನ ಬಳಿಗೆ ಬಂದಾಗ ಅಪರಿಚಿತನೊಬ್ಬ ಅವರಿಗೆ ನಮಸ್ಕರಿಸಿ, "ಕ್ಷಮಿಸಿ, ತಮ್ಮೊಡನೆ ಎರಡು ಮಾತನಾಡಬೇಕಾಗಿದೆ," ಎಂದನು. ರಾಜಾಜಿಯವರು ತಲೆಯೆತ್ತಿ ಅಪರಿಚಿತನನ್ನು ಆಪಾದಮಸ್ತಕವಾಗಿ ನೋಡಿದರು. ಅವನ ಜೊತೆಯಲ್ಲಿ ಒಬ್ಬ ಹೆಂಗಸು ಮತ್ತು ಇಬ್ಬರು ಮಕ್ಕಳಿದ್ದರು.

"ಕೋರ್ಟಿಗೆ ಹೋಗಲು ತಡವಾಗುತ್ತದೆ. ನಿಮಗೆ ಹೇಳಬೇಕೆಂದಿರುವುದನ್ನು ಬೇಗ ಹೇಳಿ ಮುಗಿಸಿ," ಎಂದರು ರಾಜಾಜಿ.

ಅಪರಿಚಿತ ಸಂಕೋಚದಿಂದ, "ನಾನು ಪಾಲಘಾಟಿನಲ್ಲಿ ಶಿಕ್ಷಕನಾಗಿರುವೆ. ಈಗ ನಾನೊಂದು ಸಂಕಟದಲ್ಲಿ ಸಿಕ್ಕಿರುವೆ. ನಾವೆಲ್ಲರೂ ತಿರುಪತಿ ಯಾತ್ರೆ ಮುಗಿಸಿಕೊಂಡು ಹಿಂತಿರುಗುತ್ತಿದ್ದೇವೆ. ರಸ್ತೆಯಲ್ಲಿ ನನ್ನ ಜೇಬಿನಲ್ಲಿದ್ದ ಹಣ ಪಿಕ್‌ಪಾಕೆಟ್ ಆಗಿ ಹೋಗಿದೆ. ಈಗ ನಾನು ಊರು ತಲುಪಲು ಹಣವಿಲ್ಲ. ತಾವು ದೊಡ್ಡ ಮನಸ್ಸು ಮಾಡಿ ಹಣ ಕೊಟ್ಟರೆ ಊರಿಗೆ ಹಿಂದಿರುಗಿದ ತಕ್ಷಣ ಮನಿಯಾರ್ಡರ್ ಮೂಲಕ ಕಳುಹಿಸುವೆ" ಎಂದು

ದೈನ್ಯದಿಂದ ರಾಜಾಜಿಯವರ ಕಡೆ ನೋಡಿದ.

"ಪಾಲಘಾಟಿನಲ್ಲಿ ನೀವು ಯಾವ ಸ್ಕೂಲ್‌ನಲ್ಲಿ ಶಿಕ್ಷಕನಾಗಿದ್ದೀರಿ?" ಎಂದು ಕೇಳಿದರು. ರಾಜಾಜಿ.

ಅಪರಿಚಿತ ಸ್ಕೂಲ್ ಹೆಸರು ಹೇಳಿದ.

"ಯಾವ ವಿಷಯ ಬೋಧಿಸುತ್ತೀರಿ?"

ಅಪರಿಚಿತ ಇದಕ್ಕೆ ಉತ್ತರ ಕೊಟ್ಟ.

"ನಿಮ್ಮ ಹೆಸರೇನು?"

ಅಪರಿಚಿತ ತನ್ನ ಹೆಸರನ್ನು ಹೇಳಿದ, "ಹರಿಹರ ಅಯ್ಯರ್,"ಎಂದು.

ರಾಜಾಜಿಯವರು, "ಒಳ್ಳೆಯದು ಅಯ್ಯರಜೀ, ಈಗ ನಾನು ಕೋರ್ಟಿಗೆ ಹೋಗುವ ತರಾತುರಿಯಲ್ಲಿರುವೆ. ಅಲ್ಲಿಂದ ಹಿಂತಿರುಗಿ ಬಂದ ಮೇಲೆ ನಿಮ್ಮೊಡನೆ ಮಾತನಾಡುವೆ. ಅಲ್ಲಿಯವರೆಗೆ ನೀವೆಲ್ಲರೂ ನನ್ನ ಮನೆಯಲ್ಲೇ ಊಟ ಮಾಡಿ ವಿಶ್ರಾಂತಿ ತೆಗೆದುಕೊಳ್ಳಿ. ಯಾವುದಕ್ಕೂ ಸಂಕೋಚಪಡಬೇಡಿ." ಎಂದು ತಮ್ಮ ಸೇವಕನನ್ನು ಕರೆದು ಅವರ ಸೇವೆ, ಶುಶ್ರೂಷೆ ಮಾಡುವಂತೆ ಹೇಳಿ ಕೋರ್ಟಿಗೆ ಹೋದರು.

ಸ್ನಾನಾನಂತರ ಅಯ್ಯರ್ ಹಾಗು ಹೆಂಡತಿ, ಮಕ್ಕಳು ಊಟ ಮಾಡಿ ವಿಶ್ರಾಂತಿ ಪಡೆಯುತ್ತಿದ್ದರು. ಅಷ್ಟರಲ್ಲಿ ಪೋಲೀಸ್ ಇನ್‌ಸ್ಪೆಕ್ಟರ್ ಅಲ್ಲಿಗೆ ಬಂದು, "ಹರಿಹರ ಅಯ್ಯರ್ ಯಾರು?" ಎಂದು ಕೇಳಿದನು. ಅಯ್ಯರ್ ಗಾಬರಿಯಿಂದ, "ನಾನೇ ಹರಿಹರ ಅಯ್ಯರ್. ಏಕೆ?" ಎಂದು ಕೇಳಿದನು.

"ಪೋಲೀಸ್ ಠಾಣೆಗೆ ನಡೆಯಿರಿ."

ಆಶ್ಚರ್ಯದಿಂದ ಅಯ್ಯರ್, "ನಾನೇನು ಮಾಡಿದೆ ಠಾಣೆಗೆ ಬರಲು?" ಎಂದರು.

"ನೀವು ರಾಜಾಜಿಯವರಿಗೆ ಮೋಸಮಾಡಿರುವಿರಿ."


"ಮೋಸ! ಖಂಡಿತಾ ನಾನು ಮಾಡಿಲ್ಲ."

"ನನ್ನ ಬಳಿ ಚರ್ಚಿಸಲು ಸಮಯವಿಲ್ಲ. ಏನಾದರೂ ಹೇಳುವುದಿದ್ದರೆ ನಾಳೆ ನ್ಯಾಯಾಲಯದಲ್ಲಿ ಹೇಳಬಹುದು. ನಿಮ್ಮನ್ನು ಬಂಧಿಸಿ, ಲಾಕಪ್ಪಿನಲ್ಲಿಡುವುದು ನನ್ನ ಕೆಲಸ. ಮರುಮಾತಿಲ್ಲದೆ ನನ್ನೊಡನೆ ನಡೆಯಿರಿ," ಪೋಲೀಸ್ ಇನ್‌ಸ್ಪೆಕ್ಟರ್ ಗುಡುಗಿದ.

"ಹಾಗಾದರೆ ನನ್ನ ಹೆಂಡತಿ, ಮಕ್ಕಳ ಪಾಡೇನು?"

"ಅವರುಗಳು ಇಲ್ಲೇ ಇರಬಹುದು. ರಾಜಾಜಿಯವರು ಈ ವಿಷಯವನ್ನು ಹೇಳಿದ್ದಾರೆ. ಅವರ ಬಗ್ಗೆ ಹೆದರುವ ಕಾರಣವಿಲ್ಲ."

ಮಾರನೇ ದಿನ ಹರಿಹರ ಅಯ್ಯರ್ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಅಲ್ಲಿ ಹಾಜರಿದ್ದ ರಾಜಾಜಿ ತಮ್ಮ ವಾದವನ್ನು ತಾವೇ ಮಂಡಿಸಿದರು. ಅವರು, "ಪಾಲ



ನಗೆಮಲ್ಲಿಗೆ

ಕಚೇರಿಯಿಂದ ಮರಳಿದ ಗಂಡನನ್ನು ಮುಗುಳ್ನಕ್ಕು ಸ್ವಾಗತಿಸಿದ ಹೆಂಡತಿ ಹೇಳಿದಳು: "ಏನೊಂದ್ರೆ, ಸದ್ಯದಲ್ಲೇ ನಾವು ಮೂವರಾಗ್ತೀವಿ..."

"ಅರೆ ಕಳ್ಳಿ, ನಂಗೊತ್ತೇ ಇಲ್ವಲ್ಲ... ಯಾವಾಗ?" ಗಂಡ ಮುತ್ತಿಟ್ಟು ಕೇಳಿದ, ಹೆಂಡತಿಯನ್ನು ತೋಳ್ತೆಕ್ಕೆಯಲ್ಲಿಟ್ಟುಕೊಂಡು.

"ನಾಳೇನೇ..."

"ಅಂ? ಅದ್ಹ್ಯಾಗೆ?"

"ಬೆಳಿಗ್ಗಿನ ಬಸ್ಸ್‌ಗೆ ನಮ್ಮಮ್ಮ ಬರ್‍ತಾಳಂತೆ... ಈಗ್ತಾನೇ ಟೆಲಿಗ್ರಾಂ ಬಂತು..."

*

ಸೈನ್ಯ ತರಬೇತಿ ಶಿಬಿರದಲ್ಲಿ ಹೊಸ ಹುಡುಗರಿಗೆ ಹಿರಿಯ ಅಧಿಕಾರಿಯೊಬ್ಬರು ಅನುಭವ ವಿವರಿಸಿ, "ನೀವು ನನಗೆ ಹಿರಿಯ ಅಂತ ಗೌರವಿಸಬೇಕು ನಿಜ. ಆದರೆ ಭಯಪಡಬೇಡಿ. ನಿಮ್ಮ ತಂದೆ ಅಂತ ತಿಳ್ಕೊಂಡು ನಿಮ್ಮ ಅವಶ್ಯಕತೆ, ಅನಾನುಕೂಲತೆ ಬಗೆಹರಿಸ್ಕೊಳ್ಳೋಕೆ ಹಿಂಜರೀಬೇಡಿ..." ಎನ್ನುತಿದ್ದಂತೆಯೇ ಹಿಂದಿನಿಂದ ಧ್ವನಿ ಬಂತು: "ಡ್ಯಾಡಿ, ನಾನು ಸ್ವಲ್ಪ ಪಕ್ಕದೂರಿಗೆ ಹೋಗ್ಬೇಕು ಪ್ರೇಯಸಿನ್ನ ನೋಡ್ಲಿಕ್ಕೆ. ದಯವಿಟ್ಟು ಜೀಪಿನ ಕೀ ಕೊಡಿ..."

*

ಪಾರ್ಟಿ ನಡೆದಿತ್ತು. ಅವರಿಬ್ಬರೂ ಆಗ ತಾನೇ ಪರಿಚಿತರಾಗಿದ್ದರು. ಒಬ್ಬ ಹೇಳಿದ: "ನಾನು ಯಾರು ಏನೇ ಹೇಳಿದರೂ ಅದರಲ್ಲಿ ಅರ್ಧ ಮಾತ್ರ ನಂಬ್ತೀನಿ."

"ಯಾಕೆ?" ಅಂದ ಇನ್ನೊಬ್ಬ.

"ನಾನೊಬ್ಬ ವಕೀಲ."

"ಆದ್ರೆ ನಾನು ಯಾರು ಏನೇ ಹೇಳಿದರೂ ಅದರ ಎರಡು ಪಟ್ಟು ನಂಬ್ತೀನಿ," ಎಂದ ಇನ್ನೊಬ್ಬ.

"ಹಾಗಾದ್ರೆ ನೀವು?"

"ಇನ್‌ಕಂ ಟ್ಯಾಕ್ಸ್ ಇನ್‌ಸ್ಪೆಕ್ಟರ್."

*

ಇಂಟರ್‌ವ್ಯೂ ಮುಗಿಯಿತು. ಆ ಹದಿನೆಂಟರ ಹುಡುಗಿಯ ಹಸ್ತಾಕ್ಷರ, ಹಾವಭಾವ, ಪರೆಯುಗಳಿಂದ ಹುಚ್ಚಾಗಿ ಹೋದ ಬಾಸ್ ಆಕೆಗೆ ಹೇಳಿದ: "ನಾಳೆಯಿಂದ್ಲೇ ಡ್ಯೂಟಿ ರಿಪೋರ್ಟ್ ಮಾಡಿಕೋ. ಹಾಂ, ನಾಳೆ ಬರೋವಾಗ ನಿಮ್ಮಮ್ಮನದೊಂದು ಇತ್ತೀಚಿನ ಫೋಟೋ ತಗೊಂಬಾ. ನನ್ನೆಂಡ್ತಿಗೆ ತೋರಿಸಬೇಕು. ಇಲ್ದೇ ಹೋದ್ರೆ ನಿನ್ನ ನೌಕರಿಗೆ ನೂರಾರು ತೊಂದರೆ..."

ಹೂಂ ಅನ್ನುವಂತೆ ತಲೆ ಅಲ್ಲಾಡಿಸಿತು ಆಶೆಗಳ ವಯಸ್ಸಿನ ಹುಡುಗಿ.

*

ಹೋಟ್ಲು ಮಾಣಿ ನಾಣಿ ತನ್ನ ಮಗನನ್ನು ಝೂ ನೋಡಲು ಕರೆದೊಯ್ದ. ಅಲ್ಲಿ ಆಳೊಬ್ಬ ಸಿಂಹದ ಪಂಜರದ ಹೊರಗಿನಿಂದ ಮಾಂಸವನ್ನೆಸೆದ. ಅದನ್ನು ನೋಡಿ ನಾಣಿಯ ಮಗು ಕೇಳಿತು: "ಅಪ್ಪಾ, ಸಿಂಹವನ್ನೇಕೆ ಅತ ಸರಿಯಾಗಿ ನೋಡಿಕೊಳ್ಳೋದಿಲ್ಲ? ದೂರದಿಂದ ಮಾಂಸ ಎಸೀತಾನೆ?"

ನಾಣಿ ಹೇಳಿದ: "ಸಿಂಹ ಟಿಪ್ಸ್ ಕೊಡೋದಿಲ್ಲ, ಅದಕ್ಕೇ,"

*

ಭಾರಿ ಭಾಷಣ ಮಾಡಿ ಮನೆಗೆ ಮರಳಿದ ಮಂತ್ರಿವರ್ಯರು ಸೇವಕನನ್ನು ಕರೆದು ಹೇಳಿದರು: "ಬಹಳ ದಣಿವಾಗಿದೆ. ಸ್ವಲ್ಪ ಕಾಲು ಹಿಚುಕು."

"ಸಾರ್ ಮಾತಾಡಿ ಕತ್ತೂ ಬಹಳ ನೋಯ್ತಿರಬೇಕು. ಮಲಗಿ. ಮೊದಲು ಕತ್ತು ಹಿಚುಕಿ ನಂತರ ಕಾಲು ಹಿಚುಕ್ತೇನೆ."

*

"ನನಗೆ ನೌಕರಿ ಸಿಕ್ಕೊಂತ ನಿನಗೆ ತಿಳಿದ್ರೆ ಸಂತೋಷವಾಗ್ದೇ ಇರತ್ತಾ?"

"ಸಂತೋಷವಾಗ್ದೇ ಏನು? ಕಂಗ್ರ್ಯಾಟ್ಸ್. ಸಂಬಳ ಸಾಕಷ್ಟಿರಬೇಕಲ್ವೆ?"

"ಸಂಬಳ ಜಾಸ್ತಿ ಇಲ್ಲದಿದ್ರೂ ಅಧಿಕಾರ ಸಾಕಷ್ಟಿದೆ."

"ಅಂದ್ರೆ?"

"ಎಂಥ ಕೆಳಗಿನ ಮನುಷ್ಯನನ್ನೂ ನಿಮಿಷದಲ್ಲೇ ಎತ್ತರಕ್ಕೇರಿಸಬಲ್ಲೆ. ಎಂಥ ದೊಡ್ಡಂತಸ್ತಿನವನನ್ನೂ ಕ್ಷಣದಲ್ಲೇ ಕೆಳ-ದರ್ಜೆಯವನನ್ನಾಗಿಸಬಲ್ಲೆ."

"ಅರೆ, ಅದೆಂಥಾ ನೌಕರೀನೋ?"

"ಹೋಟೆಲ್ ಅಶೋಕಾ ಇಂಟರ್‌ನ್ಯಾಶನಲ್‌ನಲ್ಲಿ ಲಿಫ್ಟ್‌ಮನ್."

*

ಹಳೆಯ ಕೈದಿ ಹೊಸಬನನ್ನು ಕೇಳಿದ: "ನಿನಗೆಷ್ಟು ವರ್ಷ ಶಿಕ್ಷೆ?"

"ತೊಂಬತ್ತು ವರ್ಷ. ನಿನಗೆ?"

"ಎಂಬತ್ತು."

"ಹಾಗಾದರೆ ನೀನು ಬಾಗಿಲ ಬಳಿ ಮಲಗು. ನನಗಿಂತ ನೀನು ಮೊದಲೇ ಹೋಗಬೇಕಾಗುತ್ತೆ ಅಲ್ವೆ?"

*

ಗೃಹಸ್ಥನೊಬ್ಬ ಹೋಟಲಿನ ಊಟಲ್ಲಿ ಮಾಡುತ್ತಿದ್ದ. ಅಷ್ಟರಲ್ಲೇ ತುತ್ತಿನಲ್ಲಿ ಹರಳು ಬಂತು.

"ಯಾಕ್ರಿ ಅನ್ನದಲ್ಲಿ ಹರಳು ಬಂತಾ?" ಎದುರಿಗೆ ಕುಳಿತ ಮತ್ತೊಬ್ಬ ಕೇಳಿದ.

"ಇಲ್ಲಿಲ್ಲ...... ಆಗಾಗ ಅನ್ನದಗಳೂ ಬರ್ತವೆ."

*

ನ್ಯಾಯಾಲಯದಲ್ಲಿ ವಾದಿ - ಪ್ರತಿವಾದಿ ವಕೀಲರ ನಡುವೆ ಭಾರೀ ಮಾತು.

"ನೀನು ಫ್ರೌರ್‌ಟ್ವೆಂಟಿ," ವಾದಿ ವಕೀಲ ಹೇಳಿದ.

"ನೀನು ಶತಮೂರ್ಖ" ಪ್ರತಿವಾದಿ ವಕೀಲನ ಉತ್ತರ.

ಹಾಗೇ ತುಸು ಹೊತ್ತು ಬಯ್ದಾಟ ಮುಂದುವರಿದಾಗ ನ್ಯಾಯಾಧೀಶರು, "ಆರ್ಡರ್ ಆರ್ಡರ್, ನೀವಿಬ್ಬರೂ ಒಬ್ಬರ ನ್ನೊಬ್ಬರು ಅರಿತುಕೊಂಡಿದ್ದೀರಿ. ವಾದ ಮುಂದೊರ್ಸಿ," ಅಂದರು.

*

ಕುತುಬ ಮಿನಾರಿನ ಕೆಳಗೆ ನಿಂತ ಪ್ರೇಮಿಗಳ ಸಂಭಾಷಣೆ: "ನಿನಗಾಗಿ ನಾನೇನು ಮಾಡಲೂ, ಏನೂ ಬಿಡಲೂ ತಯಾರು."

"ಹೌದಾ? ಹಾಗಾದ್ರೆ ಕುತುಬ ಮಿನಾರಿನ ಮೇಲಿಂದ ಕೆಳಕ್ಕೆ ಧುಮಿಕಿ, ನೋ-ಡೋಣ..."

ಪ್ರಿಯಕರ ಕುತುಬ ಮಿನಾರಿನ ತುತ್ತ ತುದಿಗೇರಿದ. ಪ್ಯಾರಾಚ್ಯೂಟ್ - ಕಟ್ಟಿ-ಕೊಂಡು ಕೆಳಗೆ ಹಾರಿದ.

*

ಮನೆ ಎದುರಿನ ಮುದ್ದುಮುಖದ ಮಾಲಿನಿಯನ್ನು ಬಹಳ ದಿನದಿಂದ ನೋಡುತ್ತಿದ್ದ ಮಹೇಶ. ಕಿಟಕಿಯಲ್ಲಿ ಕುಳಿತು ಆಕೆ ಎತ್ತಲೊ ದೃಷ್ಟಿಸುತ್ತಿದ್ದಳೇ ವಿನಾ ಈತನೆಡೆ ನೋಡುತ್ತಿರಲಿಲ್ಲ.

ಒಂದು ದಿನ ಆಕೆ ಕುಳಿತಿದ್ದ ಜಾಗದ ಸಮೀಪ ಓಡಿದವನೇ, "ಬೆಂಕಿ ಬಿದ್ದಿದೆ... ಬೆಂಕಿ," ಎಂದು ಕೂಗಿಕೊಂಡ.

ಆಕೆ ಗಾಬರಿಯಾಗಿ "ಎಲ್ಲಿ?" ಎಂದಳು.

"ಇಲ್ಲಿ," ಎಂದು ಎದೆ ಮುಟ್ಟಿಕೊಂಡ.

*

ಪಪ್ಪೂ: (ಬಂಟಿಗೆ) ನಮ್ಮಮ್ಮಂಗೆ ಕತ್ಲಲ್ಲೂ ಕಣ್ಣು ಕಾಣಸ್ತವೆ.

ಬಂಟಿ : ನಿನಗ್ಹ್ಯಾಗೆ ಗೊತ್ತಾಯ್ತು?

ಪಪ್ಪೂ: ನಿನ್ನೆ ರಾತ್ರಿ ನಾವೆಲ್ಲ ಸಿನಿಮಾ ನೋಡೊಕೆ ಹೋಗಿದ್ವಿ. ಒಮ್ಮಿಂ-ದೊಮ್ಮೆ ಲೈಟ್ ಹೋಗಿ ಟಾಕೀ-ಸೆಲ್ಲಾ ಕತ್ಲಾಯ್ತು. ಮಮ್ಮಿ ಡ್ಯಾಡಿಗೆ ಹೇಳಿದ್ಲು, 'ನಿಮ್ಮ ದಾಡಿ ಭಾಳಾ ಬೆಳೆದಿದೆ. ನಾಳೆ ಶೇವ್ ಮಾಡ್ಕೊಳ್ಳಿ.'

"ಅದು ಕಾಣಿಸಿದ ಆರು ಗಂಟೆಯ ನಂತರ ಒಂದು ಭಯಂಕರ ಅಪಘಾತ ಇದೇ ಹಳಿಯ ಮೇಲೆ ಸಂಭವಿಸಿತು. ಹತ್ತು ಗಂಟೆಯ ನಂತರ ಸತ್ತ ಹಾಗೂ ಗಾಯಗೊಂಡವರನ್ನು ಆಕೃತಿ ಕಂಡ ಜಾದ ಮೇಲೆ ತರಲಾಯಿತು."

ಮೈ ನಡುಗಿತು, ಆದರೆ ನನ್ನ ಭಯದ ವಿರುದ್ಧ ಸೆಣಸಿದೆ. "ಒಂದು ವಿಚಿತ್ರ ಕಾಕತಾಳೀಯ ಅಷ್ಟೇ!" ನಾನು ಹೇಳಿದೆ.

ಆತ ನನ್ನ ತೋಳಿನ ಮೇಲೆ ಕೈಯಿಟ್ಟು, ತನ್ನ ಭುಜದ ಸುತ್ತಲೂ ನೋಡಿಕೊಂಡು, "ಇದು ಒಂದು ವರ್ಷ ಹಿಂದಿನದು. ಆರು ತಿಂಗಳು ಕಳೆಯಿತು. ಆಗ ಒಂದು ಬೆಳಗ್ಗೆ ನಾನು ಮತ್ತೆ ಕೆಂಪು ದೀಪದ ಕೆಳಗೆ ಅದೇ ದೆವ್ವವನ್ನು ಕಂಡೆ."

"ಅದು ಮತ್ತೆ ಕೂಗಿತೆ?"

"ಇಲ್ಲ ಅದು. ಮೌನವಾಗಿತ್ತು. ಮುಖದ ಮೇಲೆ ಎರಡೂ ಕೈಗಳನ್ನು ಮುಚ್ಚಿತ್ತು; ಈ ರೀತಿ."

ಅದು ದುಃಖಸೂಚಕ ಅಭಿನಯದಂತಿತ್ತು.

"ಅದೇ ದಿನ ಒಂದು ರೈಲು ಸುರಂಗದಿಂದ ಹೊರಬಂತು. ಕೆಲವರು ಒಂದು ಡಬ್ಬಿಯೊಳಗಿನಿಂದ ಕೈ ಅಲ್ಲಾಡಿಸುವುದು ಕಾಣಿಸಿತು. ಈ ಮೊದಲು ರೈಲು ನಿಲ್ಲಿಸಲು ಕೆಲವರು ಡ್ರೈವರಿಗೆ ಸೂಚನೆ ಕೊಡುವುದು ಕಂಡಿದ್ದೆ. ಕೂಗಾಟ–ಚೀರಾಟಗಳು ಕೇಳಿಬಂದವು. ರೈಲು ನಿಂತ ನಂತರ ಸುಂದರಿಯಾದ ಹೆಂಗಸೊಬ್ಬಳು ಡಬ್ಬಿಯೊಂದರಲ್ಲಿ ಸತ್ತು ಹೋದದ್ದು ಕಾಣಿಸಿತು! ಅವಳ ದೇಹವನ್ನು ಇದೇ ನೆಲದ ಮೇಲೆ ಮಲಗಿಸಿದ್ದರು."

ಆತ ವಿಶ್ರಾಂತಿ ತೆಗೆದುಕೊಂಡು ಮುಂದುವರಿಸಿದ: "ಪ್ರತಿ ಬಾರಿ ದೆವ್ವ ಕಂಡಾಗಲೂ ಸಾವು ಸಂಭವಿಸುತ್ತಿತ್ತು. ಮತ್ತೆ ಆ ದೆವ್ವ ಒಂದು ವಾರದ ಹಿಂದೆ ಕಂಡಿತ್ತು" ಆತನ ಧ್ವನಿ ಪಿಸುಗುಟ್ಟುವಂತೆ ಕೇಳುತ್ತಿತ್ತು, "ಅದು ಎಂದಿನಿಂದಲೂ ಯಾವಾಗಲೂ ಅಲ್ಲೆ ಇದೆ."

"ದೀಪದ ಬಳಿ?"

"ಅಪಾಯ ಸೂಚಕ ಕೆಂಪು ದೀಪದ ಬಳಿ."

"ಅದು ಏನು ಮಾಡುವಂತೆ ಕಾಣುತ್ತದೆ?"

ಮನೋವಿಕಾರದಿಂದ ಆತ ಹಿಂದಿನ ಅಭಿನಯದಲ್ಲೇ ಹೇಳಿದ: "ದಯವಿಟ್ಟು ದಾರಿ ಬಿಡು ಅನ್ನುತ್ತದೆ"

"ನನಗೆ ವಿಶ್ರಾಂತಿ ನೆಮ್ಮದಿಗಳೇ ಇಲ್ಲವಾಗಿವೆ. ಅದು ಅನೇಕ ನಿಮಿಷಗಳ ಕಾಲ ಕೂಗಿರುತ್ತದೆ. ಯಾರಲ್ಲಿ! ನೋಡಲ್ಲಿ!" ಅದು ನನಗೆ ಕೈ ಬೀಸುತ್ತಿತ್ತು. ಅದು ಏತಕ್ಕೆ ಎಚ್ಚರಿಕೆಯೋ? ಅಪಾಯ ಏನು? ಏನಾದರೂ ಅಪಾಯ ಸಂಭವಿಸುವದು ಖಂಡಿತ. ನನಗೆ ಗೊತ್ತಾದರೆ ತಡೆಯಲು ಯತ್ನಿಸಬಹುದು. ಆದರೆ ನಾನೇನು ಮಾಡಲಿ?"

ಆತ ತನ್ನ ಕರವಸ್ತ್ರವನ್ನು ತೆರೆದು ಹಣೆಯ ಮೇಲಿನ ಬೆವರನ್ನು ಒರಸಿಕೊಂಡ. ನನಗೆ ಏನು ಹೇಳಬೇಕೆಂದು ತೋಚಲಿಲ್ಲ.

"ಅಪಘಾತವಾಗುವುದಾದರೆ ಎಲ್ಲಿ ಆಗುತ್ತದೆಂದು ಏಕೆ ತಿಳಿಸುವುದಿಲ್ಲ? ಎರಡನೆ ಬಾರಿ ಬಂದಾಗ ಏಕೆ ಅವಳು ಸಾಯುತ್ತಾಳೆಂದು ಹೇಳಲಿಲ್ಲ? ಅದು ಎರಡು ಬಾರಿಯೂ ತನ್ನ ಎಚ್ಚರಿಕೆ ಸರಿ ಎಂದು ತೋರಿಸುವುದಕ್ಕೆ ಮತ್ತು ಮೂರನೆಯದಕ್ಕೆ ನನ್ನನ್ನು ಸಿದ್ಧಪಡಿಸಲು ಬಂದಿತ್ತು. ಈಗಲಾದರೂ ಏಕೆ ಎಚ್ಚರಿಸಲಿಲ್ಲವೊ?"

ಆ ಬಡಪಾಯಿಯ ಒಳಿತಿಗಾಗಿ ಹಾಗೂ ಸಾರ್ವಜನಿಕರ ಒಳಿತಿಗಾಗಿ ಅವನ ಮನಸ್ಸನ್ನು ಶಾಂತಗೊಳಿಸುವುದು ಅಗತ್ಯವೆಂದು ಭಾವಿಸಿದೆ. ನಾನು ಅವನೊಡನೆ ಬಹಳ ಹೊತ್ತು ಮಾತನಾಡಿದೆ. ನಿಧಾನವಾಗಿ ಅವನ ಮನಸ್ಸು ಶಾಂತವಾಯಿತು. ನಾನು ಮುಂಜಾನೆ ಒಂದು ಗಂಟೆಗೆ ಅವನನ್ನು ಬಿಟ್ಟು ಹೊರಟೆ.

ಆ ರಾತ್ರಿ ನಾನು ಬಹಳ ಕಾಲ ಆ ಮನುಷ್ಯನ ಕುರಿತು ಯೋಚಿಸುತ್ತಿದ್ದೆ. ಅವನಿಗೆ ಸೂಚಿಸದೆ ಅವನ ಮೇಲಧಿಕಾರಿಗಳ ಬಳಿ ಹೋಗಲು ನನ್ನ ಮನಸ್ಸು ಇಷ್ಟಪಡಲಿಲ್ಲ. ಅದೇ ರೀತಿಯ ಆಲೋಚನೆಗಳನ್ನು ಆತ ಮುಂದುವರೆಸಿಕೊಂಡು ಹೋದರೆ ಆತ ವಿನಾಶಕಾರಿ ತಪ್ಪನ್ನು ಮಾಡಿ ಇನ್ನೊಂದು ಭಯಂಕರ ಅಘಘಾತಕ್ಕೆ ಕಾರಣನಾಗುತ್ತಾನೆ. ಅಗತ್ಯಬಿದ್ದರೆ ಈ ವಾರದಲ್ಲಿ ವೈದ್ಯರ ಬಳಿ ಕರೆದೊಯ್ಯಬೇಕು. ನಾಳೆ ಅವನನ್ನು ಸುಸ್ಥಿತಿಯಲ್ಲಿ ನೋಡುತ್ತೇನೆಂದು ಭಾವಿಸಿ ಮಲಗಿಕೊಂಡೆ.

ಮಾರನೆಯ ಸಂಜೆ ಬಹಳ ಸುಂದರವಾಗಿತ್ತು. ಅದನ್ನನುಭವಿಸಲು ಬೇಗನೆ ಹೊರಟೆ. ನಾನು ಕಡಿದಾದ ರಸ್ತೆಯ ಬಳಿ ಹೋದಾಗ ಇನ್ನೂ

ಸೂರ್ಯಾಸ್ತವಾಗಿರಲಿಲ್ಲ. ತುದಿಯಲ್ಲಿ ನಿಂತು ನೋಡಿದೆ. ಆಗ ಸುರಂಗದ ಬಾಯಲ್ಲಿ ನಿಂತು ಕಣ್ಣಿನ ಮೇಲೆ ಕೈಯನ್ನಿಟ್ಟುಕೊಂಡು; ಬಲಗೈಯನ್ನು ವೇಗವಾಗಿ ಬೀಸುತ್ತಿದ್ದ ಆಕೃತಿಯನ್ನು ಕಂಡಾಗ ನನಗೆ ಉಂಟಾದ ಹೆದರಿಕೆಯನ್ನು ನಾನು ವರ್ಣಿಸಲಾರೆ. ಮುಂದಿನ ಕ್ಷಣದಲ್ಲಿ ಅದು ದೆವ್ವವಲ್ಲ, ನಿಜವಾದ ಮನುಷ್ಯ ಎಂದು ಅರಿವಾಯಿತು. ಸ್ವಲ್ಪ ದೂರದಲ್ಲಿ ಮನುಷ್ಯರ ಸಣ್ಣ ಗುಂಪಿತ್ತು. ಅಪಾಯದ ಕೆಂಪು ದೀಪ ಇನ್ನೂ ಹತ್ತಿರಲಿಲ್ಲ. ಗುಂಪಿನ ಬಳಿ ಬಿಳಿಯ ಬಟ್ಟೆಯಿಂದ ಮುಚ್ಚಿದ್ದ ಯಾವುದೋ ವಸ್ತುವಿತ್ತು.

ತಕ್ಷಣ ಏನೋ ನಡೆದಿದೆ ಎಂದು ನನಗನಿಸಿತು. ಆ ಮನುಷ್ಯನನ್ನು ಬಿಟ್ಟು ಹೋಗಬಾರದಿತ್ತು ಅಂದುಕೊಂಡೆ. ಶಕ್ಯವಿದ್ದಷ್ಟು ಜೋರಾಗಿ ಆ ದಾರಿಯಲ್ಲಿ ಹೆಜ್ಜೆ ಹಾಕಿದೆ.

"ಏನು ಸಂಗತಿ?" ನಾನು ಕೇಳಿದೆ.

"ಆ ಸಿಗ್ನಲ್‌ಮ್ಯಾನ್ ಇಂದು ಬೆಳಗೆ ಸತ್ತು ಹೋದ."

"ಆ ಕ್ಯಾಬಿನ್ನಿನಲ್ಲಿದ್ದ ಮನುಷ್ಯನಲ್ಲ ತಾನೆ?"

"ಹೌದು ಸ್ವಾಮಿ."

"ಅವನ ಪರಿಚಯವಿದ್ದರೆ ಅವನನ್ನು ಗುರುತಿಸಬಲ್ಲಿರಿ" ಎನ್ನುತ್ತಾ ಒಬ್ಬ ಬಟ್ಟೆಯ ಒಂದು ತುದಿಯನ್ನೆತ್ತಿದ. ಸತ್ತ ಮನುಷ್ಯನ ಮುಖವನ್ನು ನೋಡಿ ಕಷ್ಟಪಟ್ಟು ಸೈರಿಸಿಕೊಂಡೆ. "ಇದು ಹೇಗಾಯಿತು, ಇದು ಹೇಗಾಯಿತು?" ನಾನೇ ಕೇಳಿಕೊಂಡೆ, ಸಿಗ್ನಲ್‌ಮ್ಯಾನ್ ಸತ್ತನೆಂದು ನಂಬಲಾರದೆ.

"ಆತ ರೈಲು ಎಂಜಿನಿನಿಂದ ಕತ್ತರಿಸಲ್ಪಟ್ಟ. ಇಂಗ್ಲೆಂಡಿನಲ್ಲಿ ಯಾರೂ ತಮ್ಮ ಕೆಲಸವನ್ನು ಸರಿ ಅರಿತುಕೊಂಡಿಲ್ಲ. ಅವನಿಗೆ ರೈಲು ಹಳಿಯನ್ನು ಅಡ್ಡಿ ಅಂತಂಕವಿಲ್ಲದಂತೆ ಇಟ್ಟುಕೊಳ್ಳಲಾಗಲಿಲ್ಲ. ಅವನು ದೀಪವನ್ನು ಹಚ್ಚಿಕೊಂಡು ಕೈಲಿ ಹಿಡಿದಿದ್ದ ಇಂಜಿನ್ನು ಸುರಂಗದಿಂದ ಹೊರಬಂದಾಗ ಅವನ ಬೆನ್ನು ಎಂಜಿನ್ನಿನ ಕಡೆಗಿತ್ತು, ಇಂಜಿನ್ನು ಅವನನ್ನು ಕತ್ತರಿಸಿತು. ಇಲ್ಲಿ ಡ್ರೈವರ್ ಇದ್ದಾನೆ, ಸ್ವಾಮಿ. ಟಾಂ, ಇವರಿಗೆ ಏನು ನಡೆಯಿತು ಎಂದು ಹೇಳು."

ಡ್ರೈವರ್ ಹೇಳಿದ: "ಸುರಂಗದ ತಿರುವನ್ನು ದಾಟಿ ಬಂದಾಗ ಈತ ತುದಿಯಲ್ಲಿದ್ದುದು ಕಾಣಿಸಿತು. ವೇಗವನ್ನು ಕಡಿಮೆಮಾಡಲು ಸಮಯವಿರಲಿಲ್ಲ. ರೈಲಿನ ಸಿಳ್ಳಿನ ಕಡೆ ಅವನು ಲಕ್ಷ್ಯವನ್ನೇ ಕೊಡಲಿಲ್ಲ. ಕೊನೆಗೆ ಅದನ್ನೂ ನಿಲ್ಲಿಸಿದೆ ಮತ್ತು ನಾನು ಸಾಧ್ಯವಿದ್ದಷ್ಟೂ ಜೋರಾಗಿ ಕೂಗುತ್ತಿದ್ದೆ."

"ಏನೆಂದು ಕೂಗುತ್ತಿದ್ದೆ?"

"ಯಾರಲ್ಲಿ! ನೋಡಲ್ಲಿ! ದಯವಿಟ್ಟು ಜಾಗ ಬಿಡು! ಎಂದು ಕೂಗುತ್ತಿದ್ದೆ"

ನಾನು ಬೆಚ್ಚಿಬಿದ್ದೆ. ಅವು ಸಿಗ್ನಲ್‌ಮ್ಯಾನ್ ನನ್ನು ಎಚ್ಚರಿಸುವಾಗ ದೆವ್ವ ಹೇಳಿದ ಮಾತುಗಳು.

"ಆಹ್! ಇದು ಭಯಂಕರ, ಸ್ವಾಮಿ. ನಾನು ಕೂಗುವುದನ್ನು ನಿಲ್ಲಿಸಲೇ ಇಲ್ಲ. ಈ ಕೈಯನ್ನು ನನ್ನ ಕಣ್ಣಿನ ಮೇಲೆ ಇಟ್ಟುಕೊಂಡು, ನೋಡುವುದಕ್ಕಲ್ಲ, ಈ ಕೈಯನ್ನು ಹೀಗೆ ಜೋರಾಗಿ ಬೀಸತೊಡಗಿದೆ; ಆದರೆ ಏನೂ ಉಪಯೋಗವಾಗಲಿಲ್ಲ." ✡



ಸಂಸಾರಸ್ಥ: ಸೋಮವಾರ ರಾತ್ರಿಯ ವರೆಗೂ ರವಿವಾರದ ಪತ್ರಿಕೆಯನ್ನು ಓದಲು ಸಾಧ್ಯವಾಗದಿರುವಂಥ ವ್ಯಕ್ತಿ.

* * *

ಗಂಡು ರೇಶ್ಮೆ ಹುಳು ತನ್ನ ಸಂಗಾತಿ ಆರು ಮೈಲುದೂರದಲ್ಲಿದ್ದರೂ ವಾಸನೆಯ ಮೂಲಕ ಸ್ಥಳವನ್ನು ಅರಿತುಕೊಂಡು ಅತ್ತ ಸಾಗುತ್ತದೆ.

ಘಾಟಿನಲ್ಲಿ ಶಿಕ್ಷಕನೆಂದು ಹೇಳುವ ಈ ವ್ಯಕ್ತಿ ಅಲ್ಲಿ ಶಿಕ್ಷಕನಾಗಿಲ್ಲ. ನಾನು ಫೋನ್ ಮೂಲಕ ಆ ಶಾಲೆಯೊಡನೆ ಸಂಪರ್ಕ ಬೆಳೆಸಿದೆ. ಸುಳ್ಳು ಹೇಳಿದ ಆಪಾದನೆ ಮೇಲೆ ಈ ವ್ಯಕ್ತಿಗೆ ದಂಡ ವಿಧಿಸಬೇಕು", ಎಂದು ನ್ಯಾಯಾಧೀಶರಲ್ಲಿ ಪ್ರಾರ್ಥಿಸಿದರು.

"ನಿಮ್ಮ ವಿಚಾರ ಏನಾದರೂ ಹೇಳುವುದಿದೆಯೆ?" ನ್ಯಾಯಾಧೀಶರು ಅಯ್ಯರ್ ಅವರನ್ನು ಪ್ರಶ್ನಿಸಿದರು. ಮೌನವೇ ಉತ್ತರವಾಯಿತು.

ನ್ಯಾಯಾಧೀಶರು ತೀರ್ಮಾನವನ್ನು ಓದಿ ಹೇಳಿದರು; "ರಾಜಾಜಿಯವರನ್ನು ಸುಳ್ಳು ಹೇಳಿ ನಂಬಿಸಿದ ಆಪಾದನೆ ಮೇಲೆ ಹರಿಹರ ಅಯ್ಯರ್‌ಗೆ ಇನ್ನೂರೈವತ್ತು ರೂಪಾಯಿ ಜುಲ್ಮಾನೆ; ದಂಡ ಕೊಡಲು, ತಪ್ಪಿದರೆ ಆರು ತಿಂಗಳ ಸೆರೆವಾಸ ವಿಧಿಸಲಾಗಿದೆ."

ಹರಿಹರ ಅಯ್ಯರ್ ಈ ತೀರ್ಮಾನವನ್ನು ಕೇಳಿ ಖಿನ್ನರಾದರು. ಕಣ್ಣಲ್ಲಿ ನೀರು ತುಂಬಿತು.

ರಾಜಾಜಿಯವರು ಗಂಭೀರವಾಗಿ ಮೇಲೆದ್ದು, "ಸ್ವಾಮಿ, ೨೫೦ರೂಪಾಯಿಗಳನ್ನು ಅಯ್ಯರ್ ಎಲ್ಲಿಂದ ತರುತ್ತಾರೆ? ಅವರ ಬಳಿ ಊಟ ಮಾಡಲೂ ಹಣವಿಲ್ಲ. ಮನೆಗೆ ಹಿಂತಿರುಗಲು ಟಿಕೆಟ್ ಖರ್ಚಿಗೂ ಹಣವಿಲ್ಲ," ಎಂದರು.

ಅವರ ಮಾತುಗಳನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ರಾಜಾಜಿಯವರು ಅಯ್ಯರ್ ಪಕ್ಷ ವಹಿಸುವರೆಂದು ನ್ಯಾಯಾಧೀಶರಾಗಲಿ ಸ್ವಯಂ ಹರಿಹರ ಅಯ್ಯರ್ ಆಗಲಿ ಯೋಚಿಸಿರಲಿಲ್ಲ.

ರಾಜಾಜಿಯವರ ಕೋರಿಕೆಯ ಮೇರೆಗೆ ನ್ಯಾಯಾಧೀಶರು ಜುಲ್ಮಾನೆಯ ಹಣವನ್ನು ೫೦ ರೂಪಾಯಿಗಳಿಗೆ ಇಳಿಸಿದರು.

"ತಮ್ಮ ಔದಾರ್ಯಕ್ಕಾಗಿ ವಂದನೆಗಳು. ವಿಶೇಷ ಪರಿಸ್ಥಿತಿಗೆ ಒಳಗಾಗಿರುವ ಅಯ್ಯರ್ ಐವತ್ತು ರೂಪಾಯಿಗಳನ್ನು ಕೊಡಲೂ ಅಸಮರ್ಥರಾಗಿದ್ದಾರೆ. ದಯವಿಟ್ಟು ದಂಡವನ್ನು ಇನ್ನೂ ಕಡಿಮೆ ಮಾಡಬೇಕು," ಎಂದು ತುಂಬಿದ ಕೋರ್ಟಿನಲ್ಲಿ ರಾಜಾಜಿಯವರು ನ್ಯಾಯಾಧೀಶರನ್ನು ಪ್ರಾರ್ಥಿಸಿದರು.

ನ್ಯಾಯಾಧೀಶರು ರಾಜಾಜಿಯವರ ಕೋರಿಕೆ ಹಾಗೂ ಹೃದಯವೈಶಾಲ್ಯಕ್ಕೆ ಮನಸೋತು ಜುಲ್ಮಾಯನ್ನುಹತ್ತು ರೂಪಾಯಿಗಳಿಗೆ ಇಳಿಸಿದರು.

ತಕ್ಷಣ ರಾಜಾಜಿಯವರು ತಮ್ಮ ಜೇಬಿನಿಂದ ಹತ್ತು ರೂಪಾಯಿಗಳನ್ನು ತೆಗೆದು ಜುಲ್ಮಾನೆಯನ್ನು ತುಂಬಿ, "ಈ ಹಣವನ್ನು ನಾನು ಅಯ್ಯರ್‌ಗೆ ಸಾಲವಾಗಿ ಕೊಟ್ಟಿದ್ದೇನೆ," ಎಂದರು.

ಹರಿಹರ ಅಯ್ಯರ್ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಹರಿಯಲಾರಂಭಿಸಿತು. ನ್ಯಾಯಾಲಯದಲ್ಲೇ ರಾಜಾಜಿಯವರ ಕಾಲುಗಳನ್ನು ಹಿಡಿದು ಕ್ಷಮೆ ಕೇಳಿದರು. ರಾಜಾಜಿ ಸ್ನೇಹದಿಂದ ಅಯ್ಯರ್ ಅವರನ್ನು ಆಲಂಗಿಸಿಕೊಂಡರು.

"ನನಗೆ ಶಿಕ್ಷೆ ಮಾಡಿಸಬೇಕೆಂದು ತಾವು ನಿರ್ಧರಿಸಿದ್ದರೆ ಜುಲ್ಮಾನೆ ಕಡಿಮೆ ಮಾಡಿಸಿ ನನ್ನನ್ನು ಬಿಡಿಸಲು ದಂಡವನ್ನು ತೆತ್ತದ್ದು ಏಕೆ?" ಎಂದು ಅಯ್ಯರ್ ಆಶ್ಚರ್ಯದಿಂದ ಕೇಳಿದರು.

ರಾಜಾಜಿ ನಗುತ್ತಾ ಹೇಳಿದರು, "ನೀವು ಜೀವನದಲ್ಲಿ ಜ್ಞಾಪಕವಿಟ್ಟಿರಬೇಕು, ಸುಳ್ಳು ಹೇಳುವುದು ಪಾಪವಷ್ಟೇ ಅಲ್ಲ, ಅಪರಾಧವೂ ಹೌದು. ನೀವು ಸುಳ್ಳು ಹೇಳುವ ಅವಶ್ಯಕತೆ ಏನಿತ್ತು? ಸತ್ಯ ಹೇಳಿದ್ದರೆ ನಾನು ಸಹಾಯ ಮಾಡುತ್ತಿರಲಿಲ್ಲವೇ?"

ಊರು ತಲುಪಲು ಬೇಕಾದ ಹಣವನ್ನು ಕೊಟ್ಟು ಹರಿಹರ ಅಯ್ಯರ್ ಮತ್ತು ಕುಟುಂಬದವನ್ನು ರಾಜಾಜಿಯವರು ಪ್ರೀತಿಯಿಂದ ಕಳುಹಿಸಿ ಕೊಟ್ಟರು. ಮನೆ ತಲುಪಿದ ತಕ್ಷಣ ಹರಿಹರ ಅಯ್ಯರ್ ದಂಡದ ಹಣ ಸಹಿತ ಒಟ್ಟು ಹಣವನ್ನು ಮನಿಯಾರ್ಡರ್ ಮೂಲಕ ರಾಜಾಜಿಯವರಿಗೆ ಕಳುಹಿಸಿದಂದು ಬೇರೆ ಹೇಳಬೇಕಿಲ್ಲ. ✡

ಆತ ಸದಾ ತನ್ನ ಬಗ್ಗೆ ತುಂಬ ಎಚ್ಚರಿಕೆಯಿಂದ ವರ್ತಿಸುತ್ತಿದ್ದ. ಯಾವುದೇ ವಿಷಯದಲ್ಲೂ ವೃಥಾ ತನ್ನ ಮೇಲೆ ಹೊಣೆ ಹೊತ್ತುಕೊಳ್ಳಲು ಬಯಸುತ್ತಿರಲಿಲ್ಲ. ಪೃಥ್ವಿ ಗೋಲಾಕಾರದ್ದಾಗಿದೆಯೆಂದು ಹೇಳುವ ಮುನ್ನ "ಕೋಪರ್ನಿಕಸ್ಸನ ಪ್ರಕಾರ" ಎಂದು ಜೋಡಿಸಲು ಖಂಡಿತ ಮರೆಯುತ್ತಿರಲಿಲ್ಲ.

–ಸ್ಪುಟ್ನಿಕ್

ಮುಂದೇನು ?

ಮೂಲ : ರಾಕೇಶ ವತ್ಸ
ಅನುವಾದ : ಕೋಹಿ

ಮಳೆಗಾಲದಲ್ಲಿ ತುಂಬಿ ಹರಿಯುವ ಇಂಥ ನದಿ ಯಾವುದೇ ದೇಶದಲ್ಲೂ ಇರಬಹುದು. ಈ ನದಿ ಕೊಚ್ಚಿ ತರುವ ಕೆಂಪು ಮಣ್ಣಿನಲ್ಲಿ ಹಳದಿಯ ಚಿನ್ನದ ಕಣಗಳು ಸಮ್ಮಿಳಿತಗೊಳ್ಳುವವೋ ಏನೋ. ಆದರೆ ಇಷ್ಟು ಮಾತ್ರ ನಿಜ. ಈ ನದಿಯ ಮಣ್ಣಿನ ಕಣಗಳಲ್ಲಿ ಚಿನ್ನದ ಕಣಗಳು ದೊರೆಯುತ್ತವೆ. ಅಂತೆಯೇ ಈ ನದಿಯನ್ನು "ಸೋನಾನದಿ" ಎಂದೇ ಕರೆಯುತ್ತಾರೆ.

ನದಿಯ ತೀರದ ಇಕ್ಕೆಲಗಳಲ್ಲೂ ದೊಡ್ಡ ದೊಡ್ಡ ಜಾಲಿ ಮರಗಳು ತಲೆಯೆತ್ತಿ ನಿಂತುಕೊಂಡಿವೆ. ಸಾಕಷ್ಟು ಸಂಖ್ಯೆಯಲ್ಲಿ ಹಳೆ ಮರಗಳು. ತಾರುಣ್ಯದ ಗರ್ವದಿಂದ ಚಿಗುರುತ್ತಿರುವ ಮರಗಳು, ಸಣ್ಣ ಸಣ್ಣ ಗಿಡಗಳು. ಗುಂಪು ಗುಂಪಾಗಿ ಬೆಳೆಯುತ್ತವೆ. ಈ ಮಣ್ಣಿನಲ್ಲಿ ಜಾಲಿಮರಗಳು ತಂತಾನೆ ಬೆಳೆಯುತ್ತವೆ. ಈ ಮರಗಳನ್ನು ಬೆಳೆಸಲು ಯಾರೂ ಇದುವರೆಗೆ ಕಷ್ಟಪಟ್ಟಿಲ್ಲ.

ಮೇಲೆ ಬೆಟ್ಟಗಳಲ್ಲಿ ಮಳೆಯಾಗುತ್ತದೆ. ನದಿ ನಿಲ್ಲದೆ ತುಂಬಿ ಹರಿಯುತ್ತದೆ. ನೀರು ದಂಡೆಯನ್ನು ದಾಟಿ ಗಿಡಗಳ ಬೇರಿನವರೆಗೂ ಸಾಗುತ್ತದೆ. ಬೇರು ನೀರನ್ನು ಸಂಜೀವಿನಿಯನ್ನಾಗಿ ಪರಿವರ್ತಿಸಿ ಗಿಡದ ರೆಂಬೆ ಎಲೆಗಳವರೆಗೂ ಸಾಗಿಸುತ್ತದೆ. ಈ ರೀತಿಯಾಗಿ ಈ ಗಿಡಗಳು ಶಿಶಿರ ಋತು ಒಂದನ್ನು ಬಿಟ್ಟು ಎಲ್ಲಾ ಸಮಯದಲ್ಲೂ ಹಸಿರಿನಿಂದ ಕಂಗೊಳಿಸುತ್ತಿರುತ್ತವೆ.

265 12

ಮಳೆಗಾಲದ ನಂತರ ಈ ಗಿಡಗಳಲ್ಲಿ ಹೂ ಬಿಡುತ್ತದೆ. ಅರಿಷಣ ವರ್ಣದ ರೇಷ್ಮೆಯೋಪಾದಿಯಲ್ಲಿ ನುಣುಪಾದ ಹೂಗಳು. ಹೂಗಳಿಂದ ಕಾಯಿಗಳು ಬಲಿಯುತ್ತವೆ. ಕಾಯಿಗಳಿಂದ ಕಪ್ಪನೆಯ ಬಣ್ಣದ, ಪಾರಿವಾಳದ ಕಣ್ಣುಗಳೋಪಾದಿಯ ದುಂಡನೆಯ ಬೀಜಗಳು. ಆ ಬೀಜಗಳನ್ನು ಮಣ್ಣಿನ ಗರ್ಭ ಅತ್ಯಂತ ಆದರವಾಗಿ ಧರಿಸುತ್ತದೆ. ಬೀಜದಿಂದ ಮೊಳಕೆ. ಮೊಳಕೆಯಿಂದ ಸಸಿ. ಸಸಿಯಿಂದ ಗಿಡ. ಗಿಡದಿಂದ ಹೆಮ್ಮರ.

ನದೀತೀರದಿಂದ ಸ್ವಲ್ಪ ಅಂತರದಲ್ಲಿ ಏರು ಪ್ರದೇಶದ ಮೇಲೆ ಕೆಲವು ಗುಡಿಸಲುಗಳು. ಆ ಗುಡಿಸಲುಗಳಿಂದ ಮುಂಜಾನೆ ಮತ್ತು ಸಂಜೆ ಹೊಗೆ ಏಳುತ್ತಿರುತ್ತದೆ. ಪಶುಗಳು ಗುಟುರು ಹಾಕುವ ಶಬ್ದವೂ ಕೇಳಬರುತ್ತದೆ. ಒಮ್ಮೊಮ್ಮೆ ಹುಡುಗರು ಚೀರಾಡುವ ಧ್ವನಿಯೂ ಕೇಳಿ ಬರುತ್ತದೆ. ಈ ಹುಡುಗರ ಪೂರ್ವಜರು 'ಹೇಳುತ್ತಾರೆ-ನಾವು ಸೋನಾನದಿಯ ಮಕ್ಕಳು. ನದಿಯ ರೇವೆ ಮಣ್ಣಿನಿಂದ ಬಂಗಾರವನ್ನು ಬೇರ್ಪಡಿಸಿ ಈ ನೆಲವನ್ನು ಬಂಗಾರದ ಭೂಮಿಯನ್ನಾಗಿ ಪರಿವರ್ತಿಸುತ್ತೇವೆ. ಬಿಸಿಲಿನಲ್ಲಿ ಕೆಲಸ ಮಾಡುವದರಿಂದಾಗಿ ನಾವೆಲ್ಲ ಕಪ್ಪಾಗಿ ಹೋಗಿದ್ದೇವೆ.'

ಒಂದುದಿನ ಆ ನೆಲದ ಮಕ್ಕಳು ತಮ್ಮ ಕಡೆ ಬಿಳಿ ಬಣ್ಣದ ಅತ್ಯಂತ ಆಕರ್ಷಕವಾದ ಪಕ್ಷಿಯೊಂದು ಬರುವುದನ್ನು ನೋಡಿದರು. ಇಂಥ ಪಕ್ಷಿಯನ್ನು ಅವರು ಇದುವರೆಗೂ ಕಂಡಿರಲಿಲ್ಲ. ಅವರು ಅತ್ಯಂತ ಪ್ರೇಮದಿಂದ ಆ ಪಕ್ಷಿಯನ್ನು ಕರೆದರು. ಆದರೆ ಪಕ್ಷಿ ಆ ಮಕ್ಕಳ ಕಪ್ಪನೆಯ ಬತ್ತಲೆ ದೇಹವನ್ನು ನೋಡಿ ಜಿಗುಪ್ಸೆಯಿಂದ ಅತ್ಯಂತ ವೇಗವಾಗಿ ಹಾರಿಹೋಯಿತು.

ಮತ್ತೆ ಕೆಲವು ದಿನಗಳ ನಂತರ ಆ ನೆಲದ ಮಕ್ಕಳು ನೋಡಿದರು—ನದಿ ತೀರದ ಗುಡ್ಡದ ಬದಿ. ಬಿಳಿ ಬಣ್ಣದ ಒಬ್ಬ ಮನುಷ್ಯ ಬರುತ್ತಿದ್ದಾನೆ. ಆ ... ಅದೇ ಪಕ್ಷಿಯಂತಹ ಬಿಳುಪಾದ ಮನುಷ್ಯನೊಬ್ಬ ಕಾಣಿಸುತ್ತಾನೆ. ಬಿಳಿಯ ... ಮೇಲೆ ಕುಳಿತು ನಾಲ್ಕು ಜನ ಸೇವಕರು ಸ್ವಲ್ಪ ಸ್ವಲ್ಪ ಅಂತರ ಕ್ರಮಿಸಿದಾಗೆಲ್ಲ ಆ ಬಿಳಿಯ ಮನುಷ್ಯ ಕೃಷ್ಣವರ್ಣ ಭೂಮಿಯ ಮೇಲೆ ಕೈಯಿಟ್ಟು ... ಹೇಳುತ್ತಾನೆ. ಬೇರೆ ಬೇರೆ ಕೋನಗಳಿಂದ ಆ ಪ್ರದೇಶವನ್ನು ನಿರೀಕ್ಷಣೆ ಮಾಡುತ್ತಾನೆ. ದೊಡ್ಡದಾದ ಕರ್ರನೆಯ ವಸ್ತುವೊಂದನ್ನು ತೆಗೆದು ಅದನ್ನು ಕಣ್ಣಿನ ಬಳಿ ಇಟ್ಟುಕೊಂಡು ಮತ್ತೆ ಅದರಿಂದ ಸುತ್ತಮುತ್ತಲಿನ ಸ್ಥಳವನ್ನು ಪರಿಶೀಲಿಸುತ್ತಾನೆ. ಹೀಗೆಯೇ ಮಾಡುತ್ತಾ ಮುಂದೆ ಸಾಗುತ್ತಿದ್ದಾನೆ. ಒಂದು ಸ್ಥಳದಲ್ಲಿ ಆತ ನಿಂತು ದುರ್ಬೀನಿನಿಂದ ತಾನು ನಿಂತ ಪ್ರದೇಶದ ಸ್ಥಳ ನಿರೀಕ್ಷಣೆಮಾಡಿ ತನ್ನ ಸೇವಕರಿಗೆ ಹೇಳುತ್ತಾನೆ: "ಎಂಥ ಭೋಳೆ ಜನ! ಈ ಸ್ಥಳದ ಸೌಂದರ್ಯ ಸೊಬಗನ್ನು ಕೂಡ ಸವಿಯಲು ಆಗುತ್ತಿಲ್ಲವಲ್ಲ ಇವರಿಗೆ! ಈ ಸ್ಥಳವನ್ನು ಅಭಿವೃದ್ಧಿಗೊಳಿಸಬೇಕು."

ಬಿಳಿ ಸೇವಕ ತನ್ನ ತಲೆ ತಗ್ಗಿಸಿ ವಿನಮ್ರತೆಯಿಂದ ಹೇಳಿದ: "ಹೌದು ಸಾಹೇಬರೆ ಈ ಸ್ಥಳವನ್ನು ಅಭಿವೃದ್ಧಿಗೊಳಿಸಬೇಕು."

ಮಂದಹಾಸವೊಂದು ಆ ವ್ಯಕ್ತಿಯ ಮುಖವನ್ನು ಅಲಂಕರಿಸಿತು. ಆತನ ಆಜ್ಞೆಯಂತೆ ಜೀಪು, ಜಾಲಿಗಿಡಗಳ ಗುಂಪುಗಳ ಮಧ್ಯ ನಿಂತಾಗ ಮಣ್ಣಿನ ಸುತ್ತಲೂ ತಿರುಗಾಡಿ ಬೇಕುಬೇಕಾದ ಕಡೆಗೆ ಮಣ್ಣನ್ನು ಕೆದರಿ ಮಣ್ಣನ್ನು ಒಂದು ಚೀಲದಲ್ಲಿ ತುಂಬುತ್ತಾ ಜೀಪಿನಲ್ಲಿ ಹಾಕಿದರು. ನಂತರ ಜೀಪು ತಾನು ಬಂದ ದಾರಿಯಲ್ಲೇ ಹಿಂದಿರುಗಿಹೋಯಿತು.

ಕೆಲವು ದಿನಗಳ ನಂತರ ಮತ್ತೆ ಅದೇ ಸ್ಥಳದಲ್ಲಿ ಒಂದು ದೊಡ್ಡ ಮೋಟಾರು ಬಂತು. ಟೊಪ್ಪಿಗೆ ಧರಿಸಿದ ಕೆಲ ವ್ಯಕ್ತಿಗಳು ಇಳಿದರು. ಆ ಪ್ರದೇಶದ ಅಳತೆ ಮಾಡತೊಡಗಿದರು. ಹುಡುಗರು ಗಿಡಗಳ ಮರೆಯಿಂದ ಎಲ್ಲವನ್ನು ನೋಡುತ್ತಿದ್ದರು. ಆ ಮಕ್ಕಳು ಸುಮ್ಮನಿದ್ದರೂ ಅವರ ಕಣ್ಣುಗಳಲ್ಲಿ ಪ್ರಶ್ನೆಗಳನ್ನು ಕಾಣಬಹುದಿತ್ತು.

"ನೀವು ಯಾರು? ಇಲ್ಲಿ ಏನು ಮಾಡುತ್ತಿರುವಿರಿ?" ಆದರೆ ಆ ಪ್ರದೇಶದ ಅಳತೆಮಾಡುತ್ತಿದ್ದ ಯಾರೂ ಈ ಮಕ್ಕಳನ್ನು ಗಮನಿಸಲೇ ಇಲ್ಲ. ಅವರು ಬೇಗ ಬೇಗ ತಮ್ಮ ಕೆಲಸ ಮಾಡಿ ಹೋಗಿಬಿಟ್ಟರು.

ಕೆಲವು ದಿನಗಳು ಉರುಳಿದವು. ನಂತರ ಒಂದು ಬೆಳಗಿನ ಹೊತ್ತಿನಲ್ಲಿ ಆ ಪ್ರದೇಶದಲ್ಲಿ ಗುಣಿಗಳನ್ನು ಅಗೆಯಲಾಯಿತು. ಆ ಗುಣಿಗಳಲ್ಲಿ ಬಿಳಿ ಬಣ್ಣದ ಸಿಮೆಂಟ್ ಕಂಬಗಳನ್ನು ನೆಟ್ಟರು.

ಈ ಸಲ ಕೆಲವು ಜನ ಹೆಂಗಸರೂ ಮಕ್ಕಳ ಜೊತೆ ಮರಗಳ ಹಿಂದೆ ನಿಂತುಕೊಂಡು ಆ ಬಿಳಿ ವ್ಯಕ್ತಿಗಳ

ನ್ನು ನೆಡುವುದನ್ನು ನೋಡತೊಡಗಿದರು. ಕೆಲವೊಂದು ಮುದುಕರು ಕೂಡ ಅಚ್ಚರಿಯಿಂದ ಇದೆಲ್ಲವನ್ನು ನೋಡಿದರು. ಎಲ್ಲರೂ ಸಂತೋಷದಿಂದ ಕುಣಿದಾಡಿದರು. ಈ ಎಳೆಗಿಡಗಳು ಕೂಡ ಗಿಡವೇ ಅಲ್ಲವೇ ಎಂದು ಸಂತಸಪಟ್ಟರು. ಜಾಲಿಮರಗಳೊಂದಿಗೆ ಇರಲು ಈ ಎಳೆಗಿಡಗಳು ಬಂದಿವೆ. ನೀರು ಮತ್ತು ನೆಲ ದೇವರದು. ಅವುಗಳ ಮೇಲೆ ಎಲ್ಲರಿಗೂ ಹಕ್ಕಿದೆ. ಅವರೆಲ್ಲ ವರ್ತುಲಾಕಾರದಲ್ಲಿ ನಿಂತುಕೊಂಡು ಆಕಾಶದೆಡೆ ಕೈ ಮಾಡಿ ಆ ಎಳೆಗಿಡಗಳು ನಿರ್ವಿಘ್ನವಾಗಿ ಬೆಳೆಯುವ ಹಾಗೆ ಮಾಡು ಎಂದು ದೇವರಲ್ಲಿ ಬೇಡಿಕೊಂಡರು.

ಕೆಲವೇ ದಿನಗಳಲ್ಲಿ ಆಕಾಶದಲ್ಲಿ ಕಪ್ಪನೆಯ ಮೋಡಗಳು ಓಡಾಡತೊಡಗಿದವು. ಮುದುಕರು ಹೊಸ ಗಿಡಗಳ ಸುತ್ತಮುತ್ತ ನಿಂತು ಒಬ್ಬರ ಕೈಯನ್ನೊಬ್ಬರು ಹಿಡಿದು ವರ್ತುಲಾಕಾರದಲ್ಲಿ ಕುಣಿಯುತ್ತಾ ಹಾಡತೊಡಗಿದರು- "ಕರಿ ಮೋಡಾ, ನೀರು ಸುರಿಸು" "ಕರಿ ಮೋಡಾ, ನೀರು, ಸುರಿಸು" ಮೋಡಗಳು ಭೂಮಿ ನಡುಗುವಂತೆ ಗುಡುಗು ಹಾಕಿ ಮಕ್ಕಳ ಪ್ರಾರ್ಥನೆಗೆ ಓಗೊಟ್ಟು ನೀರನ್ನು ಸುರಿಸಿದವು. ಬೆಟ್ಟಗಳ ಮೇಲೆ ಮಿಂಚು ಹರಿಯಿತು. ಮಳೆಗಾಲಗಳ ಅರ್ಭಟವೇ ಅರ್ಭಟ. ನೀರು ನದಿಯಲ್ಲಿ ಉಕ್ಕಿ ದಂಡೆಯನ್ನು ಸೀಳಿ ಗಿಡಗಳಿಗೆ ನೀರು ಹರಿಸಿತು. ಹೊಸ ಗಿಡಗಳು ಕೂಡ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಆ ನೀರಿನ ಲಾಭ ಪಡೆದವು. ಸ್ವಲ್ಪ ದಿನಗಳಲ್ಲಿ ಹೊಸಗಿಡಗಳ ರೆಂಬೆಗಳು ಜಾಲಿಗಿಡಗಳ ಕೊಂಬೆಯಲ್ಲಿ ಸಿಕ್ಕಿ ಬೆಳೆತೊಡಗಿದವು. ಹೊಸ ಗಿಡಗಳ ಕೊಂಬೆಗಳಲ್ಲಿ ಗಿಡಗಳು ಕೂಡ ತಮ್ಮ ಹಾಗೆಯೇ ಒಬ್ಬರ ಕೈಯನ್ನೊಬ್ಬರು ಹಿಡಿದು ಕುಣಿಯುತ್ತಿರುವಂತೆ ಕಾಣಿಸಿತು. ಆ ಚಿಣ್ಣರಿಗೆ ಹರ್ಷವೋ ಹರ್ಷ.

ಮಳೆಗಾಲ ಮುಗಿಯುತ್ತಿದ್ದಂತೆ ನದಿಯೂ ಒಣಗಿತು. ಮೆಲ್ಲ ಮೆಲ್ಲನೆ ಭೂಮಿಯೂ ಒಣಗಿ ಬಿರಿಯತೊಡಗಿತು. ಜಾಲಿಗಿಡಗಳು ಮೊದಲಿನಹಾಗೆಯೇ ನಿಂತುಕೊಂಡಿದ್ದವು. ಇಂಥ ಪರಿಸ್ಥಿತಿಯಲ್ಲಿ ಜೀವಿಸುವ ಸಾಮರ್ಥ್ಯವೂ ಅವುಗಳಿಗಿತ್ತು. ಆದರೆ ಎಳೆಗಿಡಗಳು ಬಾಡತೊಡಗಿದವು. ಅವುಗಳ ಎಲೆ



ಒಣಗತೊಡಗಿದುವು. ಗಿಡಗಳು ಒಣಗಿ ಎಲೆಗಳೆಲ್ಲಾ ಉದುರಿ ಬೋಳುಬೋಳಾದವು.

ಹೊಸ ಗಿಡಗಳ ರಕ್ಷಣೆಗಾಗಿ ಗಿಡಗಳ ಮಾಲೀಕರು ಆ ಗಿಡಗಳ ಬಣ್ಣದ ಸೇವಕರನ್ನೇ ಕಳುಹಿಸಿದರು. ಆ ಸೇವಕರು ಮೊದಲು ನೀರನ್ನು ಹುಡುಕತೊಡಗಿದರು. ಆದರೆ ನೀರೆಲ್ಲೂ ಸಿಗಲಿಲ್ಲ. ಗುಡಿಸಲುಗಳ ಬಳಿಯಿದ್ದ ಜಲಕುಂಡದಲ್ಲಿ ಮಾತ್ರ ನೀರಿತ್ತು. ಮಳೆಗಾಲದಲ್ಲಿ ಗುಡಿಸಲು ವಾಸಿಗಳು ನದಿಯಿಂದ ನೀರನ್ನು ಹೊತ್ತು ಈ ಜಲಕುಂಡವನ್ನು ತುಂಬಿದ್ದರು. ಮುಂದಿನ ಮಳೆಗಾಲ ಬರುವವರೆಗೆ ಈ ನೀರೇ ಅವರಿಗೆ ಜೀವನಾಧಾರ. ಸೇವಕರು ಈ ಜಲಕುಂಡದೊಳಗಿನ ನೀರನ್ನು ತೆಗೆದು ತೆಗೆದು ಆ ಬಿಳಿಗಿಡಗಳಿಗೆ ಹನಿಸತೊಡಗಿದರು. ನೀರನ್ನೆಳೆಯುವ ಅವರ ವಿಧಾನವೂ ಹೊಸದು. ಜಲಕುಂಡದಲ್ಲಿ ಒಂದು ರಬ್ಬರ್ ನಳಿಕೆಯನ್ನು ತೂರಿಸಿ ಫರ್ ಫರ್ ಎನ್ನುವ ಯಂತ್ರದಿಂದ ನೀರೆಳೆದು ಆ ಬಿಳಿಗಿಡಗಳಿಗೆ ನೀರುಣಿಸುತ್ತಿದ್ದರು.

ಗುಡಿಸಲು ವಾಸಿಗಳು ಗುಡಿಸಲೊಳಗಿನ ಕಿಂಡಿಯಲ್ಲಿ, ಆ ಹೊಸ ಜನ ಜಲಕುಂಡದಿಂದ ನೀರು ತೆಗೆಯುವುದನ್ನು ಅಂಜುತ್ತಲೇ ನೋಡಿದರು. ಅವರು ಮನದಲ್ಲೇ ಯೋಚಿಸುತ್ತಿದ್ದರು; ತಮ್ಮ ಪೂರ್ವಜರು ಹೇಳಿಹೋದ ಈ ವಾಕ್ಯವನ್ನು ಎಲ್ಲಿಯವರೆಗೆ ಪಾಲಿಸಬೇಕು. "ಭೂಮಿ ಮತ್ತು ನೀರು ದೇವರು ಕೊಟ್ಟದ್ದು. ಇವುಗಳ ಮೇಲೆ ಸಕಲ ಜೀವಿಗಳಿಗೂ ಸಮಾನವಾದ ಹಕ್ಕಿದೆ." ಅಂತೂ ಕೊನೆಗೆ ಒಬ್ಬ ಮುದುಕ ಧೈರ್ಯ ಮಾಡಿದ. ತನ್ನೆಲ್ಲ ಧೈರ್ಯವನ್ನು ಒಗ್ಗೂಡಿಸಿಕೊಂಡು ಗುಡಿಸಿಲಿನ ಹೊರಗೆ ಬಂದ. ಅಂಜುತ್ತಂಜುತ್ತಲೇ ನೀರು ಸೂರೆಮಾಡುವವರ ಬಳಿ ಬಂದ. ಬೆವರುತ್ತಲೇ ಅವರನ್ನು ವಿಚಾರಿಸಿದ: "ನೀವುಗಳು ನೀರನ್ನು ಕೊಂಡೊಯ್ಯುತ್ತಿರುವಿರಿ. ಈ ರೀತಿ ಜಲಕುಂಡ ಬರಿದಾಗುತ್ತದೆ! ನಾವುಗಳು ನೀರಿಲ್ಲದೆ ಹೇಗೆ ಜೀವಿಸಬೇಕು?"

ಒಬ್ಬ ಸೇವಕ ಉತ್ತರ ಕೊಡುವ ಬದಲು ಮುದುಕನನ್ನೇ ಪ್ರಶ್ನಿಸಿದ: "ಈ ಜಾಲಿಮರಗಳು ಹೇಗೆ ಪ್ರಾಣವನ್ನು ಹಿಡಿದುಕೊಳ್ಳುತ್ತವೆ?"

ಮುದುಕ ಉತ್ತರಿಸಿದ: "ಇವು ಗಿಡಗಳು, ಇವುಗಳ ಬೇರು ರಸಾತಳದವರೆಗೂ ಹರಡಿವೆ. ಆದರೆ ನಾವ್ತೋ ಮನುಷ್ಯ ಜಾತಿಯವರು, ನಮ್ಮಿಂದ ರಸಾತಳದ ನೀರನ್ನು ತೆಗೆದುಕೊಳ್ಳಲು ಆಗುವುದಿಲ್ಲ."

ಮುದುಕನ ಮಾತು ಕೇಳಿ ಸೇವಕರ ಮುಖದಲ್ಲಿ ನಗು ಮೂಡಿತು. "ಇದೂ ನಿಜವೇ! ನಮಗಾಗಿ, ಪಟ್ಟಣದಿಂದ ಬರುವ ಸಿಹಿ ನೀರನ್ನು ನಿಮಗೆ ಕೊಡುತ್ತೇವೆ, ಸಮಾಧಾನವಾಯಿತೆ?"

ಮುದುಕ ಸಿಹಿ ನೀರಿನ ಆಸೆಯಿಂದ ಹಿಗ್ಗಿಹೋದ. ತನ್ನ ಎದೆಯ ಮೇಲೆ ಹುಲುಸಾಗಿ ಬೆಳೆದ ಕೂದಲಿನ ಮೇಲೆ ಕೈಆಡಿಸುತ್ತ ಗುಡಿಸಲಿಗೆ ಹಿಂತಿರುಗಿದ.

ಜಲಕುಂಡದ ನೀರು ಬತ್ತಿಹೋದ ಮೇಲೆ ನಿಜವಾಗಿಯೂ ಟ್ಯಾಂಕರುಗಳಿಂದ ನೀರು ಆ ಪ್ರದೇಶಕ್ಕೆ ಬರತೊಡಗಿತು. ಮೊದಲು ಮಾತು ಕೊಟ್ಟ ಹಾಗೆ ಗುಡಿಸಲು ನಿವಾಸಿಗಳಿಗೆ ಉಪಯೋಗಕ್ಕಾಗಿ ನೀರು ಕೊಡಲಾಯಿತು. ಕುಂಡದ ಕಡೆಗೆ ಯಾರೂ ಲಕ್ಷ್ಯ ಕೊಡಲಿಲ್ಲ. ಮತ್ತು ಜಲಕುಂಡ ಆ ಕಡೆ ಈ ಕಡೆಯ ಕಸಕಡ್ಡಿಗಳನ್ನು ಹಾಕಲು ಉಪಯೋಗಿಸಲ್ಪಟ್ಟಿತು. ಈ ಕಸದಲ್ಲಿ ಬಿಳಿಗಿಡದ ಎಲೆಗಳೂ ಕೂಡಿದ್ದವು. ಸೇವಕರು ತಾವು ಕೂಡ ಕಸಕಡ್ಡಿ ಬಿಳಿಗಿಡಗಳ ಒಣಗಿದ ಎಲೆಗಳನ್ನು ತಂದು ಜಲಕುಂಡವನ್ನೂ ತುಂಬತೊಡಗಿದರು. ಕೆಲವು ದಿನಗಳ ಮೇಲೆ ಬಿಳಿಗಿಡಗಳ ಕೊಂಬೆಗಳಲ್ಲಿ ಎಲೆಗಳು ಹುಟ್ಟಿದವು ಮತ್ತು ಹೊಸ ಎಲೆಗಳ ವಿಶಿಷ್ಟ ಪರಿಮಳದಿಂದ ಆ ಪ್ರದೇಶ ತುಂಬಿಹೋಯಿತು.

ಅಕಸ್ಮಾತ್ತಾಗಿ ಒಂದು ದಿನ ಸೂರ್ಯ ಹುಟ್ಟುವುದಕ್ಕಿಂತ ಮೊದಲು ಒಂದು ದೊಡ್ಡ ಬಿಳಿಬಣ್ಣದ ಗಾಡಿಯೊಂದು ಆ ಬಿಳಿಗಿಡಗಳ ಹತ್ತಿರದಲ್ಲಿ ಬಂದು ನಿಂತಿದ್ದನ್ನು ಗುಡಿಸಲು ವಾಸಿಗಳು ನೋಡಿದರು. ಗಾಡಿಯಿಂದ ಬಹಳಷ್ಟು ಜನ ಟೊಪ್ಪಿಗೆ ಧಾರಿಗಳು ಇಳಿದರು. ಅವರ ಕೈಗಳಲ್ಲಿ ದೊಡ್ಡ ದೊಡ್ಡ ಆಯುಧಗಳಿವೆ. ಆ ಆಯುಧಗಳು, ರಾಕ್ಷಸ ಧ್ವನಿ ಹೊರಡಿಸುತ್ತಿರುವ ಯಂತ್ರದಿಂದ ಕೆಲಸ ಮಾಡುವುದನ್ನು ನೋಡಿದರು. ಗುಡಿಸಲುವಾಸಿಗಳು ಅಷ್ಟು ದೊಡ್ಡ ಆಯುಧಗಳನ್ನು ಕಂಡಿರಲಿಲ್ಲ. ಟೊಪ್ಪಿಗೆಧಾರಿಗಳು ಯಾರನ್ನೂ ಹೇಳದೆ ಕೇಳದೆ ಕಂಡು ಜಾಲಿಮರಗಳ ಮೇಲೆ

ತಮ್ಮ ಕೌಶಲ್ಯ ಪ್ರದರ್ಶಿಸತೊಡಗಿದರು. ನೋಡು ನೋಡುತ್ತಿದ್ದಂತೆಯೇ ಜಾಲಿಮರಗಳ ಕೊಂಬೆಗಳು ನೆಲಕ್ಕುರುಳತೊಡಗಿದುವು. ಕಡಿದು ಬಿದ್ದಿರುವ ತುಂಡುಗಳನ್ನು ಅವರು ಒಂದು ಕುಪ್ಪದಲ್ಲಿ ಹಾಕತೊಡಗಿದರು. ಈ ಗಿಡಗಳಿಂದಾಗಿ ಬೇರೆ ಗಿಡಗಳಿಗೆ ಹಾನಿಯೆಂದೇ ಜಾಲಿಮರಗಳನ್ನು ಕಡಿದು ಹಾಕತೊಡಗಿದರು.

ಒಬ್ಬ ತರುಣ ಗುಡಿಸಲವಾಸಿಗೆ ಟೊಪ್ಪಿಗೆ ಧಾರಿಗಳು ಮಾಡುತ್ತಿರುವ ಈ ಕೆಲಸ ಹಿಡಿಸಲಿಲ್ಲ. ಈ ಪ್ರದೇಶವೆಲ್ಲ ಜಾಲಿಮರಗಳದೇ ಎಂದು ಅವನಿಗನ್ನಿಸಿತು: ಜಾಲಿಮರಗಳು ವಂಶ ಪಾರಂಪರ್ಯವಾಗಿ ಈ ಮಣ್ಣಿನಲ್ಲಿ ಬೆಳೆಯುತ್ತ ಬಲಿಯುತ್ತ ಬಂದಿವೆ. ಈಗ ಇವನ್ನು ಕಡಿಯಲಾಗುತ್ತಿದೆ; ಬೇರೆ ಗಿಡಗಳು ನಾಟಲು ದಾರಿ ಮಾಡಿಕೊಡಲಾಗುತ್ತಿದೆ. ಇದು ಅನ್ಯಾಯ.

ಹುಡುಗ, ಈ ಮೊದಲು [illegible] ಪರಕೀಯರ ಬಳಿ ಹೋಗಿ, ಮಾತಾಡಿಬಂದ ಮುದುಕನ ಬಳಿ ಹೋದ. "ತಾತಾ, ಇದೆಲ್ಲ ಏನು ನಡೀತಾ ಇದೆ?"

ಮುದುಕ, ಹುಡುಗನ ತಲೆಯ ಮೇಲೆ ಪ್ರೀತಿಯಿಂದ ಕೈ ಆಡಿಸಿದ. ಮೈ ನೇವರಿಸಿದ ಮತ್ತು ಆ ತರುಣನ ಕೈ ಹಿಡಿದುಕೊಂಡು ಸೇವಕರ ಬಳಿಗೆ ಹೋದ.

ಆ ಹೊತ್ತಿನಲ್ಲಿ ಸೇವಕರು, ತಾವಿದ್ದ ಡೇರೆಯ ಬಳಿ ಹಚ್ಚಿದ ಹೂವಿನ ಗಿಡಗಳ ಹತ್ತಿರ ಕುಳಿತುಕೊಂಡು ಬೀರ್ ಕುಡಿಯುತ್ತಿದ್ದರು. ಮುದುಕ ಮನದಲ್ಲಿ ಅಂಜುಕೊಂಡು, ತನಗೆ ಹುಡುಗ ಕೇಳಿದ ಪ್ರಶ್ನೆಯನ್ನೇ ಸೇವಕರಿಗೆ ಹಾಕಿದ "ಇದೆಲ್ಲ ಏನು? ಇಲ್ಲಿ ಏನು ನಡೀತಾ ಇದೆ?"

ಈ ಪ್ರಶ್ನೆ ಸೇವಕರ ಮುಖದ ಮೇಲೆ ನಗೆ ಮೂಡಿಸಿತು. ಅವರು ಉತ್ತರಿಸುವ ಗೋಜಿಗೆ ಹೋಗದೇ ಮುದುಕನನ್ನೇ ಪ್ರಶ್ನಿಸಿದರು: "ನಿಮ್ಮ ಈ ಕರಿಯ ಕುರೂಪ ಗಿಡಗಳಿಂದ ಏನು ಪ್ರಯೋಜನವಿದೆ?"

"ಇವು ಇಕ್ಕಲು ಮುಳ್ಳುಕಟ್ಟನ್ನು ಕೊಡುತ್ತವೆ. [illegible] ಆಗುತ್ತವೆ ನಮ್ಮ ಕಾಡಿನ ಪಶುಗಳಿಗೆ ಮೇವು ದೊರಕುತ್ತದೆ," ಮುದುಕ ಉತ್ತರಿಸಿದ.

"ಇಷ್ಟು ಮಾತ್ರವೇ?" ಸೇವಕ ತಮಾಷೆಯಿಂದ ಉದ್ಗಾರವಾಡಿದ.

"ಔಷಧಿಗಾಗಿ ಅವುಗಳ ಬೀಜ ಉಪಯೋಗಕ್ಕೆ ಬರುತ್ತವೆ. ಚರ್ಮಕ್ಕೆ ಬಣ್ಣಕೊಡಲು ಅದರ ತೊಗಟೆಯು ಬೇಕಾಗುತ್ತದೆ" ಮುದುಕ ತನ್ನ ಮಾತನ್ನು ಮುಂದುವರಿಸಿದ.

"ಇವೇನು ಅಷ್ಟೊಂದು ಫಲದಾಯಕವಲ್ಲ," ಇನ್ನೊಬ್ಬ ಸೇವಕ ಉತ್ತರಿಸಿದ.

"ಸಾಹೇಬರೇ, ಅಡಿಗೆಗಾಗಿ ಕಟ್ಟಿಗೆಯನ್ನು ಕೊಡುತ್ತಿದೆ. ಅಲ್ಲದೆ ಇದರ ಕಟ್ಟಿಗೆ ಕಬ್ಬಿಣಕ್ಕಿಂತಲೂ ಬಿರುಸಾದದ್ದು," ಈ ಸಲ ಹುಡುಗ ಹೇಳಿದ.

"ಇದರ ಕಟ್ಟಿಗೆಯಿಂದ ಕುರ್ಚಿಗಳನ್ನು ತಯಾರಿಸಲಾಗುವುದೇ?—ರಾಕಿಂಗ್ ಚೇರ್?"

"ಮಾಡಿ ನೋಡಿಲ್ಲ," ಹುಡುಗ ತಲೆ ಕೆಳಗೆ ಮಾಡಿದ.

"ಮತ್ತು ಬಂದೂಕಿನ ಕುಂದಾ?" ಎರಡನೆಯ ಸೇವಕ ಹುಬ್ಬೇರಿಸಿ ಕೇಳಿದ.

ಹುಡುಗನಿಗೆ ಅರ್ಥವಾಗಲಿಲ್ಲ. ಆತ ಬಂದೂಕು ನೋಡಿರಲಿಲ್ಲ. ಅಂದ ಮೇಲೆ ಕುಂದಾ (ಬಂದೂಕಿನ ಹಿಡಿಕೆ) ಅರ್ಥ ಅವನಿಗೆ ಹೇಗೆ ಆಗಬೇಕು? ಹುಡುಗ ಸುಮ್ಮನ್ನೇ ಪಿಳಿಪಿಳಿ ನೋಡಿದ.

ಹುಡುಗ ನಿರುತ್ತರನಾದುದನ್ನು ಕಂಡ ಸೇವಕರು ಅಟ್ಟಹಾಸ ಮಾಡಿದರು. ನಂತರ ಮತ್ತೆ ಪ್ರಶ್ನಿಸಿದರು, "ಜಾಲಿ ಗಿಡಗಳ ಸುವಾಸನೆ ನಿಮಗೆ ವಾಕರಿಕೆ ಬರಿಸುವುದಿಲ್ಲವೆ?"

ಈಗ ಮುದುಕ ಉತ್ತರಿಸಿದ: "ಮಹಾಶಯರೇ, ಸುವಾಸನೆಯಿಂದಾಗಿ ಹೊಟ್ಟೆ ತುಂಬುವುದಿಲ್ಲ. ಅಲ್ಲದೆ ಈ ಗಿಡಗಳ ಎಲೆಯನ್ನು ನಮ್ಮ ಆಡು ಕುರಿಗಳು ತಿನ್ನುವುದಿಲ್ಲ. ನಮ್ಮ ದೃಷ್ಟಿಯಲ್ಲಿ ಈ ಬೇರೆಗಿಡಗಳು ನಿರುಪಯೋಗಿ."

"ಅಂದರೆ? ನೀವು ಗಿಡಗಳನ್ನು ಪ್ರಾಣಿಗಳಿಗಾಗಿ ಬೆಳೆಸುತ್ತೀರೇನು ?" ಈ ಸಲ ಭಯಂಕರ ಅಟ್ಟಹಾಸ ಮಾಡಿದರು ಸೇವಕರು. ಅಟ್ಟಹಾಸದ ಶಬ್ದದಿಂದಾಗಿ ಜಾಲಿಮರಗಳ ಪೊಟರೆಯಲ್ಲಿ ವಾಸ ಮಾಡುತ್ತಿದ್ದ ಪಕ್ಷಿಗಳು ಕಂಗೆಟ್ಟವು. ಅವುಗಳ ಚಿಲಿಪಿಲಿ ಧ್ವನಿ ಕಾವ್ ಕಾವ್ ನಿನಾದದಲ್ಲಿ ಕರಗಿ ಹೋಯಿತು.

ಸೇವಕರು ಮತ್ತೆ ತಮ್ಮ ಕುರ್ಚಿಗಳ ಮೇಲೆ ಕುಳಿತು ಬೀರ್ ಕುಡಿಯತೊಡಗಿದರು. [illegible]

ಬಿಟ್ಟು ನೇರವಾಗಿ ಹಾಕಿದ್ದ ಮುಳ್ಳು ಬೇಲಿಯ ತಂತಿಯನ್ನೊಮ್ಮೆ ಜೋರಾಗಿ ಎಳೆದು ನೋಡಿದ. ನಂತರ ಆತ ಮುದುಕನ ಭುಜವನ್ನು ಹಿಡಿದುಕೊಂಡು ತನ್ನಲ್ಲಿ ಗುಡಿಸಲಿನ ಕಡೆಗೆ ಕರೆದುಕೊಂಡು ಹೋದ.

ಬಿಳಿ ಸೇವಕನ ತಲೆಯಲ್ಲಿ ಪ್ರಶ್ನೆಯೊಂದು ಮೂಡಿತು. "ಯಾವಾಗಲಂತೂ ಮುದುಕ ಹುಡುಗನ ಕೈಯನ್ನು ಹಿಡಿದುಕೊಂಡಿದ್ದ ಮತ್ತು ಮುದುಕ ಮುಂದೆ ಇದ್ದ. ಈಗ ಹೋಗುವಾಗ ಹುಡುಗನೇ ಮುದುಕನ ಕೈಹಿಡಿದುಕೊಂಡು ಮುಂದೆ ಮುಂದೆ ನಡೆಯುತ್ತಿದ್ದಾನೆ. ಇಲ್ಲಿನ ನಿಯಮಗಳಲ್ಲಿ ಈ ಪದ್ಧತಿ ಇದೆಯೋ?" ಆದರೆ ಬರಹನಿಯ ಸೇವಕ ಅವನ ಬಾಯಿಯಾಗಿದ್ದ ಗ್ಲಾಸ್ ಅನ್ನು ಟೇಬಲ್‌ನಿಂದ ತುಂಬಿಸಿದ ಕೂಡಲೇ ಆ ಪ್ರಶ್ನೆ ಹೇಗೆ ಆತನ ತಲೆಯಲ್ಲಿ ಮೂಡಿತ್ತೋ ಹಾಗೆಯೇ ಹೊರಟುಹೋಯಿತು.

ಈ ಕಡೆ ಜಾಲಿಮರಗಳು ಸಿಟ್ಟಿನಿಂದಲೇ ಏನೋ ಎಂಬಂತೆ ಹಕ್ಕಿ ಗಿಡಗಳನ್ನು ಕಡಿದರೋ ಅದೇ ಸ್ಥಳದಲ್ಲಿ ಇಮ್ಮಡಿ ಶಕ್ತಿಯಿಂದ ಮತ್ತೆ ಬೆಳೆದು ಬೀಳಿಗಿಡಗಳಿಗೆ ಕಂಟಕವಾಗತೊಡಗಿದವು. ಬೀಳಿಗಿಡಗಳು ಶಕ್ತಿಯುತವಾಗಿ ಬೆಳೆಯಲು ಅಸಮರ್ಥವಾದವು. ನಿಯಮಾನುಸಾರವಾಗಿ ಬೀಳಿಗಿಡಗಳು ಎತ್ತರಕ್ಕೆ ಬೆಳೆಯತೊಡಗಿದವು.

ಮತ್ತೊಂದು ಮುಂಜಾವಿನ ಸಮಯ, ಅಕಸ್ಮಾತ್ತಾಗಿ ಜೀಪ್‌ನಲ್ಲಿ ಬರುತ್ತಿದ್ದ ಆತ ಆ ಪ್ರದೇಶಕ್ಕೆ ಬಂದ. ಈ ಸಲ ಹುಡುಗರು ಗುಡಿಸಲಿನ ಬಳಿ ನಿಂತುಕೊಂಡು ಆತ ಫೋಟೋ ತೆಗೆಯುವುದನ್ನು ನೋಡತೊಡಗಿದವು. ಮೊದಲಿನ ಹಾಗೆ ಆತ ಗಿಡಗಳ ಹತ್ತಿರ ಹೋಗಲಿಲ್ಲ. ಈ ಸಲ ಹುಡುಗರ ಬಳಿ ಕೆಲವು ಹಿರಿಯ ಹುಡುಗರೂ ಬಂದು ಸೇರಿದರು. ಮೊದಲಿನ ಹುಡುಗನ ಹತ್ತಿರವಂತೂ ಒಂದು ಆಯುಧವಿತ್ತು.

ಜೀಪಿನದಲ್ಲಿದ್ದಾತ ಆಯುಧ ಹಿಡಿದುಕೊಂಡಿದ್ದ ಹುಡುಗನನ್ನು ಸನ್ನೆಮಾಡಿ ಕರೆದ. ಹುಡುಗ ಆಯುಧವನ್ನು ಮುದುಕನ ಕೈಗೆ ಕೊಟ್ಟು ಅವನ ಕಡೆಗೆ ನಡೆದ

ಹುಡುಗ ಬಂದ ಮೇಲೆ ಆತ ವಿಚಾರಿಸಿದ "ನೀನು ಈ ಬೀಳಿಗಿಡಗಳನ್ನು ನೋಡಿಕೊಳ್ಳುವ ಕೆಲಸ ಮಾಡುತ್ತೀಯಾ? ನಾನು ಕೊಡುತ್ತೇನೆ."

ಹುಡುಗ ತಲೆ ಅಲ್ಲಾಡಿಸಿದ. "ಮಾಡೋಲ್ಲ."

"ಏಕೆ ಮಾಡಲಾರೆ?" ಆತ ಆಶ್ಚರ್ಯದಿಂದ ಪ್ರಶ್ನಿಸಿದ.

"ಇವುಗಳಲ್ಲಿ ಏನು ಅಂಥಾ ಮಹತ್ವದ ಗುಣಗಳಿವೆ? ಯಾತಕ್ಕಾಗಿ ಇವುಗಳನ್ನು ರಕ್ಷಿಸಬೇಕು?"

"ಈ ಗಿಡಗಳು ಕಣ್ಣಿಗೆ ಅಂದ ಕಾಣಿಸುತ್ತವೆ. ದೊಡ್ಡ ದೊಡ್ಡ ಇಮಾರತುಗಳನ್ನು ಕಟ್ಟಲು ಸೆಂಟ್ರಿಂಗ್ ಕೆಲಸಕ್ಕಾಗಿ ಬೇಕಾಗುವ ಹಲ್ಲುಗಳಾಗಿ ಈ ವೃಕ್ಷಗಳ ಜೊಸ್ತು ಉಪಯೋಗವಾಗುತ್ತದೆ. ಇದರ ಎಲೆಗಳ ಸುವಾಸನೆಯಿಂದ ನೆಗಡಿ ಆಗುವುದಿಲ್ಲ. ಮತ್ತು ಇದರ ಎಣ್ಣೆ ಬಹಳೇ ಬೆಲೆ ಬಾಳುತ್ತದೆ."

"ಆದರೆ ನಮಗೆ ನೆಗಡಿಯಾಗುವುದೇ ಇಲ್ಲವಲ್ಲ?"

"ನೀನು ನಿಮಗಾಗಿ ಅಲ್ಲ, ನಮಗಾಗಿ ಈ ವೃಕ್ಷಗಳ ಪೋಷಣೆ ಮಾಡು. ನಾವು ಸಂಬಳ ಕೊಡುತ್ತೇವೆ."

"ಆಗಲಾರದ ಮಾತು. ನಾವು ನಮ್ಮ ಕೆಲಸ ಮಾಡುತ್ತೇವೆ," ಎಂದು ಹೇಳಿ ಹುಡುಗ ತನ್ನವರ ಬಳಿಬಂದ.

ಜೀಪ್ ಘರ್ರನೆ ಹಿಂತಿರುಗಿತು. ಆದರೆ ಅದು ಹೋದ ಐದು ತಾಸಿನ ಒಳಗೇ ಮೂರು ದೊಡ್ಡ ಗಾಡಿಗಳು ಅಲ್ಲಿಗೆ ಬಂದವು. ಗಾಡಿಯೊಳಗಿಂದ ಗುಂಪು ಗುಂಪಾಗಿ ಕೊಟ್ಟಿಗೆಯವರು ಕೆಳಗೆ ಇಳಿದರು ಮತ್ತು ತಮ್ಮ ಯಂತ್ರಚಾಲಿತ ಆಯುಧಗಳೊಂದಿಗೆ ಆ ಕರಿಯ ಜಾಲಿಮರಗಳ ಮೇಲೆ ಮುಗಿಬಿದ್ದರು.

ವೃಕ್ಷಗಳು ಗೋಳಾಡುತ್ತ ತುಂಡು ತುಂಡಾಗಿ ನೆಲಕ್ಕೆ ಬಿದ್ದವು. ಅವುಗಳ ಮೇಲೆ ವಾಸಿಸುತ್ತಿದ್ದ ಹಕ್ಕಿಗಳು ಆಶ್ರಯವಿಲ್ಲದೆ ಹಾಹಾಕಾರ ಮಾಡುತ್ತಾ ಆಕಾಶದಲ್ಲಿ ಸುತ್ತತೊಡಗಿದವು, ಗೂಡಿನೊಳಗಿಂದ ಬಿದ್ದ ಪಕ್ಕ ಬಲಿಯದ ಹಕ್ಕಿಗಳು ಹುಳುಗಳಂತೆ ನೆಲದ ಮೇಲೆ ಹರಿದಾಡತೊಡಗಿದವು. ಬಿಳಿಯರೋ [illegible] ಹದ್ದುಗಳ ದಂಡೊಂದು ಹಾರಿಬಂದು ಮರಿಹಕ್ಕಿಗಳನ್ನು ಹಿಡಿಯುವಾಗ [illegible] ಕೊಂಡು ಆಕಾಶದಲ್ಲಿ ಹಾರತೊಡಗಿದುವು. ಮೇಲೆ ಹಾರಾಡುತ್ತಿದ್ದ ಹಕ್ಕಿಗಳು, ತಮ್ಮ ಮರಿಗಳನ್ನು

ಉಳಿಸಿಕೊಳ್ಳುವ ಸಲುವಾಗಿ ಮರಗಳನ್ನು ಬಿಟ್ಟು ಕೊಂಡು ಹೋಗುವಾಗ ಬೇರೆ ರಾಷ್ಟ್ರಗಳು, ಮರಗಳನ್ನು ಆಕಾರದಲ್ಲಿ ಬಿದಿರು ಕಟ್ಟಿದಾಗ ಗಾಯವಾಗಿ ಕೆಳಗೆ ಬಿದ್ದ ಮರಗಳು ಕತ್ತರಿಸಿ ಹಾಕಿ ಕೆಡವಿದ ಜಾಲಿ ವೃಕ್ಷಗಳ ಮುಳ್ಳು ಕಂಬಗಳೊಳಗೆ ಬಿದ್ದು ಅರ್ಥವಾದ ಮಾತುಕೊಂಡಿದ್ದರು.

ಗುಡಿಸಲುಗಳೂ ಬೇರ್ಪಟ್ಟಂತಾಗಿ ಅವುಗಳಲ್ಲಿರುವ ಜನರು ಈ ಪ್ರವಾಹಾಯಿತ್ಯಾದಿ ವೃತ್ತವನ್ನು ನೋಡಿ ಬಾವಲಿ ಗುಡಿಸಲೊಳಗೆ ಮುದುರಿಕೊಂಡು ತಮ್ಮ ಕೈಗಳಿಂದ ಕಿವಿಯನ್ನು ಮುಚ್ಚಿಕೊಂಡರು.

ಎಲ್ಲ ಜಾಲಿಗಿಡಗಳನ್ನು ಕೊಚ್ಚಿ ಹಾಕಿದ ನಂತರ ಅವುಗಳ ತೊಗಟೆಯನ್ನು ಸುಲಿಯುವ ಕೆಲಸ ಪ್ರಾರಂಭವಾಯಿತು. ಸತ್ತ ಹಸುಗಳ ಮೈಮೇಲಿನ ಚರ್ಮ ಸುಲಿಯುವಹಾಗೆ ತೊಗಟೆಯನ್ನು ಸುಲಿದು ಕೊಂಡರು. ಎಷ್ಟೋ ದಿನಗಳವರೆಗೆ ಈ ಕೆಲಸ ನಡೆಯಿತು. ಈ ದಿನಗಳಲ್ಲಿ ರಾತ್ರಿಹೊತ್ತು ಗುಡಿಸಲುಗಳ ದೀಪ ಬೆಳಗಿನವರೆಗೂ ಉರಿದವು. ದೊಡ್ಡ ಮೋಟಾರುಗಳು ಜಾಲಿ ಕಟ್ಟಿಗೆಯನ್ನು ತುಂಬಿಕೊಂಡು ಹೋದಮೇಲೆಯೆ ಇವರು ಗುಡಿಸಲು ಬಿಟ್ಟು ಹೊರಬಂದರು.

ಗಾಡಿಗಳು ಹೋದನಂತರ ಉಳಿದುಳಿದ ಕಸವನ್ನು ಸೇವಕರು ಜಲಕುಂಡದಲ್ಲಿ ತುಂಬಿದರು. ಈ ನೆಲದಲ್ಲಿ ಜಾಲಿಗಿಡಗಳು ಇದ್ದುವೋ ಇಲ್ಲವೋ ಎನ್ನುವ ರೀತಿಯಲ್ಲಿ ಜಾಲಿಗಿಡಗಳ ವಂಶವನ್ನೇ ನಿರ್ಮೂಲ ಮಾಡಲಾಗಿತ್ತು. ಈಗ ಬಳಿಗಿಡಗಳು ಬೆಳೆಯಲು ಅವಕಾಶವೇ ಇರಲಿಲ್ಲ. ಭೂಮಿಯ ತೇವಾಂಶವೆಲ್ಲ ಈಗ ಬೆಳೆದ ಗಿಡಗಳಿಗೇ ಮೀಸಲಾಗಿತ್ತು. ಅವುಗಳೀಗ ಆ ನೆಲದ ವಾತಾವರಣಕ್ಕೆ ಒಗ್ಗಿಕೊಂಡಿದ್ದುವು. ಅಲ್ಲಿಂದ ಮುಂದಿನ ಮಳೆಗಾಲದವರೆಗೆ ಗಾಡಿಯಿಂದ ನೀರು ಹಾಕುವ ಅವಶ್ಯಕತೆಯೂ ಈಗ ಉಳಿಯಲಿಲ್ಲ. ನೀರಿನ ಅವಶ್ಯಕತೆ ಸೇವಕರಿಗೆ ಮಾತ್ರ ಉಳಿಯಿತು. ಅವರೀಗ ನೀಲಿ ದೊಡ್ಡ [illegible] ಬಂಗಲೆಯಲ್ಲಿ ವಾಸವಾಗಿದ್ದರು.

[illegible] ಗುಡಿಸಲು ವಾಸಿಗಳು ಕೂಡಿಕೊಂಡು ಬಂದು [illegible] ಹಾಕಿದುದನ್ನು ಬಂಗಲೆವಾಸಿಗಳು ಕಂಡರು. ಅಂಜಿಕೆಯಿಂದ ಬಂಗಲೆಯೊಳಗೆ ಹೋಗಿ ಬಂದೂಕನ್ನು ಎತ್ತಿಕೊಂಡು ಹೊರಬಂದು ಕದನಕ್ಕೆ ಸಿದ್ಧರಾದರು. ಒಬ್ಬ [illegible] ಗುಡಿಸಲುವಾಸಿಯ ಕಡೆ ಗುರಿಯಿಟ್ಟು ಅತನನ್ನು ಪ್ರಶ್ನಿಸಿದ "ನೀವುಗಳು ಇಲ್ಲಿ ಏನು ಸಮಾಚಾರ? ಏನು ಬೇಕು?"

ಮುದುಕ ಅಂಜುತ್ತಲೇ ಸ್ವಲ್ಪ ಮುಂದೆ ಬಂದು ಹೇಳಿದ: "ದಯಮಾಡಿ ಕೋಪ ತೋರಿ ಸಾಹೇಬರೇ. ನಮ್ಮ ಜಲಕುಂಡವೀಗ ಕಸಕಡ್ಡಿಯಿಂದ ತುಂಬಿಹೋಗಿದೆ ಮತ್ತು ನಿಮ್ಮ ನೀರಿನ ಗಾಡಿಗಳಿಂದ ನಮಗೆ ನೀರು ಸಿಗುವುದು ನಿಂತು ಹೋಗಿದೆ. ನಾವೀಗ ನೀರಿಲ್ಲದೇ ಬದುಕಲಾರೆವು."

ಮುದುಕನ ಮಾತು ಕೇಳಿ ಬಂಗಲೆವಾಸಿಗಳ ಮುಖದಲ್ಲಿ ವ್ಯಂಗ್ಯಭಾವ ಹರಿಯಿತು. ಬಂದೂಕುಧಾರಿಗಳು ಬಂದೂಕನ್ನು ಕೆಳಗೆ ಇರಿಸಿದರು. "ನೀವುಗಳು ಇನ್ನೊಂದು ಜಲಕುಂಡವನ್ನೇಕೆ ಕಟ್ಟಬಾರದು?" ಬಂಗಲೆವಾಸಿ ಗುಡಿಸಲುವಾಸಿಗಳಿಗೆ ಪ್ರಶ್ನಿಸಿದ.

ಗುಡಿಸಲುವಾಸಿಗಳು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಈಗ ಮತ್ತೊಬ್ಬ ಮುದುಕ ಹೇಳಿದ "ನಮ್ಮಿಂದ ಕುಂಡವನ್ನು ನಿರ್ಮಿಸಲಾಗದು. ಕುಂಡವನ್ನು ಪ್ರಕೃತಿಯೇ ನಿರ್ಮಿಸುತ್ತದೆ. ಈಗ ಹಾಳಾದ ಜಲಕುಂಡವೂ ಪ್ರಕೃತಿದತ್ತವಾದುದು. ಅದನ್ನೇ ನಾವು ಆಗೀಗ ರಿಪೇರಿ ಮಾಡುತ್ತಿದ್ದೆವು."

ಮುದುಕನ ಮಾತುಕೇಳಿ ಬಂಗಲೆವಾಸಿಗಳು ಮತ್ತೆ ನಗತೊಡಗಿದರು. ನಗು ನಿಂತಮೇಲೆ ತಮ್ಮ ತಮ್ಮಲ್ಲೇ ಮಾತಾಡಿಕೊಂಡು ಗುಡಿಸಲು ವಾಸಿಗಳಿಗೆ ಹೇಳಿದರು. "ನಮ್ಮ ಬಂಗಲೆಗೆ ಬರುವ ನೀರಿನಲ್ಲಿ ಸ್ವಲ್ಪ ಭಾಗ ನಿಮಗೂ ಕೊಡುತ್ತೇವೆ, ಆದಕ್ಕಾಗಿ ನೀವು ನಮಗಾಗಿ ಕೆಲಸ ಮಾಡಬೇಕು."

"ಎಂಥಾ ಕೆಲಸ?" ಮೊದಲಿನ ಮುದುಕ ಕೇಳಿದ.

"ನೀವೆಂಥ ಕೆಲಸಮಾಡಬಹುದು? [illegible]"

ಗುಡಿಸಲುವಾಸಿಗಳಿಗೆ [illegible] ಅವರ [illegible] ಹೊಸ ಹೊಸ ಗಿಡಗಳನ್ನು ಬೆಳೆಸಲಾಯಿತು. [illegible] ಬಂಗಲೆ [illegible]

ಬೇಕಾಯಿತು. ಮತ್ತು ಗುಡಿಸಲು ವಾಸಿಗಳು ಕಟ್ಟಿದ ಬಂಗ್ಲೆಯಲ್ಲಿ ಹೊಸ ಹೊಸ ಬಿಳಿ ಜನ ಬಂದು ವಾಸಿಸತೊಡಗಿದರು. ಹೊಸ ದೊಡ್ಡಗುಂಡಿ ದಾರಿಯನ್ನೂ ಸಿದ್ಧಪಡಿಸಲಾಯಿತು. ಈ ರಸ್ತೆಯ ಮೇಲೆ ಬಿಳಿಜನರ ಕಾರುಗಳು ಪಟ್ಟಣದ ಕಡೆಗೆ ಓಡಾಡತೊಡಗಿದವು. ಆದರೆ ಗುಡಿಸಲುಗಳು ತಾವಿದ್ದ ತಾಣದಲ್ಲೇ ಹಿಂದಿನ ಹಾಗೆಯೇ ಉಳಿದುಕೊಂಡಿದ್ದವು. ಹಿಂದಿದ್ದುದಕ್ಕಿಂತಲೂ ಹೆಚ್ಚು ಹಾಳು ಸುರಿಯುತ್ತಿದ್ದವು. ಬಂಗಲೆಗಳಿಗೆ ದೃಷ್ಟಿ ಯಾಗುವುದೋ ಎಂಬಂತೆ ದೃಷ್ಟಿ ಬೇರೆ ನೋಡುವಲ್ಲಿ ಗುಡಿಸಲುಗಳಿದ್ದುದು ಕಾಣಿಸು ತ್ತಿತ್ತು.

ದಿನಗಳುರುಳಿದಂತೆ ಗುಡಿಸಲು ವಾಸಿಗಳ ಜೀವ ನದಿ ನದೀತೀರದ ಹತ್ತಿರವಾದ ಪ್ರದೇಶದಲ್ಲಿ ಒಂದು ಕಾರಖಾನೆ ಹುಟ್ಟಿಕೊಳ್ಳತೊಡಗಿತು. ಪೂರ್ಣ ತಯಾರಾದ ನಂತರ ಕಾರಖಾನೆಯ ಹಣೆ ಪಟ್ಟಿಯ ಮೇಲೆ ದೊಡ್ಡದಾದ ಒಂದು ನಾಮ ಫಲಕ ಕಾಣಿಸಿಕೊಂಡಿತು: "ಯೂಕಲಿಪ್ಟಸ್ ಆಯಿಲ್ ಮಿಲ್ ಲಿಮಿಟೆಡ್". ಕಾರಖಾನೆಯ ಉಪಯೋ ಗಕ್ಕಾಗಿ ಒಂದು ದೊಡ್ಡ ನೀರಿನ ಟ್ಯಾಂಕನ್ನು ಕಟ್ಟಲಾಯಿತು. ನದಿಯಿಂದ ನೀರೆಳೆದು ಟ್ಯಾಂಕನ್ನು ತುಂಬಿಸಲಾಯಿತು.

ಮುಗಿಲೆತ್ತರಕ್ಕೆ ಮೈ ತೂರಿದ್ದ ಚಿಮಣಿ ಕಪ್ಪಾದ ಹೊಗೆಯುಗುಳುವುದನ್ನು ಕಂಡು ಗುಡಿಸಲು ವಾಸಿಗಳು ಬೆರಗಾದರು. ಚಿಮಣಿ ಕೆಳಗೆ ಭಟ್ಟಿಯಲ್ಲಿ ಕಾದು ಕೆಂಪಾದ ಕಲ್ಲಿದ್ದಲನ್ನು ಕಂಡು ಅಂಜಿದರು. ಕಾರಖಾನೆಯ ಮಾಲೀಕ ಅರಣ್ಯದಲ್ಲಿ ಬೇಟೆಯಾಡಿ ತಂದ ಪ್ರಾಣಿಗಳನ್ನು ಈ ಭಟ್ಟಿಯಲ್ಲಿ ಸುಡುವು ದನ್ನು ಕಣ್ಣಾರೆ ಕಂಡರು. ಒಂದು ಸಲವಂತೂ ಜೀವಂತ ಹರಿಣವೊಂದನ್ನು ಇದೇ ಕಲ್ಲಿದ್ದಲು ಭಟ್ಟಿ ಯಲ್ಲಿ ಒಗೆವಾಗ ಅದು ಮಾಡುತ್ತಿದ್ದ ಆರ್ತನಾದ ವನ್ನು ಅವರಿಂದ ಕೇಳಿಸಿಕೊಳ್ಳಲಾಗಲಿಲ್ಲ.

ಮಳೆಗಾಲದಲ್ಲಿ ಮತ್ತೆ ಜಾಲಿಮರಗಳು ಚಿಗುರು ತೊಡಗಿದವು. ಅವುಗಳಿಂದ ಹಲ್ಲುಕಡ್ಡಿ ಕತ್ತರಿಸಲು ಗುಡಿಸಲುವಾಸಿಗಳು ಬಂಗಲೆಗಳ ಸುತ್ತಮುತ್ತ ಓಡಾಡುತ್ತಿದ್ದರು. ಇದು ಬಂಗಲೆವಾಸಿಗಳಿಗೆ ಸರಿ ಬರಲಿಲ್ಲ. ಅಲ್ಲದೆ ವೈಭವೋಪೇತವಾದ ಭವನಗಳ ಮಧ್ಯ ಈ ಅಸಹ್ಯ ಗುಡಿಸಲುಗಳಿರುವುದು ಅವರಿಗೆ ಸಹಿಸಲಾಗಲಿಲ್ಲ. ಕೆಲವು ಜನರ ಮನಸ್ಸಿ ನಲ್ಲಿ ಗುಡಿಸಲುವಾಸಿಗಳಿಗೆ ನೀರು ಕೊಡುವುದನ್ನು ನಿಲ್ಲಿಸಿ, ಗುಡಿಸಲುವಾಸಿಗಳನ್ನು ಇಲ್ಲಿಂದ ಸಾಗ ಹಾಕುವ ಯೋಜನೆ ಮೂಡಿತು ಮತ್ತು ಗುಡಿ ಸಲುಗಳಿದ್ದ ಸ್ಥಳದಲ್ಲಿ ಗೋಲ್ಫ್ ಆಡುವ ಮೈದಾನ ಇದ್ದರೆ ಉತ್ತಮ ಎನಿಸಿತು.

ಹೊಸದಾಗಿ ಅಂಕುರಿಸುತ್ತಿರುವ ಜಾಲಿಗಿಡಗಳು ಮತ್ತು ಗುಡಿಸಲುವಾಸಿಗಳನ್ನು ಮಟ್ಟ ಹಾಕಿ ಸಾಗಿಸುವ ಸಮಸ್ಯೆಯ ಬಗ್ಗೆ ನಿರೀಕ್ಷಣೆ ನಡೆಸಲು ಈ ಸಲ ಹಿಂದಿನಂತೆ ಜೀಪ್ ಬರದೇ ಒಂದು ದೊಡ್ಡ ಕಾರು ಆ ಸ್ಥಳಕ್ಕೆ ದಯಮಾಡಿಸಿತು. ಕಾರಿ ನಿಂದ ಒಬ್ಬರಲ್ಲ ಕೆಲವು ಜನ ಕ್ಯಾಮರಾಧಾರಿಗಳು ಹೊರಬಂದರು. ಮತ್ತು ನವಾಂಕುರಿಸುತ್ತಿರುವ ಜಾಲಿಮರದ ಸಸಿಗಳ ಮತ್ತು ಗುಡಿಸಲುಗಳ ಚಿತ್ರ ತೆಗೆದುಕೊಳ್ಳತೊಡಗಿದರು. ಚಿತ್ರಗಳನ್ನು ತೆಗೆದು ಕೊಳ್ಳುತ್ತಾ ಅವರು ಗುಡಿಸಲುಗಳಿದ್ದ ಹತ್ತಿರ ವಾದ ಸ್ಥಳದ ಕಡೆಗೆ ಸಾಗತೊಡಗಿದರು. ಆಕಸ್ಮಾತ್ತಾಗಿ ಗಿಡಗಳ ಮರೆಯಿಂದ ಅವರ ಮೈ ಮೇಲೆ ಸಗಣಿಯ ಮಳೆ ಬೀಳತೊಡಗಿತು. ಅವರು ಶಾಂತಭಾವದಿಂದ ಈ ಸಗಣಿಯ ಪೆಟ್ಟನ್ನು ತಾಳಿಕೊಂಡರು. ಸಗಣಿ ವೃಷ್ಟಿಯನ್ನು ಪುಷ್ಪವೃಷ್ಟಿ ಎಂದೆಣಿಸಿಕೊಂಡಂತೆ ಕಾಣಿಸಿತು. ಸಗಣಿ ವೃಷ್ಟಿ ನಿಂತ ನಂತರ ತಮ್ಮ ಬಟ್ಟೆಗಳನ್ನು ಜಾಡಿಸಿಕೊಂಡು ಅದೇ ಶಾಂತಮನಸ್ಸಿನಿಂದ ಕಾರಿನಲ್ಲಿ ಕುಳಿತುಕೊಂಡ ರು. ನಂತರ ಕಾರು ಮತ್ತೆ ಪಟ್ಟಣದ ಕಡೆಗೆ ಓಡ ತೊಡಗಿತು.

ಮರುದಿನದಿಂದ ಗುಡಿಸಲುವಾಸಿಗಳಿಗೆ ದೊರಕುತ್ತಿದ್ದ ನೀರು ನಿಂತುಹೋಯಿತು. ಮತ್ತು ಗುಡಿಸಲುವಾಸಿಗಳಿಗೆ ಕೆಲಸ ಸಿಕ್ಕದೆ ಅವರ ಸ್ಥಳದಲ್ಲಿ ಪಟ್ಟಣದಿಂದ ಹೊಸದಾಗಿ ಬಂದ ಕೂಲಿಗಳು ಕೆಲಸಮಾಡತೊಡಗಿದರು.

ಗುಡಿಸಲುವಾಸಿಗಳಿಗೆ ಅರಿವು ಮೂಡತೊಡ ಗಿತು. ತಮ್ಮ ಅಪ್ರಬುದ್ಧ ತುಂಟ ಮಕ್ಕಳು ಮಾಡಿದ ಕಿಡಿಗೇಡಿತನದಿಂದ ತಮ್ಮ ಮೇಲೆ ಈ ಬಿಳಿಗಿಡಗಳ ಬಿಳಿಸಾಹೇಬರು ಕೋಪಗೊಂಡಿದ್ದಾರೆ ಎಂದೆನ್ನಿಸಿತು. ನೀರಿನಲ್ಲಿ ಇದ್ದುಕೊಂಡು ಮೊಸಳೆ ಯೊಡನೆ ವೈರ ಸಾಧಿಸಬಾರದೆಂಬ ಮಾತು ಜ್ಞಾಪಿಸಿ ಕೊಂಡರು. ನೀರಿಲ್ಲದೇ ಅವರು ಈ ಸ್ಥ


ದಲ್ಲಿ ಇರುವುದು ಸಾಧ್ಯವಿರಲಿಲ್ಲ. ನೀರು ತರಲು ಅವರು ಹತ್ತು ಹರದಾರಿ ಗುಪ್ತದ ದುರ್ಗಮ ದಾರಿಯಲ್ಲಿ ಹೋಗಿ ಬರಬೇಕಾಗುತ್ತಿತ್ತು. ಪಶುಗಳಿಗೆ ಬೇಕೇ ಕಡಿಮೆ ಪ್ರಮಾಣದಲ್ಲಿ ನೀರು ಕುಡಿಸಬೇಕಾಯಿತು. ಅವರ ಸಾಕು ದನಕರುಗಳು, ನಾಯಿಗಳು ನೀರಿಲ್ಲದ ನಾಲಿಗೆ ಹೊರತೆಗೆದು ಗೋಳಾಡುತ್ತಿದ್ದರೂ ಧ್ವನಿ ಬರುತ್ತಿರಲಿಲ್ಲ.

ಕೊನೆಯ ತೀರ್ಮಾನವನ್ನು ತೆಗೆದುಕೊಳ್ಳಲೇಬೇಕಾಯಿತು ಅವರಿಗೆ. ಮತ್ತು ಒಂದು ಬೆಳಗಿನಲ್ಲಿ ತಮ್ಮ ಗುಡಿಸಲನ್ನು ತಮ್ಮ ತಲೆಯ ಮೇಲೆ. ಪಶುಗಳ ಬೆನ್ನ ಮೇಲೆ ಹೇರಿಕೊಂಡು ಹೊರಟರು. ಹೊರಡುವ ಮೊದಲು ತಮ್ಮ ಜನ್ಮಭೂಮಿಯ ಮಣ್ಣಿಗೆ ನಮಸ್ಕರಿಸಿ, ಮಣ್ಣನ್ನು ಹಣೆಗೆ ಧರಿಸಿಕೊಂಡರು. ಅನಂತರ ಅಜ್ಞಾತ ಸ್ಥಳದ ಕಡೆಗೆ ನಡೆದರು. ಬಂಗಲೆ ವಾಸಿಗಳ ಹರ್ಷಕ್ಕೆ ಪಾರವಿರಲಿಲ್ಲ. ಅವರ ಉದ್ದೇಶ ಸ್ವಲ್ಪ ಪ್ರಯತ್ನದಲ್ಲೇ ಈಡೇರಿತ್ತು.

ಕೆಲವು ದಿನಗಳ ಪ್ರಯಾಣದ ನಂತರ ಗುಡಿಸಲು ವಾಸಿಗಳು ಗುಪ್ತದ ಇನ್ನೊಂದು ಕಡೆಯ ಒಂದು ಸಮತಟ್ಟಾದ ಪ್ರದೇಶದಲ್ಲಿ ಬಿಡಾರ ಹೂಡಿದರು. ಎಲ್ಲರೂ ಕೂಡಿ ಆ ಸ್ಥಳವನ್ನು ವಾಸಕ್ಕೆ ಯೋಗ್ಯವೆನಿಸುವ ತಮ್ಮದೇ ರೀತಿಯಲ್ಲಿ ಸಿದ್ಧಪಡಿಸಿಕೊಂಡರು. ಅಲ್ಲಿ ನೀರಿನ ಕೊರತೆಯಿರಲಿಲ್ಲ. ಸಾಕೆನಿಸುವಷ್ಟು ನೀರು. ಅವರಿನ್ನು ನಿಧಾನವಾಗಿ ಕೃಷಿಗೆ ಯೋಗ್ಯವಾಗುವ ಹಾಗೆ ಭೂಮಿಯನ್ನು ಅಭಿವೃದ್ಧಿಗೊಳಿಸಿ ಉಳುಮೆ ಮಾಡತೊಡಗಿದರು.

ಈ ಕಡೆಗೆ ನೀಲಗಿರಿ ಗಿಡಗಳ ಕಾಡೂ ಬೆಳೆಯತೊಡಗಿತು. ಅವುಗಳನ್ನು ಬೆಳೆಸಲು ಹೊಸ ರೀತಿಯ ರಾಸಾಯನಿಕ ಗೊಬ್ಬರನ್ನು ಈ ಬೆಳೆಗಾರರಿಗೆ ಹಾಕತೊಡಗಿದ್ದರು. ಕೊನೆಗೆ ಕಾಡು ಬೆಳೆಯುತ್ತಾ ಬೆಳೆಯುತ್ತಾ ಒಂದು ದಿನ. ಹೊಸದಾಗಿ ಕಟ್ಟಿಕೊಂಡಿದ್ದ ಗುಡಿಸಲುಗಳ ವರೆಗೂ ಬಂತು. ಹೊಸ ನೀಲಗಿರಿ ಗಿಡಗಳ ಜೊತೆಯಲ್ಲಿ ಹೊಸ ಸಂಗತಿಗಳೂ ಹುಟ್ಟಿಕೊಳ್ಳತೊಡಗಿದವು. ಮತ್ತೆ ಗುಡಿಸಲುಗಳಿಗೆ ಹೊಸದೊಂದು ಸಮಸ್ಯೆ ಎದುರಾಯಿತು.

ಈಗ ಗುಡಿಸಲುಗಳು ನಿಜದ ಅರಣ್ಯದೊಳಗೆ ಸಾಗಲೇಬೇಕಾಯಿತು. ಅವರ ಪೂರ್ವಜರು ಇದೇ ಭಯಂಕರ ಅರಣ್ಯದಿಂದ ಹೊರಬಂದಿದ್ದರು.



ಈಗ ಅವರ ವಂಶದ ಕುಡಿಗಳಿಗೆ ಅರಣ್ಯದೊಳಗೆ ಹೋಗುವುದು ತಮ್ಮ ಪೂರ್ವಿಕರಿಗೆ ವಿಶ್ವಾಸದ್ರೋಹ ಮಾಡುತ್ತಿರುವಂತೆನಿಸಿತು. ಒಂದು ಕಡೆ ನೀಲಗಿರಿ ಗಿಡಗಳ ಪ್ರವಾಹ. ಇನ್ನೊಂದು ಕಡೆ ಭಯಂಕರ ಕ್ರೂರ ವನ್ಯ ಜಂತುಗಳು ತುಂಬಿಕೊಂಡಿದ್ದ ನಿಬಿಡ ಅರಣ್ಯ. ಕೊನೆಗೆ ಅವರು ನೀಲಗಿರಿ ಗಿಡಗಳೊಂದಿಗೆ ಹೋರಾಡಲು ಸಿದ್ಧರಾದರು. ಗುಡ್ಡದ ಕಾಡುಗಲ್ಲುಗಳಿಂದ ಅವರ ಯುದ್ಧ. ಅಧಿದೇವತೆಯ ಮಂದಿರವೊಂದು ಕಡೆ ಸಿದ್ಧವಾಯಿತು. ಸಣ್ಣ ಸಣ್ಣ ಗಿಡಗಳನ್ನು ಕತ್ತರಿಸುತ್ತಿದ್ದ ಅವರ ಆಯುಧಗಳು ಈಗ ಬೇರೆ ಆಕಾರದಲ್ಲಿ ಸಿದ್ಧವಾದವು. ಗಿಡದ ಕಾಂಡವನ್ನೇ ಕತ್ತರಿಸಿ ಕೊಚ್ಚಿ ಹಾಕುವಷ್ಟರ ಮಟ್ಟಿಗೆ ಶಕ್ತಿಯುತವಾದ ಆಯುಧಗಳವು.

ತದನಂತರ ಗೆರಿಲ್ಲಾ ಯುದ್ಧ ತಂತ್ರ ಪ್ರಾರಂಭವಾಯಿತು. ಏಕೆಂದರೆ ಪ್ರಬಲರಾದ ಮಿಲ್ ಮಾಲೀಕರ ಜೊತೆ ಸಂಘರ್ಷಿಸಲು ಇದೊಂದೇ ವಿಧಾನ ಅವರ ಬಳಿ ಈಗ ಉಳಿದಿತ್ತು.

ಕತ್ತಲು ರಾತ್ರಿಯಲ್ಲಿ ನೀಲಗಿರಿ ಗಿಡಗಳು ಕಡಿದು ಕೆಳಗುರುಳತೊಡಗಿದುವು. ಗಿಡಗಳ ಚೀತ್ಕಾರ ಗುಡ್ಡದ ಗುಹೆಗಳಲ್ಲಿ ಪ್ರತಿಧ್ವನಿಸುತ್ತಿತ್ತು. ರಾತೋ ರಾತ್ರಿ ನೀಲಗಿರಿ ಗಿಡಗಳ ಕಾಂಡದಿಂದ ಗುಡಿಸಲುಗಳ ಸುತ್ತ ಗಟ್ಟಿ ಮುಟ್ಟಾದ ಒಂದು ಕೋಟೆಯೇ ಸಿದ್ಧವಾಯಿತು. ಬಿಳಿ ಗಿಡಗಳ ರಕ್ಷಕರು ಕಣ್ಣಾರೆ ಇವೆಲ್ಲವನ್ನು ಕಂಡರೂ ಜಾಲಿಗಿಡಗಳ ಮರೆಯಲ್ಲಿ ಕಾಯುತ್ತಿದ್ದ ಪವಿತ್ರವಾದ ಆಯುಧಗಳನ್ನು ನೋಡಿ ಸುಮ್ಮನೆ ಹಿಂತಿರುಗಲೇಬೇಕಾಯಿತು.

ಒಂದು ಬೆಳಗಿನ ಸಮಯದಲ್ಲಿ, ಗುಡಿಸಲು ವಾಸಿಗಳು, ಕಾರಖಾನೆಯ ಚಿಮಣಿಯಿಂದ ಕಪ್ಪನೆಯ ಹೊಗೆ ಹೊರಡುವುದು ನಿಂತಿದುದನ್ನು ಕಂಡರು.

ಆಕಸ್ಮಾತ್ ಒಂದು ದಿನ ಪರ್ವತ ಕಣಿವೆಯ ದಾರಿಯಿಂದ ಕೆಲವು ಉದ್ದನೆಯ ಮೋಟಾರುಗಳು ಹೊಸ ಗುಡಿಸಲುಗಳಿದ್ದ ಪ್ರದೇಶಗಳ ಕಡೆಗೆ ಬರತೊಡಗಿದುವು. ಮೋಟಾರುಗಳಿಂದ ಮೊದಲಿನ ಹಾಗೆಯೇ ಅನೇಕ ಜನ ಕ್ಯಾಮರಾಧಾರಿಗಳು ಹೊರಬಂದರು. ಆದರೆ ಈ ಸಲ ಅವರುಗಳ ಜೊತೆಗೆ ಅವರ ರಕ್ಷಣೆಗಾಗಿ ಸಾಕಷ್ಟು ಜನ ಬಂದೂಕುಧಾರಿಗಳೂ ಇದ್ದರು. ಈ ಸಲ ಕ್ಯಾಮರಾ ಕಣ್ಣು ಸುತ್ತಲಿನ ಪ್ರದೇಶವನ್ನು ಜಾಲಿ ಮರಗಳನ್ನು ವೀಕ್ಷಿಸದೇ ಗಂಭೀರ ಮುದ್ರೆಯಲ್ಲಿ ಗುಡಿಸಲುಗಳನ್ನೂ, ಗುಡಿಸಲುವಾಸಿಗಳು ಕಟ್ಟಿದ ಯುದ್ಧದೇವತೆಯ ಮಂದಿರವನ್ನೂ, ಜೊತೆಗೆ ಕಡಿದ ನೀಲಗಿರಿಗಿಡಗಳಿಂದ ನಿರ್ಮಿಸಿದ ರಕ್ಷಣಾ ಬೇಲಿಯನ್ನೂ ದಿಟ್ಟಿಸುತ್ತಿದ್ದುವು. ಈಗ ಬಿಳಿ ಜನರ ಮುಖ್ಯ ಸಮಸ್ಯೆ ಕರಿಯ ಜಾಲೀ ಮರಗಳಾಗಿರದೇ ಗುಡಿಸಲುವಾಸಿಗಳ ಗೆರಿಲ್ಲಾ ತಂತ್ರವಾಗಿತ್ತು. ✡



“ಆತನ ಸಂಪೂರ್ಣ ಲಕ್ಷ್ಯ ಗುರಿಯತ್ತಲೇ ಇತ್ತು. ಗುರಿಸಾಧನೆಗಾಗಿ ಆತ ಏಕಪ್ರಕಾರವಾಗಿ ಶ್ರಮಿಸುತ್ತಿದ್ದ. ಅವನಿಗೆ ಅಡ್ಡ ಬರುವುದೆಂದರೆ ವಿಪತ್ತನ್ನು ತಂದುಕೊಂಡಂತೆಯೇ ಆಗುತ್ತಿತ್ತೆನ್ನುವುದು ಗೊತ್ತಿದ್ದುದರಿಂದ ಗುರಿಯಿಂದ ವಿಮುಖನಾಗುವಂತೆ ಮಾಡಲು ಆತನ ಗೆಳೆಯರಿಗಾಗಲಿ ವೈರಿಗಳಿಗಾಗಲಿ ಸಾಧ್ಯವಾಗುತ್ತಿರಲಿಲ್ಲ. ಅಂಥಾ ಮಹಾ ಸಾಹಸಿಯನ್ನು ಏನೆಂದು ಕರೆಯುತ್ತೀರಿ?” ಭಾಷಣಕಾರ ಕೇಳಿದ.

“ಟ್ರಕ್ ಡ್ರೈವರ್,” ಸಭಿಕರಲ್ಲಿಂದ ಒಂದು ಧ್ವನಿ ಬಂತು.



ಗಣಪತಿ ಗಜಮುಖನಾಗಿಯೇ ಹುಟ್ಟಿದನೆ ?

ಪುಂಡಿಕ್ಯಾ ಗಣಪತಿಭಟ್ಟ

**ಮೂಷಕ ವಾಹನ ಮೋದಕ ಹಸ್ತ
ಚಾಮರಕರ್ಣ ವಿಲಂಬಿತ ಸೂತ್ರ
ವಾಮನ ರೂಪ ಮಹೇಶ್ವರ ಪುತ್ರ
ವಿಘ್ನ ವಿನಾಯಕ ಪಾದ ನಮಸ್ತೇ।**

ಗಣಾಧಿಪ, ವಿಘ್ನರಾಜ ಗಣೇಶನು ವೈದಿಕ ದೇವಗಣಕ್ಕೆ ಇತ್ತೀಚೆಗೆ ಸೇರ್ಪಡೆಯಾದ ದೇವತೆಯಾದರೂ ಜನಪ್ರಿಯತೆಯಲ್ಲಿ ಅವನು ಇತರ [illegible]. ಗಣೇಶಾರಾಧನೆಯು ಹಿಂದೂ ಧಾರ್ಮಿಕ ಜೀವನದ ಒಂದು ಪ್ರಧಾನ ಅಂಗವಾಗಿರುವುದು ಇದಕ್ಕೊಂದು ನಿದರ್ಶನ. ಬರ್ಮಾ. ಸಯಾಂ. ಇಂಡೋನೇಷಿಯಾ. ನೇಪಾಳ. ಜಪಾನ. ಚೀನ. ಟಿಬೆಟ್‌ಗಳಂಥ ಮುಂತಾದ ದೇಶಗಳಲ್ಲಿ ದೊರೆಯುವ ಗಣೇಶ ವಿಗ್ರಹಗಳು ಗಣೇಶಾರಾಧನೆ ಭಾರತದಲ್ಲಿ ಮಾತ್ರವಲ್ಲದೆ ಹೊರ ನಾಡುಗಳಲ್ಲೂ ಜನಪ್ರಿಯವಾಗಿತ್ತೆಂಬುದಕ್ಕೆ ಸಾಕ್ಷಿ.

ಭಾರತದಲ್ಲಿ ಗಣೇಶಾರಾಧನೆಯ ಪ್ರಾಚೀನತೆಯನ್ನು ನಿರ್ಧರಿಸುವುದು ಸುಲಭಸಾಧ್ಯವಲ್ಲ. ಗಣಪತಿಯ ಕುರಿತು ಪ್ರಾಯಶಃ ಅತ್ಯಂತ ಪ್ರಾಚೀನ ಉಲ್ಲೇಖ ದೊರಕುವುದು ಋಗ್ವೇದದಲ್ಲಿ. ಆದರೆ ಅಲ್ಲಿ ಉಲ್ಲೇಖಿಸಲಾದ ಗಣಪತಿ ವ್ಯಕ್ತಿ ಋಷಿ ಬೃಹಸ್ಪತಿಯೇ ಹೊರತು ಗಣೇಶನಲ್ಲ. ಹಸ್ತಿಮುಖದ, ಡೊಂಕು ಸೊಂಡಿಲಿನ (ವಕ್ರತುಂಡ) [illegible]

ದೊರಕುವುದು ತೈತ್ತಿರೀಯ ಅರಣ್ಯಕದಲ್ಲಿ. (ತತ್ಪುರುಷಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ತನ್ನೋ ದಂತಿ ಪ್ರಚೋದಯಾತ್.) ಸಾಯಣನ "ಮಹಾಭಾಷ್ಯ"ದಲ್ಲೂ ಗಜಮುಖದ ವಕ್ರತುಂಡ ದೇವತೆಯ ಬಗ್ಗೆ ಪ್ರಸ್ತಾಪವಿದೆ. ಆದರೆ ಕೇವಲ ಈ ಆಧಾರಗಳಿಂದ ಗಣೇಶಾರಾಧನೆಯ ಪ್ರಾಚೀನತೆಯನ್ನು ನಿಖರವಾಗಿ ನಿರ್ಧರಿಸುವುದು ಕಷ್ಟ. ಪ್ರಾಚೀನ ಶಾಸನಗಳು, ನಾಣ್ಯಗಳು ಇತ್ಯಾದಿಗಳ ಆಧಾರದಂತೆ ಭಾರತದಲ್ಲಿ ಗಣೇಶಾರಾಧನೆ ಕ್ರಿ.ಪೂ. ೧ನೇ ಶತಮಾನದ ಹೊತ್ತಿಗೆ ರೂಢಿಯಲ್ಲಿತ್ತು ಎನ್ನಬಹುದು.

ಪ್ರಾಯಶಃ ಪ್ರಾಚೀನ ಕಾಲದಲ್ಲಿ ಗಣಪತಿ ಅಷ್ಟೊಂದು ಪ್ರಾಮುಖ್ಯ ದೇವತೆಯಾಗಿರಲಿಲ್ಲ. ಈ ಹೇಳಿಕೆಯನ್ನು ಮನು ಧರ್ಮಶಾಸ್ತ್ರದ ಒಂದು ವಾಕ್ಯ ಪುಷ್ಟೀಕರಿಸುತ್ತದೆ. ಇದರಂತೆ "ಶಿವನು ಬ್ರಾಹ್ಮಣರ ದೇವತೆಯಾದರೆ ಗಣೇಶನು ಶೂದ್ರರ ದೇವತೆ. ಆದರೆ ಕ್ರಿ.ಶ. ೧೦ನೆಯ ಶತಮಾನದ ಹೊತ್ತಿಗೆ ಗಾಣಪತ್ಯ ಪಂಥದ ಉದಯದಿಂದಾಗಿ ಗಣೇಶನು ಅತಿ ಪ್ರಮುಖ ದೇವತೆ ಎಂದು ಪರಿಗಣಿಸಲ್ಪಟ್ಟ. ಈ ಪಂಥಾನುಯಾಯಿಗಳ ಪ್ರಕಾರ ಗಣೇಶನು ವೈದಿಕ ದೇವತ್ರಯರಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗಿಂತಲೂ ಮೇಲು. ಗಾಣಪತ್ಯ ಪಂಥ ಇತರ ಯಾವುದೇ ವೈದಿಕ ಪಂಥಗಳಷ್ಟು ಜನಪ್ರಿಯವಾಗದಿದ್ದರೂ ಗಣೇಶಾರಾಧನೆ ಇಂದಿಗೂ ಹಿಂದೂ ಧಾರ್ಮಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ ಎಂಬುದಂತೂ ನಿಜ.

ಪಾರ್ವತೀ ಪರಮೇಶ್ವರ ಪುತ್ರನಾದ ಗಣೇಶ ಬಹುನಾಮಿ. ಗಣಪತಿ, ವಿಘ್ನೇಶ್ವರ, ಗಜಾನನ ಇವು ಗಣೇಶನ ಜನಪ್ರಿಯ ನಾಮಗಳು. ಗಣಪತಿ ಸ್ತೋತ್ರದಲ್ಲಿ ಗಣೇಶನ ವಕ್ರತುಂಡ, ವಿನಾಯಕ, ಗಣಪತಿ, ವಿಘ್ನೇಶ್ವರ, ಅನಘ, ಸಿದ್ಧಿದಾತ, ಹೇರಂಬ, ದ್ವಿದೇಹಕ, ಲಂಬೋದರ, ಗಜಾನನ, ಏಕದಂತ, ಬಾಲಗಣಪ ಎಂಬ ದ್ವಾದಶ ನಾಮಗಳ ಉಲ್ಲೇಖವಿದೆ. ಇವಲ್ಲದೆ ಶೂರ್ಪಕರ್ಣ, ಗುಹಾಗ್ರಜ, ಸುಮುಖ, ಕಪಿಲ, ವಿಕಟ, ಧೂಮಕೇತು, ಗಣಾಧ್ಯಕ್ಷ, ಗಜಕರ್ಣಕ ಇವು ಗಣೇಶನ ಹಲವು ನಾಮಗಳ ಪೈಕಿ ಕೆಲವು.

ಗಣೇಶನ ಜನ್ಮವೃತ್ತಾಂತ ಅತಿ ಕುತೂಹಲಕರ. ಗಣಪತಿಯ ಹುಟ್ಟಿನ ಬಗ್ಗೆ ಮುಖ್ಯವಾದ ಮಾಹಿತಿ ದೊರೆಯುವುದು ಲಿಂಗಪುರಾಣ, ಶಿವಪುರಾಣ, ವರಾಹಪುರಾಣ, ಮತ್ಸ್ಯಪುರಾಣ, ಬ್ರಹ್ಮವೈವರ್ತಪುರಾಣ, ಹಾಗೂ ಸುಪ್ರಭೇದಾಗಮಗಳಲ್ಲಿ. ಲಿಂಗಪುರಾಣದಲ್ಲಿ ಗಣೇಶನ ಹುಟ್ಟಿನ ಕುರಿತು ಈ ರೀತಿಯ ವಿವರಣೆಯಿದೆ: ಶಿವನ ವರದಿಂದ ಉನ್ಮತ್ತರಾದ ರಾಕ್ಷಸರು ದೇವತೆಗಳನ್ನು ಪೀಡಿಸುತ್ತಿರಲು ಈ ರಾಕ್ಷಸರ ವಧೆಗಾಗಿ ಶಿವನಲ್ಲಿ ಮೊರೆಯಿಟ್ಟರು. ದೇವತೆಗಳ ಬೇಡಿಕೆಯನ್ನು ಮನ್ನಿಸಿದ ಶಿವ ತನ್ನ ಒಂದು ಅಂಶವು ಪಾರ್ವತಿಯ ಉದರದಲ್ಲಿ ಜನ್ಮತಾಳುವಂತೆ ಮಾಡಿ, ಆ ಮೂಲಕ ಜನಿಸಿದ ದೇವತೆಗೆ ವಿಘ್ನೇಶ್ವರ ಎಂಬ ನಾಮಕರಣ ಮಾಡಿ ಅಸುರರು ಸ್ವರ್ಗಪ್ರವೇಶಕ್ಕೆ ಪ್ರಯತ್ನಿಸಿದಲ್ಲಿ ವಿಘ್ನವನ್ನುಂಟು ಮಾಡುವುದರ ಮೂಲಕ ದೇವತೆಗಳಿಗೆ ಸಹಕರಿಸು ಎಂದು ಆಜ್ಞೆಯಿತ್ತು ದೇವತೆಗಳೊಂದಿಗೆ ಕಳುಹಿಸಿದ.

ಆದರೆ ಶಿವಪುರಾಣದಲ್ಲಿ ಇರುವ ವಿವರಣೆ ಬೇರೆಯೇ ತೆರನದು: ತನ್ನ ಮೈಯ ಕೊಳೆಯಿಂದ ಬಾಲಕನ ರೂಪವೊಂದನ್ನು ನಿರ್ಮಿಸಿ ಅದಕ್ಕೆ ಜೀವವನ್ನಿತ್ತು ಪಾರ್ವತಿಯು ಆ ಬಾಲಕನನ್ನು ತನ್ನ ಅಂತಃಪುರದ ದ್ವಾರರಕ್ಷಕನನ್ನಾಗಿ ನೇಮಿಸುತ್ತಾಳೆ. ಒಮ್ಮೆ ಶಿವನು ಪಾರ್ವತಿಯ ಭೇಟಿಗಾಗಿ ಬಂದಾಗ ಅವನನ್ನು ಅಂತಃಪುರ ಪ್ರವೇಶಿಸದಂತೆ ಹೊಸ ದ್ವಾರರಕ್ಷಕನು ತಡೆಯಲು ಕೋಪೋದ್ರಿಕ್ತನಾದ ಶಿವ ಅವನ ರುಂಡವನ್ನು ಕತ್ತರಿಸುತ್ತಾನೆ. ಇದರಿಂದ ದುಃಖಿತಳಾದ ಪಾರ್ವತಿ ತನ್ನ ಕುಮಾರನಿಗೆ ಪುನರ್ಜೀವವನ್ನೀಯುವಂತೆ ಶಿವನಲ್ಲಿ ಪ್ರಾರ್ಥಿಸಲು ಶಿವನು ತನ್ನ ಗಣಗಳನ್ನು ಉತ್ತರ ದಿಕ್ಕಿಗೆ ಹೋಗುವಂತೆ ಆಜ್ಞಾಪಿಸಿ ಅವರಿಗೆ ಪ್ರಥಮವಾಗಿ ಕಾಣಸಿಗುವ ಜೀವಿಯ ರುಂಡವನ್ನು ತರುವಂತೆ ಹೇಳುತ್ತಾನೆ. ಅಂತೆಯೇ ತಮಗೆ ಪ್ರಥಮವಾಗಿ ಕಾಣಿಸಿದ ಗಜವೊಂದರ ರುಂಡವನ್ನು ಗಣಗಳು ಕತ್ತರಿಸಿ ತರಲು ಶಿವನು ಆ ರುಂಡವನ್ನು ಮೃತ ಬಾಲ

ಶಿರ ಮುಂಡಕ್ಕೆ ಜೋಡಿಸಿ ಅವನಿಗೆ ಜೀವವಿತ್ತು ಗಣಪತಿಯೆಂಬ ನಾಮಕರಣ ಮಾಡಿ ತನ್ನ ಗಣಗಳಿಗೆಧಿಪತಿಯನ್ನಾಗಿ ನೇಮಿಸುತ್ತಾನೆ. ಶಿವ ಪುರಾಣದಲ್ಲಿರುವ ಈ ವಿವರಣೆ ಭಾರತದಲ್ಲಿ ಗಣೇಶನ ಹುಟ್ಟಿನ ಬಗ್ಗೆ ಅತ್ಯಂತ ಪ್ರಚಲಿತವಿರುವ ಕತೆ.

ವರಾಹ ಹಾಗೂ ಮತ್ಸ್ಯಪುರಾಣಗಳಲ್ಲಿ ಗಣೇಶನ ಜನ್ಮದ ಕುರಿತು ಇನ್ನೊಂದು ರೀತಿಯ ನಿರೂಪಣೆಯಿದೆ. ಇದರ ಪ್ರಕಾರ ಶಿವಾರಾಧನೆಯ ಫಲವಾಗಿ ಪಾಪ–ಪುಣ್ಯಗಳ ಭೇದವಿಲ್ಲದೆ ಜೀವಿಗಳೆಲ್ಲ ಸ್ವರ್ಗ ಪ್ರವೇಶ ಗೈಯುತ್ತಿರಲು ಭೀತರಾದ ದೇವತೆಗಳ ಮೊರೆಯಂತೆ ಪಾಪಿಗಳ ಸ್ವರ್ಗ ಪ್ರವೇಶ ಯತ್ನವನ್ನು ತಡೆಯುವ ಸಲುವಾಗಿ ಶಿವನು ತನ್ನ ತಪಃಶಕ್ತಿಯಿಂದ ಸುಂದರಾಂಗನೊಬ್ಬನನ್ನು ಸೃಷ್ಟಿಸಿದ. ತನ್ನ ಸಹಾಯವಿಲ್ಲದೆ ತಪಃಶಕ್ತಿ ಮಾತ್ರದಿಂದ ಶಿವನು ದೇವತೆಯೊಬ್ಬನನ್ನು ಸೃಷ್ಟಿಸಿದ್ದನ್ನು ಕಂಡು ಕುಪಿತಳಾದ ಪಾರ್ವತಿ, "ನಿನ್ನ ಶಿರವು ಗಜಶಿರವಾಗಲಿ. ನಿನ್ನ ಉದರವು ಲಂಬೋದರವಾಗಲಿ" ಎಂದು ಶಪಿಸಿದಳು. ಹೀಗೆ ಜನ್ಮತಾಳಿದ ದೇವತೆಯೇ ಗಣೇಶ.

ಸುಪ್ರಭೇದಾಗಮದಲ್ಲಿ ನಿರೂಪಿತವಾದ ಗಣೇಶನ ಜನ್ಮವೃತ್ತಾಂತ ಕುತೂಹಲಕಾರಕವಾಗಿದೆ: ಆನೆಗಳ ಸುರತ ಕ್ರೀಡೆಯನ್ನು ಕಂಡು ಉತ್ತೇಜಿತರಾದ ಶಿವ–ಪಾರ್ವತಿಯರು ತಾವೂ ಗಜರೂಪಧಾರಣೆಮಾಡಿ ಲೈಂಗಿಕ ಸುಖವನ್ನನುಭವಿಸಲು ತನ್ಮೂಲಕ ಜನ್ಮ ಪಡೆದವನೇ ಗಣಪತಿ ಎಂದು ಇಲ್ಲಿ ವಿವರಿಸಲಾಗಿದೆ.

ಬ್ರಹ್ಮವೈವರ್ತಪುರಾಣದಲ್ಲಿ ಗಣೇಶನನ್ನು ಕೃಷ್ಣನ ಅವತಾರ ಎನ್ನಲಾಗಿದೆ. ಗಣೇಶನ ಹುಟ್ಟಿನ ಬಗ್ಗೆ ಇಲ್ಲಿ ವಿವರಿಸಲಾದ ಕತೆ ಈ ರೀತಿಯಿದೆ: ಮಕ್ಕಳಿಲ್ಲದ ಚಿಂತೆಯಿಂದ ಶಿವ ಪಾರ್ವತಿಯರು ಕೊರಗುತ್ತಿರಲೊಂದಿನ "ಶ್ರೀ ಕೃಷ್ಣನು ಶಿಶುವಿನರೂಪದಲ್ಲಿ ನಿಮ್ಮ ಅಂತಃಪುರದಲ್ಲಿ ಅವತರಿಸುತ್ತಾನೆ" ಎಂದು ಅಶರೀರವಾಣಿಯಾಗಲು ಆ ಪ್ರಕಾರ ಅಂತಃಪುರ ಪ್ರವೇಶಿಸಿ ನೋಡಲು ಅಲ್ಲೊಂದು ಶಿಶುವಿರುವುದು ಕಂಡುಬಂತು. ಆ ಶಿಶುವನ್ನು ತಮ್ಮದೆಂದಂಗೀಕರಿಸಿದ ಶಿವ ಪಾರ್ವತಿಯರು ಸಂತೋಷಾರ್ಥ ದೇವತೆಗಳಿಗೆಲ್ಲ ಔತಣವೀಯಲು ದೇವತೆಗಳೆಲ್ಲ ಆ ಮಗುವನ್ನು ಹರಸಿದರು. ಈ ಸಂದರ್ಭದಲ್ಲಿ ಶನಿಯ ದೃಷ್ಟಿ ತಾಗಿದ ಆ ಮಗುವಿನ ಶಿರ ರುಂಡದಿಂದ ಬೇರ್ಪಟ್ಟು ಮಾಯವಾಯಿತು. ಆಗ ಮಹಾವಿಷ್ಣುವು ಗರುಡವಾಹನನಾಗಿ ಪುಷ್ಪಭದ್ರಾನದೀ ತೀರಕ್ಕೆ ಹೋಗಿ ಅಲ್ಲಿ ಉತ್ತರ ಮುಖವಾಗಿ ನಿದ್ರಿಸುತ್ತಿದ್ದ ಗಜೇಂದ್ರನ ಶಿರವನ್ನು ಕಡಿದು ತಂದು ಶಿಶುವಿನ ಮುಂಡಕ್ಕೆ ಜೋಡಿಸಿ ಮಗುವಿಗೆ ಜೀವದಾನ ಮಾಡಿದ. ಈ ರೀತಿಯಾಗಿ ಗಜಮುಖವನ್ನು ಪಡೆದ ಶಿಶುವೇ ಶಿವಪಾರ್ವತಿಯರ ಸುತ ಗಣೇಶ. ಈ ಪುರಾಣದಂತೆ ಗಣೇಶನು ಕೃಷ್ಣನ ಅವತಾರ. ಕೃಷ್ಣಗಣೇಶ ಪಂಥದ ಅನುಯಾಯಿಗಳು ಬಾಲಗಣಪತಿಯ ಆರಾಧಕರು.

ವಿವಿಧ ಪುರಾಣಗಳಲ್ಲಿ ಗಣೇಶನ ಹುಟ್ಟಿನ ಕುರಿತು ಬೇರೆ ಬೇರೆ ತೆರದ ನಿರೂಪಣೆಗಳಿರುವುದು ಮೇಲೆ ವಿವರಿಸಲಾದ ಕತೆಗಳಿಂದ ಸ್ಪಷ್ಟ. ಕೆಲ ಪುರಾಣಗಳಲ್ಲಿ ಗಣೇಶನು ಪಾರ್ವತಿಯೊಬ್ಬಳ ಮಗನೆಂದೂ ಇನ್ನು ಕೆಲವಲ್ಲಿ ಶಿವ ಪಾರ್ವತಿಯರಿಬ್ಬರ ಮಗನೆಂದೂ ಮತ್ತೆ ಕೆಲವಲ್ಲಿ ಶಿವನೊಬ್ಬನ ಮಗನೆಂದೂ ವಿವರಿಸಲಾಗಿದ್ದರೆ, ಕೆಲವು ಪುರಾಣಗಳು ಗಣೇಶನ ಸ್ವತಂತ್ರ ಜನ್ಮದ ಕುರಿತು ವಿವರಣೆ ನೀಡುತ್ತವೆ.

ಗಣೇಶ ಚತುರ್ಥಿ ಹಿಂದೂ ಜನರ ಒಂದು ಪ್ರಮುಖ ಹಬ್ಬ. ಆ ದಿನ ಭಾರತದ ಎಲ್ಲ ಕಡೆ ವಿಜೃಂಭಣೆಯಿಂದ ಗಣೇಶಾರಾಧನೆ ನಡೆಯುತ್ತದೆ. ಗಣಪತಿಯು "ಚತುರ್ಥೀ ಪೂಜನಪ್ರೀತೋ ಚತುರ್ಥೀ ತಿಥಿ ಸಂಭವಃ" ಗಣೇಶ ಚತುರ್ಥಿಯಂದು ಗಣಪತಿಯನ್ನಾರಾಧಿಸಿದರೆ ಭಕ್ತರ ಇಷ್ಟಾರ್ಥ ಸಿದ್ಧಿಯಾಗುವುದೆಂಬ ನಂಬಿಕೆ. ✡

ಜನತೆಯ ದುಃಖದಲ್ಲಿ ಪಾಲುಗೊಳ್ಳಲಾಗದ ವ್ಯಕ್ತಿ ಜನತೆಯ ಆನಂದದ ಗಳಿಗೆಯಲ್ಲಿ ತಾನು ಬಹಿಷ್ಕೃತನೆಂದು ಅವನಿಗೇ ಅನಿಸುವುದು ತೀರ ಅನಿವಾರ್ಯವಾಗುತ್ತದೆ.

–ಲಿಯೋನಿದ್ ಲಿಯೋನೋವ್

ಕಾಲಪುರುಷನಿಗೆ

ಗುಂಡ್ಮಿ ಚಂದ್ರಶೇಖರ ಐತಾಳ

ಕಾಲಪುರುಷನೇ,
ನಿನಗೆ ನಗೆ
ನಮಗೋ ನಿನ್ನ ನೋಟವೆ ಧಗೆ!
ಬಟ್ಟೆಯ ಹಾಗೆ ಕುಟ್ಟಿ
ರೊಟ್ಟಿಯ ಹಾಗೆ ತಟ್ಟಿ
ಕುರಿಗಳ ಹಾಗೆ ಕಟ್ಟಿ
ನಮ್ಮನ್ನು ನೀನು ಸುಟ್ಟು
ಅಪ್ಪಚ್ಚಿ ಮಾಡಿ ಚಪ್ಪರಿಸುತ್ತೀ!
ಬಾಳಿನ ಬಾಂಡಲೆಯಲ್ಲಿ ಕುದಿಕುದಿವ ಎಣ್ಣೆಯನಿಟ್ಟು
ನಮ್ಮನ್ನು ಅದರಲ್ಲಿ ಒಬ್ಬೊಬ್ಬರನ್ನೇ ಇಳಿಬಿಟ್ಟು
ಬೋಂಡ ಮಾಡುತ್ತೀ!
ನಮ್ಮ ಬಾಳ ಹಣ್ಣನ್ನು ಸಿಪ್ಪೆ ಸುಲಿದು, ಬೀಜ ತೆಗೆದು
ಹೋಳು ಮಾಡಿ, ಗೋಳುಗೊಳಿಸಿ
ರಸ ಹಿಂಡಿ, ಶೇಕಮಾಡಿ
ಜೊಗಟೆಯನ್ನು 'ಥೂ' ಎಂದು ಉಗಿಯುತ್ತೀ!
ನಮ್ಮ ಜೀವನದ ಹೂವನು ಕೊಯ್ದು
ಪರಿಮಳವನಾಘ್ರಾಣಿಸಿ
ಬಣ್ಣ, ಚೆಲುವುಗಳ ಕಿವುಚಿಕಿವುಚಿ ಸುಲಿ,
ಕೊನೆಗೆ ಹೊಸೆದು ಹಾಕುತ್ತೀ!
ನಮ್ಮ ನಿತ್ಯ ಕಷ್ಟನಷ್ಟಗಳ ಲಟ್ಟಣಿಗೆಯಿಂದ
ತಿರಿ ಒತ್ತಿ ಚಪಾತಿ ಮಾಡಿ
ಹಂಚಂದು ತಿನ್ನುತ್ತೀ!
ನಮ್ಮನ್ನೆಲ್ಲ ಒತ್ತೆ ಮಾಡಿ, ಹೊತ್ತು-

ನಿನ್ನ ಮುಖಕ್ಕೆ ಮಂಗಳಾರತಿ ಎತ್ತಿಕೊಳ್ಳುತ್ತೀ!
ಹಾಸೊಂದು ಹೋಳು. ಬೇವೊಂದು ಹೋಳು
ಈ ಎರಡು ಹೋಳುಗಳ ಜೋಡುಕಟ್ಟಿಗೆ
ನಮ್ಮ ಬಾಳುವೆಯ ತುಂಬಿ
ನುಗ್ಗಿಗೆ ಬಿಟ್ಟು ಬೀಸುತ್ತೀ!
ನಮ್ಮ ಬಾಳನ್ನು ಸುತ್ತಿ ಜುಟ್ಟು ಮಾಡಿ ಸೇರುತ್ತೀ!
ಕಷ್ಟನಷ್ಟಗಳ ಬೇಗುದಿ ಬೆಂಕಿಗೆ ನಮ್ಮನ್ನು ಹಾಕಿ
ಚಳಿ ಕಾಯಿಸಿಕೊಳ್ಳುತ್ತೀ!
ಮಲಮಲನೆ ಬಿಕ್ಕಿ ಮೂಗಿಗೆ ನಶ್ಯ ಏರಿಸಿಕೊಳ್ಳುತ್ತೀ!
ನಮ್ಮೆಲ್ಲ ಕೊಳೆಸಿ ಕಾಯಿಸಿ ಭಟ್ಟಿ ಇಳಿಸಿ
ಬಾಟಲಿಗಳಲ್ಲಿಟ್ಟು ಬಿರಡೆ ಹಾಕಿ
ನಿನಗೆ ಬೇಕು ಕಂಡಾಗ ಆಕಂಠಪ್ರಮಾಣ ಕುಡಿಯುತ್ತೀ!
ಕುಡಿದು ಮತ್ತೇರಿದು ತೇಗುತ್ತೀ!
ಕಾಲಯುಕ್ತಿ. ಕಾಲನ ಯುಕ್ತಿಯೂ ಆಗಬಹುದು.
ಯಾರಿಗೆ ಗೊತ್ತು ಏನಾಗುವುದೆಂದು
ನಿನ್ನ ಮುಂದೆಯ ತುಂಬ ಹೇನಾಗುವುದೆಂದು!
ಮುಂದೆ ಕಾದಿದೆ ರೌದ್ರಿ. ದುರ್ಮತಿ. ದುಂದುಭಿ,
ರುಧಿರೋದ್ಗಾರಿ. ರಕ್ತಾಕ್ಷಿ. ಕ್ರೋಧನ. ಕ್ಷಯಗಳು!
ಎಲ್ಲ ಅನಿಷ್ಟಗಳು ಸಾಲುಸಾಲಾಗಿ ನಿಂತಿವೆ ಕಬಳಿಸಲು!
ನಮ್ಮೆಲ್ಲ ಶಾಂತಿ ಸುಖಗಳನ್ನು ನುಂಗಿ ನೊಣೆಯಲು;
ಕಸಗುಡಿಸಿ ಬಳಿಗೊಳಿಸಲು;
ಸೆಗಣಿನೀರನು ಹಾಕಿ ಸಾರಿಸಲು!
ಕಾಲಪುರುಷನಿಗೆ ಒಂದೊಂದು ಬಗೆಯೂಟ ಒಂದೊಂದು ವರ್ಷ.
ನೀನು ನಮ್ಮನ್ನೆಲ್ಲ ಕತ್ತರಿಸಿ ರಸಾಯನ ಮಾಡಿ
'ಸ್ವೀಟೆಂದು ಸುರಿಯುತ್ತೀ!
ಉಪ್ಪು ಮೆಣಸು ಖಾರ ಹಾಕಿ ಅರೆಯುತ್ತೀ!
ಎಲ್ಲ ಬಿಟ್ಟು ಹಾಕಿ ಸಾಂಬಾರು ಮಾಡಿ ಹಾಕಿ ಹೊಡೆಯುತ್ತೀ!
ನಿನಗೋ ಭರ್ಜರಿ ಸಮಾರಾಧನೆ
ನಮಗೋ ಎಲ್ಲಿಲ್ಲದ ವೇದನೆ!
ಕಾಲಯುಕ್ತಿ. ರೌದ್ರಿ. ದುರ್ಮತಿ. ದುಂದುಭಿ, ರುಧಿರೋದ್ಗಾರಿ
ರಕ್ತಾಕ್ಷಿ ಕ್ರೋಧನ ಕ್ಷಯಗಳು ಬಂದರೆ
ಪ್ರಭವವಿಭವಗಳಿಗೆ ಇನ್ನು ಹೆಚ್ಚು ದೂರವುಂಟೇ!

(ಮಂಗಳೂರು 'ಆಕಾಶವಾಣಿ' ಕೃಪೆಯಿಂದ)



ಸುಪರ್ ಡೆಕೋಪ್ಲಾಸ್ಟ್—
ಉತ್ತಮ ಇಮಲ್ಶನ್ ಫಿನಿಶ್
ಕೊಡುವ ಜಾಣ ಉಪಾಯ
asian paints
DECOPLAST
ಏಶಿಯನ್ ಪೇಂಟ್ಸ್
ಸುಪರ್
ಡೆಕೋಪ್ಲಾಸ್ಟ್

ಧ್ವಜವಂದನೆ

ಕೆ. ರಾಮಮೋಹನ್

ಫೈಲಿಂ ಮಾಡಿ ದಣಿದು ಕಾಫಿಗೆಂದು ಹೊರ ಬಿದ್ದರು ಮಾಸ್ತರು. "ಆಫೀಸಿನಲ್ಲಿ ನಿಮ್ಮನ್ನು ಕರೀತಾರೆ" ಎಂದಾಗ. ಯಾವುದೋ ಹಳೆಯ ಪ್ರಯಾಣ ಭತ್ಯ ಇಲ್ಲವೇ ಬಡ್ತಿಯ ಬಿಲ್ಲಿನ ಬಾಕಿ. ಅಥವಾ ಮೇಲಿನ ಆಫೀಸಿನಿಂದ ಒಳ್ಳೆಯ ಸುದ್ದಿ ಕಣ್ಣ ಮುಂದೆ ಮಿಂಚಿತು. "ಹಾ ಹಾ. ಏನು ಬಂದಿದೆ? ನಮಗೇನು ಕೊಡ್ತೀರಿ?" ಎಂದು ದೇಶಾವರಿ ನಗೆ ಬೀರಿ, ಹಲ್ಲು ಕಿರಿದಾಗ. "ಇಕೊ ಇಲ್ಲಿ. ರುಜು ಮಾಡಿ." ಎಂದು ಕಾಗದ ಮುಂದೆ ಹಿಡಿದರು. ಜೊತೆಯಲ್ಲೇ ಸಣ್ಣ ಕಟ್ಟು ಬಂತು. ಅದರ ಹಿಂದೆಯೇ. "ನಾಳಿದ್ದು ಶಿಕ್ಷಕ ದಿನಾಚರಣೆಯೆಂದು ಮಾರಿ. ಅದರ ಸಂಜೆ ಲೆಕ್ಕ ಕೊಡಿ." ಎಂಬ ಆದೇಶ.

ಕೈಗೆ ಬಂದ ಮೇಲೆ ಪ್ರಾರಂಭವಾದಕೆಲ್ಲ ಶಿಕ್ಷಕ ದಿನಾಚರಣೆಗಾಗಿ ಧ್ವಜಮಾರಾಟ. ಅಲ್ಲಿ.ಅಲ್ಲಿ. ಧ್ವಜವಂದನೆ! ಕಾಫಿ ಕುಡಿದ ಮೇಲೆ. ಎಂದೂ ಬಿಲ್ ಕೊಡದೆ ಸುಮ್ಮನೆ ಹಿಂದಿರುಗುವ ಮಾಸ್ತರು. ಇಂದು ತಾವೇ ಬಿಲ್‌ಗೆ ಕೈ ಹಾಕಿದರು. ಬಿಲ್ ನೋಡಿ. "ಛೆ ಛೆ" ಎಂದು ಮನಸ್ಸು ಲೊಚಗುಟ್ಟಿತು. ಬಾಕ್ ಹೋದಂತೆ ಕೈ ಹಿಂದೆ ಸರಿಯಿತು. ಅದರ ಧ್ವಜ ಒಳಗೆ ತಟಪಟನೆ ಹಾರಿತು. ಸ್ವಲ್ಪ ಚಿಲ್ಲರೆ ಜೊತೆ ಎರಡು ಧ್ವಜ ಮುಂದೆ ಹಿಡಿದರು ಮಾಸ್ತರು. ದೇಶಾವರಿ ನಗೆ ಜೊತೆಯಲ್ಲೇ ಬಂತು. "ಏಂಥಾದ್ರು ಈಗಿನ ಎಣ್ಣೆ. ಸಕ್ಕರೆ ಬೆಲೆ ನೋಡುವಾಗ ಈ ರೇಟಿನಲ್ಲಿ ಕಾಫಿ–ತಿಂಡಿ ಕೊಡಲಾಗುತ್ತಾ? ಮತ್ತೆ ಇದೊಂದು. ನಿಮ್ಮದು ಉಪದ್ರ" ಎಂದು ಮುಖ ಗಂಟು ಹಾಕಿದರು. ಭಟ್ಟರು. ಮಾಸ್ತರ ಜೊತೆಯವರೂ ಉಪಾಹಾರದಲ್ಲಿ ಮಾತಿನ ಬಲೆ ಬೀಸಿ ಭಟ್ಟರನ್ನು ಹಿಡಿಯುವಾಗ ಸಾಕಾಯಿತು.


ಮುಂದೆ ಯಾರಿಗೆ, ಹೇಗೆ ಈ ಧ್ವಜಗಳನ್ನು ಮಾರಲಿ ಎಂದು ತಿಳಿಯದೆ ವಿದ್ಯಾರ್ಥಿ ಮುಖಂಡ



ರನ್ನೆಲ್ಲಾ ಕರೆಸಿದರು. ಬೇರೆ ಎಲ್ಲಾ ಶಾಲೆಯವರು ಆದದ್ದಲ್ಲೂ ಹೆಣ್ಣುಮಕ್ಕಳು ಮಾರಲು ಹೊರಟಿರು ವಾಗ ತಮ್ಮಿಂದ ಹೊರಗಿನವರು ಕೊಳ್ಳುವುದಿಲ್ಲಾ ಎಂದು ಹುಡುಗರ ಶಂಕೆ. ಉಪಾಯದ ಉಪದೇಶ, "ಇವ್ರೇನಲ್ಲಪ್ಪಾ ನಾನು ಹಿಂದೆಯೇ, ನಿಮ್ಮ ಸಹಾಯಕ್ಕೆ" ಎನ್ನುವ ಧೈರ್ಯ ಹೇಳಿ ಹಾಗೂ ಹೀಗೂ ಮಾಸ್ತರು ಧ್ವಜ ಮಾರುವ ಭರವಸೆ ತೆಗೆದುಕೊಂಡರು.

ಸಂಬಳ ಆಗಿ ಕೇವಲ ಎರಡು ಮೂರು ದಿವಸಾಗಿದ್ದ ತಮ್ಮ ಕಾಲೇಜು ಆಫೀಸಿನಲ್ಲೇ ಗುಮಾಸ್ತರು. ಸಮುದಾಯ್ಯರವರು ಇವರುಗಳನ್ನೆಲ್ಲಾ ಹಿಡಿದರು ಒಂದು ಅನುಕೂಲ. "ಇವನ್ರು ಶಿಕ್ಷಕರ ದಿನ ಅನ್ನುವರು. ನಮ್ಮಿಂದಲೇ ಹಣ ಕಿತ್ತುಕೊಳ್ಳುವರು," ರಾಮನಾರಾಯಣರ ಕೋಪ. "ವಾಪಸ್ ಕೊಡ್ರಿ ನಮಗ್ಯಾಕ್ರಿ" ಭೀಮರಾಯರ ದರ್ಪ. "ಶಿಕ್ಷಕರ ಕ್ಷೇಮನಿಧಿ ಅಂತ ಒಂದು ರೂಪಾಯಿ ಸಂಬಳದಲ್ಲಿ ಹಿಡಿದರು. ಈಗ ಧ್ವಜಾಂತ ಇನ್ನೊಂದು ರೂಪಾಯಿ ಸಾಕಪ್ಪಾ ಈ ಕಾಟ" ವೆಂಕಟಪ್ಪನ ಗೊಣಗಾಟ. "ಇಲ್ಲಿ ತಗೊಳ್ಳಿ. ಅವರೇನು ಸ್ವಂತಕ್ಕೆ ಕೇಳ್ತಾ ರೇನು" ಶಿವಯ್ಯನ ಸಮಾಧಾನ. "ನೀವೇ ಕೊಟ್ಟಿರಿ. ಮುಂದಿನ ತಿಂಗಳು ಕೊಡ್ತೀನಿ ಅಂತ ರಂಗಣ್ಣ ಬಸಪ್ಪನ ಔದಾರ್ಯ; ಒಪ್ಪಿಕೊಳ್ಳದಿದ್ದರೆ ವಿಧಿಯಿಲ್ಲ. ಬರುತ್ತೇಂತ ನಂಬಿಕೆ ಇಲ್ಲ. ಹೇಗೋ ಸಾಕಷ್ಟು ಮಾತು ನಗೆ ಖರ್ಚು ಮಾಡಿ ಬಹು ಪಾಲು ಎಲ್ಲರಿಗೂ ತಲುಪಿದ್ದಾಯಿತು.

ಅಷ್ಟಕ್ಕೆ ಮುಗಿಯಿತೇ—ಉಳಿದಿರುವ ಗುಡ್ಡವನ್ನು ಕರಗಿಸಬೇಕಲ್ಲ! ಈ ಗುಡ್ಡದ ಭಾರವೋ ಏನೋ, ಗೂಳಿಯಂತೆ ನುಗ್ಗಿ ಓಡುವ ಮಾಸ್ತರು, ಈಗ ಬೆಕ್ಕಿನಂತೆ ನಿಧಾನವಾಗಿ ನಡೆಯುತ್ತಾರೆ. ಕಣ್ಣು, ರಸ್ತೆಯ ಅಕ್ಕಪಕ್ಕ, ಎದುರು, ಅಂಗಡಿಗಳು ಎಲ್ಲವನ್ನೂ ಅರಸುತ್ತವೆ, ಪರಿಚಯದವರಿಗಾಗಿ; ಕೈ ಜೇಬನ್ನು ತಡಕುತ್ತಲೇ ಇರುತ್ತದೆ, ಯಾರಿಗೆ ಕೊಡಲಿ ಅನ್ನುವಂತೆ. ದೂರದಲ್ಲಿ ಕಾರಿನ ಹಾರ್ನ್ ಶಬ್ದ. ಬೇಟೆವಾಸನೆ ಹಿಡಿದ ಹುಲಿಯಂತೆ ಮೂಗ ರಳಿಸಿ ಕಣ್ಣು ನೆಟ್ಟು ನೋಡಿದರು. ಸಂದೇಹವೇ ಇಲ್ಲ, ಸಾಹುಕಾರ ಶಿಬ್ಬೇಗೌಡರ ಕಾರು. ದೇವರೇ ಸದ್ಯ, ಅವರ ಮಗನೊಬ್ಬನೆ ಇರಲಿ ಎಂದು ಪ್ರಾರ್ಥಿಸಿ ದುಡುದುಡನೆ ಹೆಜ್ಜೆ ಹಾಕಿದರು. ಜೊತೆಯಲ್ಲೇ



ಯಾರೋ ಮಾತಾಡುತ್ತಿದ್ದಾರೆ. ಪಕ್ಕದ ಅಂಗಡಿಗೆ ನುಗ್ಗಿ, ಏನೋ ವ್ಯಾಪಾರ ಮಾಡುವ ಹಾಗೆ ನಟಿಸಿದ್ದರೂ, ಕಣ್ಣೆಲ್ಲಾ ಕಾರಿನ ಮೇಲೆ. ಅವರ "ಬೈಬೈ" ಕೇಳುವಾಗ ಹೊರಗೋಡಿದರು. "ನಮಸ್ಕಾರ ಸ್ವಾಮಿ, ಏನು ಅಪರೂಪವಾದಿರಲ್ಲಾ ಊರಿಗೆ?" ಎನ್ನುತ್ತಾ ಮಾತು ಪ್ರಾರಂಭಿಸಿದರು. ಅದೂ ಇದೂ ಸುರಿದು, ಕೊನೆಗೂ ಕೇಳಿಯೇಬಿಟ್ಟರು, "ಒಂದೈದು ರೂಪಾಯಿ ಬೇಕಲ್ಲಾ." "ಏನು ನೀವೂ ಸಾಲ ಕೇಳ್ತೀರೇನ್ರಿ?" "ಛೆಛೆ, ಇಲ್ಲ ಸ್ವಾಮಿ, ಐದು ರೂಪಾಯಿ ಡೊನೇಶನ್ ಛಾರಿಟಿ, ಅಷ್ಟೆ—ಇದೇ ಶಿಕ್ಷಕರ ದಿನದ ಧ್ವಜ." "ಏ ಇಂಥದ್ದೆಲ್ಲಾ ಯಾರ್‌ಲೇ ಇಟ್ರಿ. ಮುಂದ್ರಿ ನಿಮ್ಮೆಲ್ಲರ ತರ್ತಾರೆ-ಏನೋ ಕೊಡ್ತೀರಿ. ಇರಲಿ ಒಂದು ಸಾಕು" ಎಂದ, ಸಾಹ್ಕಾರ ಹಣ ಎತ್ತಿಕೊಟ್ಟು. ಅಷ್ಟೆ ನಗೆ ನಕ್ಕು. "ಒಂದು ರೂಪಾಯಿ" ಎಂದು ಅರ್ಥವಾಗ್ಲು ಮುಖ ಸಪ್ಪಗೆ ಮಾಡಿ, ಹಿಂದಿನ ಜನ್ಮದ್ವೇಷದ ಮಾಸ್ತರು. "ಏ, ಇದಕ್ಕೆ ಒಂದು ರೂಪಾಯಿ ಯೋ! ಸರಿ, ಸರಿ. ನಾನೇನೋ ಹತ್ತು ಕಾಣಿದ್ದೆ. ಇದ್ಯಾಕ್ರಿ, ಇನ್ನೊಂದು, ಅಲ್ಲದೆ ಏನ್ ಮಾಡ್ತೀರಿ"-ನ್ನುತ್ತಾ ಆದನ್ನೂ ಹಿಂದೆ ಕೊಟ್ಟವರೇ ಭರ್ ಅಂತ ಕಾರ್ ಸ್ಟಾರ್ಟ್ ಮಾಡಿದ್ದೆ!

ಅವರಂತೆ ತಾನು ಆದಷ್ಟೆ ಸೆದು ಬೀಸುಗಾಳಿನಲ್ಲಿ ಹಾರಾಡಬೇಕು ಅನಿಸುತ್ತೆ. ಆದರೆ ಹೇಗೆ ಅಷ್ಟು ಹಣ ಒಬ್ಬ ಬಡ ಮಾಸ್ತರು ಕೊಡಲು ಆಗುತ್ತದೆಯೋ ಅಥವಾ ಬರೆಯುವ ತಾಕತ್ತು ಇದೆಯೋ? ಆ ಮನಸ್ಸು ಸಾವಧಾನ ಮಾಡಿತು. ಹೋಯಿದ್ದು ಬಂತು. ಪಶ್ಚಾತಾಪದ ನಗೆ. ಆದರೂ ಒಳ ಹೊಕ್ಕರು ಸ್ನೇಹಿತನ ಅಂಗಡಿಗೆ. ಅವನ ಸ್ಪೆಷಲ್ ಖಾದಿ ಕಾರ್ಯಾಗ(ಇಲ್ಲದ) ಹೈಕ್ಲಾಸ್ ಸಿಂಬಾಲ್ತು. ... ಮಾತಿಗೆ ಕೇಳಿದ. ಮತ್ತು ಬಗೆ ತೆಗೆದುಕೊಂಡರು. ಕೊನೆಗೆ ಗೊಣಗಿದರು. ಕೈಲಿ ಹಾಕಿ ಧ್ವಜ ಹಿಡಿದ. "ಏನೆಂ ಥರಾ ಅಕ್ಷರ ದಿನಾಚರಣೆ ಬಂದರೆ ಅವರ ಹುಟ್ಟಿದ ಮಕ್ಕಳು ಆಸೆಗಳು?" ಅವನು ಅಷ್ಟು ನಕ್ಕು ಮಾಸ್ತರು ಗೊಳ್ಳು ಬಂದು ಹಲ್ಲು ಗಿಂಜಿದರು. ಕೊನೆಗೆ "ಇದು ಯಾರದಾದರೂ ಬಾದದರೂ ಆದೀತು: ನಾಲ್ಕು ಗಿಲ್ಕು ಅಗಲ್ಲ ಎರಡು ಕೊಡು ಸಾಕು. ದಿನಾ ಕಾಸಿಲ್ಲ. ಒಪ್ಪ ಮತ್ತೆ ಅಯ್ಯೋ. ಬಿಟ್ಟರೂ ನಾಳೆ ನಾಡಿದ್ದು" ಅಂದ. ಅಲ್ಲಿಗೆ ಸುರು ಹಾದುಂತ್ತ ಸ್ನೇಹಿತನ ಅಂಗಡಿ ತಿರುಗಾಟ. "ಹೇಗೆ ಇದ್ದ ಕೊಡಲೇ ಬಂದೆ" "ಇವತ್ತು ಶುಕ್ರವಾರ", "ಸಂಜೆ. ಬಿಡುವಿಲ್ಲ" ಅಂತ ಕೇಳಿ ಸಾಕಾದರೂ, ಎರಡು ರೂಪಾಯಿ ಕೇಳಿಕೊಳ್ಳಲಾರದೇ ತಿರುಗಿದರು. ಬೇಸರವಾದಾಗ ಹೇಳಿಯಾಯಿತ್ತು ರು: "ಅಪ್ಪ. ನಿನ್ನ ಹತ್ತಿರ ದುಡ್ಡು ತಗೋಬೇಕಾದ್ರೆ ನಾಲ್ಕು ಜನ್ಮದ ಪುಣ್ಯ ಬೇಕಾ ಮಾಡಬೇಕು. ಸಿನಪ್ಪನಾಯ್ಕನ ಹಾಗೆ ಆಗ ಬಾ. ಈಗ ಬಾ, ಹೋಗಿ ಬಾ ಅನ್ನಬೇಡ. ಹರಿದಾತ್ರ ಕೊಟ್ಟ ಕಾಲಕ್ಕೆ ಬಸೊ ಬಾಯಿಹಾಕಿಟ್ಟ ಅಂತ ಕೈ ಎತ್ತಿ ಕೊಡಬಾರದೇ ನಾಯ್ಕ? ನಾಚಿಕ್ಕೇನೋ ಪುರಂದರದಾಸರಾ ದರ ಆದರೆ ತಿರುಗಿ ತಿರುಗಿ ಬಾ ಬೀದಿ ನಾನ ಅಲ್ಲಿಬಿ. ಅಷ್ಟೆ!" ಈ ಮಾತಿಗೆ ಬಗ್ಗುವವನೇ ಅವನು. "ಸರಿ ಸರಿ. ನೀನೂ ಪುರಂದರದಾಸರೇ ಆಗಯ್ಯ. ಯಾರು ಬೇಡಾಂತಾರೆ? ಅಯ್ಯಾ. ಈ ಉಪದೇಶವೆಲ್ಲಾ ನಿನ್ನ ಹುಡುಗರಿಗೇ ಇರಲಿಬಿಡು." ಅವನ ಈ ಗುಟುರಿಗೆ ಮಾಸ್ತರ ಮುಖ ಚಿಕ್ಕದಾಯಿತು.. ಹೋಯಿತು ಸೊಟ್ಟಗೆ ಬಾಯಿ. ಅಕ್ಷರ ಧ್ವಜಕ್ಕೆ ಸಲ್ಲಬೇಕಾದ ಗೌರವದ ವಂದನೆಯು ಬದಲು ಅಲ್ಲಿಂದ ಧ್ವಜದೊಡನೆ ಬದಿಗೆ ಬದಲಾಗಿ ಹೊಸದಾದ ಪಾತ್ರಗಳು!!

ರಂಗ ಪರ್ಸ್ ತೆಗೆದ. ಧಿಮ್ಮಕನಿಗೆ ಹತ್ತು ಪೈಸೆ ಹಾಕಿದಾಗ. "ಬನಪ್ಪ. ನಂಗೂ ಧ್ವಜ ಕೊಡ್ತೀಯೇನು?" ಅಂತ ಧಿಮಾಕಿನಿಂದ ಎರಡು ಧ್ವಜ ಹಿಡಿದೇ ಬಿಟ್ಟ. "ಛೆ ಛೆ. ಪಾಗಲ್ಲ ದಾವಿ, ಒಳ್ಳೇ ಕೆಲಸಕ್ಕೆ ಕೊಡ್ತಿದ್ದೀರಾ ಸಾಹೇಬ. ಇದರಲ್ಲಿ ನಿಮ್ಮ ಹೆಸರು ಕೇಳಿದಾಗ..." ಅವನು ಒಂದು ಕೆಂಪು ಗುಲಾಬಿ ಹಿಡಿದ. ಅವನಿನ ಕಣ್ಣಲ್ಲಿ ಹದಿನು ಆ ಹೊಗಳಿಕೆಯಿಂದ ಹೊಳೆಯಿತು. ಕಣ್ಣು ಮುಚ್ಚಿದ ಕಾಲದ ಬೇಗ ಬಂದು ತಿರುಗಿತು. ಎರಡು ಮಾತು ಆಡಿದನು. 'ಎಲಾ,



ರಂಗನ್ನ ಕೇಳಿದ್ದರೆ ಎರಡರ ಬದಲಿಗೆ ಐದೇ ಕೊಡ್ತಿದ್ದನೇನೋ. ಮುಂಥಾ ಕೆಲಸ ಆಯಿತು– ಮನುಷ್ಯನ ಸ್ವಭಾವನೋ ಮಾತಿನಲ್ಲಿ ಒಂದು ಕಳ್ಳ ದಾರಿ ಕಂಡಿತು.

ಈ ಅಭಿಮಾನದ ಛಲದಲ್ಲಿ ಯಾರನ್ನೂ ಬಗ್ಗಿಸಿ ಗೆಲ್ಲುವ ಆತ್ಮವಿಶ್ವಾಸ. ನೇರವಾಗಿ ದಿನಸಿ ಅಂಗಡಿ ಪ್ರಭುವಿನ ಕಟ್ಟೆ ಹತ್ತಿದರು. ಅವನಿಗೆ ಬೇಕಾದ ಬಿಸಿಸಳೆ ಮಾತು ಬಿಟ್ಟು, ಅವನು ಹಿಗ್ಗಿರುವಾಗ

ಮೆಲ್ಲಗೆ ಫ್ಲಾಗ ತೆಗೆದರು. ಅವನೋ ಒರಟ. "ಛೆ. ಇದೆಲ್ಲಾ ಯಾಕೆ ನಮ್ಗೆ. ಮಾರಾಯ್ರೆ, ಇಕೋ ನಿಮ್ದುಕ್ಕೇ ಇಲ್ಲಿ." ಎಂದು ನಿರ್ದಾಕ್ಷಿಣ್ಯವಾಗಿ ಹಿಂದೆ ಕೊಟ್ಟೇಬಿಟ್ಟ. "ಅಲ್ಲಯ್ಯಾ ಎರಡು ರೂಪಾಯಿಗೆ ಲೆಕ್ಕ ಹಾಕಿದೆಯಲ್ಲಾ, ಎಲಿಸಳ ಪೌಡರ್ ಡಬ್ಬಿಯ ಖರ್ಚಾಗಲಿಲ್ಲ," ಎಂದು ಬಾಯಿ ಬಿಟ್ಟರು, ಮಾಸ್ತರು,"ಮತ್ತೆ ಇದು ನೋಡಿ ಎಲಿಸಳ ಮುಖ ನೋಡಿದರೆ ಒಂದು ಖುಶಿ ಬರ್ತದೆ. ಎರಡಲ್ಲ ಹತ್ತು ರೂಪಾಯಿ ಹೋದರೂ ಹೋಗಲಿ. ಇದು ಎಂಥದು ಫ್ಲಾಗು, ಸುಮ್ಮನೆ ಉಪದ್ರ. ಅದರಲ್ಲಿ ನೋಡುವ ಚಿತ್ರವಾದರೂ ಇದೆಯಾ ಹೇಳಿ," ಇವನ ಪೊಂಡುತನಕ್ಕೆ ಮಾಸ್ತರ ವಾದ ಮುರಿದು ಬಿತ್ತು. ಇಷ್ಟೇ ಸಾಲದೆಂಬಂತೆ, "ಓಯ್ ಮಾಸ್ತರೇ, ಇದು ಎಂತಹದು ನಿಮ್ಮದು. ಎಲ್ಲ ಫ್ಲಾಗು ಹತ್ತು ಪೈಸೆ ಇರುವಾಗ ನಿಮ್ಮದು ಒಂದು ರೂಪಾಯೋ? ಹಾಗಂತ ಎಲ್ಲಿ ಬರೆದು ಉಂಟು? ಇದು ಸುಮ್ಮನೆ ನಿಮ್ಮದೇ ಮಾರಾಯ್ರೆ, ಹೇಗೂ ಪರ್ಬು ಅಲ್ಲವಾ, ಟೊಪ್ಪಿ ಹಾಕುಬಹುದು ಎಂತ ನಿಮ್ಮ ಅಂದಾಜು," ಅಂತ ಹೊಡೆದ. ಮಾಸ್ತರು ಕುಸಿದುಬಿದ್ದರು, ಬೆವರು ಚಿಮ್ಮಿ ಹರಿಯಿತು; ಕೆನ್ನೆಗೆ ಫಳೀರನೆ ಬಾರಿಸಿದ ಅನುಭವ!

ಆಡಿಟರ್ ಶೀನಯ್ಯ ಎಂದೋ ಜೊತೆಯಲ್ಲಿ ಓದಿದವನು. "ಏನಪ್ಪಾ, ಶೀನಯ್ಯಯ್ಯ" ಎಂದು ಮೆಟ್ಟಿಲು ಹತ್ತಿದರು. "ಬಾರೋ ಕಾಫಿ ತರಿಸ್ತೀನಿ," ಎಂದ. "ಸದ್ಯ ಬೇಡಪ್ಪಾ, ಆ ದುಡ್ಡು ಇತ್ಲಾಗೇ ಕೊಡು" ಎಂದು ಹಲ್ಲು ಕಿರಿದು, ಫ್ಲಾಗ್ ತೆಗೆದರು, ಶಿಕ್ಷಕರ ನಿಧಿಗೆ ಎಂದು ವಿವರಿಸಿದರು. "ಚೆನ್ನಾಗಿದೆ ಕಣಯ್ಯಾ. ಈಗ ಸುಖೀ ಜನ ಅಂದರೆ ಮೇಷ್ಟ್ರು. ಏನಯ್ಯಾ, ಅವರಿಗೆ ಕಡಿಮೆಯಾಗಿರೋದು? ವೇತನ ಆಯೋಗದಲ್ಲಿ ಕೊಟ್ಟಿರೋ ಸಂಬಳ ನೋಡಿದರೆ ಸಾಕು—ಯಾರಿಗುಂಟು, ಯಾರಿಗಿಲ್ಲ ಈ ಕತ್ತೆ ಚಾಕರಿಗಿಂತ, ನಿಮ್ದೇ ಸುಖ. ಎರಡಕ್ಷರ ಹೇಳಿದ್ರೆ ಹೇಳ್ದ, ಇಲ್ಲದಿದ್ದರೆ ಬಿಟ್ಟ. ಮೂರು ಮೂರು ದಿನಕ್ಕೆ ರಜ. ಸಂಬಳ ಎಣಿಸಿ ರಜದಲ್ಲಿ ತಿಂದು ತೇಗ್ತೀರಿ. ಹೆಚ್ಚಿಗೆ ಬೇಕಾದರೆ ಟ್ಯೂಷನ್ ಇದ್ದೇ ಇದೆ!" ಮಾಸ್ತರ ಹೃದಯ ಹಿಂಡಿತು. ಮೇಲೆ ದೇಶಾವರಿ ನಗುವಿನ ಮುಸುಕು ಹಾಕಿ,



ಪಟ್ಟು ಹಿಡಿದು, ಎರಡು ಫ್ಲಾಗ್ ಕೊಟ್ಟೇಬಿಟ್ಟರು, ಒಂದೇ ರೂಪಾಯಿ ಅನ್ನುತ್ತಾ, "ಹೋಗಯ್ಯಾ ರೂಪಾಯಂತೆ, ನನ್ಹತ್ರ ಇನ್ನೂ ಹುಡುಗಾಟ ಬಿಟ್ಟಿಲ್ಲ. ಈಗ ನಮ್ಮನೆ ಹುಡುಗ ಕೂಡ ತಂದಿದ್ದಾನೆ, ಹತ್ತು ಪೈಸೆಗೇ, ಇವನಿಗೊಂದು ರೂಪಾಯಂತೆ!" ಅಂತ ನಕ್ಕು ಶೀನಯ್ಯ ಮಾತು ತಳ್ಳೇಬಿಟ್ಟ. ಮಾಸ್ತರಿಗೆ ತಮ್ಮನ್ನೇ ತಳ್ಳಿದಂತಾಗಿ ತತ್ತರಿಸಿದರು.

"ನಮಸ್ಕಾರ. ಆಡಿಟರ್ ಸಾಹೇಬ್ರಿಗೆ" ಕೋಕಿಲಧ್ವನಿ ಕೇಳಿ ತಿರುಗುವಷ್ಟರಲ್ಲೇ ಸಮಾಜದ ಕಾರ್ಯದರ್ಶಿ ಮಾಲಾ ಪ್ರ. ಅವರ ಮೇಕಪ್, ವಿವಿಧ ಪರಿಮಳ. ತೊಡಿಗೆಯ ನವಿರು. ವ್ಯ ಬೀಸಣಿ. ಹೋಟಕ ನಗೆಯಲ್ಲಿ ಮಾಸ್ತರರು ಚಿಂತೆ ಮರೆತರು. ಸಿನಿಮಾದಲ್ಲಿ ಕುಳಿತಂತೆ ಕಣ್ಣರಳಿಸಿ ಬಾಯಿ ಬಿಟ್ಟು ನೋಡುತ್ತಲೇ ಇದ್ದರು ನಾಚಿಕೆಯನ್ನೂ ಮರೆತು. "ಶನಿವಾರ ಕುಮಾರಿ ಮಯೂರ ಅವರ ಪ್ರೋಗ್ರಾಂ ಇದೆ. ಖಂಡಿತಾ ಬನ್ನಿ, ಹಾ!" ಎಂದು ಎರಡು ಟಿಕೆಟ್ ಹರಿದು ದುಡ್ಡಿಗೆ ಕೈಯೊಡ್ಡಿದಾಗ ಶೀನಯ್ಯ ಒತ್ತಾಯ ಮಾಡಿ ಕೂರಿಸಿದ. ತಾನು ಬಾಯಿ ಹಿಗ್ಗಿಸಿ ಕಿವಿ ನೆಟ್ಟಗೆ ಮಾಡಿ ಕೂತಿದಾನೆ, ಏನೊ ಮಾತು ಪೋಣಿಸುತ್ತಾ ಇದ್ದಾನೆ. ಹೇಗಾದರೂ ಅವರನ್ನು ಹೆಚ್ಚು ಹೊತ್ತು ಕೂರಿಸುವ ಚಪಲ. ಅವನಿಗೆ ನಾಟ್ಯದ ಗಂಧ, ಲಲಿತ ಕಲೆಯ ಆಸಕ್ತಿ ಎಷ್ಟಿದೆ ಅಂತ ಮಾಸ್ತರರಿಗೆ ಗೊತ್ತಿಲ್ಲವೇ? ಎಲ್ಲಾ ಬಿಳೀ ಕಾಗದದ ಮೇಲಿನ

ಕರೀ ಅಂಕಿ ಅಷ್ಟೆ. ಮಾಸ್ತರು ನೋಡುತ್ತಿದ್ದಂತೆಯೇ ಎರಡು ದೊಡ್ಡ ಹಸಿರು ನೋಟು ಹೊರಬಂತು. "ಥಂಬಾ ಥ್ಯಾಂಕ್ಸ್‌ರೀ, ನೀವು ಬಲು ಧಾರಾಳಿಗಳೂಂತ ನಮ್ಗೊತ್ತು," ಎಂದು ಕಿಲಕಿಲ ನಕ್ಕು ಚಿಮ್ಮಿ ನಡೆದರು. ಶೀನಯ್ಯನ ಧಾರಾಳತನ ನೋಡಿ ತಾವೇ ಕುಗ್ಗಿದಂತಾಗಿ, ಮೂಗಿನ ಮೇಲೆ ಬೆರಳಿಟ್ಟು, ಮನಸ್ಸು ಮಾತು ಮೂಕವಾಗಿ, ಹೆಜ್ಜೆ ಎಳೆದ ಕೊಂಡು ಹೋದರು ಮಾಸ್ತರು.

ತಿರುಗಿ ತಿರುಗಿ, ಸಾಕಾಗಿ, ತಲೆನೋವು ಬಂದಾಗ ಡಾಕ್ಟರು ಮಾತ್ರೆ ಬರೆದುಕೊಟ್ಟರು. ಈ ನೋವಿನಲ್ಲೂ ಒಂದು ಆಸೆ ಚಿಗುರಿತು. ಎಲ್ಲಾ ಕಡೆ ತಡಕಿ, ಹತ್ತು ರೂಪಾಯಿ ಸೇರಿಸಿ ಎರಡು ಫ್ಲಾಗ್‌ನೊಡನೆ ಔಷಧಿ ಅಂಗಡಿ ಆನಂದರ ಕೈಲಿಟ್ಟು ಮಾತ್ರೆ ಕೇಳಿದರು. "ಮಾಸ್ತರೇ ನಿಮ್ಮ ಬಾಕಿ ೧೨ ರೂಪಾಯಿ. ಹತ್ತು ಕೊಟ್ರಲ್ಲಾ?" ಅಂದ. "ನೋಡಪ್ಪಾ ಎರಡು ಫ್ಲಾಗ್ ಇದೆಯಲ್ಲಾ." ಎಂದು ಮಾಸ್ತರು ನಕ್ಕರು. "ಫ್ಲಾಗ್ ಮಾರಿದ ದುಡ್ಡು ಜೇಬಿನಲ್ಲಿದೆ ಅಂತ ಹಿಂದಿನ ಬಾಕಿ ಹತ್ತು ರೂಪಾಯಿ ಈಗಲೇ ಕೊಡ್ತಿದೀರಿ. ಇಲ್ಲದಿದ್ದರೆ ನಿಮ್ಮಿಂದೆಲ್ಲಿ ಇಷ್ಟು ಬೇಗ ಬಾಕಿ ವಾಪಸ್ಸು ಬರಬೇಕು! ಆದರೆ ಈಗಿನ ಮಾತ್ರೆಯ ಎರಡು ರೂಪಾಯಿಗೆ ಈ ಫ್ಲಾಗ್ ಯಾರಿಗೆ ಬೇಕ್ರೀ, ಆಗೂದಿಲ್ಲ, " ಅಂತ ರೊಯ್ಯನೆ ಎಸೆದ ಎರಡು ಫ್ಲಾಗನ್ನೂ, ಮಾಸ್ತರಿಗೆ ತಮ್ಮನ್ನೇ ಎಸೆದ ಅನುಭವ, ಮುಖ ಕೆಂಪಾಯಿತು. ಅವರ ಒಳಗಿನ ದನಿ ಮೊರೆಯತೊಡಗಿತು 'ಉಪಾಧ್ಯಾಯಶ್ಚ ಕಾರ್ಯಾಂತೇ ~ಅಪ್ರಯೋಜಕಃ!"

ಅಂತೂ, ಇಂತೂ ಹತ್ತು ಹಲವು ಕಡೆ ತಿರುಗಿ ತಲೆ ಕೆರೆದು, ಮುಖ ಕೆಂಪಗೆ, ಸೊಟ್ಟಗೆ, ಸಣ್ಣಗೆ ಮಾಡಿಕೊಂಡು ಧ್ವಜಗಳನ್ನೆಲ್ಲಾ ಮಾರುವ ಹೊತ್ತಿಗೆ ಸಾಕಾಯಿತು. ಅದಕ್ಕೂ ಹೆಚ್ಚಿನ ಪ್ರಯಾಸ ಬಾಕಿ ವಸೂಲಿ ಮಾಡುವಾಗ, ಎಷ್ಟು ಎಣಿಕೆ ಮಾಡಿದರೂ ೫೦–೬೦ ರೂಪಾಯಿ ಕಡಿಮೆ. ಅದೆಲ್ಲಾ ಬರುವುದು ಒಂದನೇ ತಾರೀಖಿಗೇ. ಕನಿಷ್ಠ ೧೫ ರೂಪಾಯಿ ಬರುವುದಂತೂ ಅನುಮಾನವೇ. ಸಾಲದ್ದಕ್ಕೆ ಈ ಓಡಾಟದಲ್ಲಿ ತಮ್ಮ ಪರ್ಸು ಒಂದಿಪ್ಪತ್ತು ಹೆಚ್ಚಾಗಿರಬೇಕು, ಎಂಥದೋ ಒಂದು ಸದ್ಯ ಮುಗಿಯಿತಲ್ಲ ಎನಿಸಿತು. ಹೆಂಡತಿಯನ್ನು ಒಲಿಸಿ, ಬಾಕಿ ತುಂಬಲು ಹಣ ಒಟ್ಟು ಮಾಡುವಾಗ ಯಜ್ಞಮಾಡಿದ ಶ್ರಾಯಿತು.

ದೊಡ್ಡ ಬೋರ ಅನಿಸಿಕೊಳ್ಳದಿದ್ದರೂ ದಣಿವಾದಷ್ಟೇ ಶ್ರಮ, ದೇಹ ಕಿರಿದಾದ ಅನುಭವ. ಹಳೇ ಶಿಷ್ಯ ಹೇಳಿದ್ದು ನೆನಪಿಗೆ ಬರುತ್ತದೆ– "ಸಾರ್, ನಾವು ಹುಡುಗರಾಗಿದ್ದಾಗ ಮಾಸ್ತರು ಎಷ್ಟು ಉದ್ದ, ದೊಡ್ಡವರು ಅಂತಿದ್ದೆವು. ಈಗ ನೋಡಿ ಸಾರ್, ನಾನೂ ನಿಮ್ಮಷ್ಟೇ ಇರಬಹುದು, ಅಥವಾ ಸ್ವಲ್ಪ ಹೆಚ್ಚೋ." "ಹೌದಪ್ಪಾ, ನಾವು ಬೆಳೆಯುವುದು ನಿಂತುಹೋಯಿತು, ಈಗ ನೀವು ಬೆಳೆಯುವ ಕಾಲವಷ್ಟೆ," ಎಂದು ಮಾಸ್ತರು ನಕ್ಕಿದ್ದರು. ಹೌದಲ್ಲವೇ, ಮಾಸ್ತರಿಕೆ ಪ್ರಾರಂಭವಾದೊಡನೆ ಎಲ್ಲ ಮಾಸ್ತರ ಮಾನಸಿಕ ಹಾಗೂ ಜ್ಞಾನದ ಬೆಳವಣಿಗೆಯೂ ನಿಂತಂತೆಯೇ ಸರಿ. ಈ ಕುಬ್ಜಾವತಾರ ಇಂದು–ಶಿಕ್ಷಕರ ದಿನಾಚರಣೆಯಂದು–ಮತ್ತಷ್ಟು ಸ್ಪಷ್ಟವಾಗಿದೆ.

ಕರಾರುವಾಕ್ಕಾಗಿ ಲೆಕ್ಕ ಒಪ್ಪಿಸಲು ತಯಾರಾಗಿ ಗೆದ್ದಿದ್ದೇನೆ. ಮುಖ್ಯೋಪಾಧ್ಯಾಯರೂ ನಮ್ಮ ಹಾಗೇ ಮಾಸ್ತರರಾಗಿ ಬಡ್ತಿ ಗಳಿಸಿದವರಷ್ಟೆ. ಅವರಿಗೆ ಈ ಪ್ರಯಾಸದ ಅರಿವಿರುತ್ತೆ. ಇಂಥದೇ ಒಂದೆರಡು ದೊಡ್ಡ ಕೆಲಸ ಮಾಡಿದರೆ ಎಂದಾದರೂ, ರಾಜ್ಯ ಮಟ್ಟದ ಲ್ಲಾದರೂ ಶಿಕ್ಷಕ ಸನ್ಮಾನಕ್ಕೆ ಶಿಫಾರ್ಸು ಬರೀತಾರೆ ಅನ್ನುವ ಹೊಂಗನಸು ಮಾಸ್ತರ ಮುಖವನ್ನು ಬೆಳಗಿತ್ತು. ಮುಖ್ಯೋಪಾಧ್ಯಾಯರೆದುರು ನಿಂತು, ಎಲ್ಲಾ ಧ್ವಜಗಳನ್ನೂ ಮಾರಿದ್ದೇನೆ, ಅಂತೂ ಬಹಳ ದೊಡ್ಡ ಸಾಹಸವಾಯಿತು" ಅಂದಾಗ, "ಸರಿ ಸರಿ, ಯಾವ ಕೆಲಸ ಹೇಳಿದರೂ ನಿಮಗೆ ಸಾಹಸವೇ! ಕಾಲಕ್ಕೆ ಸರಿಯಾಗಿ ಎಂದು ಮುಗಿಸ್ತೀರಿ? ಆರನೇ ತಾರೀಖೇ ನಾನು ಮೇಲಕ್ಕೆ ಲೆಕ್ಕ, ಹಣ ಕಳಿಸಬೇಕಿತ್ತು. ನಿಮ್ಮಿಂದಾಗಿ ನನಗೆ ಏನೂ ಹೆಸರಿಲ್ಲ," ಎಂದು ಗುಡುಗಿದರು. ಮಾಸ್ತರ ಆಕಾಶಗೋಪುರ ಮುರಿದು ಬಿತ್ತು. "ನೀವು ಮೇಷ್ಟ್ರುಗಳೇ ಹೀಗೆ, ದುಡ್ಡು ಕಾಸು ಕಂಡಿದ್ದರಲ್ಲವೇ! ಹದಿನೈದು ದಿವಸ ಉಪಯೋಗ ಮಾಡಿಕೊಂಡು ಈಗ ತಡವಾಗಿ ಕೊಡ್ತಿದ್ದೀರಿ," ಎಂದು ಕ್ಯಾಷಿಯರ್ ಕೆಣಕಿದಾಗ,

ಹಲ್ಲು ಮುರಿದು ಬಿಡಲೇ ಎನ್ನುವಷ್ಟು ಕೋಪ ಬಂದಿತ್ತು. ಆದರೆ ಬಡವನ ಕೋಪ ದವಡೆಗೆ ಮೂಲ. 'ಈ ಗುಮಾಸ್ತರ ಬುದ್ಧಿಯೇ ಇಷ್ಟು' ಎಂದು ಬೇರೆಯವರ ಹತ್ತಿರ ಗೊಣಗುವುದು ಬಿಟ್ಟು ಮಾಸ್ತರು ಬೇರೆ ಏನನ್ನು ತಾನೇ ಮಾಡಬಲ್ಲರು?

ತಿಂಗಳ ಕೊನೆ ಬಂದರೆ ಅಧಿಕ ಮುಗ್ಗಟ್ಟು ಕೈಗಾಲು ಕಟ್ಟಿದ. ಆದರೂ ನಾಲ್ಕು ದಿನ ಹೀಗೆ ಕಳೆಯುತ್ತಿದ್ದಾಗ ಒಂದು ಬೆಳಿಗ್ಗೆ ಘಟನೆ ಸಂಭವಿಸಿತು. ಒಂದು ತಿಂಗಳ ನೆನಪಿನಲ್ಲಿ ಸಾಲದ ಇಲ್ಲ. ಶಾಲೆಯ ರಜೆ. ಹುಡುಗರು ಸಂತಸದಿಂದ ಇದ್ದರು. ಮುಂಗಾರಿನ ಬಿಸಿಲಾಗಿ ಕಾಣುತ್ತಿತ್ತು. ಮುಖ್ಯೋಪಾಧ್ಯಾಯರ ಅಣತಿಗೆ ಕಾಯುತ್ತಿದ್ದಾಗ ತಲೆಯ ಮೇಲೆ ಮಾತ್ರ ಸಣ್ಣ ಕಪ್ಪು ಕೋಪ. ಇವಾದರೂ ನಾಲ್ಕು ದಿನ ಉದುರಿಸುತ್ತೋ ಎಂದು ಯೋಚಿಸುತ್ತಾ ಕ್ಲಾಸು ಮುಗಿಸಿ ಬರುವಾಗ ಜವಾನ ಕಾಳ ಧ್ವಜದ ಕಡೆ ಹೊರಟದ್ದು ಕಂಡಿತು.

"ಏನೋ ಕಾಳ, ನಂದೊಂದು ಹಳೇ ಬಟ್ಟೆ ಬಾಕಿ ಇತ್ತು. ಅದನ್ನೇನೋ ಬಲ್ಲೆ?" ಎಂದು ಕೂಗಿ ಕೇಳಿದರು ಮಾಸ್ತರು. "ಅಲ್ಲಾ ಸಾರ್, ಅಂದೆಂತಹದೋ ಸಿಕ್ಕಕರ ಧ್ವಜದ ಕಡೆ ದುಡ್ಡಿಗೆ ಹ್ಯಾಪಿಟ್ ತರೋಕ ಒಂಟೆ. ನೀವು ಮೇಸ್ತ್ರಗಳು ನನ್ನ ಕೆಲ್ಸಾನೂ ತಲೆಗೆ ಅಂಟಿಸಿದ್ರಿ", ಎಂದ ಜವಾನನಾಗಿ. ಸಿಕ್ಕಕರ ಧ್ವಜಕ್ಕೆ ನಿನ್ನಿಂದಲೂ ಗೌರವ ಸಮರ್ಪಣೆಯಾಗಬೇಕಿತ್ತು. ಆಯಿತು ಬಿಡು, ಅಂದುಕೊಂಡರು ಮಾಸ್ತರು.

ಬಾಗಿಲ ಬಳಿ ಬೆಳಗಿನ ಕಿರಣಗಳು ಮೂಡಿ ಬಿದ್ದಿತ್ತು. ಸೂರ್ಯನ ಮುಖ ಹಾಗೆ. ಗಡಿಯ ಚಿತ್ರ ವಿಚಿತ್ರದ ಮನ ಹೊತ್ತ ಗೋಡೆ. ಬಾಗಿಲು ಮುಚ್ಚಿದರೂ ಕಾಣದು. ಬಿಳಿಯ ಬಣ್ಣ ಹಂಗಾಮೀ. ಕಪ್ಪು ಹುಚ್ಚುಹ ರಘು. ಕೈಕರುಣದ ಹಸ್ತರು ಒಯ್ಯುವದನ್ನು ನೋಡುತ್ತಿತ್ತು. ಮುಖ. ಹಣೆ ಬರೆ ತಲೆಯ ಮೇಲೆ ಕೈ ಹೊತ್ತು 'ಧ್ವಜಕ್ಕೆ ವಂದನೆ' ಎಂದು ಕೂಗಲು ಬಾಯಿಬಿಟ್ಟರು. ಧ್ವನಿ ಹೊರಡಲಿಲ್ಲ. ತೆರೆದ ಬಾಯಿ ಮುಚ್ಚದೆ. ಬಿಡುಗಣ್ಣಿನಿಂದ ಕರಿಯ ಕಾಳ ದೂರದಲ್ಲಿ ಚಿಕ್ಕದಾಗಿ ಕಣ್ಮರೆಯಾಗುವವರೆಗೂ ನೋಡುತ್ತಲೇ ನಿಂತರು ಮಾಸ್ತರು. ✡



ಜಿಪ್ಸಿ ಜನ ಪ್ರಪಂಚದಲ್ಲೇ ಅತಿ ಆರೋಗ್ಯವಂತರೆಂದು ಪ್ರತೀತಿ. ಹಲವಾರು ವರ್ಷಗಳಿಂದ ಅವರು ತಮ್ಮ ಆರೋಗ್ಯ ರಕ್ಷಣೆಗಾಗಿ ಪೇಯವೊಂದನ್ನು ಔಷಧಿಯ ರೂಪದಲ್ಲಿ ಬಳಸುತ್ತ ಬಂದಿದ್ದಾರೆ. ಹಸಿದ ಗಜ್ಜರಿ, ಸಬ್ಬಸಿಗೆಯನ್ನು ಹೋಲುವ ಸೆಲೆರಿಸಸ್ಯದ ಎಲೆ, ಬಸಳೆಸೊಪ್ಪು ಪಾರ್ಸ್ಲಿ ಸಸ್ಯದೆಲೆಗಳನ್ನು ಸಪ್ರಮಾಣದಲ್ಲಿ ಸೇರಿಸಿ ಭಟ್ಟಿ ಇಳಿಸಿ ಈ ಔಷಧಿಯನ್ನು ತಯಾರಿಸಲಾಗುತ್ತದೆ. ಈ ಔಷಧಿಯಲ್ಲಿ ಪ್ರೊಟ್ಯಾಸಿಯಂದ ಪ್ರಮಾಣ ಹೆಚ್ಚು. ಅಲ್ಲದೆ ದೇಹಕ್ಕೆ ಬೇಕಾದ ಖನಿಜವಸ್ತುಗಳು ಹಾಗೂ ಲವಣಾಂಶಗಳೂ ಇದರಲ್ಲಿರುತ್ತವೆ.

ಆತ ಭಾರತದ ಮಿತ್ರನೂ ಆಗಿದ್ದ

ಸ್ಥಿರಗೊಳಿಸಿದ ಮಾತ್ರ ... ಲ್ಲ. ಆತನ ಅಭಿನಯದಲ್ಲಿ ಅಂತಹ ಒಂದು ಮೌಲಿಕತೆ, ತನ್ಮಯತೆ ಇರುತ್ತಿತ್ತು. ಆತನು ಚಲಚ್ಚಿತ್ರ ಲೋಕದ ಅನುಪಮ ಹಾಸ್ಯಗಾರ, ಶ್ರೇಷ್ಠ ನಟ, ನಿರ್ಮಾಪಕ, ನಿರ್ದೇಶಕನಷ್ಟೇ ಆಗಿರದೆ ಒಬ್ಬ ಮಹಾನ್ ಮಾನವನೂ ಆಗಿದ್ದ. ಕಡು ಬಡವನಾಗಿ ಕೊಳಕು ಪ್ರದೇಶದ ನಿವಾಸಿಯಾಗಿದ್ದ ಅವನನ್ನು ಪ್ರಪಂಚದ ಅತ್ಯುಚ್ಚ ಕೀರ್ತಿ, ಕೋಟಿಗಳ ಸಂಪತ್ತಿಗೆ ತಂದಿತ್ತು ಅವನಲ್ಲಿದ್ದ ಬಡ ಪರಿಸ್ಥಿತಿಗಳಿಗೆ ವಿರುದ್ಧವಾಗಿ ಸಂಘರ್ಷಿಸುವ ಅಪೂರ್ವ ಶಕ್ತಿ. ಅವನ ವ್ಯವಹಾರ ಕೌಶಲ ಹುಟ್ಟಿನಿಂದಲೇ ಬಂದುದೋ ಎಂಬಷ್ಟು ಸ್ವಾಭಾವಿಕವಾಗಿಯೇ ಇತ್ತು. ಅವನಿನ್ನೂ ಎಳೆಯನಾಗಿದ್ದಾಗಲೇ ತಂದೆ

ಚಾರ್ಲಿ ಚಾಪ್ಲಿನ್

ಕೆ. ಎ. ಕುಬಣೂರಾಯ

ಶೇಕ್ಸ್‌ಪಿಯರನ ಬಳಿಕ ಇಂಗ್ಲೆಂಡ್ ಜಗತ್ತಿಗೆ ನೀಡಿದ ಅತ್ಯಂತ ಮಹತ್ವದ ಕೊಡುಗೆ ಚಾರ್ಲಿ ಚಾಪ್ಲಿನ್ ಎಂದು ಕಲಾಭಿಜ್ಞರ ಮತ. ಬರ್ನಾರ್ಡ್ ಷಾ "ಚಲಚ್ಚಿತ್ರ ಪ್ರಪಂಚವು ನಿರ್ಮಿಸಿದ ಏಕೈಕ ಒಬ್ಬ ಮಹಾ ಪ್ರತಿಭಾಶಾಲಿ" ಎಂದು ಚಾಪ್ಲಿನನ ಬಗ್ಗೆ ಹೇಳಿದ್ದರು. ಚಲಚಿತ್ರ ಪ್ರಪಂಚದಲ್ಲಿ ಅವನ ಪ್ರತಿಭೆಯನ್ನಾಗಲಿ ಕೀರ್ತಿಯನ್ನಾಗಲಿ ಜನಪ್ರಿಯತೆಯನ್ನಾಗಲಿ ಮೀರಿಸಿದವರು ಇನ್ನೂ ಹುಟ್ಟಿಲ್ಲ. ಆತನನ್ನು ಅನನುಕರಣೀಯ ಪ್ರತಿಭಾ ವ್ಯಕ್ತಿ ಎಂದು ಬಣ್ಣಿಸುವವರಿದ್ದಾರೆ. ಚಾರ್ಲಿ ಚಾಪ್ಲಿನನನ್ನು ಅನುಕರಿಸಲು ಪ್ರಯತ್ನಿಸಿದವರು ಅಗಣಿತ ಮಂದಿ (ರಾಜ ಕಪೂರ್ ಸಹಿತ);

ತೀರಿಕೊಂಡ. ಸ್ಮಶಾನದಿಂದ ಮರಳಿ ಬರುವಾಗ ಜನ ಅವನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದುದನ್ನು ಕಂಡು ಅವನಿಗೆ ತಟ್ಟನೆ ಅದರ ಲಾಭ ಪಡೆಯುವ ವಿಚಾರ ಹೊಳೆಯಿತು. ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಒಂದು ಶಿಲ್ಲಿಂಗಿಗೆ ಕೊಂಡು ಕೊಂಡ ಹೂವುಗಳನ್ನು ಪಕ್ಕದ ಬೀದಿಯ ಒಂದು ಹೆಂಡದಂಗಡಿಯ ಬಳಿ ಮಾರಿ ಎರಡು ಶಿಲ್ಲಿಂಗ್ ಗಳಿಸಿದನು. ಅಂದಿನಿಂದಲೇ ಬೀದಿ ಭಿಕಾರಿಯಾಗಬೇಕಿದ್ದ ಈತ ಕೋಟ್ಯಧೀಶನಾಗಿ ತೀರಿಕೊಂಡ.

ಕ್ರಿಸ್‌ಮಸ್ ದಿನ.ಡಿಸೆಂಬರ್ ೨೫, ೧೯೭೭ರಂದು ಸ್ವಿಟ್ಜರ್ಲೆಂಡಿನ ಕೌರ್ಸಿಯರ್–ಸರ್–ವೇವೇಯ ತನ್ನ ಬಂಗಲೆಯಲ್ಲಿ ಶಾಂತಚಿತ್ತನಾಗಿ ಎಂಭತ್ತೆಂಟರ ತುಂಬು ವಯಸ್ಸಿನ ವೃದ್ಧ ಚಾಪ್ಲಿನ್ ಕೊನೆಯುಸಿರೆಳೆದ. ಆತನ ವಾಕ್ತರೇ ಹೇಳುವಂತೆ ಮರಣದ ಕಾರಣ ವೃದ್ಧಾಪ್ಯವೆ. ಜಿನೀವಾ ಸರೋವರದ ಬದಿಯಲ್ಲೇ ಆತನ ಭವ್ಯ ಬಂಗಲೆ. ಅದರ ಸುತ್ತು ೩೭ ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ ಆತನ ಸುಂದರ ಉದ್ಯಾನ. ಅದೇ ಸ್ಥಳದಲ್ಲಿ ಡಿಸೆಂಬರ್ ೨೭ರಂದು ಆತನ ಶವಸಂಸ್ಕಾರ ನಡೆಯಿತು.

ಚಾಪ್ಲಿನ್ನನ ಶವಪೆಟ್ಟಿಗೆ ಮುನ್ನೂರು ಪೌಂಡು ಗಳಷ್ಟು ಬೆಲೆಬಾಳುವುದಾಗಿದ್ದು, ಉತ್ತಮ ಓಕ್ ಮರದಿಂದ ತಯಾರಿಸಲ್ಪಟ್ಟಿತ್ತು. ಎರಡು ತಿಂಗಳಾಗುವಷ್ಟರಲ್ಲಿ, ಹುಗಿದಿಟ್ಟ ಶವವನ್ನು ಪೆಟ್ಟಿಗೆ ಸಮೇತ ಕಳ್ಳರಿಬ್ಬರು ಕದ್ದೊಯ್ದರು. ಸ್ವಿಸ್ ಪೋಲೀಸರು ಬಹಳ ಶೋಧ ನಡೆಸಿದ ಬಳಿಕ ಹತ್ತು ಮೈಲು ದೂರದ ಹೊಲವೊಂದರಲ್ಲಿ ಅದನ್ನು ಕಳ್ಳರು ಹುಗಿದಿಟ್ಟಿರುವುದನ್ನು ಮತ್ತೆ ಎರಡೂವರೆ ತಿಂಗಳ ಬಳಿಕ (೧೯೭೮ರ ಮೇ ತಿಂಗಳ ಮಧ್ಯಾವಧಿಯಲ್ಲಿ) ಕಂಡುಹಿಡಿದರು. ಕಳ್ಳರಲ್ಲಿ ಒಬ್ಬನು ಪೋಲಂಡಿನವನೂ ಇನ್ನೊಬ್ಬನು ಬಲ್ಗೇರಿಯಾದವನೂ ಆಗಿದ್ದ. ಇಟಲಿಯಲ್ಲಿ ಶ್ರೀಮಂತನೊಬ್ಬನ ಶವವನ್ನು ಇದೇ ರೀತಿ ಕಳ್ಳರು ಕದ್ದೊಯ್ದು ಆತನ ಸಂಬಂಧಿಕರಿಂದ ಹಣ ಪಡೆದುದನ್ನು ಪತ್ರಿಕೆಗಳಲ್ಲಿ ಓದಿದ ಈ ಕಳ್ಳರು ಚಾಪ್ಲಿನ್ನನ ಸಂಬಂಧಿಕರಿಂದ ಹೀಗೆಯೇ ಹಣ ದೋಚಲು ಹಂಚಿಕೆ ಹೂಡಿದ್ದರು. ಚಾರ್ಲಿ ಚಾಪ್ಲಿನ್ನನ ಶವವನ್ನು ಪುನಃ ಮೊದಲಿದ್ದ ಸ್ಥಳದಲ್ಲೇ ಹುಗಿದು ಅದರ ಮೇಲ್ಭಾಗದಲ್ಲಿ ರಕ್ಷಣೆಗಾಗಿ ಒಂದು ಆವರಣ ರಚಿಸಲಾಯಿತು. ಹೀಗೆ ಮೃತಪಟ್ಟ ಐದು ತಿಂಗಳ ಬಳಿಕವೂ ಚಾರ್ಲಿ ಚಾಪ್ಲಿನ್ ಪ್ರಪಂಚದ ಪತ್ರಿಕೆಗಳಲ್ಲಿ ಕುತೂಹಲದ ಸುದ್ದಿ ನಿರ್ಮಿಸಿ ಎರಡನೆಯ ಬಾರಿ ಶವಸಂಸ್ಕಾರ ಪಡೆಯುವ ವಿರಳ ಸಂದರ್ಭ ಪಡೆದ.

ಚಾರ್ಲ್ಸ್ ಸ್ಪೆನ್ಸರ್ ಚಾಪ್ಲಿನ್ನನ ಜನನ ಏಪ್ರಿಲ್ ೧೬, ೧೮೮೯ರಂದು ಲಂಡನ್ನಿನ ವಾಲ್ ಬರ್ತ್ ಭಾಗದಲ್ಲಿರುವ ಈಸ್ಟ್ ಲೇನಿನಲ್ಲಾಯಿತು. ಚಾರ್ಲ್ಸ್ ಎನ್ನುವ ಬದಲಿಗೆ ಗೆಳೆಯರು ಪ್ರೀತಿಯಿಂದ ಕರೆದ 'ಚಾರ್ಲಿ' ಎಂಬ ಹೆಸರೇ ಅವನಿಗೆ ಅಧಿಕ ಪ್ರಿಯವಾಯಿತು. ೧೯೧೩ರಲ್ಲಿ ಹಾಲಿವುಡ್ಡಿನ ಎಸ್ಸಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗಲೇ ಅವನು ತನ್ನ ವೈಶಿಷ್ಟ್ಯಪೂರ್ಣ ನಿಸಿದ ಚಾರ್ಲಿ ಪಾತ್ರವನ್ನು ಸೃಷ್ಟಿಸಿದ. ಅನಂತರ ಅವನು ಚಿತ್ರರಂಗದಲ್ಲಿ ಕ್ರಿಯಾಪೂರ್ಣ ಆಸಕ್ತಿ ಹೊಂದಿರುವವರೆಗೂ ಚಾರ್ಲಿಯಾಗಿ ಚಿತ್ರ ಪ್ರೇಮಿಗಳನ್ನು ರಂಜಿಸಿದನು. ಚಾರ್ಲಿಯ ತಂದೆ ತಾಯಿಗಳಿಬ್ಬರೂ ಸಂಗೀತವನ್ನೇ ಉಪಜೀವನದ ಮಾರ್ಗವಾಗಿ ಸ್ವೀಕರಿಸಿದ್ದರು. ಈತನ ತಂದೆ ಉತ್ತಮ ಸಂಗೀತಗಾರನಾಗಿದ್ದು ತನ್ನ ಉದ್ಯೋಗದಲ್ಲಿ ಖ್ಯಾತಿಯನ್ನೂ ಗೌರವವನ್ನೂ ಗಳಿಸಿದ. ಆದರೆ ಕುಡುಕನಾಗಿದ್ದುದರಿಂದ ಕುಟುಂಬಕ್ಕೆ ಅವನಿಂದ ಹೆಚ್ಚಿನ ಸುಖವಾಗಲಿ ಪ್ರಯೋಜನವಾಗಲಿ ಸಿಗಲಿಲ್ಲ.


ಚಾಪ್ಲಿನ್ನನ ತಾಯಿ ಉತ್ತಮ ಹಾಡುಗಾರ್ತಿಯೂ ನಟಿಯೂ ಸುಂದರ ಸ್ತ್ರೀಯೂ ಆಗಿದ್ದಳು. ಆದರೆ ಚಾರ್ಲಿ ಮತ್ತು ಆತನ ಮಲ ಅಣ್ಣನ ಪೋಷಣೆಗಾಗಿ ಅವಳು ತುಂಬಾ ಶ್ರಮ ಪಡಬೇಕಾಗಿ ಬಂತು. ಅದೊಂದು ದಿನ ಅವಳು ಸ್ಟೇಜಿನ ಮೇಲೆ ಹಾಡುತ್ತಿದ್ದಂತೆ ಅವಳ ಸ್ವರ ಬಿದ್ದು ಹೋಯಿತು. ಪ್ರೇಕ್ಷಕರು ಗುಲ್ಲೆಬ್ಬಿಸಿದರು. ಆಗ ಐದು ವರ್ಷ ಪ್ರಾಯದ ಬಾಲಕ ಚಾರ್ಲಿ ರಂಗ ಮಂಟಪವನ್ನು ಪ್ರವೇಶಿಸಿ ತನ್ನ ಅಭಿನಯ, ನೃತ್ಯಗಳಿಂದ ಜನರನ್ನು ರಂಜಿಸಿ ತೃಪ್ತಗೊಳಿಸಿದ್ದ. ಆದರೆ ಆ ರಾತ್ರಿಯ ಬಳಿಕ ಅವಳ ಸ್ವರ ಸರಿಯಾಗಲೇ ಇಲ್ಲ. ಅವಳ ಜೀವನದಲ್ಲಿ ಘೋರ ನಿರಾಶೆ ಕವಿದಿತ್ತು. ಕೆಲವೇ ವರ್ಷಗಳಲ್ಲಿ ಅವಳಿಗೆ ಮತಿ ವಿಭ್ರಮಣೆಯಾಯಿತು. ಹೀಗಾದ ಚಾಪ್ಲಿನ್ನನ ತಾಯಿ ಕೊನೆಯ ತನಕವೂ ಸ್ವಸ್ಥಳಾಗಲಿಲ್ಲ. ಅವಳ ಮಗ ಮುಂದೆ ವೈಭವದ ತುತ್ತತುದಿಗೇರಿದಾಗಲೂ. ರೋಗಕ್ಕೆ ಸರಿಯಾದ ಶುಶ್ರೂಷೆ, ಉಪಚಾರ ಒದಗಿಸಲ್ಪಟ್ಟಾಗಲೂ ಅವಳು ಹಾಗೆಯೇ ಉಳಿದಳು. ಉಪಜೀವನಕ್ಕಾಗಿ ಚಾಪ್ಲಿನ್ ಸಹೋದರರಿಬ್ಬರೂ ಪಟ್ಟ ಪಾಡು ಅಷ್ಟಿಷ್ಟಲ್ಲ. ಈ ಬವಣೆಗಳು, ಜೀವನದಲ್ಲಿ ಆರ್ಥಿಕ ನಿಶ್ಚಿಂತತೆಯನ್ನು ಪಡೆಯುವುದೇ ಪರಮಗುರಿಯಾಗಿರಬೇಕೆಂಬುದನ್ನು ಆ ಬಾಲಕರಿಗೆ ಕಲಿಸಿದವು. ಚಾರ್ಲಿ

ನಗರದ ಕ್ಷುದ್ರವಾದ ಅನಾಥಾಶ್ರಮಗಳಲ್ಲೂ ಬೋರ್ಡಿಂಗ್ ಶಾಲೆಗಳಲ್ಲೂ ಅಷ್ಟಿಷ್ಟು ಕಲಿತದ್ದು ಮಾತ್ರ.

ಅನಂತರ ತನ್ನ ಮಲ ಅಣ್ಣನ ಜೊತೆಗೂಡಿ ಒಂದು ವಿವಿಧ ವಿನೋದಾವಳಿ ಕಂಪೆನಿಯಲ್ಲಿ ಹಾಸ್ಯನಟನಾಗಿ ಸೇರಿದ. ಅವನಲ್ಲಿಯ ನಟನಾ ಸಾಮರ್ಥ್ಯಕ್ಕೆ ಇಲ್ಲಿಯೇ ಮೊದಲು ಮನ್ನಣೆ ಸಿಕ್ಕು ತಕ್ಕ ಮಟ್ಟಿಗೆ ಹೆಸರೂ ಗಳಿಸಿದ. ೧೯೧೦ರಲ್ಲಿ ಕಾರ್ನೊ ಕಾಮಿಡಿ ಕಂಪನಿಯಲ್ಲಿ ಇವನು ಮುಖ್ಯ ಹಾಸ್ಯ ನಟನಾದ. ಈ ಕಂಪನಿ ಅಮೇರಿಕಕ್ಕೆ ಹೋದಾಗ ಅವನ ದೈವ ತೆರೆಯಿತೆನ್ನಬೇಕು. ಹಾಸ್ಯಚಿತ್ರಗಳನ್ನು ನಿರ್ಮಿಸುತ್ತಿದ್ದ ಕ್ಯಾಲಿಫೋರ್ನಿಯದ ಕೀಸ್ಟೋನ್ ಕಂಪನಿ ವಾರಕ್ಕೆ ೧೫೦ ಡಾಲರು ವೇತನವಿತ್ತು ತನ್ನ ಚಿತ್ರಗಳಲ್ಲಿ ಅವನನ್ನು ಅಭಿನಯಿಸಲು ಆಹ್ವಾನಿಸಿತು. ಆಗ ಚಲಚ್ಚಿತ್ರ ರಂಗ ಸೇರಿದ ಚಾಪ್ಲಿನ್ ನಂತರ ರಂಗಭೂಮಿಯ ಕಡೆಗೆ ಹೊರಳಿ ಕೂಡ ನೋಡಲಿಲ್ಲ. ಅಂದಿನ ಮೂಕ ಚಿತ್ರಗಳೊಂದಿಗೆಯೇ ಅವನ ಕೀರ್ತಿ ಮತ್ತು ಸಂಪಾದನೆಗಳೆರಡೂ ಮಿತಿಯಿಲ್ಲದಂತೆ ಬೆಳೆಯ ತೊಡಗಿದುವು.

ತನ್ನ ಜೀವನದ ಸುಮಾರು ೪೦ ವರ್ಷಗಳನ್ನು ಆತ ಅಮೇರಿಕದಲ್ಲೇ ಕಳೆದ. ಅಭಿನಯ ಕ್ಷೇತ್ರದಲ್ಲಿ ತನ್ನ ಕುಶಲತೆಯಿಂದ ಪ್ರಸಿದ್ಧನಾಗಿದ್ದ ಈತ, ಮುಂದೆ ೧೯೨೦ರಲ್ಲಿ ಹಾಲಿವುಡ್ಡಿನಲ್ಲೇ ಸ್ವಂತ ಸ್ಟುಡಿಯೋ ಸ್ಥಾಪಿಸಿಕೊಂಡು ತನ್ನದೇ ಆದ ಚಿತ್ರಗಳ ನಿರ್ಮಾಣದಲ್ಲಿ ತೊಡಗಿದ. 'ಕಾಟ್ ಇನ್ ದಿ ರೇನ್' ಇವನು ನಿರ್ದೇಶಿಸಿದ ಪ್ರಥಮ ಚಲನಚಿತ್ರ. ತನ್ನ ಚಿತ್ರಗಳಿಗೆಲ್ಲ ನಿರ್ದೇಶಕ ತಾನೇ ಆಗಿರುತ್ತಿದ್ದುದಲ್ಲದೆ ಚಿತ್ರಕಥೆಗಳನ್ನೂ ತಾನೇ ಸಿದ್ಧಪಡಿಸುತ್ತಿದ್ದ. ಈತನು ಒಂದೆರಡು ಅಪವಾದಗಳ ಹೊರತು ಉಳಿದೆಲ್ಲ ಚಿತ್ರಗಳಲ್ಲಿ ತಾನೇ ನಾಯಕನಾಗಿ ಅಭಿನಯಿಸಿದ. ಈತನ ಆರಂಭದ ಸಿನೆಮಾಗಳು ಮೂಕಚಿತ್ರಗಳೇ ಆಗಿದ್ದುವು. ವಾಕ್ಚಿತ್ರಗಳು ಆಗಿನ್ನೂ ಪ್ರಚಲಿತವಾಗಿರಲಿಲ್ಲ. ಸಿನೇಮಾಗಳಲ್ಲಿ ಧ್ವನಿಯ ಅಳವಡಿಕೆಯನ್ನು ಚಾಪ್ಲಿನ್ ಆರಂಭದಲ್ಲಿ ವಿರೋಧಿಸಿದನು. ನಿಜವಾದ ಅಭಿನಯಕ್ಕೆ, ಸಿನೇಮಾದ ತನ್ನದೇ ಆದ ಕಲೆಗೆ, ಧ್ವನಿ ಮಾರಕವಾಗಿದೆ ಎಂದ. ಆತನ ಅಭಿಪ್ರಾಯದಲ್ಲಿ, ಧ್ವನಿಯೇ ಇಲ್ಲದೆ ಆತನು ಹೇಗೆ ಪ್ರೇಕ್ಷಕರನ್ನು ಧ್ವನಿ ಇರುವ ಚಿತ್ರಗಳಿಗಿಂತಲೂ ಹೆಚ್ಚು ರಂಜಿಸುತ್ತಿದ್ದನೆಂಬುದಕ್ಕೆ 'ದಿ ಗೋಲ್ಡ್ ರಶ್' ಚಿತ್ರದಲ್ಲಿ, ಕೇವಲ ತನ್ನ ಕೈಗಳಲ್ಲಿ ಎರಡು ಬನ್ನುಗಳನ್ನು ಹಿಡಿದು, ಮೇಜಿಗೆ ತಟ್ಟುತ್ತಾ ಹೇಗೆ ಅವನು ನೃತ್ಯದ, ಸಂಗೀತದ ಸುಖವನ್ನು ಮೂಕ ಅಭಿನಯದಿಂದ ಕೊಟ್ಟಿರುವನೆಂಬುದನ್ನು ನೋಡಿಯೇ ತಿಳಿಯಬೇಕು. ಚಾರ್ಲಿ ಚಾಪ್ಲಿನನ ಕರ್ತೃತ್ವ ಶಕ್ತಿ ಎಷ್ಟು ಅದ್ಭುತವಾಗಿತ್ತೆಂದರೆ, ಆತನು ಎರಡೆರಡು ರೀಲುಗಳ ಹನ್ನೆರಡು ಫಿಲ್ಮುಗಳನ್ನು ಕೇವಲ ಹದಿನಾರು ತಿಂಗಳುಗಳಲ್ಲಿ ಮುಗಿಸಿದ್ದ.

ಚಾಪ್ಲಿನ್ ನಿರ್ಮಿಸಿದ್ದ ಚಿತ್ರಗಳೆಲ್ಲ ಉತ್ತಮ ಕಲಾರಚನೆಗಳೆಂದು ಇಂದಿಗೂ ಸುರಕ್ಷಿತವಾಗಿ ಇಡಲ್ಪಟ್ಟಿವೆ. 'ದಿ ಕಿಡ್,' 'ದಿ ಗೋಲ್ಡ್ ರಶ್,' 'ಸಿಟಿ ಲೈಟ್ಸ್', 'ದಿ ಗ್ರೇಟ್ ಡಿಕ್ಟೇಟರ್',



ಚಾರ್ಲಿ ಚಾಪ್ಲಿನ್

'ಟ್ರೈವಸ್ ಲೈಟ್' ಮೊದಲಾದವುಗಳು ಅವುಗಳಲ್ಲಿ ಉಲ್ಲೇಖನೀಯ. 'ದಿ ಗ್ರೇಟ್ ಡಿಕ್ಟೇಟರ'ನ ನಾಯಕ [illegible] ಕ್ಷೌರಿಕನಾಗಿದ್ದ. ಈ ಚಿತ್ರದ ಮೂಲಕ ಹಿಟ್ಲರನನ್ನು ಹಾಸ್ಯಮಾಡಲಾಗಿತ್ತು. ಚಾರ್ಲಿ ಚಾಪ್ಲಿನ್ ಹಿಟ್ಲರನಿಗೆ, "ಆತನು ನನ್ನ ಮೀಸೆಯನ್ನು ಕದ್ದುಕೊಂಡಿದ್ದಾನೆ" ಎಂದು ಹೇಳಿ, ಆತನ ಘನತೆಯನ್ನು ತೀರಾ ಹಾಸ್ಯಾಸ್ಪದ ವಸ್ತುವನ್ನಾಗಿ ಮಾಡಿಬಿಟ್ಟಿದ್ದ. ಚಾಪ್ಲಿನ್ನನ ಚಿತ್ರಗಳಲ್ಲಿ ಹೆಚ್ಚಾಗಿ ಒಬ್ಬ ಸಾಮಾನ್ಯ, ಬಡ, ಹಾಸ್ಯಗಾರ ನಾಯಕನಾಗಿರುತ್ತಿದ್ದ. ಅವನು ಎಂದೂ ದಬ್ಬಾಳಿಕೆ ನಡೆಸುವವರ ಮುಂದೆ ತಗ್ಗುವುದಿಲ್ಲ. ಕಷ್ಟಗಳನ್ನೆಲ್ಲಾ ತನ್ನ ಹಾಸ್ಯ ಪ್ರವೃತ್ತಿಯಿಂದ ಜಯಿಸಿಬಿಡುತ್ತಿದ್ದ. ಜೀವನದ ಕಷ್ಟಗಳನ್ನು ಹೀಗೆ ನಗುತ್ತಾ ಎದುರಿಸಬೇಕೆಂದು [illegible] ಆತನ ಎಲ್ಲ ಚಿತ್ರಗಳ ಸಂದೇಶವಾಗಿರುತ್ತಿತ್ತು. ತನ್ನ ಜೀವನದ ಅನುಭವಗಳನ್ನೇ ಆತ ತನ್ನ ಕೃತಿಗಳಲ್ಲಿ ಎರಕ ಹೊಯ್ಯುತ್ತಿದ್ದ.

ಎರಡನೆಯ ಮಹಾಯುದ್ಧದ ಬಳಿಕ ಕ್ಲಾಂತವಾದ ಯುರೋಪಿನ ಜನತೆಯಲ್ಲಿ ಈ ರೀತಿ ತನ್ನ ಕಲೆಯಿಂದ ನವ ಚೇತನ ತುಂಬಿದವರಲ್ಲಿ ಚಾರ್ಲಿ ಚಾಪ್ಲಿನ್ನನ ಸ್ಥಾನ ಹಿರಿದು. ಪಿಕಾಸೋ ತನ್ನ ಕಲಾಕೃತಿಗಳಲ್ಲಿ ಯುದ್ಧದಿಂದ ಅನಾಸಕ್ತಿಯನ್ನು ಅಮೂರ್ತವಾಗಿ ಪ್ರದರ್ಶಿಸಿದ್ದರೆ, ಚಾರ್ಲಿ ಚಾಪ್ಲಿನ್ ಯುದ್ಧದಿಂದ ಜರ್ಜರಿತರಾದವರ ಜೀವನದಲ್ಲಿ ಆನಂದವನ್ನೂ ಧೈರ್ಯವನ್ನೂ ತುಂಬಿದ್ದಾನೆ. ಹಾಗೆಂದು ಈ ಪ್ರಭಾವವು ಸ್ವಾಭಾವಿಕವಾಗಿ ಮಾತ್ರ ಆತನ ರಚನೆಗಳಲ್ಲಿ ಮೂಡಿದುದಲ್ಲದೆ ಆತನು ಕಲೆಯ ತತ್ವಗಳ ಬಗ್ಗೆ ಎಂದೂ ಗಂಭೀರವಾಗಿ [illegible] ಆತನು [illegible] "ನನ್ನ [illegible] ಅಭಿವ್ಯಕ್ತಿಗೆ [illegible] ಬೇಕಾದ [illegible] ಕಲೆ. ನನಗೆ ರಂಗಭೂಮಿಯಿಂದರೆ ಜೀವನ ನಿರ್ವಾಹದ ಸಾಧನಮಾತ್ರವಾಗಿತ್ತು."

[illegible] ನಿರ್ಮಿಸಿರುವ ಈತ ಎಂದೂ ಅದರ ತಾಂತ್ರಿಕತೆಯ ಕುರಿತು ಆಸಕ್ತಿ ವಹಿಸಿದವನಲ್ಲ. ಧ್ವನಿಯನ್ನು ತನ್ನ ಚಿತ್ರಗಳಲ್ಲಿ ಮೊದಲು ಉಪಯೋಗಿಸಿದಾಗಲೂ ಆತನಿಗೆ ಅದರ ಜನಪ್ರಿಯತೆಯ ಬಗ್ಗೆ ಸಂಶಯವೇ ಇತ್ತು. ಆದರೆ ಅದು ಆತನ ನಿರೀಕ್ಷೆಗೆ ಮೇಲ್ಪಟ್ಟು ಜನಾನುರಾಗ ಪಡೆಯಿತು. ೧೯೩೧ರಲ್ಲಿ ನಿರ್ಮಿತವಾದ 'ಸಿಟಿ ಲಾಯಿಟ್ಸ್' ಚಾರ್ಲಿ ಚಾಪ್ಲಿನ್ನನ ಮೊತ್ತ ಮೊದಲ ವಾಕ್ಚಿತ್ರ. ಅದರ ಲ್ಲೊಬ್ಬ ಮಾರ್ಗದ ಬದಿಯಲ್ಲಿ ಜೀವಿಸುವ ವ್ಯಕ್ತಿ ಕಥಾನಾಯಕ. ಆತನು ಪರಿಸ್ಥಿತಿವಶಾತ್ ಮಿಲ್ ಮಾಲಕನೊಬ್ಬನ ಗೆಳೆಯನಾಗುತ್ತಾನೆ. ಒಂದು ರಾತ್ರಿ ಅವನು ಬಾರಿನಲ್ಲಿ ಕುಡಿಯುತ್ತಿರುತ್ತಾನೆ. ತಪ್ಪಿ ಒಂದು ಸೀಟಿಯನ್ನು ನುಂಗಿ ಬಿಡುತ್ತಾನೆ. ಅದು ಗಂಟಲಲ್ಲಿ ಸಿಲುಕಿಕೊಳ್ಳುತ್ತದೆ. ಅದನ್ನು ಹೊರತೆಗೆಯಲು ಪ್ರಯತ್ನಿಸುವಾಗಲೆಲ್ಲ ಗಂಟಲಿನಿಂದ ಸ್ವರ ಹೊರಡುತ್ತದೆ. 'ಹ್ವಿಕ್- ಸೀಂ ಸೀ–ಕ್ವೀ-ಕ್ವೀ' 'ಓಕ್, ಕ್ವೀ... ಕ್ವೀ... ಹೀಗೆ ಬಿಗಿಲಿನ ಧ್ವನಿಯಿಂದ ಚಾರ್ಲಿ ಚಾಪ್ಲಿನ್ ಮೊತ್ತ ಮೊದಲು ಧ್ವನಿಯನ್ನು ಬಳಸಿದ್ದ. ಅನಂತರ ಅವನ ಚಿತ್ರಗಳಲ್ಲಿ ಧ್ವನಿ ಆರಂಭವಾಯಿತು.

ಚಲಚ್ಚಿತ್ರ ಪ್ರಪಂಚದ ಹೊರಗೂ ಈ ಮಹಾನ್ ವ್ಯಕ್ತಿಯ ಪ್ರಭಾವ ಅಪಾರವಾಗಿತ್ತು. ಬ್ರಿಟಿಶ್ ಪ್ರಧಾನಿ ಚರ್ಚಿಲ್ಲರ ಧೈರ್ಯ–ಸಾಹಸಗಳನ್ನು ಈತನು ಬಹಳವಾಗಿ ಗೌರವಿಸುವನಾಗಿದ್ದರೂ ಅವರ ರಾಜಕೀಯ ಧೋರಣೆಗಳನ್ನು ಎಂದೂ ಮೆಚ್ಚುತ್ತಿರಲಿಲ್ಲ. ಚರ್ಚಿಲ್, ಚಾರ್ಲಿ ಚಾಪ್ಲಿನ್ನನ ಬಗ್ಗೆ ತುಂಬಾ ಗೌರವ ತಳೆದಿದ್ದ ವ್ಯಕ್ತಿ. ೧೯೩೩–೩೪ರ ಸುಮಾರಿಗೆ ಒಂದು ರಾತ್ರಿ ಭೋಜನ ಸಮಯದಲ್ಲಿ ಚರ್ಚಿಲ್ ಮತ್ತು ಚಾಪ್ಲಿನ್ ನಡುವೆ ಸಂಭಾಷಣೆ ನಡೆದಿತ್ತು. ಅವರೊಟ್ಟಿಗೆ ಇನ್ನೊಬ್ಬ ಗೆಳೆಯ ಲಾರ್ಡ್ ಬ್ರೇಕನ್ ಕೂಡ ಇದ್ದರು. ಬ್ರೇಕನ್ನರೊಡನೆ ಚಾರ್ಲಿ ಚಾಪ್ಲಿನ್, "ನಾನು ಶನಿವಾರ ಗಾಂಧೀಜಿಯನ್ನು ಭೇಟಿಯಾಗಲಿದ್ದೇನೆ" ಎಂದ. ಬ್ರೇಕನ್ ತಕ್ಷಣ ಉತ್ತರಿಸಿದ, "ಆ ಮನುಷ್ಯನ ಬಗ್ಗೆ ಸಾಕಷ್ಟು ಕೇಳಿದ್ದಾಗಿ ಬಲ್ಲೆವು. ಆತ ಅನ್ನಸತ್ಯಾಗ್ರಹಮಾಡಲಿ, ಇನ್ನೇನು ಬೇಕಾದರೂ ಮಾಡಲಿ, ನಾವು ಆತನನ್ನು ಜನರಿಂದ ದೂರ. [illegible] ಜೈಲಿನಲ್ಲಿಡುತ್ತೇವೆ. [illegible] ಹಾಗಾದರೆ ಒಂದು ಸ್ವಾತಂತ್ರ್ಯ [illegible] ತಪ್ಪಿಹೋಯಿತು [illegible]." ಎಂದು ಉತ್ತರಿಸಿದರು. ಚರ್ಚಿಲ್ ಕಡೆಗೆ ತಿರುಗಿ ಚಾರ್ಲಿ ಚಾಪ್ಲಿನ್, "ಇದು ಬಹಳ ಸುಲಭ. ಆದರೆ ಒಬ್ಬ ಗಾಂಧಿಯನ್ನು ಜೈಲಿನಲ್ಲಿಟ್ಟರೆ ಅನೇಕ ಗಾಂಧಿಗಳು

ಮಾಡಿಕೊಳ್ಳುತ್ತಾರೆ. ಗಾಂಧಿ ಭಾರತೀಯ ಜನರ [illegible] ಆಕಾಂಕ್ಷೆಗಳ ಪ್ರತೀಕ" ಎಂದು [illegible] ಐನ್‌ಸ್ಟೀನ್ ಹೇಳಿದ್ದ. "[illegible]" ಎನ್ನುತ್ತಾ [illegible] ಕೆಲವು [illegible]. ತನ್ನ [illegible] ಅನುಭವಿಸಿದಂತೆ [illegible] ಚಾಪ್ಲಿನ್ [illegible].

ಚಾರ್ಲಿ ಚಾಪ್ಲಿನ್ನರ ಗೆಳೆಯರ ಬಳಗದಲ್ಲಿ [illegible] ಅನೇಕ ಮಹಾ [illegible]. ಅವರಲ್ಲಿ ಅನೇಕರು [illegible] ಕ್ಷೇತ್ರಗಳ [illegible] ಕೊಡುಗೆ [illegible] ಆಗಿದ್ದರು. ಐನ್‌ಸ್ಟೀನ್. ಚರ್ಚಿಲ್. ಫ್ರಾಂಕ್ಲಿನ್ ರೂಸ್‌ವೆಲ್ಟ್. ಮಹಾತ್ಮ ಗಾಂಧಿ. ನಿಕಿತಾ ಕ್ರುಶ್ಚೇವ್. ಚೌ-ಎನ್-ಲೈ. ಬರ್ನಾರ್ಡ್ ಷಾ. [illegible]. ಗ್ರಹಾಂ ಗ್ರೀನ್. ಆಲ್ಡಸ್ ಹಕ್ಸ್ಲೀ. ಸ್ಟ್ರಾವಿನ್ಸ್ಕಿ. ಜೀನ್-ಪಾಲ್. ಸಾರ್ತ್ರ. ಎಚ್.ಜಿ. ವೆಲ್ಸ್. ಜವಾಹರಲಾಲ್ ನೆಹರು. [illegible]. [illegible]. [illegible] ಅವನ ಮೈತ್ರಿ [illegible].

[illegible] ಮತ್ತು [illegible] ಚಾರ್ಲಿ ಚಾಪ್ಲಿನ್ನನಿಗೆ [illegible]. [illegible] ಅವನನ್ನು [illegible] ಬಿಡಲು [illegible]. ಅವನು [illegible] ಕೊಡುತ್ತಾ [illegible] ಗೊಳಿಸಲು [illegible]. [illegible] ಅವನು [illegible]. ಚಾಪ್ಲಿನ್ [illegible] ಅವನಿಗೆ [illegible] ಕೊಡಲು [illegible] ಕಾರ್ಯದಲ್ಲಿ [illegible]. [illegible] ಅವನ [illegible] ಅವನನ್ನು [illegible].

ಅದಕ್ಕೆ ಒಂದು ಕಾರಣ ಅವನ ಮದುವೆಗಳೂ ಆಗಿದ್ದುವು. ಚಾಪ್ಲಿನ್ ನಾಲ್ಕು ಬಾರಿ ಮದುವೆಯಾಗಿದ್ದ. [illegible] ಅವನಿಗೆ [illegible]. ಮತ್ತು [illegible] ಅವನ ನಾಲ್ಕು [illegible] ಊನಾ ಓನೀಲ್. [illegible] ಮದುವೆಯಾಗಿದ್ದ [illegible] ಅವನ [illegible]. ಅವನ ಮೊದಲ ಮದುವೆ ೧೯೧೮ರಲ್ಲಿ ಮಿಲ್ಡ್ರೆಡ್ ಹ್ಯಾರಿಸ್ ಎಂಬುವಳೊಂದಿಗೆ ೧೯೨೪ರಲ್ಲಿ [illegible] ಲೀಟಾ ಗ್ರೇ ಅವನ ಕೈ ಹಿಡಿದಳು. ೧೯೩೬ರಲ್ಲಿ ಪಾಲೆಟ್ ಗೊಡಾರ್ಡ್ ಅವನ [illegible]. ೧೯೪೩ರಲ್ಲಿ ಚಾಪ್ಲಿನ್ ಊನಾ ಓನೀಲ್‌ಳನ್ನು ಮದುವೆಯಾದಾಗ ಅವನ ವಯಸ್ಸು ೫೪ ವರ್ಷ.

'ಸರ್ಕಸ್' ಕುರಿತು ಚಾಪ್ಲಿನ್ ಬರೆಯುತ್ತಾನೆ: "ನಾನು ಅದಕ್ಕಾಗಿ [illegible]. ನನ್ನ ಕಾರ್ಯಕ್ಷೇತ್ರದಲ್ಲಿ ಸ್ವಾಭಾವಿಕವಾಗಿ ಅದರ [illegible] ನನಗೆ [illegible]. ಆದರೆ ಜೀವನದಲ್ಲಿ [illegible] ಪ್ರಬಲವಾಗಿದ್ದಾಗ ಅದು ನನ್ನ ಮಟ್ಟಿಗೆ ಆರೋಗ್ಯ [illegible]ವಾಗಿರುತ್ತಿತ್ತು. [illegible] ಸಂದರ್ಭಗಳಲ್ಲಿ ಅದೆಷ್ಟೋ ಬಾರಿ ನಾನು ಆರೋಗ್ಯವಾಗಿರುವ ಅದೆಷ್ಟೋ ಬಾರಿ ಶ್ರೇಷ್ಠ ವ್ಯಕ್ತಿಯಾಗಿರುವ [illegible]. ಆದರೆ [illegible] 'ಸರ್ಕಸ್' [illegible] ಕಾರ್ಯದ [illegible] ನಾನು [illegible]. 'ಸರ್ಕಸ್'ನ [illegible] [illegible]."

ತನ್ನ [illegible] ಚಾರ್ಲಿ ಚಾಪ್ಲಿನ್ [illegible]. [illegible] ಅವನು [illegible]. ಅವನ [illegible] ಅವನು [illegible].

ತನ್ನ '[illegible]' [illegible].

ಬ್ಬಳ ಹುಡುಕಾಟದಲ್ಲಿದ್ದಾಗ ಊನಾ ಓನೀಲ್ ಎಂಬ ಸುಂದರ ತರುಣಿಯ ಪರಿಚಯ ಅವನಿಗಾಯಿತು. ಅವಳು ಅಮೇರಿಕದ ಪ್ರಸಿದ್ಧ ನಾಟಕಕಾರ ಯೂಜಿನ್ ಒನೀಲನ ಮಗಳಾಗಿದ್ದಳು. ಚಿತ್ರತಾರೆಯಾಗುವುದು ಆಕೆಯ ಮಹತ್ವಾಕಾಂಕ್ಷೆ. ಈ ತೆಳು ಗಾತ್ರದ ತರುಣಿ ಸಫಲ ನಟಿಯಾಗಬಲ್ಲಳೇ? ಎಂಬ ಸಂಶಯವಿದ್ದಾಗಲೂ ಚಾಪ್ಲಿನ್ ಅವಳನ್ನು ನಟಿಯಾಗಿ ಆರಿಸಿಕೊಂಡನು.

ಅದೇ ಸಂದರ್ಭದಲ್ಲಿ ಜೇನ್ ಬೆರೀಕೀ ಎಂಬ ಕುಖ್ಯಾತ ಮಹಿಳೆಯೊಬ್ಬಳ ಮೂಲಕ ಅಮೇರಿಕದ ಎಫ್.ಬಿ.ಐ. ಚಾಪ್ಲಿನ್‌ನ ವಿರುದ್ಧ ಒಂದು ದಾವೆ ಹೂಡಿತು. ಅದರಲ್ಲಿ ಚಾಪ್ಲಿನ್ನನ ವಿಚಾರಗಳು, ಅವನ ಸೆಕ್ಸ್ ಜೀವನ ಇತ್ಯಾದಿಗಳನ್ನು ಆಧಾರವಾಗಿರಿಸಿ ಆತನನ್ನು ಮುಳುಗಿಸುವ ಒಂದು ದೊಡ್ಡ ಒಳಸಂಚೇ ಹೆಣೆಯಲ್ಪಟ್ಟಿತ್ತು. ವೇಶ್ಯಾಗಮನ ಮತ್ತು ತನ್ನ ಮಕ್ಕಳ ಬಗೆಗಿನ ಕರ್ತವ್ಯದಿಂದ ವಿಮುಖನಾಗಿರುವ ಆರೋಪಗಳನ್ನು ಆತನ ಮೇಲೆ ಹೊರಿಸಲಾಯಿತು. ಈ ಮೊಕದ್ದಮೆಯಿಂದಾಗಿ ಚಾರ್ಲಿ ಚಾಪ್ಲಿನ್ನನ ಹೆಚ್ಚಿನ ಸಮಯ ಕೋರ್ಟು ಕಚೇರಿ ಮತ್ತು ವಕೀಲರುಗಳ ಬಳಿ ಅಲೆದಾಡುವುದರಲ್ಲಿ ಹಾಳಾಗತೊಡಗಿತು. ಆಗಲೇ ಊನಾ ಓನೀಲ್ ಮತ್ತು ಚಾರ್ಲಿ ಚಾಪ್ಲಿನ್ ವಿವಾಹಿತರಾದರು. ತನ್ನ ನಟಿಯಾಗುವ ಆಕಾಂಕ್ಷೆಗಳಿಗೆ ತಿಲಾಂಜಲಿ ಇತ್ತು ಆಕೆ ಚಾಪ್ಲಿನ್ನನನ್ನು ಆ ಸಂದರ್ಭದಲ್ಲಿ ಸಂಭಾಳಿಸಿಕೊಂಡು ಹೋದಳು. ಕೊನೆಗೆ ಮೊಕದ್ದಮೆಯಲ್ಲಿ ಆತನಿಗೆ ಜಯ ಲಭಿಸಿತು. ಚಾಪ್ಲಿನ್ನನ ಜೀವನದ ಕೊನೆಯ ದಿನಗಳಲ್ಲಿ ಊನಾ ತನ್ನ ಗಂಡನನ್ನು ಚಕ್ರಗಳಿರುವ ಕುರ್ಚಿಯಲ್ಲಿ ಕುಳ್ಳಿರಿಸಿ, ಭೇಟಿಯಾಗಲು ಬರುವವರ ಬಳಿ ಕರೆ ತರುತ್ತಿದ್ದಳು. ವೃದ್ಧಾಪ್ಯದಿಂದ ಬಳಲಿದಾಗಲ್ಲ ಆಕೆ ಪ್ರೀತಿಯಿಂದ ಉಪಚರಿಸುತ್ತಿದ್ದಳು. ಚಾಪ್ಲಿನ್ ಕೊನೆಯುಸಿರೆಳೆದಾಗ ಊನಾ ಮತ್ತು ಆತನ ಮಕ್ಕಳು ಅವನ ಹಾಸಿಗೆಯ ಬಳಿ ಇದ್ದರು.

ಚಾಪ್ಲಿನ್ ಅಮೇರಿಕವನ್ನು ಬಿಡಲು ಆತನ ಹಗೆಗಳೇ ಕಾರಣರಾಗಿದ್ದರು. ಅವನು ೧೯೪೭ರಿಂದ ಆತನನ್ನು ಅಮೇರಿಕ ವಿರೋಧಿ ಚಟುವಟಿಕೆಗಳ ಆರೋಪ ಹೊರಿಸಿ ತೊಂದರೆಗೊಳಪಡಿಸಿದರು. ಸೆನೆಟರ್ ಜೋಸೆಫ್ ಮೆಕಾರ್ಥಿಯ ನಾಯಕತ್ವದಲ್ಲಿ ಕಮ್ಯೂನಿಸ್ಟರನ್ನು ಉಚ್ಚಾಟಿಸುವ ಭಾರೀ ಯತ್ನ ಅಮೇರಿಕದಲ್ಲಿ ನಡೆದಿತ್ತು. ಹಗೆಗಳು ಚಾರ್ಲಿ ಚಾಪ್ಲಿನ್ ಅದರ ಬಲಿಪಶುವಾಗುವಂತೆ ಮಾಡಿದರು. ಆತನನ್ನು ಕಮ್ಯೂನಿಸ್ಟನೆಂದು ಆರೋಪಿಸಿದರು. ಆತ ಅದನ್ನು ಸ್ಪಷ್ಟವಾಗಿ ನಿರಾಕರಿಸಿದನು. ಅಮೇರಿಕದಲ್ಲಿ ಇಷ್ಟು ವರ್ಷಗಳಿಂದ ಸಂಪಾದನೆ ಮಾಡುತ್ತಿದ್ದೀ ಎಂದು ವಿಚಾರಣೆಯ ವೇಳೆ ಆತನನ್ನು ಹಂಗಿಸಲಾಯಿತು. ಅದಕ್ಕವನು, "ನನ್ನದು ಅಂತಾರಾಷ್ಟ್ರೀಯ ವ್ಯವಸಾಯ. ನನ್ನ ೭೦% ಹಣ ವಿದೇಶಗಳಿಂದ ಬರುತ್ತದೆ. ಆದರಿಂದ ಅಮೇರಿಕಕ್ಕೆ ನೂರಕ್ಕೆ ನೂರರಷ್ಟು ಲಾಭವಾಗಿದೆ. ನಾನು ಅಮೇರಿಕದ 'ಸಂಪಾದನೆ ಮಾಡಿ ಕೊಡುವ ಅತಿಥಿ'" ಎಂದು ಯಥಾರ್ಥವನ್ನು ಅವರ ಮುಂದಿಟ್ಟು ಬಾಯಿ ಮುಚ್ಚಿಸಿದ. ಚಾಪ್ಲಿನ್ನನ ಮೇಲಿನ ಆರೋಪಗಳು ಸಿದ್ಧವಾಗಲಿಲ್ಲ. ಆದರೂ ಹಗೆಗಳು ಆತನ ಬೆನ್ನುಬಿಡಲಿಲ್ಲ. ಆತನ ಸಿನೇಮಾಗಳಿಗೆ ಜನರು ಹೋಗದಂತೆ ಪಿಕೆಟಿಂಗ್ ನಡೆಸುವವರೆಗೂ ಅವರು ಮುಂದುವರಿದರು. ಬೇಸತ್ತ ಚಾಪ್ಲಿನ್ ಅಮೇರಿಕವನ್ನು ತ್ಯಜಿಸಿ ಸ್ವಿಜರ್ಲೆಂಡಿಗೆ ಹೋಗಿ ನೆಲೆಸಿದ.

ಚಾಪ್ಲಿನ್ನನ ಜನ್ಮಭೂಮಿ ಇಂಗ್ಲಂಡ್ ಬಹಳ ತಡವಾಗಿಯಾದರೂ ಆತನನ್ನು ಗೌರವಿಸಿತ್ತು. ಮಾರ್ಚ್ ೪, ೧೯೭೫ರಂದು ಬಕ್ಕಿಂಗ್‌ಹ್ಯಾಮ್ ಅರಮನೆಯಲ್ಲಿ, ಎರಡನೆಯ ಎಲಿಜಬೆತ್ ರಾಣಿ ಆತನಿಗೆ 'ನೈಟ್‌ಹುಡ್' ಇತ್ತು ಸನ್ಮಾನಿಸಿದರು. ಹೀಗೆ ಒಂದಾನೊಂದು ಕಾಲದಲ್ಲಿ ಲಂಡನ್ ಕೊಳಚೆ ಪ್ರದೇಶದ ಹುಡುಗನಾಗಿದ್ದಾತ ಸರ್ ಚಾರ್ಲಿ ಚಾಪ್ಲಿನ್ನನಾದ. ಬಹುಶಃ ಚಿತ್ರರಂಗದ ಮೂಲಕ ಜನಮಾನಸದ ಮೇಲೆ ಇಷ್ಟೊಂದು ಪ್ರಭಾವ ಬೀರಿದ ವ್ಯಕ್ತಿ ಬೇರೆ ಇಲ್ಲ. ✪

ಕಂಪನಿ ಷೇರುಗಳಲ್ಲಿ
ನೀವು ಸಣ್ಣ ಪ್ರಮಾಣದಲ್ಲಿ ಹಣ ತೊಡಗಿಸಿದ್ದೀರಾ ?
ಹಾಗಿದ್ದರೆ, ನೀವು ನಿಮ್ಮ ಡಿವಿಡೆಂಡ್ ಅನ್ನು ಯಾವುದೇ ತೆರಿಗೆ ಮುರಿದುಕೊಳ್ಳದೆ ಪಡೆಯಬಹುದು

ನೀವು ಒಂದು ಕಂಪೆನಿಯಾಗಿಲ್ಲದಿದ್ದಲ್ಲಿ ಮತ್ತು ಡಿವಿಡೆಂಡ್ ಸೇರಿದಂತೆ ನಿಮ್ಮ ಒಟ್ಟು ವರಮಾನ, ವರಮಾನ ತೆರಿಗೆಗೆ ಒಳಗಾಗಬಹುದಾದ ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆ ಇರುವ ಸಂಭವವಿದ್ದಲ್ಲಿ (ಅಂದರೆ, ವ್ಯಕ್ತಿಗಳು, ಹಿಂದು ಅವಿಭಕ್ತ ಕುಟುಂಬಗಳು, ಸಂಸ್ಥೆಗಳು, ವ್ಯಕ್ತಿಗಳ ಸಂಘ, ವ್ಯಕ್ತಿಗಳ ಗುಂಪು ಮತ್ತು ಆರ್ಟಿಫಿಷಿಯಲ್ ಜ್ಯುರಿಡಿಕಲ್ ವ್ಯಕ್ತಿಗಳಿಗೆ ವರ್ಷಕ್ಕೆ ರೂ. 10.000), ಕಂಪೆನಿ ಘೋಷಿಸಿದ ಪೂರ್ಣ ಡಿವಿಡೆಂಡ್ ಅನ್ನು, ಮೂಲದಲ್ಲಿ ಯಾವುದೇ ತೆರಿಗೆಯನ್ನು ಹಿಡಿದುಕೊಳ್ಳದೆ, ನೀವು ಪಡೆಯಬಹುದು.

ಹೇಗೆ?

ನೀವು ಯಾವ ಕಂಪೆನಿಯ ಷೇರುಗಳನ್ನು ಹೊಂದಿದ್ದೀರೋ ಆ ಕಂಪೆನಿಗೆ, ತೆರಿಗೆ ಮುರಿದುಕೊಳ್ಳದೆ ಅಂತಹ ಡಿವಿಡೆಂಡ್‌ಗಳನ್ನು ನಿಮಗೆ ಕೊಡುವಂತೆ, ಕಂಪೆನಿಗೆ ಅಧಿಕಾರ ನೀಡುವ ಸರ್ಟಿಫಿಕೇಟ್ ಕೊಡುವಂತೆ, ನಿಮ್ಮ ವರಮಾನ ತೆರಿಗೆ ಅಧಿಕಾರಿಗೆ ಫಾರಂ ಸಂಖ್ಯೆ 14ಯಲ್ಲಿ ಘೋಷಣಾಪತ್ರವನ್ನು (ದ್ವಿಪ್ರತಿಗಳಲ್ಲಿ) ಕಳಿಸಿ.

ಈ ಸೌಲಭ್ಯವನ್ನು ಪಡೆದು ವರಮಾನ ತೆರಿಗೆ ಕಚೇರಿಯಿಂದ ಹಣ ವಾಪಸು ಮಾಡುವಂತೆ ಕೇಳುವುದನ್ನು ತಪ್ಪಿಸಿ.

ಇವರಿಂದ ಪ್ರಕಟಿತ:
ದಿ ಡೈರೆಕ್ಟರ್ ಆಫ್ ಇನ್‌ಸ್ಪೆಕ್ಷನ್
(ರಿಸರ್ಚ್, ಸ್ಟೇಟಿಸ್ಟಿಕ್ಸ್ ಅ್ಯಂಡ್ ಪಬ್ಲಿಕೇಶನ್)
ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್,
ನ್ಯೂ ಡೆಲ್ಲಿ-೧೧೦ ೦೦೧.

davp 78/157

ಶಿವಛತ್ರಪತಿಯ ಭವಾನಿ ಖಡ್ಗ

ಗೌರೀಶ ಕಾಯ್ಕಿಣಿ

ಶಿವಾಜಿ ಸಾಮ್ರಾಜ್ಯದಲ್ಲಿ ಭಾವಾವೇಶದಿಂದ ಉದ್ಗರಿಸಲ್ಪಟ್ಟು, ಕುತೂಹಲಕ್ಕೆ ಕಾರಣವಾಗಿದೆ ಶಿವಛತ್ರಪತಿಯ "ಭವಾನಿಖಡ್ಗ"ದ* ರಹಸ್ಯ. ಆ ಬಗ್ಗೆ ಹಲವು ದಶಕಗಳಿಂದಲೂ ನಾನಾ ವಿಧದಲ್ಲಿ ಅಭಿಪ್ರಾಯಗಳು ಬರುತ್ತಲೇ ಇವೆ. ಇತಿಹಾಸ ಸಂಶೋಧಕರಿಗೊಂದು ಸವಾಲಾಗಿ ನಿಂತಿರುವ ಈ ಖಡ್ಗದ ಕುರಿತು ಇತ್ತೀಚೆಗಷ್ಟೇ ಮತ್ತಷ್ಟು ಹೊಸ ವಿವರಗಳು ದೊರೆತಿವೆ. ಈ ವಿವರಗಳು ಆ ಖಡ್ಗದ ಬಗ್ಗೆ ಈಗಿರುವ ಅಭಿಪ್ರಾಯದ ಸತ್ಯಾಸತ್ಯವನ್ನು ಅರಿತುಕೊಳ್ಳಲು ಸಹಾಯಕವಾಗಬಲ್ಲವು.

ಜುಲೈ ೧, ೧೯೭೮ರಂದು ಪುಣೆಯ ಭಾರತ ಇತಿಹಾಸ ಸಂಶೋಧನ ಮಂಡಳದ ೬೮ನೆಯ ವರ್ಧಂತಿ. ಅದರಂಗವಾಗಿ ಮಂಡಳದ ರಾಜವಾಡೆ ಸಭಾಮಂದಿರದಲ್ಲಿ ಸಂಶೋಧನ ಪ್ರಬಂಧಗಳ ಮಂಡನೆ ಮತ್ತು ಚರ್ಚೆಗಳು ನಡೆದವು. ಜ್ಞಾನವೃದ್ಧ ಮಹಾಮಹೋಪಾಧ್ಯಾಯ ದತ್ತೋವಾಮನ ಪೋತದಾರ ಅವರ ಅಧ್ಯಕ್ಷತೆ ಮತ್ತು ಗ. ಹ. ಖರೆ ಅವರ ಸಹಾಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಶಿವಛತ್ರಪತಿಯ ಭವಾನಿ ಖಡ್ಗದ ವಿಷವಾಗಿ ಪ್ರತಿಪಾದನೆಯೂ ನಡೆಯಿತು.

ಈ ಪ್ರತಿಪಾದನೆಯನ್ನು ಮಂಡಿಸಿದವರು ಪ್ರಸಿದ್ಧ ಇತಿಹಾಸ ಸಂಶೋಧಕ ಯ. ನ. ಕೇಳಕರ ಅವರು. ಅವರ ಅಭಿಪ್ರಾಯದ ಸಾರ ಇದು: "ಇಂದಿನವರೆಗೂ ಶಿವಛತ್ರಪತಿಗೆ ಶ್ರೀ ಭವಾನಿ ಮಾತೆ ದಯಪಾಲಿಸಿದ್ದಾಳೆಂಬ ಆ ಖಡ್ಗದ ಯಾವ ಗೊತ್ತು ಪತ್ತೆಯೂ ಹತ್ತಿಲ್ಲ. ಆದಾಗ್ಯೂ ೧೮೨೦ ರವರೆಗೆ ಆ ಖಡ್ಗ ಸಾತಾರೆಯ ರಾಜಮನೆತನದವರ ಬಳಿ ಇದ್ದುದರ ಬಗ್ಗೆ ದಫ್ತರೀ ದಾಖಲೆಗಳು ಸಿಗುತ್ತವೆ.

"ಗ್ರಾಂಟ್ ಡಫ್‌ನ ಗ್ರಂಥದಲ್ಲಿ ಶಿವಾಜಿಗೆ ಭವಾನಿ ದೇವಿಯಿಂದ ಖಡ್ಗವು ದೊರೆಯಿತೆಂಬ ಉಲ್ಲೇಖದ ಜೊತೆಗೆ ಆ ಖಡ್ಗದ ವರ್ಣನೆಯೂ ಇದೆ. ಆದರೆ ಎಷ್ಟೋ ದಿನಗಳ ಸಂಶೋಧನದ ನಂತರವೂ ಕೂಡ ಈ ಖಡ್ಗ ಸಾತಾರೆಯ ಇಲ್ಲವೇ ಕೊಲ್ಹಾಪುರದ ಸಂಗ್ರಹಾಲಯಗಳಲ್ಲಿ ಕಾಣಸಿಕ್ಕಿಲ್ಲ.

"ಒಂದೆ ಕೊಲ್ಹಾಪುರದ ರಾಜಮನೆತನದಿಂದ ಪ್ರಿನ್ಸ್ ಆಫ್ ವೇಲ್ಸ್‌ಗೆ ಅರ್ಪಿಸಲಾದ ಖಡ್ಗವೇ ಭವಾನಿ ಖಡ್ಗ ಎಂದೂ ಹೇಳಲಾಗುತ್ತದೆ. ಆದರೆ ಅದು ತಪ್ಪು ಹೇಳಿಕೆ. ಬೇರೆ ಯಾವುದೋ ಹಳೆಯ ಖಡ್ಗವೊಂದನ್ನು ಅವರಿಗೆ ಅರ್ಪಿಸಲಾಯಿತು. ಸಾತಾರೆಯ ಛತ್ರಪತಿ ವಂಶದ ಪ್ರತಾಪಸಿಂಹ ರಾಜೇ ಭೋಸಲೆ ಇವರ ವಶದಲ್ಲಿ ೧೮೩೯ ತನಕವೂ ಈ ಭವಾನಿ ಖಡ್ಗವು ಅವರಲ್ಲಿದ್ದ ಬಗ್ಗೆ

* ೧೯೭೭ರ ಜುಲೈ 'ಕಸ್ತೂರಿ'ಯಲ್ಲಿ ಪ್ರಕಟವಾದ 'ಶಿವಛತ್ರಪತಿಯ ಭವಾನಿ ಖಡ್ಗ' ಲೇಖನವನ್ನು ನೋಡಿರಿ.

ಮತ್ತು ನಿತ್ಯ ಅದರ ಪೂಜೆ ನಡೆಯುತ್ತಿದ್ದ ಬಗ್ಗೆ ಉಲ್ಲೇಖವಿದೆ. ಅಷ್ಟೇ ಅಲ್ಲ, ಕಲಕತ್ತೆ ಸಾಹೇಬರಿಗೆ ಖಡ್ಗದ ಭಾರ ನೋಡಲು ಕೊಡಲಾಯಿತು ಎಂದೂ ಪ್ರತಾಪಸಿಂಹರಾಜೇ ಭೋಸಲೇ ಬರೆದಿದ್ದಾರೆ."


ಕೇಳಕರರ ಈ ಪ್ರಬಂಧದ ಮೇಲೆ ಗ. ಹ. ಖರೆ [illegible] ಅಭಿಪ್ರಾಯ ವ್ಯಕ್ತಪಡಿಸುತ್ತಾ, "ಸಾತಾರೆ [illegible] ಪಟದ ತನಿಖೆ ನಡೆಸಿದೆ. ಅನೇಕ [illegible] ನೋಡಿ ಪರೀಕ್ಷಿಸಿದೆ. ಆದರೆ ಭವಾನಿ ಖಡ್ಗದ ಬಗೆ ಪುರಾವೆ ದೊರೆಯಲಿಲ್ಲ. ೧೯೭೪ರಲ್ಲಿ ಮುಂಬಯಿಯಲ್ಲಿ ಶ್ರೀ ದಾದೂಮಾಮಾ (ಡಾ.ನೇನೇ) ಅವರು [illegible] ಖಡ್ಗವೊಂದನ್ನು ಭವಾನಿ ಖಡ್ಗ ಎಂದು [illegible] ಅದರ ಮೆರವಣಿಗೆ ಹೊರಡಿಸಿದ್ದರು. ಆದರೆ ಅದು ಭವಾನಿ ಖಡ್ಗವೇ ಹೌದು ಎಂಬುದಕ್ಕೆ ಯಾವ ಪುರಾವೆಗಳೂ ಸಿಗಲಿಲ್ಲ. ಅದೇ ರೀತಿ ಎಡ್ವರ್ಡ್ (ಅಂದಿನ ಪ್ರಿನ್ಸ್ ಆಫ್ ವೇಲ್ಸ್)ಗೆ ಅರ್ಪಿಸಲಾದ ಆ ಖಡ್ಗವೂ ಶಿವಾಜಿಯ ಭವಾನಿ ಖಡ್ಗವಾಗಿರದೇ ಕೊಲ್ಹಾಪುರದ ರಾಜಮನೆತನದ ಜಗದಂಬಾ ಖಡ್ಗವಾಗಿತ್ತು ಎಂದರು.

ಹೋಂ ರೂಲ್ ಚಳವಳಿಯ ಪ್ರಚಾರಕ್ಕಾಗಿ ಇಂಗ್ಲೆಂಡಿಗೆ ಹೋಗಿದ್ದ ಲೋಕಮಾನ್ಯ ಟಿಳಕರಿಗೆ ಅಂದಿನ ಮರಾಠಿ ಸುಪ್ರಸಿದ್ಧ ದೇಶಪ್ರೇಮಿ ಕವಿ "ಗೋವಿಂದಾಗ್ರಜ"(ರಾಮ ಗಣೇಶ ಗಡಕರಿ— ನಮ್ಮ ಅಂಬಿಕಾತನಯದತ್ತರ ಕಾವ್ಯ ಗುರು) ಅವರು ಕವನವೊಂದರಲ್ಲಿ ತುಂಬ ಭಾವಾವೇಶದಿಂದ, "ಸ್ವಾಮಿ, ಸ್ವರಾಜ್ಯ ಸಿಗದಿದ್ದರೂ ಚಿಂತೆಯಿಲ್ಲ, ನಮ್ಮ ಛತ್ರಪತಿಗಳ ಭವಾನಿ ತಲವಾರನ್ನು ನ್ನು ಮಾತ್ರ ತಪ್ಪದೇ ತನ್ನಿ," ಎಂದು ಬಿನ್ನವಿಸಿದ್ದರು.

ಮರಾಠಿಗರ ಭಾವುಕತೆಗೆ ಕಾರಣವಾಗಿ ಕುತೂಹಲ ಕೆರಳಿಸುತ್ತಿರುವ ಭವಾನಿ ಖಡ್ಗ ಕೇವಲ ಕವಿಕಲ್ಪನೆ ಮಾತ್ರವೇ ಆಗಿ ಉಳಿಯುವುದೋ ಏನೋ! ಶಿವಾಜಿ ನಿತ್ಯ ಬಳಸುತ್ತಿದ್ದ ಖಡ್ಗವನ್ನು ಆತ ಭವಾನಿ ಖಡ್ಗ ಎಂದು ಕರೆದಿರಬಹುದು. ಆದರೆ ಅದನ್ನು ಆತನ ಕುಲದೇವಿ ತುಳಜಾಪುರದ ಭವಾನಿಯೇ ಪ್ರತ್ಯಕ್ಷಳಾಗಿ ಪ್ರದಾನಿಸಿದಳೆಂಬುದು ಮಾತ್ರ ಒಂದು ಕಟ್ಟುಕಥೆಯೆನಿಸಬಹುದೇ ವಿನಾ ಐತಿಹಾಸಿಕ [illegible] ಆ ಖಡ್ಗ ದೇವಿಯ ಪ್ರಸಾದ ಎಂಬ ಪೂಜ್ಯಭಾವನೆ ಶಿವಾಜಿಗೆ ಬಂದಿರಲೂ ಸಾಕು. ಇದು ಕೇವಲ ಭಾವಾತ್ಮಕ ಮತ್ತು ಆತ್ಮನಿಷ್ಠೆಯ ವಿಚಾರವೇ ಹೊರತು ಅದೊಂದು ಐತಿಹಾಸಿಕ ದಾಖಲೆಯಾಗಿ ಇತಿಹಾಸ ಸಂಶೋಧನದ ವಿಷಯ ಮಾತ್ರ ಎಂದಿಗೂ ಆಗದು. ✡



ಸೆಪ್ಟೆಂಬರ 1978


ಡೋರ್ನ್‌ಫ್ಯಾಬ್ : ಮನುಷ್ಯನ ಅತ್ಯುತ್ತಮ ಸಾಧನೆಗೆ ತಕ್ಕುದಾದ ಪ್ರಥಮ ಕೊಡುಗೆ
ಬೆಂಕಿಯ ಸಂಶೋಧನೆಯಿಂದ ಚಂದ್ರಲೋಕದಲ್ಲಿ ಅಡಿಯಿಡುವ ವರೆಗೆ, ಉಪನಿಷತ್ತುಗಳಿಂದ ಯುದ್ಧ ಮತ್ತು ಶಾಂತಿಯ ವರೆಗೆ, ಮೋನಾ ಲೀಸಾದಿಂದ ಗುರ್ನಿಕಾ ವರೆಗೆ, ಪಿರಮಿಡ್‌ಗಳಿಂದ ತಾಜ ಮಹಲ್ ವರೆಗೆ, ರಾಗ ಮಾಲಕೌಂಸದಿಂದ ಐದನೆ ಸಿಂಫೊನಿ ವರೆಗೆ ಮನುಷ್ಯನು ತನ್ನ ಸಾಧನೆಗಳಿಂದ ಸಮಯದ ಹಾದಿಯಲ್ಲಿ ದೀಪ ಹಚ್ಚುತ್ತ ಬಂದಿದ್ದಾನೆ.
ಮನುಷ್ಯನ ಸಾಧನೆಗೆ ದ್ಯೋತಕವಾಗಿ ಡೋರ್ನ್‌ಫ್ಯಾಬ್ ಸೂಟಿಂಗ್‌ಗಳಿಗಿಂತ ಉತ್ತಮ ಕೊಡುಗೆಯು ಬೇರೆ ಇಲ್ಲ.
DORNFAB supersuiting sensation
FROM THE CREATORS OF
GWALIOR SUITING

ಸಾವಿರ ಪ್ರಣಾಯಿಗಳು



ಉರ್ದು ಮೂಲ : ಕೃಷ್ಣ ಚಂದ್ರ
ಕನ್ನಡಕ್ಕೆ : ಪ. ಸು ಭಟ್ಟ
ಸಂಗ್ರಹ : ಅರವಿಂದ ಆರ್ಯ

ಸಾವಿರ ಪ್ರಣಯಿಗಳು

ನಗರವಾಸಿ ಗುಲ್, ಆಕರ್ಷಕ ಚೆಲುವಿನ ಜಿಪ್ಸಿ ಯುವತಿ ಲಚ್ಚಿ ಇವರಿಬ್ಬರ ನಡುವಣ ರೋಮಾಂಚಕಾರೀ ಪ್ರೇಮಕಥೆ 'ಸಾವಿರ ಪ್ರಣಯಿಗಳು.' ಉರ್ದುವಿನಲ್ಲಿ ೪೦ ಸಂಪುಟಗಳಾಗುವಷ್ಟು ಕತೆ, ಕಾದಂಬರಿಗಳನ್ನು ರಚಿಸಿದ ಅಂತಾರಾಷ್ಟ್ರೀಯ ಖ್ಯಾತ ಲೇಖಕ ಕೃಷ್ಣಚಂದ್ರರ ಹರಿತ ಲೇಖನಿ ಜಿಪ್ಸಿ ಜನಾಂಗದ ಸ್ವಚ್ಛಂದ ಪ್ರವೃತ್ತಿಯ ಬದುಕಿನ ನೋವು, ನಲಿವುಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದೆ. 'ಏಕ್ ಔರತ್ ಹಜಾರ್ ದಿವಾನೆ' ಎನ್ನುವ ಈ ಮೂಲ ಕೃತಿ ಭಾರತದ ಹಾಗೂ ಯುರೋಪಿನ ಅನೇಕ ಭಾಷೆಗಳಿಗೂ ಅನುವಾದಿತವಾಗಿದೆ. ಖ್ಯಾತ ಸಾಹಿತಿ, ಪತ್ರಿಕೋದ್ಯಮಿ ಪ. ಸು. ಭಟ್ಟರು ಕಾದಂಬರಿಯ ಮೂಲ ಭಾವನೆಗಳ ಸೌಂದರ್ಯಕ್ಕೆ ಕಿಂಚಿತ್ತೂ ಕುಂದು ಬಾರದಂತೆ ಕನ್ನಡದಲ್ಲಿ ಅನುವಾದಿಸಿದ್ದಾರೆ.

"ರೈಲ್ವೆ ಯಾರ್ಡಿನಲ್ಲಿ ಕಲ್ಲಿದ್ದಲು ಕದಿಯುತ್ತಿರುವಾಗ ಇವಳನ್ನು ಹಿಡಿದು ತಂದಿರುವೆ" ಎಂದ ಲಚ್ಚಿಯನ್ನು ಸ್ಟೇಷನ್ ಮಾಸ್ತರರ ರೂಮಿಗೆ ಎಳೆದುತಂದ ಕಾವಲುಗಾರ.

ಆ ಗುಜರಾತಿ ಸ್ಟೇಶನ್ ಮಾಸ್ತರ ರಸಿಕಲಾಲ ಅವಳತ್ತ ನೋಡಿದ. ಆತ ಆ ಸಮಯದಲ್ಲಿ ವ್ಯಾಗನು ಕೊಡುವುದಕ್ಕೆ ಸಂಬಂಧಿಸಿದಂತೆ ಹುಲ್ಲು ವ್ಯಾಪಾರಿ ಗಂಗಾದಿನನೊಡನೆ ಮಾತುಕತೆ ನಡೆಸಿದ್ದ. ಈ ವ್ಯವಹಾರ ಕುದುರಿದರೆ ತನ್ನ ಜೇಬಿಗೆ ೫೦೦ ರೂಪಾಯಿ ಬೀಳುವುದೆಂದು ಅವನ ಆಸೆ.

"ಈ ಬಾರಿ ಇವಳನ್ನು ಬಿಟ್ಟುಬಿಡು. ಟರ್ನ್‌ಡೌನ್ ರೈಲು ಇನ್ನೊಂದು ನಿಮಿಷದೊಳಗಾಗಿ ಇಲ್ಲಿಗೆ ಬಂದುಬಿಡುತ್ತದೆ. ಇರುವ ತಲೆನೋವಿನ ಜೊತೆಗೆ ಇನ್ನಷ್ಟು ಸೇರಿಸಿಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ," ಎಂದ ರಸಿಕಲಾಲ.

ಅನಂತರ ಅವನು ಲಚ್ಚಿಯ ಕಡೆಗೆ ತಿರುಗಿ, "ನೋಡು ಈ ಬಾರಿ ನಾನು ನಿನ್ನನ್ನು ಬಿಡುತ್ತಿದ್ದೇನೆ. ಇನ್ನೊಂದು ಸಾರಿ ನೀನು ನನ್ನ ಕೈಗೆ ಸಿಕ್ಕಿದರೆ ಜೈಲಿಗೆ ಹಾಕಿಸುತ್ತೇನೆ."

"ಆಗಲಿ" ಎಂದು ದರ್ಪದಿಂದ ನುಡಿಯುತ್ತಾ ಲಚ್ಚಿ, ಕೂಡಲೇ ಕಾವಲುಗಾರನ ಕೈ ಕೊಸರಿ ಹೊರಗೆ ಓಡಿದಳು.

ಲಚ್ಚಿ ಅಲೆಮಾರಿ ಜನಾಂಗದ ಹುಡುಗಿ. ಎತ್ತರ ನಿಲುವಿನ ಬಳುಕುವ ದೇಹ, ಹೊನ್ನ ಮೈಬಣ್ಣ, ಬೂದುಗಣ್ಣುಗಳು, ಬಿಲ್ಲಿನಂತೆ ಬಾಗಿದ ಎದೆ, ಬಾಣದಂತೆ ಬಾಗಿ ಬಳುಕುವ ಸೊಂಟ—ಅವಳು ನಡೆದು ಹೋಗುವಾಗ ಇಡೀ ಪ್ರಪಂಚವೇ ತನ್ನ ಕಾಲಡಿಯಲ್ಲಿದೆಯೇನೊ ಎಂದೆನಿಸುತ್ತಿತ್ತು ಅವಳಿಗೆ.

ದಾರಿಯಲ್ಲಿ ಚುಚ್ಚು ನುಡಿದ ಟ್ಯಾಕ್ಸಿ ಡ್ರೈವರ್ ಹಮೀದನಿಗೆ ಥುತ್ತೆಂದು ಉಗುಳಿ ತನ್ನ ಸೊಂಟ ಕುಣಿಸುತ್ತಾ ಬಸ್‌ಸ್ಟ್ಯಾಂಡ್‌ನತ್ತ ಹೊರಟಳಾಕೆ—ಭಿಕ್ಷೆ ಬೇಡಲು. ಬೊರಿವಿಲಿ ಲೋಕಲ್ ಆಗ ತಾನೇ ಎರಡನೇ ನಂಬರ ಪ್ಲಾಟ್‌ಫಾರಂಗೆ ಬಂದಿತ್ತು.

ಬಸ್‌ಸ್ಟ್ಯಾಂಡಿಗೆ ಹೋಗುವ ದಾರಿಯಲ್ಲಿ ಲಚಿ ಮಾಧೋನ ಹಣ್ಣಿನಂಗಡಿಯಿಂದ ಒಂದು ಸೀಬೆ ಹಣ್ಣನ್ನೆತ್ತಿಕೊಂಡಳು. ತುಟಿಗಳನ್ನು ನಾಲಿಗೆಯಿಂದ ಸವರುತ್ತ ದುರಾಸೆಯ ಕಣ್ಣುಗಳಿಂದ

ಅವಳತ್ತ ನೋಡಿದ ಮೊಘೊ, "ಬುಟ್ಟಿಯನ್ನ ತಗೊಂಡುಬಿಡು" ಎಂದ.

ಅರ್ಧ ತಿಂದುಳಿದ ಸೀಬೆ ಹಣ್ಣನ್ನು ಅವನ ಮೋರೆಗೆ ಎಸೆದು ಮುಂದೆ ನಡೆದಳಾಕೆ. ಬಸ್‌ಸ್ಟ್ಯಾಂಡಿನಲ್ಲಿ ಕ್ಯೂ ನಿಂತಿದ್ದವರ ಬಳಿ ಹೋಗಿ ಭಿಕ್ಷೆ ಬೇಡ ತೊಡಗಿದಳು.

ಲಚ್ಚಿ ತನ್ನ ಚಿಕ್ಕಪ್ಪ ಮಾಮುನ್ ಜೊತೆಗೆ ವಾಸಿಸುತ್ತಿದ್ದಳು. ಅವಳ ತಾಯಿ ಕೋಲಿಯಾ ಅವನೊಂದಿಗೆ ಇದ್ದಳು. ಲಚ್ಚಿಯ ತಂದೆ ರಗ್ಗಿ ಕುಡಿತದ ಅಮಲಿನಲ್ಲಿದ್ದಾಗ ಜೂಜಿನಲ್ಲಿ ತನ್ನ ಮಡದಿಯನ್ನು ಮಾಮುನ್‌ಗೆ ಸೋತಿದ್ದ. ಆಗ ಲಚ್ಚಿಗೆ ಕೇವಲ ನಾಲ್ಕು ವರ್ಷ ವಯಸ್ಸು. ಈ ಘಟನೆಯ ನಂತರ ರಗ್ಗಿಯನ್ನು ಕಂಡರೆ ಲಚ್ಚಿಗೆ ಆಗುತ್ತಿರಲಿಲ್ಲ.

*

ಲಚ್ಚಿ ಸಂಜೆ ಮನೆಗೆ ಹಿಂತಿರುಗುವಾಗ ದಾರಿಯಲ್ಲಿ ಕೈ ಚಾಚಿದ ರಗ್ಗಿಗೆ ನಾಲ್ಕಾಣೆ ನಾಣ್ಯವನ್ನಿತ್ತು ಗುಡಾರದತ್ತ ನಡೆದಳು.

ಯಾವುದಕ್ಕೂ ಪ್ರಯೋಜನವಿಲ್ಲದ ಸೋಮಾರಿ. ಕೆಲಸಗಳ್ಳ ರಗ್ಗಿಗೆ ಮೋಹಕ ಧ್ವನಿಯಿತ್ತು. ಹಿಂದಿ ಹಾಡಿಸುವುದರಲ್ಲಿ, ಹಾಡುವುದರಲ್ಲಿ, ಕುಣಿತದಲ್ಲಿ, ಕುಡಿತದಲ್ಲಿ, ಯಾರನ್ನಾದರೂ ಅವನು ಮೀರಿಸುತ್ತಿದ್ದ. ಮನಸ್ಸು ಚೆನ್ನಾಗಿದ್ದಾಗ ಅತ ಸೊಗಸಾದ ಬುಟ್ಟಿಗಳನ್ನು ಹೆಣೆಯುತ್ತಿದ್ದ. ಹರಕಲು ಬಟ್ಟೆ, ಒರಟಾದ ಗಡ್ಡ. ತಾಮ್ರದಂತೆ ಹೊಳೆಯುವ ಕಣ್ಣು, ಕ್ರೌರ್ಯವೇ ಮೂರ್ತಿವೆತ್ತಂತೆ ಕಾಣುತ್ತಿದ್ದ ಅತ.

ಲಚ್ಚಿ ಗುಡಾರದ ಬಳಿ ಬಂದಾಗ ಕೋಲಿ. ಮಾಮುನ್. ಪಂಗಡದ ಮುಖ್ಯಸ್ಥ ಸರದಾರ ದುಮಾರು ಮಣ್ಣಿನ ಹೊಗೆಯಲ್ಲಿ ಹೆಂಡ ಕುಡಿಯುತ್ತ ಇಸ್ಪೀಟು ಆಡುತ್ತಿದ್ದರು.

ಲಚ್ಚಿ ತಂದ ಹಣವನ್ನು ತಾಯಿ ಮಡಿಲಿಗೆ ಸುರಿದು ಗುಡಾರದೊಳಗೆ ಹೋದಳು. ಹೊರಗೆ ಕುಳಿತ ದುಮಾರು ಅವಳನ್ನು ಕದ್ದು ಕದ್ದು ನೋಡುತ್ತಿದ್ದ.

ರಾತ್ರಿ ಊಟವಾದ ನಂತರ ಜೂಜಾಟ [illegible]ಂತಾಗ ದುಮಾರು ಲಚ್ಚಿಯನ್ನು ಕೊಂಡುಕೊಳ್ಳ ಬಯಸಿದ. ಕೋಲಿ [illegible] ಮುನ್ನೂರೈವತ್ತು ಕೇಳಿದಳು. ದುಮಾರು ಕೊನೆಗೆ ಒಪ್ಪಿ ಹಣವನ್ನಿತ್ತ. ರಗ್ಗಿ ಮತ್ತು [illegible]ದಲ್ಲಿ ದುಮಾರು ಅವನಿಗೆ ೨೦ ರೂಪಾಯಿಗಳನ್ನಿತ್ತ.

ಅನಂತರ ಕೋಲಿಯು ಕೈಯನ್ನು ಚುಂಬಿಸಿ, "ನೆನಪಿಡಿಯಾ. ನಿನ್ನ ಮೇಲೆ ಬಹಳ ನಾನು ಆಸೆಯಿಟ್ಟಿದ್ದೆ ಆದರೆ ನಿಮ್ಮಪ್ಪ ಒಪ್ಪಲಿಲ್ಲ. ರಗ್ಗಿಗೆ ನಿನ್ನನ್ನು ಮಾರಿದ" ಎಂದನಾತ.

ಲಚ್ಚಿಯನ್ನು ಕೊಂಡುಕೊಂಡ ದುಮಾರು ಅವರ ಪದ್ಧತಿಯಂತೆ ತನ್ನ ಗುಡಾರಕ್ಕೆ ಅವಳನ್ನು ಎತ್ತಿಕೊಂಡು ಹೋಗಬೇಕಿತ್ತು. ದುಮಾರುವಿಗೆ ವಯಸ್ಸಾಗಿತ್ತು.

ಹಠಾತ್ತನೆ ಗುಡಾರದ ತೆರೆ ಸರಿಸಿ ಲಚ್ಚಿ ಚಾಕುವಿನೊಂದಿಗೆ ಹೊರಕ್ಕೆ ಧಾವಿಸಿಬಂದಳು.

*

"ನನ್ನನ್ನು ಮಾರಿದವರು ಯಾರು ?" ಲಚ್ಚಿ ಕೇಳಿದಳು.

"ಹೆಣ್ಣು. ಹೆಣ್ಣುಕುದುರೆ. ಭೂಮಿ ಇರೋದೇ ಯಾವಾಗಲೂ ಮಾರಾಟಕ್ಕೆ. ಸರದಾರ ನಿನ್ನನ್ನು ಕೊಂಡುಕೊಂಡಿದ್ದಾನೆ" ಎಂದಳು ಲಚ್ಚಿಯ ತಾಯಿ.

ದುಮಾರು ಲಚ್ಚಿಯತ್ತ ಸರಿದಾಗ ಆಕೆ ಚೂರಿಯನ್ನು ಥಟ್ಟನೆ ಇರಿಯುವಂತೆ ಗಾಳಿಯಲ್ಲಿ ಬೀಸಿ, "ನನ್ನ ಹತ್ತಿರ ಬರಬೇಡ" ಎಂದಳು.

ದುಮಾರು ಛಂಗನೆ ಅವಳತ್ತ ನೆಗೆದು ಅವಳನ್ನು ಎತ್ತಿಕೊಂಡು ತನ್ನ ಗುಡಾರದತ್ತ ಒಂದೇ ಉಸುರಿಗೆ ಓಡಿದ. ಲಚ್ಚಿ ಉಪಾಯದಿಂದ ಬಿಡಿಸಿಕೊಂಡು ತನ್ನ ಗುಡಾರದತ್ತ ಓಡಿದಳು. ದುಮಾರು ಬೆನ್ನಟ್ಟಿದ.

"ಲಚ್ಚಿ, ನಿನ್ನ ಇಷ್ಟದ ಹಾಗೆ ಮಾಡು. ನೀನಾದರೂ ಬಾ. ಇಲ್ಲದಿದ್ದರೆ ರೂಪಾಯಿಯಾದರೂ ವಾಪಸು ಬರಲಿ. [illegible]. ನೀನು ಹೇಳಿದ್ದಕ್ಕೆ ನಾನು ಒಪ್ಪುತ್ತೇನೆ" ಎಂದ ದುಮಾರು.

"ಮೂರು ತಿಂಗಳೊಳಗೆ ವಸಂತ ಹಬ್ಬದ ಹೊತ್ತಿಗೆ ನಾನು ನಿನ್ನ ಹಣವನ್ನು ನಿನಗೆ ಹಿಂತಿರುಗಿಸುತ್ತೇನೆ. ಇಲ್ಲದಿದ್ದರೆ ನಾನು ನಿನ್ನ ಹೆಂಡತಿಯಾಗ್ತೀನಿ. ನಿನ್ನಿಷ್ಟದ ಹಾಗೆ ನಡೆದುಕೊಳ್ತೀನಿ" ಎಂದಳು ಲಚ್ಚಿ.

ದುಮಾರು ಹೊರಟುಹೋದ. ಲಚ್ಚಿ ಗುಡಾರದಲ್ಲಿ ಹೋಗಿ ಮಲಗಿದಳು. ನಿದ್ರೆ ಬರಲಿಲ್ಲ. ತನ್ನ [illegible] ರೂಪಾಯಿಗಳನ್ನು ಹೇಗೆ [illegible]? ಎಂದು ಯೋಚಿಸಿದಳು. [illegible]

ಅಲೆಮಾರಿಗಳ ನಡುವೆ ಅವಳು ದೊಡ್ಡವಳಂತೆ ಮಾಡಿತ್ತು.

"ಲಚ್ಚಿ" ಹಿಂದಿನಿಂದ ಕೇಳಿಬಂದತ್ತ ಆಕೆ ತಿರುಗಿ ನೋಡಿದಳು. ಡೇರೆಯ ಹೊರಗಡೆ ಗುಲ್ ನಿಂತಿದ್ದ.

ಗುಲ್ ಬಲೂಚಿಯ ಮಗ. ಲೇವಾದೇವಿಯನ್ನು ಮಾಡುತ್ತಿದ್ದ ಆತ ಆ ಪ್ರದೇಶದಲ್ಲಿ ಚಿರಪರಿಚಿತ ವ್ಯಕ್ತಿಯಾಗಿದ್ದ. ತಂದೆ–ಮಗ ಎರಡು ಧ್ರುವಗಳಂತಿದ್ದರು. ತುಂಬಾ ಕರ್ತವ್ಯನಿಷ್ಠ ಮಗನಾದ್ದರಿಂದ ಗುಲ್ ಗೊಣಗದೆ ಅಪಮಾನವನ್ನು ಸಹಿಸಿಕೊಳ್ಳುತ್ತಿದ್ದ.

ಗುಲ್ ತೆಳ್ಳಗಿದ್ದ. ಅವನ ಕಣ್ಣುಗಳು ಕನಸು ಕಾಣುತ್ತಿದ್ದವು. ನುಣುಪಾಗಿ ಕ್ಷೌರ ಮಾಡಿಕೊಂಡಿರುತ್ತಿದ್ದ. ಅವನು ಪ್ಯಾಂಟು, ಬುಷ್‌ಶರ್ಟ್ ಧರಿಸುತ್ತಿದ್ದ. ಇಂಟರ್‌ಮೀಡಿಯಟ್ ವರೆಗೆ ಓದಿದ್ದನಾತ.

ಹೊತ್ತು ಮೀರಿದ ರಾತ್ರಿಯಲ್ಲಿ ಗುಲ್‌ನನ್ನು ನೋಡಿ ಲಚ್ಚಿಗೆ ತುಂಬಾ ಆಶ್ಚರ್ಯವಾಯಿತು. ಆತನ ಇಚ್ಛೆಯಂತೆ ಈರ್ವರೂ ರೈಲ್ವೆ ಯಾರ್ಡಿನ ಹೊರಗಡೆ ಸಿಗ್ನಲ್ ಕಂಬದ ಹತ್ತಿರವಿರುವ ಸೇತುವೆ ಬಳಿ ಬಂದರು.

ಸುತ್ತು ಬಳಸಿ ಮಾತನಾಡುತ್ತಿದ್ದ ಗುಲ್‌ನಿಗೆ ಲಚ್ಚಿ, "ನಿನ್ನ ಮನಸ್ಸಿನಲ್ಲಿರೋದೇನೂ ಅಂತ ನನಗೆ ಗೊತ್ತು. ನನ್ನ ಪಡೀಬೇಕೊಂತ ಎಲ್ಲರ ಹಾಗೆ ನಿನಗೂ ಆಸೆ, ನಿಜ. ಯಾಕಾಗಬಾರದು? ಎಷ್ಟಾದರೂ ನಾನು ಕೇವಲ ಬಡಪಾಯಿ ಅಲೆಮಾರಿ ಹುಡುಗಿ ತಾನೆ?" ಎಂದಾಗ ಗುಲ್ ತುಟಿ ಕಚ್ಚಿಕೊಂಡು ಅವಳನ್ನೇ ದಿಟ್ಟಿಸಿನೋಡಿದ.

"ನಿನ್ನ ಜೊತೆ ಪ್ರೇಮದಾಟ ಆಡೋಕೆ ಎಷ್ಟು ಕೊಡುತ್ತೀಯಾ ಅಂತ ಹೇಳಲಿಲ್ಲವಲ್ಲಾ?" ಎಂದಾಕೆ ಕೇಳಿದಳು.

ಗುಲ್ ಮಾತನಾಡದೆ ಸೇತುವೆಯ ಮೆಟ್ಟಿಲುಗಳನ್ನು ಸರಸರನೆ ಇಳಿದು ಮುಂದೆ ನಡೆದ. ಸೇತುವೆಯ ಮೇಲೆ ನಿಂತಿದ್ದ ಲಚ್ಚಿ ನಕ್ಕಳು.

ಮರುದಿನ ಆಕೆ ರೋಶಿಯ ಸಲಹೆ ಕೇಳಲು ಹೋದಳು. ವ್ಯವಹಾರನಿಪುಣೆಯಾಗಿದ್ದ ರೋಶಿ ಹೇಗೆ ಬದುಕಬೇಕೆಂಬುದನ್ನು ಕಲಿತಿದ್ದಳು.

ಲಚ್ಚಿಯ ಕತೆ ಕೇಳಿದ ನಂತರ ಆಕೆ ಕಾತರದಿಂದ "ಬರೀ ಮುನ್ನೂರೈವತ್ತು ರೂಪಾಯಿಯೇ! ಇದಕ್ಕಿಂತ ಹೆಚ್ಚು ಹಣ ಮಾಡಲು ನಿನ್ನಂಥ ಸುಂದರಿಯಾದ ಹುಡುಗಿಗೆ ಕಷ್ಟವಾಗುವುದಿಲ್ಲ. ನೀನು 'ಹೂ' ಅನ್ನೋದೊಂದೇ ತಡ, ನಿನಗೊಬ್ಬ ಒಳ್ಳೆ ಗಿರಾಕಿಯನ್ನು ನಾನು ಕೊಡುತ್ತೇನೆ" ಎಂದಳು.

"ನನಗೆ ಗಿರಾಕಿ ಬೇಡ" ಎಂದ ಲಚ್ಚಿ ವ್ಯಥೆ ತುಂಬಿದ ಮನಸ್ಸಿನಿಂದ ಹೊರಟುಹೋದಳು.

*

ರೋಶಿಯ ಬಳಿಯಿಂದ ಹೊರಟ ಲಚ್ಚಿ ನೇರವಾಗಿ ಮಾಧೋನ ಅಂಗಡಿಗೆ ಬಂದು ಬುಟ್ಟಿಯಲ್ಲಿದ್ದ ಸೇಬನ್ನು ಎತ್ತಿಕೊಂಡು ಕಚ್ಚಿ ತಿನ್ನತೊಡಗಿದಳು.

"ಮಾಧೋ, ನಿಜವಾಗಿಯೂ ನೀನು ನನ್ನನ್ನು ಪ್ರೀತಿಸುತ್ತೀಯಾ?" ಸೇಬನ್ನು ಕಚ್ಚುತ್ತಾ ಕೇಳಿದಳು ಲಚ್ಚಿ.

"ಹೌದು, ನನ್ನ ಜೀವಕ್ಕಿಂತ ಹೆಚ್ಚಾಗಿ," ಎಂದ ಮಾಧೋ.

"ನನಗೆ ಮುನ್ನೂರೈವತ್ತು ರೂಪಾಯಿ ಬೇಕು. ನನಗೆ ಅಷ್ಟು ಹಣ ತಂದು ಕೊಡಬಲ್ಲೆಯಾ?"

ಮಾಧೋನ ಮುಖ ಕಳೆಗುಂದಿತು. ತುಸು ಹೊತ್ತಿನ ನಂತರ ಆತ, "ಸಂಜೆಗೆ ಬಾ. ನನ್ನ ಕೈಲಾದಷ್ಟು ಮಾಡುತ್ತೇನೆ" ಎಂದ.

ಹತಾಶಳಾಗಿ ಅಲ್ಲಿಂದ ಲಚ್ಚಿ ಹೊರಟುಬಿಟ್ಟಳು.

ರೇಲ್ವೆ ಅಂಗಳದಲ್ಲಿ ಮೂರು ಸುತ್ತು ತಿರುಗಿದ ನಂತರ ಸ್ವಲ್ಪ ಕಲ್ಲಿದ್ದಲನ್ನು ಕದಿಯಲು ಲಚ್ಚಿಗೆ ಸಾಧ್ಯವಾಯಿತು. ಅದನ್ನು ಅವಳು ಅಂಗಡಿಯವನಿಗೆ ಒಂದೂವರೆ ರೂಪಾಯಿಗೆ ಮಾರಿಬಿಟ್ಟಳು. ಅನಂತರ ಅವಳು ರೇಲ್ವೆ ನೌಕರರ ವಸತಿಗಳತ್ತ ನಡೆದು ಟಿಕೆಟ್ ಚೆಕ್ಕರ್ ಅಲೀಭಾಯಿಯ ಹಿತ್ತಲಿನಲ್ಲಿದ್ದ ಕೊಬ್ಬಿದ ಹುಂಜವೊಂದನ್ನು ಕದ್ದಳು. ಕಟುಕನಿಗೆ ಕೋಳಿಯನ್ನು ಕೊಟ್ಟು ಎರಡು ರೂಪಾಯಿಯನ್ನು ತೆಗೆದುಕೊಂಡು ಹೊರಟು ಬಿಟ್ಟಳು.

ಬಸ್ ನಿಲ್ದಾಣಕ್ಕೆ ಬಂದ ಆಕೆ ನಾಲ್ಕು ತಾಸಿನಲ್ಲಿ ಭಿಕ್ಷೆ ಬೇಡಿ ಎರಡೂವರೆ ರೂಪಾಯಿ ಗಳಿಸಿದಳು. ಆದರೆ ವೃದ್ಧ ಅಂಧ ಭಿಕ್ಷುಕಿಗೆ ೧೦ ಪೈಸೆಗಿಂತ ಹೆಚ್ಚು ಸಿಗಲಿಲ್ಲ.

ಆಕೆ ಬೀಡಾ ಕೊಳ್ಳಲು ಬೀಡಾದಂಗಡಿಗೆ ಹೋದಳು. ಅನೇಕ ಮಂದಿ ಗಿರಾಕಿಗಳು ಅವಳನ್ನು

ನೋಡಿ ಒಂದಲ್ಲ ಒಂದು ನೆಪದಿಂದ ಬಂದು ಅಲ್ಲಿ ಸೇರಿದರು.

ಆಕೆಯಿಂದ ಜೇಡಾಗೆ ಕಾಸು ಪಡೆಯುವ ಅಂಗಡಿ ಯಜಮಾನ. "ಬೇಕಾ ಏನಾದು ನಿಮ್ಗೆ ನನ್ ಅಂಗಡಿ ತಾವ್ಗೆ ಬಾ" ಎಂದ.

"ಇಶ್..." ಎನ್ನುತ್ತಾ ಲಚ್ಚಿ ಪಿಚಕ್ಕನೆ ವೀಳೆಯೆಲೆಯ ಎಂಜಲು ಉಗುಳಿ ಅಲ್ಲಿಂದ ಮಾಧೋನ ಅಂಗಡಿಗೆ ನಡೆದಳು.

ಮಾಧೋ ಆಕೆಯನ್ನು ಟ್ಯಾಕ್ಸಿಯಲ್ಲಿ, ದಟ್ಟವಾಗಿ ಪೊದೆ ಬೆಳೆದಿದ್ದ ಪ್ರದೇಶಕ್ಕೆ ಕರೆದುತಂದು ನೂರು ರೂಪಾಯಿ ಕೊಟ್ಟ. ಮಾಧೋನ ನಡುಗುತ್ತಿದ್ದ ಕೈಗಳು ಲಚ್ಚಿಯನ್ನು ಮೆಲ್ಲನೆ ಮುಟ್ಟಿದವು. ಆಕೆ ಹಣವನ್ನು ಅವನ ಮುಖದ ಮೇಲೆಸೆದು "ಥೂ. ನಾಯಿ!" ಎಂದಳು. ಟ್ಯಾಕ್ಸಿ ಸರಕ್ಕನೆ ಮುಂದೆ ಸಾಗಿತು.

ಬದಿಯಲ್ಲಿದ್ದ ನೀಲಿ ಪ್ಲಿಮತ್ ಕಾರಿನಲ್ಲಿದ್ದ ತರುಣ ಲಚ್ಚಿಯನ್ನು ನೋಡಿ ನಗುತ್ತಿದ್ದ. ಆಕೆ ಕಲ್ಲೊಂದನ್ನು ಕೈಗೆತ್ತಿಕೊಂಡಳು. ಕಾರು ಅದೃಶ್ಯವಾಯಿತು.

*

ದುಮಾರು ಜಾಪೆಯ ಮೇಲೆ ಕುಳಿತು ರೋಶಿ, ಜಮ್ಮನ್ ಜತೆ ಪೆಂಡ ಕುಡಿಯುತ್ತಿದ್ದ. ಲಚ್ಚಿ ಅವನ ಕೈಯಲ್ಲಿ ಆರು ರೂಪಾಯಿ ಇಟ್ಟಳು. ದುಮಾರು ಆ ಹಣವನ್ನೊಮ್ಮೆ ಅವಳನ್ನೊಮ್ಮೆ ನೋಡಿ ಘೊಳ್ಳನೆ ನಕ್ಕು, "ಇಷ್ಟಿಷ್ಟೇ ಕೊಡ್ತಾ ಇದ್ದರೆ ಎಷ್ಟು ದಿನಾಬೇಕು ಗೊತ್ತಾ?" ಎಂದು ಕೇಳಿದ.

"ನಾನು ತಗೊಂಡಿರೋ ಗಡು ಮುಗಿಯೋ ನದೊಳಗೆ ತೀರಿಸ್ತೀನಿ" ಎಂದು ಲಚ್ಚಿ ಹೊರಟು ಹೋದಳು.

ಅಂದು ರಾತ್ರಿ ಲಚ್ಚಿಗೆ ಯೋಚನೆಯಿಂದಾಗಿ ನಿದ್ರೆ ಬಾರದೆ ಆಕೆ ಸೇತುವೆ ಬಳಿ ಬಂದಳು. ಆಕೆಯ ನಿರೀಕ್ಷೆಯಲ್ಲಿದ್ದ ಗುಲ್‌ಗೆ ಆಕೆಯ ಬರುವಿಕೆಯಿಂದ ಸಂತೋಷವಾಯಿತು.

"ನಿನಗೆ ಬೇಕಾದ ಹಣವನ್ನು ನಾಳೆ ನಾಡದ್ದರಲ್ಲಿ ತಂದುಕೊಡ್ತೀನಿ." ಎಂದ ಗುಲ್.

"ಹಣ ತಂದುಕೊಟ್ಟು ಮೇಲೆ ಟ್ಯಾಕ್ಸಿ ಎಲ್ಲಿ ನಿಲ್ಲಿಸ್ತೀಯಾ?" ಎಂದು ಕೇಳಿದಳು ಲಚ್ಚಿ.

ಅವಳ ಮಾತಿನ ಗೂಢಾರ್ಥ ಹೊಳೆದಾಗ ಗುಲ್ ನಿಟ್ಟುಸಿರು ಬಿಟ್ಟ.

"ನಾನು ದೊಡ್ಡವಳಾದಾಗಿನಿಂದಲೂ ಇಂಥ ನಿಟ್ಟುಸಿರುಗಳನ್ನು ಸದಾ ನೋಡ್ತಿದ್ದೀನಿ, ಕೇಳ್ತಿದ್ದೀನಿ–ಬಸ್‌ಸ್ಟ್ಯಾಂಡಿನಲ್ಲಿ, ದಾರೀಲಿ, ಪೇಟೇಲಿ, ಸ್ಟೇಷನ್‌ನಲ್ಲಿ, ಕಟುಕನ ಅಂಗಡಿ–ಎಲ್ಲಾ ಕಡೆ. ಮೂಳೆ ಚೂರು ಕಂಡರೆ ನಾಯಿಗಳು ನಾಲಿಗೆ ನೆಕ್ಕೋದನ್ನ ನೋಡಿಲ್ವ?"

"ಎಲ್ಲಾ ಗಂಡಸರೂ ಒಂದೇ ಥರಾ ಅಲ್ಲ" ಎಂದ ಗುಲ್.

"ಆದರೆ ಎಲ್ಲಾ ನಾಯಿಗಳು ಒಂದೇ ಥರಾನೇ" ಎಂದಳು ಲಚ್ಚಿ. ಗುಲ್ ಕೋಪಗೊಂಡು ಹೊರಟು ಹೋದ.

*

ಲಚ್ಚಿ ಕಲ್ಲಿದ್ದಲು ಕದಿಯುತ್ತಿದ್ದಾಗ ದತ್ತು ಹಿಡಿದು ರಸಿಕಲಾಲನ ಬಳಿ ಕರೆತಂದ.

ಸಾಲ ತೀರಿಸಲು ಆಕೆ ಕದಿಯುವ ಚಟಕ್ಕೆ ಇಳಿಯಬೇಕಾಯಿತೆಂದು ಆಕೆಯಿಂದ ಅರಿತ ರಸಿಕಲಾಲ ನೋಟಿನ ಕಂತೆಯೊಂದನ್ನು ಆಕೆಗೆ ನೀಡಿದ. ಕೃತಜ್ಞತೆಯಿಂದ ಲಚ್ಚಿ ಆತನ ಕಾಲ್ಗೆರಗಿದಳು. ಅವನು ಅವಳನ್ನು ತನ್ನ ತೋಳತೆಕ್ಕೆಯಲ್ಲಿ ಬಂಧಿಸಿದ. ಅವನ ದೇಹ ತೀವ್ರ ಬಯಕೆಯಿಂದ ನಡುಗುತ್ತಿತ್ತು. ಆತನ ಹಿಡಿತದಿಂದ ಬಿಡಿಸಿಕೊಂಡ ಲಚ್ಚಿ ಅವನ ಮುಖಕ್ಕೆ ಹೊಡೆದು ಓಡಿದಳು. ಆ ವೇಳೆಗೆ ಅಲ್ಲಿಗೆ ಬಂದ ದತ್ತು ರಸಿಕಲಾಲನ ಆಜ್ಞೆಯಂತೆ ಆಕೆಯನ್ನು ಲಾಕಪ್ಪಿಗೆ ಹಾಕಿದ.

*

ಮೂರು ದಿನಗಳ ನಂತರ ಸ್ಟೇಷನ್ ಮಾಸ್ತರರ ಆಜ್ಞೆಯಂತೆ ಲಚ್ಚಿಯನ್ನು ಲಾಕಪ್ಪಿನಿಂದ ಹೊರಕ್ಕೆ ಹಾಕಲಾಯಿತು. ಗುಲ್ ಲಚ್ಚಿಯನ್ನು ಬಿಡಿಸಿಕೊಳ್ಳಲು ರಸಿಕಲಾಲನಿಗೆ ಮೂವತ್ತು ರೂಪಾಯಿ ಲಂಚ ನೀಡಿದ್ದ.

ತನಗಾಗಿ ಕಾಯುತ್ತಿದ್ದ ಗುಲ್‌ನನ್ನು ನೋಡಿದಳು ಲಚ್ಚಿ. ಆತ ಮೊದಲಿನಂತಿರಲಿಲ್ಲ.

"ಇಷ್ಟು ದಿನ ಎಲ್ಲಿಗೆ ಹೋಗಿದ್ದೆ? ತಿರ್‍ಗಾ ಸೇತ್ವೆ ತಾವ್ಗೆ ಯಾಕ್ ಬರ್‍ಲಿಲ್ಲ?" ಲಚ್ಚಿ ಕೇಳಿದಳು.

"ಮುಖ್ತಿ ನಿನ್ನ ಮುಖ ನೋಡೋಕೆ ನಾಚ್ಕೆ ಆಯ್ತು. ನೌಕ್ರೀಗೇಂತ ಎಲ್ಲೆಲ್ಲೋ ತಿರುಗಾಡ್ದೆ. ಕೊನೆಗೂ ಸಿಗಲಿಲ್ಲ. ನಮ್ ಜಾತಿಯೋನೆ ಅಬ್ದುಲ್

ಸಮದ್‌ಖಾನ್ ಸಾಣೆ ಹಿಡಿಯೋ ಕೆಲಸ ಕಲಿಸಿ ಈ ಮಿಷಿನ್ ಕೊಟ್ಟ. ಹೇಗೋ ದಿನಕ್ಕೆ ಮೂರು ರೂಪಾಯಿ ಸಂಪಾದಿಸ್ತೀನಿ. ನಿನಗೋಸ್ಕರ ಮೂವತ್ತು ರೂಪಾಯಿ ಕೂಡಿಟ್ಟಿದ್ದೆ. ರಸಿಕಲಾಲನಿಗೆ ಕೊಟ್ಟೆ—ನಿನ್ನ ಲಾಕಪ್ಪಿನಿಂದ ಬಿಡಿಸಿಕೊಳ್ಳೋಕೆ" ಎಂದ ಗುಲ್.

ಪ್ಲಾಟ್‌ಫಾರ್ಮಿನ ಮೇಲೆ ಕುಸಿದು ಕುಳಿತಳು ಲಚ್ಚಿ. ನಂತರ ಮೆಲ್ಲನೆ ಎದ್ದು ಗುಲ್‌ನೊಂದಿಗೆ ಹಳೀ ಸೇತುವೆಯತ್ತ ನಡೆದಳು.

"ಪ್ರೀತಿಸಿ, ಮದುವೆಯಾಗಿ, ನನ್ನೊಡನೆ ಸಂಸಾರ ಮಾಡ್ತೀಯಾ ಗುಲ್ ?" ಎಂದಾಕೆ ಕೇಳಿದಳು.

"ಹ್ಞಂ" ಎಂದನಾತ.

"ನಾನು ನಿನ್ನೋಳು" ಎನ್ನುತ್ತಾ ಅವಳು ಅವನ ಕೊರಳನ್ನು ತನ್ನ ಕೈಗಳಿಂದ ಬಳಸಿದಳು.

*

ಅವರಿಬ್ಬರ ಭೇಟಿಯಾಗಿ ಸುಮಾರು ಹದಿನೈದು ದಿನಗಳ ನಂತರ ಒಂದು ಸಂಜೆ ದುಮಾರುವಿನ ಗುಡಾರದ ಬಳಿ ತೆಳು ನೀಲಿಯ ಪ್ಲೀಮತ್ ಕಾರಿನಿಂದ ಶ್ರೀಮಂತ ಯುವಕನೊಬ್ಬ ಇಳಿದು ದುಮಾರುವಿನ ಜತೆ ಮಾತುಕತೆ ನಡೆಸಿದ. ವಸಂತ ಕಾಲಕ್ಕೆ ತನ್ನ ವಶವಾಗಲಿದ್ದ ಲಚ್ಚಿಯನ್ನು ಆ ಶ್ರೀಮಂತ ಯುವಕ ಜಮುನ್‌ಭಾಯ್‌ಗೆ ಮಾರೋಕೆ ದುಮಾರು ಸನ್ನಾಹ ನಡೆಸಿದ್ದ. ಇದನ್ನರಿತ ರಗ್ಗಿ ಪ್ರತಿಭಟಿಸಿದ್ದು ಸಾಕಷ್ಟು ಚೌಕಾಸಿ ಮಾಡಿದ ನಂತರ ರಗ್ಗಿ-ದುಮಾರು ಇಪ್ಪತ್ತೈದು ರೂಪಾಯಿಗಳಿಗೆ ಒಪ್ಪಂದ ಮಾಡಿಕೊಂಡರು.

ಅಂದು ಲಚ್ಚಿ ಕೇವಲ ೧೨ ಆಣೆಗಳಷ್ಟು ಸಂಪಾದಿಸಿದ್ದಳು. ಗುಲ್ ಅವಳಿಗೆ ೧ರೂ. ೪ ಆಣೆ ಕೊಟ್ಟಿದ್ದ. ಲಚ್ಚಿಗೆ ಚಿಂತೆಯಾಗಿತ್ತು.

"ಗಾಬರಿಯಾಗಬೇಡ. ಕೊನೆಯಲ್ಲಿ ನಮ್ಮ ಅದೃಷ್ಟವೇ ಗೆಲ್ಲುವುದು ಖಂಡಿತ. ಫಿಲ್ಮ್ ಸ್ಟುಡಿಯೊದಲ್ಲಿ ನನಗೆ ಜವಾನನ ಕೆಲಸ. ತಿಂಗಳಿಗೆ ೭೫ರೂ. ಸಿಗುತ್ತದೆ.ಜತೆಗೆ ಸಾಣೆ ಹಿಡಿಯೋ ಕೆಲಸ ಮಾಡ್ತೀನಿ. ಒಂದ ಪಣಾನೆಟ್ಟಾ ತುಂಬಬಹುದು" ಎಂದ ಗುಲ್.

ಲಚ್ಚಿಗೆ ಹೊಸ ಉತ್ಸಾಹ ಬಂದಿತು.

"ಆಮೇಲೆ ನಾವು ನಮ್ಮದೇ ಒಂದು ಮನೆ ಮಾಡಿಕೊಳ್ಳೋಣ. ಬಾಂದ್ರಾದಲ್ಲಿರೋ ಅಬ್ದುಲ್ ಸಮದ್ ನಮಗೇಂತ ಒಂದು ಚಿಕ್ಕ ಜಾಗ ಕೊಡಿಸ್ತೀನಿ ಅಂತ ಮಾತು ಕೊಟ್ಟಿದ್ದಾನೆ. ಅಲ್ಲೇ ನಾವು ಒಟ್ಟಿಗೆ ಇರೋಣ" ಎಂದ ಗುಲ್.

"ಅಂದ್ರೆ ನೀನು ಹೇಳೋದು ನಮ್ಮದೂ ಅಂತ ಒಂದು ಮನೆ ನಮಗೆ ಇರುತ್ತೇಂತಾನಾ?" ಅವಳು ಗುಲ್‌ನ ಎದೆಗೆ ಜೋತು ಬಿದ್ದಳು.

ದೂರ ಸಾಗಬೇಕಾದ್ದರಿಂದ ಬಸ್ಸಿಗೆಂದು ಅವಳು ಆತನಿಗೆ ನಾಲ್ಕಾಣೆಯನ್ನು ನೀಡಿದಾಗ, ಸಾಲ ತೀರಿಸಲು ಅದನ್ನು ಉಪಯೋಗಿಸಬೇಕೆಂದು ಹೇಳಿ ಅವನು ಹೊರಟುಹೋದ. ಗುಲ್‌ನ ಬಗ್ಗೆ ಆಕೆಗೆ ಹೆಮ್ಮೆ ಎನಿಸಿತು.

*

ಲಚ್ಚಿ, ತಾಯಿ ಮತ್ತು ಮಾಮುನ್ ಅವರೊಡನೆ ಅಪರಿಚಿತಳಂತೆ—ಎಷ್ಟೋ ಅಷ್ಟು ಎಂಬಂತೆ ಇದ್ದಳು.

ಅಂದು ರಾತ್ರಿ ಲಚ್ಚಿ ಸೇತುವೆ ಬಳಿ ಹೋದಾಗ ಗುಲ್‌ನ ಬದಲಾಗಿ ಪಾಯಿಂಟ್ಸ್‌ಮನ್ ರಾಮುವನ್ನು ಕಂಡಳು. ಗುಲ್ ಆಸ್ಪತ್ರೆಯಲ್ಲಿರುವುದಾಗಿ ಅವನಿಂದ ತಿಳಿಯಿತು. ಕುರ್ಲಾ ಕಡೇ ತಿರುಗೋ ಜಾಗದಲ್ಲಿ ಯಾವನೋ ಪೊದೆಯೊಳಗಿಂದ ಬಂದು ಹಿಂದುಗಡೆಯಿಂದ ಗುಲ್‌ನನ್ನು ಚಾಕುವಿನಿಂದ ತಿವಿದದ್ದರಿಂದ ಅವನು ಜ್ಞಾನ ತಪ್ಪಿ ಬಿದ್ದ. ಅತ್ತ ಬಂದ ರಾಮು ಗುಲ್‌ನನ್ನು ಆಸ್ಪತ್ರೆಗೆ ಸೇರಿಸಿದ್ದ.

ತನ್ನನ್ನು ಗುಲ್‌ನಿರುವ ಆಸ್ಪತ್ರೆಗೆ ಕರೆದೊಯ್ಯಬೇಕೆಂದು ಅವಳು ರಾಮುವನ್ನು ಕೇಳಿಕೊಂಡಳು. ಅವರು ಆಸ್ಪತ್ರೆಯತ್ತ ಹೆಜ್ಜೆ ಹಾಕಿದರು.

ದಾರಿಯಲ್ಲಿ ರಾಮು ತನ್ನಲ್ಲಿದ್ದ ಹದಿನೈದು ರೂಪಾಯಿಗಳನ್ನು ಲಚ್ಚಿಗೆ ನೀಡುತ್ತಾ, ಹೆಣ್ಣಿಗೆ ಮಾನ ಅನ್ನೋದು ಏನೂ ಅಂತ ನನಗ್ ಗೊತ್ತು. ನನಗೂ ನಿನ್ನ ಓರಗೆಯೋಳೇ ಒಬ್ಬಳು ಮಗಳಿದ್ದಳು. ರಸಿಕಲಾಲ ಅವಳನ್ನು ಕೆಡಿಸಿಬಿಟ್ಟ. ಅವಳು ಬಾವಿಗೆ ಹಾರಿಕೊಂಡಳು," ಎಂದು ಹೇಳಿದ ಆತ.

"ಮುಂದಿನ ತಿಂಗಳು ಹತ್ತು ರೂಪಾಯಿ ಜಾಸ್ತಿ ಕೊಡುತ್ತೇನೆ. ಲಚ್ಚಿ, ನಿನ್ನ ಮಾನ ಮಾತ್ರ ಯಾವತ್ತೂ ಮಾರಬೇಡ. ಅದಕ್ಕೋಸ್ಕರ ನೀನು ಸತ್ತರೂ ಸರಿಯೇ" ಎಂದ.

ಲಚ್ಚಿಯ ಕಂಗಳಲ್ಲಿ ಕಂಬನಿ ತುಂಬಿತು.

*

ಗುಲ್ ಆಸ್ಪತ್ರೆಯಲ್ಲಿ ಒಂದೂವರೆ ತಿಂಗಳಿಗಿಂತ ಹೆಚ್ಚು ಕಾಲ ಇರಬೇಕಾಯಿತು. ಅವನ ಗಾಯ

ಮಾಯುತ್ತ ಬಂದಂತೆ, ಅವನ ಮನಸ್ಸಿನ ವೇದನೆ ಹೆಚ್ಚಿತು.

ಗುಲ್‌ನ ಸೇವೆ ಮಾಡಲು ಲಚ್ಚಿಗೆ ಅವರ್ಣನೀಯ ಆನಂದವಾಗುತ್ತಿತ್ತು. ಆಕೆ ತರಕಾರಿ ಮಾರುವ ಮುದುಕಿಯ ಬಳಿ ಕೆಲಸಕ್ಕೆ ಇದ್ದಳು. ದಿನಕ್ಕೆ ಸುಮಾರು ಒಂದೂವರೆ ರೂಪಾಯಿ ಸಿಗುತ್ತಿತ್ತು. ಅವೆಲ್ಲಾ ಗುಲ್‌ನಿಗೆ ಖರ್ಚಾಗುತ್ತಿತ್ತು.

ಒಂದು ದಿನ ಬೆಳಿಗ್ಗೆ ತರಕಾರಿ ಮಾರುಕಟ್ಟೆಗೆ ಲಚ್ಚಿ ಹೊರಟಾಗ ಗುಲ್‌ನ ತಂದೆ ಬಲಿಊಚಿ ಅವಳನ್ನು ಮಾತನಾಡಿಸಿ ಅವಳು ಗುಲ್‌ನಿಂದ ದೂರಾಗಬೇಕೆಂದು ಹೇಳಿ, ನಾನೂರು ರೂಪಾಯಿ ನೀಡಿದ. ಲಚ್ಚಿ ಹಣವನ್ನು ತಿರಸ್ಕರಿಸಿದಳು.

"ನನ್ನ ಮದುವೆಯಾಗ್ತೀಯಾ? ಈವಾಗ್ಲೆ ಐದು ಸಾವಿರ ರೂಪಾಯಿನ್ ಪತ್ರ ಬರ್ಕೊಡ್ತೀನಿ" ಎಂದ ಬಲಿಊಚಿ.

"ನಿನ್ ಮಗ ಒಪ್ತಾನೇನೋ ಮೊದಲು ಕೇಳ್ಕೊಂಡ್ ಬಾ" ಎಂದು ವ್ಯಂಗವಾಗಿ ನುಡಿದು ತನ್ನ ಕೆಲಸದತ್ತ ಗಮನಹರಿಸಿದಳು.

ಸಂಜೆ ಆಸ್ಪತ್ರೆಗೆ ಹೋದರೂ ಗುಲ್‌ನಿಗೆ ಈ ವಿಷಯವನ್ನು ಆಕೆ ತಿಳಿಸಲಿಲ್ಲ. ಬಲಿಊಚಿ ಲೇವಾದೇವಿ ವ್ಯವಹಾರವನ್ನು ನಿಲ್ಲಿಸಿ ಪುಣೆಗೆ ಹೋದ. ಮತ್ತೆಂದೂ ಆತ ಇತ್ತ ಹಾಯಲಿಲ್ಲ.

*

"ಲಚ್ಚಿ ನನ್ನ ಬದುಕಿನಾಗ ವಸಂತ ಸುರುವಾಗ್ತದೆ, ಇನ್ನೆಲ್ಲಾ ಒಂದೆರಡು ದಿನಾ ಅಷ್ಟೆ" ಎಂದ ದುಮಾರು.

"ಆ ದಿನ ಯಾವತ್ತೂ ಬರೋಕೆ ಇಲ್ಲ" ಎಂದು ಲಚ್ಚಿ ಅಲ್ಲಿಂದ ಸರಸರನೆ ಹೊರಟುಬಿಟ್ಟಳು.

ಅಲೆಮಾರಿಗಳ ಬೀಡಿನ ಆಚೆ ಇದ್ದ ಕತ್ತೀಕಾಯಿ ಮರಗಳಲ್ಲಿ ಮತ್ತೆ ಎಲೆಗಳು ಬಿಟ್ಟಿದ್ದವು. ಕೆಲವು ಎಲೆಗಳಿಂದ ಮೊಗ್ಗುಗಳೂ ಇಣುಕುಹಾಕುತ್ತಿದ್ದವು.

"ಈಗೇನು ಮಾಡ್ತೀಯ ನೀನು?" ನಿಟ್ಟುಸಿರು ಬಿಟ್ಟ ಗುಲ್.

"ಅಲೆಮಾರಿ ಹುಡುಗಿ ಕೊಟ್ಟ ಮಾತಿಗೆ ಯಾವತ್ತೂನು ತಪ್ಪೋಲ್ಲ" ಎಂದಳು ಲಚ್ಚಿ.

"ನಂಜೊತೆ ಬಾ ಲಚ್ಚಿ. ಯಾವ್ದಾದ್ರೂ ಬೇರೆ ಊರಲ್ಲಿ ಮನೆ ಮಾಡ್ಕೊಂಡು ಜೀವನ ಮಾಡೋಣ" ಎಂದ ಗುಲ್.

"ಕೊಟ್ ಮಾತ್ನಂತೆ ನಾನು ನಡ್ಕೋಬೇಕು. ನಮ್ ಹಿಂದಿನೋರು ಹಾಕಿದ್ ಗೆರೆ ದಾಟಿ ಹೋಗೋಕೆ ನನಗಾಗೋಲ್ಲ. ಈ ಬೂದಿ ಮುಟ್ಟಾಗ್ನಿಂದ ನಮ್ ಜನರಾಗ ಹಿಂಗೇ ನಡ್ಕೊಂಡು ಬಂದಿದೆ" ಎಂದಳು.

"ಹಂಗಾದ್ರೆ ನನ್ ಗತಿ? ನೀನಿಲ್ದೆ ನಾನು ಹೇಗೆ ಬದುಕಲಿ ?" ಚಿಂತಿಸಿದ ಗುಲ್.

ಅಷ್ಟರಲ್ಲಿ ಅಲ್ಲಿಗೆ ಬಂದ ರಾಮು ಅವರನ್ನು ರೇಲ್ವೆ ಸ್ಟೇಷನ್‌ಗೆ ಬರಲು ಹೇಳಿದ.

ಸ್ಟೇಷನ್‌ನಲ್ಲಿ ರೇಲ್ವೆ ನೌಕರರಾದ-ಪೋರ್ಟರ್‌ಗಳು, ಗಾರ್ಡ್‌ಮನ್, ಪಾಯಿಂಟ್ಸ್‌ಮನ್, ಗಂಟೆ ಬಾರಿಸುವವರು, ನೀರು ಹೊರುವವರು ಮುಂತಾದವರು ಸೇರಿದ್ದರು. ಅವರೆಲ್ಲಾ ಕೈಲಾದಷ್ಟು ಹಣವನ್ನು ಲಚ್ಚಿಗೆ ನೀಡಿ ದುಮಾರುವಿನ ಸಾಲ ತೀರಿಸಲು ಹೇಳಿದರು. ಅವರಿಗೆಲ್ಲಾ ಲಚ್ಚಿಯ ಕಥೆ ಗೊತ್ತಿತ್ತು.

"ನಾವು ಬಡವರು. ಆದರೂ ನಿನ್ನ ಮಾನ ಕಾಪಾಡೋ ಅಷ್ಟು ಶಕ್ತಿ ಇನ್ನೂ ನಮಗಿದೆ. ಹೋಗು. ದುಡ್ಡು ತಗೊಂಡು ಹೋಗಿ ಆ ನಿನ್ನ ಸರ್ದಾರನಿಗೆ ಕೊಡು." ಎಂದರು.

ಲಚ್ಚಿ ಅವರೆಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದಳು. ಗುಲ್ ಬೆರಗುಗಣ್ಣುಗಳಿಂದ ಅವರತ್ತ ನೋಡಿದ.

*

"ದುಮಾರುವಿಗೆ ದುಡ್ಡು ಕೊಟ್ಟು ಬಂದೆಯಾ?" ಕಾತರದಿಂದ ಕೇಳಿದ ಗುಲ್.

"ಹಾಳಾದೋನು ಇರಲಿಲ್ಲ. ನಾಳೆ ಬೆಳಗ್ಗೆ ಅವನಿಗೆ ದುಡ್ಡು ಕೊಟ್ಟು ತಕ್ಷಣ ಬರ್ತೀನಿ. ನೀನು ಸೇತುವೆ ಮೇಲೆ ಕಾಯ್ತಾ ಇರು" ಎಂದಳು ಲಚ್ಚಿ.

ಗುಲ್ ಅಲ್ಲಿಂದ ಹೊರಟು ಹೋದ.

ಲಚ್ಚಿ ಜಾಗರೂಕತೆಯಿಂದ ಹಣವನ್ನೆಲ್ಲಾ ಮಡಕೆಗೆ ಸುರಿದು ನೆಲದಲ್ಲಿ ಗುಂಡಿ ತೋಡಿ ಅದರಲ್ಲಿ ಮಡಕೆಯನ್ನಿಟ್ಟು ಮಣ್ಣು ಮುಚ್ಚಿ ನೆಲ ಮೊದಲಿನಂತೆಯೇ ಕಾಣುವ ಹಾಗೆ ಮಾಡಿದಳು. ಅನಂತರ ಅದರ ಮೇಲೆ ಚಾಪೆ ಹಾಸಿ ನಿಶ್ಚಿಂತಳಾಗಿ ಮಲಗಿದಳು.

*

ಬೆಳಗ್ಗೆ ಹೇರಿಗಳ ಬೀದಿಯ ಮಧ್ಯದಲ್ಲಿ ಹೋಳಿ

ಸದು ಪಠಾತ್ತನೆ ಕೇಳಿ ಬಂದಿತು. ತನ್ನ ಪಣ್ಣಿನ ಮಡಕೆಯನ್ನು ಮರೆತು ಲಚ್ಚಿ ಉದ್ವೇಗದಿಂದ ಓಡಿದಳು.

ಕತ್ತಿಕಾಯಿ ಮರಗಳ ಮೇಲೆ ಹೂವುಗಳು ಅರಳಿದ್ದವು. ವಸಂತ ಬಂದಿದ್ದ. ಇಂದು ಲಚ್ಚಿಯ ಮದುವೆಯ ದಿನ.

ಪಂಚಾಯ್ತಿ ಕೂಡಿಸಿದ ದುಮಾರು, "ಪಂದ್ಯ ದಾತೆ ಈವಾಗ್ಲೆ ಲಚ್ಚಿ ಹಣ ಕೊಡಬೇಕು. ಇಲ್ಲದಿದ್ದರೆ ನನ್ನವಳಾಗಬೇಕು" ಎಂದು ವಾದ ಮಂಡಿಸಿದ. ಸೇರಿದ ಜನ ದುಮಾರುವನ್ನು ಬೆಂಬಲಿಸಿದರು.

"ನಿನ್ನೆ ರಾತ್ರೀನೆ ಅವನಿಗೆ ನಾನು ದುಡ್ಡು ಕೊಟ್ಟುಬಿಡ್ತಿದ್ದೆ. ಆದ್ರೆ ಅವನು ಡೇರಾದೊಳಗಿರಲಿಲ್ಲಾ. ಮದ್ವೆ ಮಾಡ್ಕೊಳ್ಳೊ ಹೆಂಡ್ತೀನ ಪ್ಲಾಸ್ಟಿಕ್ ಫ್ಯಾಕ್ಟರಿ ಯಜಮಾನನಿಗೆ ಮಾರ್ಕೊಳ್ಳೋಕೆ ಹೋಗಿದ್ದ. ಈಗ್ಲೆ ಹಣ ತರ್ತೀನಿ"ಎಂದ ಲಚ್ಚಿ ಡೇರೆಯತ್ತ ಓಡಿದಳು.

ಹಣ ಮಾಯವಾಗಿತ್ತು. ನಿರಾಶಳಾಗಿ ಓಂತಿರುಗಿದ ಲಚ್ಚಿಯನ್ನು ನೋಡಿ, "ಸುಳ್ಳಿ, ದಗಾಕೋರಿ! ನಡೀಲಿ ಮದ್ವೆ. ಈವಾಗ ಅವನ್ ಕೈಯಿಂದ ಅವ್ಳು ತಪ್ಪಿಸ್‌ಕೊಳ್ಳೋಕೆ ಆಗಾಕಿಲ್ಲ!" ಗುಂಪಿನಿಂದ ಹತ್ತಾರು ಬಾಯಿಗಳು ಕೂಗಿದವು.

ಲಚ್ಚಿ ಹೆಣ್ಣು ಮಕ್ಕಳ ನಡುವೆ ನಿಂತಿದ್ದಾಗ ಅವರ ಸುತ್ತ ಗಂಡಸರೆಲ್ಲಾ ಕುಣಿಯುತ್ತಾ, ಢೋಲು ಬಾರಿಸುತ್ತಾ ಹಾಡುತ್ತಿದ್ದರು.

"ನೀನು ಸೋತೆ! ಈವಾಗ್ ನೀನು ಮದ್ವೆ ಹೆಣ್ಣಂಗೆ ಕುಣಿಬೇಕು" ಎಂದಳು ಲಚ್ಚಿಯ ತಾಯಿ.

ಆ ವೇಳೆಗೆ ಅಲ್ಲಿಗೆ ಬಂದ ಗುಲ್, "ನಿನ್ನೆ ನೀನು ನನಗೆ ಕೊಟ್ಟ ಮಾತ್ನ ಮರ್ತುಬಿಟ್ಯಾ?" ಕೇಳಿದ.

"ಮರ್‍ತಿಲ್ಲಾ ಗುಲ್. ನನ್ ದುಡ್ಡು ಯಾರೊ ಕದ್ದು ಬಿಟ್ರು. ನನ್ ಸಾಲ ತೀರ್ಸೋಣಾಕೆ ನನ್ ಕೈಯಾಗ್ಲೇ ಇಲ್ಲ. ದುಃಖಿತಳಾಗಿ ಲಚ್ಚಿ ನುಡಿದಳು.

"ನೀನು ದುಮಾರೂನ ಮದ್ವೆ ಮಾಡ್ಕೋಳ್ಳಿಯು. ಅದ್ಕೇ ದುಡ್ಡನ್ನ ಅವನಿಗೆ ಕೊಟ್ಬಿಡ್ದೀನಿ. ನಮ್ಮಪ್ಪ ಹೇಳಿದ್ದ ಸರಿ–ತಿರುಗಾಲಿ ಜಾತಿ ಹುಡುಗೀರು ನ್ಯಾಯವಾಗಿರೋಲ್ಲ ಅಂತ. ಒಳ್ಳೇವ್ರ ಮೇಲೆ ಕಣ್ ಹಾಕಿ ಅವರ ಜೀವದ್ ಜತೆ ಗೊಂಬೆ ಹಂಗೆ ಆಡ್ತಾರೆ."

ಸಂಶಯದ ಸುಳಿಗೆ ಸಿಕ್ಕ ಗುಲ್‌ನಿಗೆ ಹೆಚ್ಚೇನನ್ನೂ

ಹೇಳದೆ ಲಚ್ಚಿ ಅಸಹಾಯಕತೆಯಿಂದ ತಲೆ ತಗ್ಗಿಸಿದಳು. ಕಣ್ಣೀರ ಕೋಡಿ ಹರಿಯಿತು.

"ಅಮ್ಮಾ, ನನಗೆ ಬಾಕು ಕೊಡು. ಲಗ್ನದ್ ಹೊತ್ತಾಗಿ ನಾನು ಕುಣೀತೀನಿ" ಎಂದಳು ಲಚ್ಚಿ. ಡೋಲುಗಳು ಘುಮುಗುಟ್ಟಿದವು. ಗೆಜ್ಜೆ, ಕಾಲಿಯಿಗೆ ಘಲ್ ಘಲ್ ಎಂದವು. ಬಾಕು ಮಿಂಚಿನ ತಾರಕಕ್ಕೇರಿತು. ಸಂಗೀತದ ಗತಿ ಏರುತ್ತಿ ಅಲೆಮಾಲೆಗಳು ಅವಳ ನುಸುವಾಗಿ ಕಿರುಚಿಕೊಂಡವು.

ಕುಣಿತ ಅಂತಿಮ ಘಟ್ಟದಲ್ಲಿ. ದುಮಾರು ತನ್ನ ತೋಳುಗಳನ್ನು ತುಯ್ಯಾಡುತ್ತಿದ್ದ ಲಚ್ಚಿಯ ಮೈ ಸುತ್ತ ಬಳಸಿದ. ಆದರೆ ತತ್ತರಿಸುತ್ತಾ ಅವನು ಕುಸಿದುಬಿಟ್ಟ. ಲಚ್ಚಿ ತನ್ನ ಬಾಕುವನ್ನು ಅವನ ಎದೆಗೆ ಆಳವಾಗಿ ಊರಿದ್ದಳು.

*

ತನ್ನ ಮನೆ ಬಾಗಿಲಿನಲ್ಲಿ ನಿಂತಿದ್ದ ವೃದ್ಧ ಹೇಮ ಹೆಸ ದಂಪತಿ ಬೀದಿಯಲ್ಲಿ ಚಾಕು ಮರಿತ ಮಾಡುತ್ತ ನಿಂತಿದ್ದ ಗುಲ್‌ನನ್ನು ನೋಡಿ,

"ಲಚ್ಚಿ ಕೇಸು ತೀರ್ಮಾನ ಆಯ್ತು ಅಂತ ಬಾಲಿಯೋ ಅಂದರು. ನಿಜಾನಾ?" ಎಂದು ಕೇಳಿದರು.

ಸಾಣೆ ಹಿಡಿಯುತ್ತಿದ್ದ ಗುಲ್. "ಹ್ಹುಂ, ಅವಳಿಗೆ ಮೂರು ವರ್ಷ ಜೈಲಾಯಿತು" ಎಂದ.

"ಮಂಗಾಮದರೆ ಈವಾಗ ನೀ ಏನ್ ಮಾಡ್ತೀಯಾ?"

"ಅವಳು ಬರೋತನಕ ಕಾಯ್ತೀನಿ" ಎಂದ ಗುಲ್.

*

ಹಾಜಿ ಅಬ್ದುಲ್ ಸಲಾಮ್ ಮತ್ತು ಮೀರ್ ಚಿಂದಾನಿ ಜೀವಮಾನಪರ್ಯಂತ ಗೆಳೆಯರಾಗಿದ್ದರು. ಅವರಿಬ್ಬರೂ ಸೇರಿ ಒಂದು ಬ್ಯಾಂಕನ್ನು ಸ್ಥಾಪಿಸಿದ್ದರು. ಎರಡೂ ಕೈಗಳಿಂದ ಅವರು ಜನರನ್ನು ಸುಲಿಗೆ ಮಾಡುತ್ತಿದ್ದರು. ಈಗ ಅವರು ಜೈಲುವಾಸ ಅನುಭವಿಸುತ್ತಿದ್ದರು.

ಈ ಗೆಳೆಯರಿಬ್ಬರೂ ಅಸಿಸ್ಟೆಂಟ್ ಜೈಲರ್ ಕಾಳಿಚರಣನೊಡನೆ ತುಂಬ ಸ್ನೇಹ ಬೆಳೆಸಿದ್ದರು. ಅಸಿಸ್ಟೆಂಟ್ ಜೈಲರ್ ಕಾಳಿಚರಣ ಉನ್ನತ ಶಿಕ್ಷಣ ಪಡೆದ ವ್ಯಕ್ತಿ. ತನ್ನ ತಾರುಣ್ಯದಲ್ಲಿ ಆತ ಸ್ಥಳೀಯ ಕಾಲೇಜೊಂದರಲ್ಲಿ ಅರ್ಥಶಾಸ್ತ್ರದ ಅಧ್ಯಾಪಕ [illegible]

ಬ್ರಿಟಿಶ್ ಸರ್ಕಾರದ ಶಂಕೆ ಇವುಗಳಿಂದ ಬೇಸತ್ತ ಕಾಳಿಚರಣ ಜೈಲು ಇಲಾಖೆಗೆ ವರ್ಗ ಮಾಡಿಸಿಕೊಂಡ. ಜೈಲಿನಲ್ಲಿ ಅವನಿಗೆ ಸಂಯಮದ ಜೊತೆಗೆ. ಕೈದಿಗಳಿಗೆ ಅವನು ಸಲ್ಲದ ಸೌಲಭ್ಯ, ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿದ್ದುದರಿಂದ ಅವರೂ ಸಾಕಷ್ಟು ಹಣ ಕೊಡುತ್ತಿದ್ದರು. ನಿಜ, ಹಲವು ಸಾರಿ ಅವನನ್ನು ಉದ್ಯೋಗದಿಂದ ತಾತ್ಕಾಲಿಕವಾಗಿ ವಜಾ ಮಾಡಿದ್ದರು. ಕ್ರಮಬದ್ಧವಾಗಿ ದೊರೆಯಬೇಕಾಗಿದ್ದ ಬಡ್ತಿಗಳನ್ನೂ ನಿರ್ಲಕ್ಷಿಸಲಾಗಿತ್ತು. ಎಲ್ಲವನ್ನೂ ಮೀರಿ ನಿಲ್ಲದಿದ್ದರೆ ಜೀವನದಲ್ಲಿ ಮೇಲೆ ಬರುವುದಕ್ಕೆ ಸಾಧ್ಯವೇ ಇಲ್ಲವೆಂಬುದು ಅವನ ದೃಢ ನಿಲುವು. ಅವನ ರೀತಿ– ನೀತಿ ಏನೇ ಇರಲಿ, ತಾನೊಬ್ಬ ಪ್ರಾಮಾಣಿಕ ಹಾಗು ಕರ್ತವ್ಯನಿಷ್ಠ ನೌಕರನೆಂದು ತೋರಿಸಿಕೊಳ್ಳುತ್ತಿದ್ದ.

ಅವನ ಮೇಲಧಿಕಾರಿ ಮಿಹಿರ್‌ಚಂದ. ಅವನೇ ಜೈಲಿನ ಸೂಪರಿಂಟೆಂಡೆಂಟ್. ಅವನು ಉನ್ನತ ಶಿಕ್ಷಣ ಪಡೆದಿದ್ದ. ಸುಸಂಸ್ಕೃತ. ಅಪಾರ ಸಹಾನುಭೂತಿಯುಳ್ಳವನಾದ ಆತ ಮಾನವ ಸೇವೆಯಲ್ಲಿಯೇ ತನ್ನ ಜೀವನವನ್ನು ಕಳೆಯಬೇಕೆಂದಿದ್ದ. ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ತನಗಿದ್ದ ಪ್ರತಿಭೆಯನ್ನು ಅವನು ವ್ಯಕ್ತಪಡಿಸುತ್ತಿದ್ದ. ವರ್ಣಚಿತ್ರಕಾರನಾಗಬೇಕು, ಪ್ಯಾರಿಸಿನಲ್ಲಿ ತರಬೇತಿ ಪಡೆಯಬೇಕು ಎಂದು ಮಿಹಿರ್‌ಚಂದ ಅಪೇಕ್ಷಿಸಿದ್ದ. ಆದರೆ ಸರ್ವಾಧಿಕಾರಿಯಾಗಿದ್ದ ತನ್ನ ತಂದೆಯ ಎದುರಿಗೆ ಅವನು ತನ್ನ ಬಯಕೆಯನ್ನು ಬದಿಗೊತ್ತಿ ಜೈಲರನಾದ. ನೃತ್ಯ, ಜಾನಪದ ಕಲೆಗಳನ್ನು ಅವನು ಇಷ್ಟಪಡುತ್ತಿರಲಿಲ್ಲ. ಬಂಗಾಳಿ ಶೈಲಿಯ ಕಲೆಯನ್ನು ಕಂಡರೆ ಅವನಿಗೆ ತುಂಬಾ ಅಭಿಮಾನ. ಅವನ ಆದರ್ಶಗಳ ಪ್ರತೀಕವಾಗಿದ್ದ ಹೆಣ್ಣು ಇದುವರೆಗೂ ಅವನ ಕಣ್ಣಿಗೆ ಬಿದ್ದಿರಲಿಲ್ಲ. ಐವತ್ತು ವರ್ಷ ಕಳೆದಿದ್ದರೂ ಅವನಿನ್ನೂ ಅವಿವಾಹಿತನಾಗಿಯೇ ಇದ್ದ.

ಲಚ್ಚಿಯನ್ನು ಅವನ ಎದುರಿಗೆ ಕರೆದು ತಂದಾಗ ಅವನು ಕ್ಷಣಕಾಲ ಆಕೆಯನ್ನು ನೋಡಿ ದಂಗಾದ. ಆದರೆ ಅವಳ ಬಗೆ ಮಾತು ಅವನಿಗೆ ನೋವನ್ನುಂಟುಮಾಡಿತು.

"ನಿನಗೆ ಏನಾದರೂ ಕೆಲಸ ಗೊತ್ತಿದೆಯಾ?" ಅವನು ಕೇಳಿದ.

"ಗೊತ್ತು, ಬಾಬು, ಚಾಪೆ ಹೆಣೀತೀನಿ. [illegible]

ಥರಾ ದೊಂಬರಾಟಾನೂ ಗೊತ್ತು. ಮೊಣಕೈ ಬಗ್ಗಿಸುವುದರಲ್ಲೂ ನಾನು ಗಟ್ಟಿಗಿತ್ತಿ; ನಿಮ್ ಶಕ್ತಿ ಎಷ್ಟೊಂತ ನೋಡ್ಬೇಕಾದ್ರೆ ನನ್ ಹತ್ರ ಬರ್ರಿ" ಎಂದ ಲಚ್ಚಿ ಖುಬ್‌ಚಂದನ ಮುಂದೆ ಕೈ ಚಾಚಿದಳು.

"ಮೊದಲು ನನ್ನ ಹತ್ರ ನಿನ್ ಶಕ್ತಿ ತೋರ್ಸು" ಎಂದ ಕೋಪೋದ್ರಿಕ್ತ ಪಂಜಾಬಿ ವಾರ್ಡರ್ ಸಿಲ್‌ದಾರ್‌ಖಾನ್. ಆತ ಲಚ್ಚಿಯ ಮೊಣಕೈ ಬಗ್ಗಿಸಲೆತ್ನಿಸಿ ವಿಫಲನಾದ.

ಲಚ್ಚಿಯನ್ನು ಮಹಿಳಾ ವಾರ್ಡಿನ ಕೋಣೆಯೊಂದರಲ್ಲಿ ಕೂಡಿ ಹಾಕಲಾಯಿತು. ಇಡೀ ರಾತ್ರಿ ಖುಬ್‌ಚಂದ್ ನಿದ್ರಿಸಲಿಲ್ಲ. ಅವನು ಲಚ್ಚಿಯ ಬಗ್ಗೆ ಯೋಚಿಸಿದ. ಗೋಡೆಗಳ ಮೇಲಿದ್ದ ಚಿತ್ರಗಳ ಚೌಕಟ್ಟನ್ನು ಕಳಚಿ ಚಿತ್ರಗಳನ್ನೆಲ್ಲಾ ಚೂರು ಚೂರು ಮಾಡಿದ.

*

ತನ್ನ ಯೌವನದ ದಿನಗಳಲ್ಲಿ ಜೀನಾಬಾಯಿ ಸೂಳೆಗಾರಿಕೆಯಿಂದ ಜೀವನಸಾಗಿಸುತ್ತಿದ್ದಳು. ಯೌವನ ಮುಗಿಯತೊಡಗಿದಾಗ ಅವಳು ಜೇಬು ಕತ್ತರಿಸುವ ಉಪಕಸುಬನ್ನು ಅವಲಂಬಿಸಿದಳು. ಅನಂತರ ಸುಂದರಿಯರಾದ ಹುಡುಗಿಯರನ್ನು ಬಲೆಗೆ ಬೀಳಿಸಿ ಅವರನ್ನು ಹೆಂಗಸರ ವ್ಯಾಪಾರಿಗಳಿಗೆ ಮಾರುವ ವ್ಯವಹಾರ ಪ್ರಾರಂಭಿಸಿದಳು. ತುಂಬಾ ಅಪಾಯಗಳಿದ್ದರೂ ಈ ವ್ಯಾಪಾರ ಅವಳಿಗೆ ಒಳ್ಳೆ ಲಾಭದಾಯಕವಾಗಿತ್ತು. ಅವಿವಾಹಿತ ತಾಯಿಯೊಬ್ಬಳ ಮಗುವನ್ನು ನಾಶಪಡಿಸಿದ್ದಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಅವಳು ಕೊನೆಯ ಬಾರಿ ಜೈಲಿಗೆ ಹೋಗಿದ್ದಳು. ಸ್ತ್ರೀ ಕೈದಿಗಳಲ್ಲಿ ಆಕೆ ತುಂಬಾ ಜನಪ್ರಿಯಳಾಗಿದ್ದಳು.

ಒಂದು ದಿನ ಅವಳು ಲಚ್ಚಿಯ ಕೋಣೆಗೆ ಬಂದು ಜೈಲು ಸೂಪರಿಂಟೆಂಡೆಂಟರು ಅವಳನ್ನು ನೋಡಬಯಸುತ್ತಾರೆಂದು ಕರೆದೊಯ್ದಳು.

ಕಚೇರಿಯ ಕೆಲಸದ ಕಾಲ ಮುಗಿದಿತ್ತು. ಖುಬ್‌ಚಂದ್ ಲಚ್ಚಿಯನ್ನು ಬರಮಾಡಿಕೊಂಡ. ಆ ಕೋಣೆಯನ್ನೇ ಸ್ಟುಡಿಯೋ ಆಗಿ ಮಾರ್ಪಡಿಸಿ ಸಜ್ಜುಗೊಳಿಸಿದ್ದ.

"ನಾನು ನಿನ್ನ ಚಿತ್ರ ಬರೆಯುತ್ತೇನೆ. ಆದರೆ ಈ ವಿಷಯ ಯಾರಿಗೂ ಹೇಳಬೇಡ" ಎಂದ, ಖುಬ್‌ಚಂದ.

"ಇದರಾಗೇನೈತೆ ತಪ್ಪು? ಒಂದು ದಫಾ ಪರಂಗಿಯೊಬ್ಬನು ರೈಲ್‌ಟೇಸನ್ನನಾಗೆ ನನ್ ಫೋಟೋ ತೆಗೆದು ನನಗೆ ಐದು ರೂಪಾಯಿ ಕೊಟ್ಟ. ಎಷ್ಟೊ ಜನ ನನ್ ಫೋಟೋ ತಕೊಂಡವ್ರೆ" ಎಂದಳು ಲಚ್ಚಿ.

"ಆದರೆ ಇದು ಫೋಟೋ ಅಲ್ಲ. ನಾನೊಂದು ವರ್ಣಚಿತ್ರ ಬರೆಯುತ್ತಿದ್ದೇನೆ" ಎಂದನಾತ.

"ಎಷ್ಟೊತ್ತಾಗ್‌ಬೇಕು ಅದ್ಕೆ ?"

"ಹತ್ತು ದಿನ ಅಥವಾ ಹತ್ತು ತಿಂಗಳು ಅಥವಾ ಹತ್ತು ವರ್ಷನಾದರೂ ಆಗಬಹುದು" ಎಂದ ಅವನು ಸಹಜವಾಗಿ.

"ಅಂದ್ರೆ ನಾನು ಹತ್ತು ವರ್ಷ ಜೈಲಿನಲ್ಲಿರಬೇಕೂಂತಾನಾ ?"

"ಅಲ್ಲ, ಹಾಗಲ್ಲ. ನಿನ್ ಶಿಕ್ಷೆ ಮುಗಿದ ಮೇಲೆ ನಾನೇ ನಿನ್ ಮನೇಗ್ ಬಂದು ಇದನ್ನ ಮುಗಿಸ್ತೇನೆ" ಎಂದ ಖುಬ್‌ಚಂದ್.

"ಆದರೆ ನನಗೆ ಮನೇನೆ ಇಲ್ವಲ್ಲಾ!" ಲಚ್ಚಿಗೆ ದುಃಖ ಒತ್ತರಿಸಿ ಬಂತು. "ನಾನು ಗುಲ್‌ನ ಮದುವೆ ಆಗಿದ್ರೆ ನನಗೂ ಒಂದು ಮನೆ ಇರ್ತಿತ್ತು"

"ನೀನು ಅವನನ್ನು ಪ್ರೀತಿಸ್ತೀಯಾ?"

"ಬಾಬೂ, ನನ್ ಜೀವಕ್ಕಿಂತ ಜಾಸ್ತಿ ಪ್ರೀತಿಸ್ತೀನಿ. ದೊಡ್ ಮನಸ್ ಮಾಡಿ ನೀವು ನನಗೊಂದು ಕೆಲಸ ಮಾಡ್ ಕೊಡ್ತೀರಾ? ಜೈಲಿನಲ್ಲಿ ಬೇಕಾದಷ್ಟು ಜಾಗಾ ಇದೆ. ಇಲ್ಲಿ ಗುಲ್ ನನ್ ಜತೆ ಇರಬಹುದಾ ? ನಾವಿಬ್ರೂ ಒಟ್ಟಿಗೆ ಇರ್ತೀವಿ. ನಮ್ಮದೂಂತ ಒಂದು ಮನೆ ಮಾಡಿಕೊಳ್ತೀವಿ."

ಖುಬ್‌ಚಂದ ವಿಸ್ಮಿತನಾಗಿ, "ಹಾಗಾಗೋಲ್ಲ" ಎಂದ.

"ಬಾಬೂ, ಇದರಾಚೆ ಇರೋ ಪರಪಂಚಾನೆ ಒಂದು ದೊಡ್ಡ ಜೈಲು. ಅದಕ್ಕೆ ಕಬ್ಬಿಣದ ಕಂಬಿ ಇಲ್ಲಾ ಅನ್ನೋದು ಒಂದೇ."

ಆಕೆಯ ಮಾತಿಗೆ ತಲೆದೂಗಿ ಖುಬ್‌ಚಂದ ಕಾಗದದ ಮೇಲೆ ಕೆಲವು ಗೆರೆಗಳನ್ನು ಸರಸರನೆ ಎಳೆದ.

"ಬಾಬೂ, ಗುಲ್ ದರಾಣ್ನಾನ ಸಾಯಿಸಿದ್ರೆ, ಅವನ್ಗೆ ನೀವು ಜೈಲಿನಲ್ಲಿ ಜಾಗ ಕೊಡ್ತೀರಾ?"

"ಯಾರನ್ನ ಕೊಂದ್ಯಾನೆ ಅವನು?"

"ಯಾರನ್ನಾದರೂ ಸರೀನೆ, ಈ ಪರದೇಶದಾಗ ಕೆಟ್ಟ ಜನಗೋಳಿಗೇನೂ ಶ್ಯಾನೆ ಅವ್ರೆ"

"ಅವನಿಗೆ ಗಲ್ ಶಿಕ್ಷೆ ಕೊಡ್ತ್ರೆ?"

"ಹೇ! ಹಂಗಾಗ್‌ಬಿಟ್ರೆ ಕೆಲಸಾ ಕೆಡ್ತು" ಯೋಚಿಸುತ್ತ ನಿಂತಳು ಲಚ್ಚಿ. ಖುಬ್‌ಚಂದ್ ಕಾಗದದ ಮೇಲೆ ಇನ್ನಷ್ಟು ಗೆರೆಗಳನ್ನು ಎಳೆಯ ತೊಡಗಿದ.

*

ಲಚ್ಚಿಯ ಪ್ರಕರಣ ಆವಳಿದ್ದ ಊರಿನಲ್ಲಿ ಸಾಕಷ್ಟು ಕೋಲಾಹಲವನ್ನುಂಟುಮಾಡಿತ್ತು.

ಪ್ಲಾಸ್ಟಿಕ್ ಕಾರ್ಖಾನೆಯ ಮಾಲೀಕ ಲಚ್ಚಿಯ ಮೊಕದ್ದಮೆಯಲ್ಲಿ ಸಾಕ್ಷಿಯಾಗಬೇಕಾಯಿತು. ಆದರೆ ತುಂಬಾ ಪ್ರಭಾವಶಾಲಿಯಾದುದರಿಂದ ಉನ್ನತ ಅಧಿಕಾರ ಸ್ಥಾನಗಳಲ್ಲಿರುವವರ ಜತೆ ಸಂಪರ್ಕ ಬೆಳೆಸಿ ಯಾವ ಕಲಂಕವನ್ನೂ ಅಂಟಿಸಿಕೊಳ್ಳದೆ ನುಣುಚಿಕೊಂಡ. ತನ್ನ ಕೆಟ್ಟ ನಡತೆಯನ್ನು ಮುಚ್ಚಿಕೊಳ್ಳಲು ಅವನು ಲಚ್ಚಿಗೆ ಶಿಕ್ಷೆಯಾಗುವುದಕ್ಕೆ ತನ್ನಿಂದ ಸಾಧ್ಯವಾದ ಸಕಲ ಪ್ರಯತ್ನಗಳನ್ನೂ ಮಾಡಿದ.

ತನಗೆ ಸರಿ ಎನಿಸಿದ ಪ್ರತ್ಯೇಕ ಮಾರ್ಗವನ್ನು ಹಿಡಿದ ಲಚ್ಚಿ ಶತಮಾನಗಳ ಸಂಕೋಲೆಯನ್ನು ಹಠಾತ್ತನೆ ಕಿತ್ತೆಸೆದಿದ್ದಳು.

ದಿನಗಳೆದಂತೆ ಲಚ್ಚಿಯ ಮೊಕದ್ದಮೆ ನ್ಯಾಯಾಲಯದಲ್ಲಿ ವಿಚಾರಣೆ ಆಗುತ್ತಿದ್ದಂತೆ ಅಲೆಮಾರಿಗಳ ವಿರುದ್ಧ ಜನರ ದ್ವೇಷ ತೀವ್ರವಾಗಿ ಬೆಳೆಯಿತು. ಲಚ್ಚಿಯ ಮೊಕದ್ದಮೆ ಬಗ್ಗೆ ತೀರ್ಮಾನ ಘೋಷಿಸಿದ ದಿನ ಜನರ ಕೋಪ ತುತ್ತ ತುದಿಗೆ ಏರಿತು. ನಾನಾ ಅಪರಾಧಗಳಲ್ಲಿ ನಿರತರಾದ ದುಷ್ಟರ ಜಗತ್ತಿನ ಸಿಪಾಯಿ ಜಿಂತಾಮಣಿಗೆ ಫೋನ್ ಮಾಡಿದ ಪ್ಲಾಸ್ಟಿಕ್ ಕಾರ್ಖಾನೆಯ ಮಾಲೀಕ ಅಲೆಮಾರಿಗಳಾದ ಅವರ ಮಿತ್ರರನ್ನೆಲ್ಲ ಕೊಲ್ಲಿಸುವಂತೆ ತಿಳಿಸಿದ. ಅವನಿಗೆಲ್ಲ ಕುಡಿಯಲು ಸಾಕಷ್ಟು ಹೆಂಡ, ತಿನ್ನಲು ಸಾಕಷ್ಟು ಕೋಳಿ ಮೀನು-ಮಾಂಸವನ್ನು ಏರ್ಪಾಟು ಮಾಡಲಾಗಿತ್ತು.

ಮದ್ಯ ಸೇವನೆಯಿಂದ ಅವರ ಪ್ರಜ್ಞೆ ಸಂಪೂರ್ಣವಾಗಿ ಹತೋಟಿ ಕಳೆದುಕೊಂಡಾಗ ಜಿಂತಾಮಣಿಗೆ ಇನ್ನಷ್ಟು ಹಣ ಕೊಡಲಾಯಿತು. ಅವನು ನಡೆಸಬೇಕಾದ ಕೆಲಸವನ್ನು ತನ್ನ ಸಹಾಯಕ ಸೂರಜ್‌ಗೆ ಒಪ್ಪಿಸಿ, ತನ್ನ ಕಡೆಯ ಜನರಲ್ಲಿ ಮೂವರನ್ನು ಕರೆದುಕೊಂಡು ಅಲ್ಲಿಂದ ಹೊರಟುಹೋದ. ಸ್ವಲ್ಪ ಹೊತ್ತಿನ ಬಳಿಕ ಸೀಮೆಣ್ಣೆ ಡಬ್ಬಗಳು ಮತ್ತು ಬೆಂಕಿ ಹಚ್ಚುವುದಕ್ಕೆ ಬೇಕಾದ ಸಾಮಗ್ರಿಗಳೊಡನೆ ಅವನು ಬೇಗನೆ ಹಿಂತಿರುಗಿದ.

*

ರಾತ್ರಿ ಹನ್ನೆರಡೂವರೆ ಗಂಟೆಗೆ ಕೊನೆಯ ಮೆಯಿಲ್ ರೈಲು ನಿಲ್ದಾಣದ ಮೂಲಕ ಹಾದು ಹೋಯಿತು. ಮುಂದಿನ ರೈಲು ಬರಬೇಕಾದರೆ ಇನ್ನೂ ಮೂರು ಗಂಟೆಗಳಾಗಬೇಕಿತ್ತು. ರೈಲ್ವೆ ಅಂಗಳದ ಇನ್ನೊಂದು ಬದಿಯಲ್ಲಿ ಅಗ್ನಿಜ್ವಾಲೆ ಆಕಾಶಕ್ಕೆ ಚಿಮ್ಮಿತು. "ಅದು ಅಲೆಮಾರಿಗಳ ಬಿಡಾರ" ಎಂದು ಯಾರೋ ಕೂಗಿಕೊಂಡರು.

ಮಾಧೋನ ಗುಂಪು ಲಾಠಿಗಳನ್ನು ಬೀಸುತ್ತಾ 'ಹರ ಹರ ಮಹಾದೇವ' ಎಂದು ಕೂಗುತ್ತಾ ನಿಲ್ದಾಣಕ್ಕೆ ಧಾವಿಸಿತು. ರೈಲ್ವೆ ಹಳಿಗಳನ್ನು ದಾಟಿ ಅಲೆಮಾರಿಗಳ ಬಿಡಾರದ ಕಡೆಗೆ ಸಾಗಿತು.

ಅನಂತರ ಎಲ್ಲ ಕಡೆಯಿಂದಲೂ ಗುಂಪುಗಳು ಸುತ್ತುಗಟ್ಟಿದವು. ಪ್ಲಾಟ್‌ಫಾರ್ಮ್ ಕಟಕಟೆಗಳಿಂದ ಕಂಬಿಗಳನ್ನೂ, ಚಾವಣಿಗಳಿಂದ ತೊಲೆಗಳನ್ನೂ ಕೀಳಲಾಯಿತು. ಲಾಠಿಗಳನ್ನೂ ಚಾಕುಗಳನ್ನೂ ಬೀಸುತ್ತಾ ಜನರು ನುಗ್ಗುತ್ತಿದ್ದರು.

ಮೇಲ್ ಸೇತುವೆಯ ಮೇಲೆ ನಿಂತು ಈ ಗಲಭೆಗೊಂದಲಗಳನ್ನೆಲ್ಲ ಗಮನಿಸುತ್ತಿದ್ದ ಗುಲ್. ಅಲೆಮಾರಿಗಳ ಬಿಡಾರವನ್ನು ಎಲ್ಲ ಕಡೆಯಿಂದಲೂ ಸುತ್ತುಗಟ್ಟಲಾಗಿತ್ತು. ಅವರ ಗುಡಾರಗಳಿಗೆ ಬೆಂಕಿ ಹೊತ್ತಿ ಉರಿಯುತ್ತಿದ್ದವು. ಅವರು ದಿಟ್ಟತನದಿಂದಲೇ ಎದುರಿಸಿ ಹೋರಾಡುತ್ತಿದ್ದರು. ಮುನ್ಸೂಚನೆ ಇಲ್ಲದೆ ಅವರ ಮೇಲೆ ಈ ದಾಳಿ ನಡೆದಿತ್ತು. ಮಕ್ಕಳು, ಹೆಂಗಸರು ಕತ್ತಲೆಯಲ್ಲಿ ಗೊತ್ತುಗುರಿಯಿಲ್ಲದೆ ತಮ್ಮ ಪ್ರಾಣ ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಚದುರಿದರು.

ಹಠಾತ್ತನೆ ಉತ್ಸಾಹಗೊಂಡ ಗುಲ್ ಸರಸರನೆ ಸೇತುವೆ ಇಳಿದು ಡೇರೆಗಳತ್ತ ಓಡಿದ. ಆದರೆ ಬಹು ಜನರ ವಿರುದ್ಧ ಅವನು ಒಬ್ಬಂಟಿಗನಾದುದರಿಂದ ಲಾಠಿ ಏಟೊಂದು ಅವನನ್ನು ನೆಲಕ್ಕೆ ಬೀಳಿಸಿತು. ಅನೇಕ ಕಾಲುಗಳು ಅವನ ದೇಹವನ್ನು ತುಳಿದು

ಕೊಂಡೇ ಕತ್ತಲೆಯಲ್ಲಿ ಅದೃಶ್ಯವಾದುವು.

ಗಲಭೆ ನಡೆದ ಸ್ಥಳಕ್ಕೆ ಪೋಲೀಸರು ಬಂದಾಗ ಗೂಂಡಾಗಳೆಲ್ಲಾ ಅದೃಶ್ಯರಾಗಿದ್ದರು. ಒಬ್ಬನೇ ಒಬ್ಬ ಅಪರಾಧಿಯನ್ನು ಸಹ ಬಂಧಿಸಲು ಅವರಿಗೆ ಸಾಧ್ಯವಾಗಲಿಲ್ಲ. ಹೊರಕ್ಕೆ ಹೋಗುವ ದಾರಿಗಳನ್ನೆಲ್ಲಾ ಮುಚ್ಚಿದ ನಂತರ ಪೋಲೀಸರು ಅಕ್ಕಪಕ್ಕದ ಓಣಿಗಳಲ್ಲಿ ಓಡಾಡಿ ಕೆಲವು ಜನರನ್ನು ವಶಕ್ಕೆ ತೆಗೆದುಕೊಂಡರು. ಆದರೆ ಅವರೆಲ್ಲ ಬಹು ಮಟ್ಟಿಗೆ ಈ ಸ್ವೇಚ್ಛಾಚಾರದಲ್ಲಿ ಯಾವುದೇ ಪಾತ್ರವನ್ನು ವಹಿಸದಿದ್ದವರು ಮತ್ತು ಏನು ನಡೆಯಿತೆಂಬುದನ್ನೇ ತಿಳಿಯದವರು.

ಆದರೆ ಗುಲ್‌ನ ಹೃದಯ ದುಃಖದಿಂದ ಭಾರವಾಗಿತ್ತು. ಲಚ್ಚಿಯನ್ನು ನೋಡಲು ಅವನು ಜೈಲಿಗೆ ಭೇಟಿ ಕೊಟ್ಟಿದ್ದಾಗ ಅವಳಿಗೆ ನಡೆದ ಕತೆಯನ್ನೆಲ್ಲಾ ಹೇಳಿದ. ಅವಳು ತನ್ನ ಹೃದಯದ ಸಂಕಟವನ್ನು ತಡೆದುಕೊಳ್ಳಲಾರದಾದಳು,

*

ತನ್ನ ಚಿತ್ರದ ಬಗ್ಗೆ ಯಾರೊಡನೆಯೂ ಮಾತನಾಡಕೊಡದೆಂದು ಲಚ್ಚಿಗೆ ಖುಬ್‌ಚಂದ್ ಎಚ್ಚರಿಕೆ ಕೊಟ್ಟಿದ್ದ. ಆದರೆ ಹೇಗೋ ಆ ಸುದ್ದಿ ಹಬ್ಬಿ ಸ್ತ್ರೀ ಕೈದಿಗಳಿಗೆ ಲಚ್ಚಿಯನ್ನು ನೋಡುವ ಕುತೂಹಲ ಉಂಟಾಗಿತ್ತು. ಪ್ರಸಿದ್ಧ ಚಿತ್ರತಾರೆ ದಿಲ್ ಆರಾ ಅವರಲ್ಲೊಬ್ಬಳು. ಮೋಸದ ಆಪಾದನೆಗಾಗಿ ಅವಳಿಗೆ ಮೂರು ವರ್ಷ ಶಿಕ್ಷೆಯಾಗಿತ್ತು.

ಲಚ್ಚಿಯನ್ನು ಭೇಟಿಯಾಗಲು ದಿಲ್‌ಆರಾಳನ್ನು ಜೀನಾಬಾಯಿ ಕರೆದುಕೊಂಡು ಬಂದಳು. ಲಚ್ಚಿ, "ನೀನು ನೋಡೋಕೆ ಏನೇನು ತಿಳೀದೋಳ ಹಂಗ ಇದ್ದೀಯ. ಯಾಕ್ ಹಂಗ ಮಾಡ್ದೆ?" ಎಂದು ಕೇಳಿದಳು.

"ನಾನೊಂದು ಕಾರು ನೋಡಿ ತುಂಬಾ ಇಷ್ಟಪಟ್ಟೆ. ಅದು ಒಬ್ಬ ಮಹಾರಾಜನದು. ೬೦ ಸಾವಿರ ರೂಪಾಯಿ ಕೊಟ್ರೆ ಕೊಡ್ತೀನಿ ಅಂತಿದ್ದ. ಹಾಗೆ ನೋಡಿದ್ರೆ ಆ ಬೆಲೆ ಶೀರಾ ಕಡಿಮೇನೆ. ಆವಾಗ ನನ್ ಹತ್ರ ದುಡ್ಡು ಕಡಿಮೆ ಇತ್ತು. ತುಂಬಾ ದಿನಗಳಿಂದ ಈ ಸಿಂಧಿ ಸೇಠ್ ನನ್ನ ಬೆನ್ನಹಿಂದೆ ಬಿದ್ದಿದ್ದ, ಅವನನ್ನು ನಾನು ವಂಚಿಸಬಹುದೂಂತ ಲೆಕ್ಕ ಹಾಕಿದೆ" ಎಂದಳು ದಿಲ್‌ಆರಾ.

"ಒಂದ್ ಕಾರ್‌ಗೋಸ್ಕರಾನಾ? ನಿನ್ ಹತ್ರ ಮೊದಲು ಕಾರು ಇರಲಿಲ್ಲವಾ?"

"ನನ್ ಹತ್ರ ಎರಡು ಕಾರು ಇತ್ತು. ಮೊದ್ಲೇ ಹೇಳಿದೆನಲ್ಲಾ ಆ ಹೊಸ ಕಾರು ನೋಡಿ ನಾನು ಹುಚ್ಚಿಯಾಗಿಬಿಟ್ಟಿದ್ದೆ," ಎಂದಳು ದಿಲ್‌ಆರಾ.

ದಿಲ್‌ಆರಾಳ ಸೌಂದರ್ಯಕ್ಕೆ ಮಾರುಹೋದ ಲಚ್ಚಿ ಆಕೆಯ ಗತಸ್ಥಿತಿಯನ್ನು ಕೆದಕಿ ಕೇಳಿದಳು.

"ನಾನು ಏಳು ವರ್ಷದವಳಿದ್ದಾಗ ನನ್ನ ತಂದೆ–ತಾಯಂದಿರು ನನ್ನನ್ನು ೭೦೦ ರೂಪಾಯಿಗೆ ಮಾರಿಬಿಟ್ಟರು. ಏಳನೇ ವರ್ಷದಿಂದ ಹದಿನೇಳನೇ ವರ್ಷದವರೆಗೆ ಹತ್ತು ಸಾರಿ ನಾನು ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಹೋದೆ. ಪ್ರತಿಯೊಂದು ವರ್ಷಾನೂ ನನಗೆ ಬೇರೆ ಅಪ್ಪ ಬರ್ತಿದ್ದ. ನಾನು ತುಂಬಾ ಸುಂದರಿಯಾದ್ದರಿಂದ ವರ್ಷವರ್ಷ ನನ್ ಬೆಲೆ ಹೆಚ್ಚಾಗ್ತಾ ಬಂತು. ನಾನು ತುಂಬಾ ಚಿಕ್ಕೋಳಾಗಿದ್ದಾಗ ನನ್ನನ್ನ ಕೊಂಡ್‌ಕೊಂಡೋನು ಮಗಳ ಹಾಗೆ ನನ್ನನ್ನು ನೋಡಿಕೊಳ್ಳುತ್ತಿದ್ದ. ನಾನು ಬೆಳೆದ ಮೇಲೆ ಅದೇ ತಂದೆ ನನ್ನ ಪ್ರೇಮಿಯಾದ. ನಾನು ಸಿನೆಮಾ ಸೇರಿದಾಗ ನನಗೆ ತಂದೆ–ತಾಯಂದಿರಿರಲಿಲ್ಲ; ಅವರೆಲ್ಲಾ ನನ್ನ ದಳ್ಳಾಳಿಗಳಾದರು" ಎಂದು ತನ್ನ ಕತೆ ಹೇಳಿದಳು ದಿಲ್‌ಆರಾ.

ಸ್ವಲ್ಪ ಹೊತ್ತು ಮೌನವಹಿಸಿದ ನಂತರ ಲಚ್ಚಿ, "ನಾನು ಸಿನಿಮಾದಾಗ ಪಾರ್ಟ್ ಮಾಡಬೌದಾ ?" ಎಂದು ಹಠಾತ್ತನೆ ಕೇಳಿದಳು.

"ನಿನಗೆ ಒಳ್ಳೆ ಚಾನ್ಸಿದೆ. ನೀನು ದೊಡ್ಡ ಕಲಾವಿದೆಯಾಗ್ತೀಯ" ಎಂದಳು ದಿಲ್‌ಆರಾ.

"ಹಮೀದನೂ ಹಿಂಗೇ ಹೇಳ್ದ" ಎಂದು ನಕ್ಕಳು ಲಚ್ಚಿ.

"ನಾನು ಫಿಲಂ ಸ್ಟಾರ್ ಹೆಂಗಾಗೋದು?"

"ನೀನು ಮಾಡಬೇಕಾಗಿರೋ ಹೊಟ್ಟೆ ಮೊದಲನೇ ಕೆಲಸಾ ಅಂದ್ರೆ ಮಾನಾನ ಅಪಮಾನ ಮಾಡೋದು."

"ಅದು ಸಾಧ್ಯವಿಲ್ಲ. ಅದಕ್ಕಿಂತ ಈ ಜೈಲೇ ಸುಖ" ಎಂದಳು ಲಚ್ಚಿ.

*

ಹಾಜಿಯಿಂದ ಐನೂರು ರೂಪಾಯಿ ಹಾಗೂ ಮೀರ್‌ಚಂದಾಸಿಯಿಂದ ಇನ್ನೂರು ರೂಪಾಯಿ ಲಂಚ ಪಡೆದ ಕಾಳಿಚರಣ. ಅನಂತರ ಚಿತ್ರದ ಷೂಟಿಂಗಿಗೆ ಹಾಜರಾಗಬೇಕೆಂಬ ಕಾರಣದಿಂದ

ದಿಲ್‌ಆರಾ ಅಧಿಕೃತವಾಗಿಯೇ ಹೊರಗೆ ಹೋಗಬೇಕೆಂದು ನಿರ್ಧರಿಸಲಾಯಿತು. ಪತ್ತು ಗಂಟೆಗೆ ಕಾವಲುಗಾರರು ಬದಲಾದಾಗ ಕಪ್ಪು ಬಣ್ಣದ ಕಾರು ಹಾಜಿ ಮತ್ತು ಮೀರ್‌ಚಂದಾನಿಯನ್ನು [illegible] ಕರೆದುಕೊಂಡು ಹೋಗುತ್ತದೆಂದೂ ಅವರೊಡನೆ ಮೂವರು, ದಿಲ್‌ಆರಾ ಜತೆ ಇಬ್ಬರು ವಾರ್ಡರ್‌ಗಳು ಹೋಗಬೇಕೆಂದೂ, ೫ ಗಂಟೆಗೆ ಕಾವಲುಗಾರರು ಬದಲಾಗುವುದಕ್ಕೆ ಮುಂಚೆ ಅವರು ಹಿಂತಿರುಗಬೇಕೆಂದೂ ಯಾರೂ ಅತಿ ಬುದ್ಧಿವಂತಿಕೆ ತೋರಿಸಬಾರದೆಂದೂ ತಿಳಿಸಲಾಗಿತ್ತು. ತುಂಬಾ ಬಲವಂತ ಮಾಡಿದ ಮೇಲೆ ಲಚ್ಚಿ ದಿಲ್‌ಆರಾಳ ಜತೆ ಹೋಗಲು ಒಪ್ಪಿಕೊಂಡಳು.

ದಿಲ್‌ದಾರ ರಸ್ತೆ ಸಾಕಷ್ಟು ಅಪಕೀರ್ತಿಗೆ ಗುರಿಯಾಗಿತ್ತು. ರಸ್ತೆಯ ಒಂದು ಪಾರ್ಶ್ವದಲ್ಲಿ ವೇಶ್ಯೆಯರ ಮನೆಗಳಿದ್ದವು. ಇನ್ನೊಂದು ಪಾರ್ಶ್ವದಲ್ಲಿ ಮರಮುಟ್ಟುಗಳ ಅಂಗಡಿಗಳು ಮತ್ತು ಕೆಲಸಕ್ಕೆ ಬಾರದ ವಸ್ತುಗಳ ಅಂಗಡಿಗಳು ಇದ್ದವು. ಇಲ್ಲಿ ಎಲ್ಲ ಬಗೆಯ ಹೆಂಗಸರೂ ಇದ್ದರು. ಎಲ್ಲ ಬಗೆಯ ಮರಮುಟ್ಟುಗಳೂ ಇದ್ದವು.

ದುರ್ವಾಸನೆಯ ಚರಂಡಿಗಳಲ್ಲಿ ವಾಂತಿ ಮತ್ತು ಮೂತ್ರ ತುಂಬಿತ್ತು. ಅದರ ಮೇಲೆ ಬಾಡಿದ ಮಲ್ಲಿಗೆ ಹೂಗಳು ತೇಲಾಡುತ್ತಿದ್ದವು. ತಬಲಾ ಸದ್ದು ಮತ್ತು ಸಾರಂಗಿಯ ರೋದನದ ಜತೆಗೆ ಕ್ಷೀಣ ಧ್ವನಿಯ ಠುಮ್ರಿಗಳು ಕೇಳಿಬರುತ್ತಿದ್ದವು. ಹಳೆಯ ಅಗ್ಗದ ಸಿನೆಮಾ ಹಾಡುಗಳು ನೊಣಗಳಂತೆ ಗುಂಯ್‌ಗುಟ್ಟುತ್ತಿದ್ದವು.

"ಇನ್ನೊಂದು ಕ್ಷಣವೂ ನಾನಿಲ್ಲಿ ಇರಲಾರೆ" ಎಂದು ಲಚ್ಚಿ ಅಸಹ್ಯದಿಂದ ಉಗುಳುತ್ತಾ ಹೇಳಿದಳು.

"ಪ್ರಿಯೆ, ರಾತ್ರಿ ಈಗ ತಾನೆ ಶುರುವಾಗಿದೆ. ಅದನ್ನು ಕಳೆಯೋದಿಕ್ಕೆ ಇನ್ನೂ ಶಾನೆ ಹೊತ್ತಿದೆ" ಎನ್ನುತ್ತಾ ಹಾಜಿ ಲಚ್ಚಿಯ ಕೈ ಹಿಡಿದುಕೊಂಡ.

ಅವಳು ಅವನ ತಲೆಯ ಮೇಲೆ ವಿಸ್ಕಿ ಸುರಿದಳು. ಮೀರ್‌ಚಂದಾನಿ ಕೆರಳಿ ಅವಳ ಕೆನ್ನೆಗೆ ಹೊಡೆದ. ರೋಷಾವೇಷದಿಂದ ಲಚ್ಚಿ ಅವನ ಕುತ್ತಿಗೆ ಹಿಡಿದು ಬಲವಾಗಿ ನೂಕಿ ಅವನನ್ನು ನೆಲ ಕಚ್ಚಿಸಿದಳು. ನುಗ್ಗಿ ಬಂದ ಇತರರ ತಲೆಗಳನ್ನು ತಾಳಗಳಂತೆ ಒಂದೊಂದಕ್ಕೆ ಬಡಿದಳು. ಕ್ಷಣ ಮಾತ್ರದಲ್ಲಿ ಇಡೀ ಕೋಣೆಯೇ ಕೋಲಾಹಲದಲ್ಲಿ ಮುಳುಗಿತ್ತು.

ಗಸ್ತು ತಿರುಗುತ್ತಿದ್ದ ಪೋಲೀಸರು ಸದ್ದುಗದ್ದಲ ಕೇಳಿ ಧಾವಿಸಿ ಬಂದರು. ಒಳಗಿದ್ದವರನ್ನೆಲ್ಲಾ ಬೇಗನೆ ಪೋಲೀಸ್ ಠಾಣೆಗೆ ಕರೆತಂದು ಲಾಕಪ್ಪಿನೊಳಗೆ ತಳ್ಳಲಾಯಿತು. ನಡೆದ ಕತೆ ಕೇಳಿ ಕಾಳಿಚರಣನ ಹಣೆಯ ಮೇಲೆ ಬೆವರು ಹನಿ ಮೂಡಿತು. ನಡೆದುಹೋದುದನ್ನೆಲ್ಲಾ ಸರಿಪಡಿಸದೆ [illegible] ತಾನು ಭಾರಿ ತೊಂದರೆಗೆ ಸಿಕ್ಕಿಕೊಳ್ಳ[illegible] ಹೆದರಿಕೆಯಿಂದ ಅವನು ಪೋಲೀಸ್ ಠಾಣೆಗೆ ಧಾವಿಸಿ ಬಂದ.

ಪೋಲೀಸ್ ಅಧಿಕಾರಿ ಮತ್ತು ಕಾಳಿಚರಣ್ ದೀರ್ಘಕಾಲ ಮಾತುಕತೆ ನಡೆಸಿದರು. ಅನಂತರ ಮೀರ್‌ಚಂದಾನಿ ಹಾಜಿಯೊಡನೆ ಮಾತನಾಡುವುದಾಗಿ ಕಾಳಿಚರಣ್‌ಗೆ ಪೋಲೀಸ್ ಲಾಕಪ್ ತೋರಿಸಲಾಯಿತು. ಲಂಚ ನೀಡಿದ ನಂತರವೇ ಅವರಿಗೆ ಪೋಲೀಸ್ ಠಾಣೆಯಿಂದ ಹೊರಕ್ಕೆ ಹೋಗಲು ಅನುಮತಿ ನೀಡಲಾಯಿತು.

*

ಕಾಳಿಚರಣ ತನಗೆ ಇಷ್ಟಬಂದಂತೆ ವರ್ತಿಸಬಹುದಾಗಿದ್ದರೆ ಅವನು ಲಚ್ಚಿಯನ್ನು ಅವಳ ದುರ್ನಡತೆಗಾಗಿ ತೀವ್ರವಾಗಿ ಶಿಕ್ಷಿಸಬಹುದಾಗಿತ್ತು. ಅವಳ ವಿಲಕ್ಷಣ ವರ್ತನೆಯಿಂದ ಅವರೆಲ್ಲಾ ತೊಂದರೆಗೆ ಸಿಲುಕುವಂತಾಗಿತ್ತು.

ಲಚ್ಚಿ ಖುಬ್‌ಚಂದನ ಮೆಚ್ಚಿಕೆಗೆ ಪಾತ್ರಳಾಗಿದ್ದ ವಿಷಯವನ್ನು ಅರಿತಿದ್ದ ಕಾಳಿಚರಣ ಖುಬ್‌ಚಂದನೊಡನೆ ವೈಮನಸ್ಸು ಕಟ್ಟಿಕೊಳ್ಳಲು ಇಷ್ಟಪಡದೆ ಇಡೀ ಪ್ರಕರಣದ ಬಗೆಗೆ ವಿವೇಕಪೂರ್ಣವಾದ ಮೌನ ತಳೆದ.

ಅಂತೂ ಈ ಪ್ರಕರಣದ ನಂತರ ಲಚ್ಚಿ ಮತ್ತು ದಿಲ್‌ಆರಾ ಅವರ ನಡುವೆ ಪ್ರೀತಿ–ವಿಶ್ವಾಸ ಉಳಿಯಲಿಲ್ಲ.

"ನಾನು ನನ್ನ ದೇಹವನ್ನು ಮಾರಿಕೊಳ್ಳಲು ಸಿದ್ಧಳಿಲ್ಲ. ಅದಕ್ಕಾಗಿ ನಾನು ಸಾಯಬೇಕಾಗಿ ಬಂದರೂ ಸರಿಯೆ– ಮಾರುವುದಿಲ್ಲ" ಇದು ಲಚ್ಚಿಯ ವಾದ. ದಿಲ್‌ಆರಾ ಮಾತ್ರ ಜೀವನದಲ್ಲಿ ಮುನ್ನಡೆಯಲು ಲೈಂಗಿಕ ಬಿನ್ನಾಣವನ್ನು ವಿವೇಕದಿಂದ ಬಳಸಬೇಕೆಂಬ ನಿಲುವನ್ನು ಹೊಂದಿದ್ದಳು.

ಜೀನಾಬಾಯಿ ಮತ್ತು ಜೈಲಿನ ಇತರ ಹೆಂಗ

ವರು ಲಚ್ಚಿಯ ಸುಧಾರಣೆಗೆ ಬದ್ಧಕಂಕಣರಾದವರು. ಅವಳನ್ನು ತಿದ್ದಲು ಒಂದು ವರ್ಷಕಾಲ ಅವರು ಪ್ರಯತ್ನಿಸಿದರು. ಅವಳನ್ನು ದಾರಿಗೆ ತರುವ ಕೆಲಸಕ್ಕಾಗಿ ಹಾಜಿ ಮತ್ತು ಜೀನಾಬಾಯಿಯವರ ಮನ ಒಂದಾಗಿ ದುಡಿಯಿತು. ಅಂದಿನ ರಾತ್ರಿಯ ಅಹಿತಕರ ಘಟನೆಯ ನಂತರ ಅವಳನ್ನು ದೈನ್ಯಾವಸ್ಥೆಗೆ ತರಲು, ಅವಳ ಹೆಮ್ಮೆಯನ್ನು ಇಳಿಸಿ ಮಟ್ಟಹಾಕಲು ನಿರ್ಧರಿಸಿದ್ದರು.

"ಸುಮ್ನೆ ಹದ್ದಿ ಹಾಗೆ ಆಡಬೇಡ. ನೀನು ಹ್ಞೂ ಅಂದರೆ ಸಾಕು– ನಿನ್ ಬದುಕೆಲ್ಲಾ ಬಂಗಾರ !" ಎಂದಳು ಜೀನಾಬಾಯಿ.

"ಈ ಯಾಪಾರ ಮಾಡಿ ಗುಲ್‌ಗೆ ಮೋಸ ಮಾಡು ಅಂತೀಯಾ?"

"ತಪ್ಪೇನದೆ ಇದರಾಗ? ನಿನ್ ಮೈ ನಿನ್ ಸೊಂತದ್ದು–ಅವನದಲ್ಲ. ಪ್ರೀತಿ ಅಂದ್ರೇನು? ದಿನಕ್ಕೆ ಇಪ್ಪತ್ ಸಲ ಪ್ರೀತಿಸ್ತಾರೆ–ಹಂಗೇ ಕೈ ಬಿಡ್ತಾರೆ. ನಿನ್ ವಯಸ್ನಲ್ಲಿ ನಾನೂ ಹಿಂಗೇ ಮಾಡ್ತಿದ್ದೆ. ಒಂದರ ಪ್ರೀತಿ ಹಳಸಿದರೆ, ಬೇಜಾರಾದರೆ, ಅದನ್ನ ಅಚೆ ಮಡಗಿ ಹೊಸದನ್ನ ಹುಡುಕ್ತಿದ್ದೆ."

"ಅಬ್ಬಾ! ಪ್ರೀತಿ, ಪ್ರೇಮ ಅನ್ನೋದು ಬೀದಿ ಕೊಳಾಯಿ ಇದ್ದಂಗೆ ಅಂತೀಯಾ–ಬೇಕಾದಾಗ ತಿರುಗಿಸೋದು, ಬೇಡಾದಾಗ ನಿಲ್ಲಿಸೋದ?" ಎಂದು ಕೇಳಿದಳು ಲಚ್ಚಿ.

ಜೀನಾಬಾಯಿಯ ಬಳಿ ಅದಕ್ಕೆ ಉತ್ತರವಿರಲಿಲ್ಲ.

*

ಜೈಲಿನಲ್ಲಿ ಲಚ್ಚಿಗೆ ಎಲ್ಲ ಬಗೆಯ ವಿಚಿತ್ರ ವ್ಯಕ್ತಿಗಳ ಪರಿಚಯವೂ ಆಯಿತು. ಗಂಗಾಬಾಯಿ ಅವರಲ್ಲಿ ಒಬ್ಬಳು. ಸುಂದರಿಯಾದ ಈಕೆ ಸುಮಾರು ಎರಡು ಡಜನ್‌ಗಳಷ್ಟು ಕಳ್ಳತನಗಳನ್ನು ಮಾಡಿದ್ದಳು.

ಅವಳನ್ನು ಕುರಿತು ಲಚ್ಚಿ, "ಜೈಲಿನಿಂದ ಬಿಟ್ ಮೇಲೆ ಏನ್ ಮಾಡ್ತೀಯಾ?" ಎಂದು ಕೇಳಿದಳು.

"ತಿರುಗಾ ಅದೇ ಆಟಾನೇ ಷುರುಮಾಡ್ತೀನಿ."

"ಹಂಗಾದ್ರೆ ಈ ಜೈಲ್ ಶಿಕ್ಷೆಯಿಂದ ನಿಂಗೇನ್ ಒಳ್ಳೇದು ಆಯ್ತು? ಜೈಲಾದ್ರೂ ನಿಂಗೆ ಬುದ್ಧಿ ಬರ್ಲಿಲ್ಲಾ ಅನ್ನು?"

"ಸೊಲ್ಪ ದಿನ ಜೈಲಿಗೆ ಬಂದು ಓಗೋದು ನನ್ನ ಬಾಳಿನಾಗ ಇದ್ದದ್ದೆ. ನಿಜ ಹೇಳ್ಬೇಕೂಂದ್ರೆ ನಂಗೆ ಕಳ್ಳತನ ಬಿಟ್ರೆ ಬದುಕೋಕೆ ಬೇರೆ ದಾರೀನೆ ಇಲ್ಲ," ಎಂದಳು ಚಿಂತಾಕ್ರಾಂತಳಾದ ಗಂಗಾಬಾಯಿ.

"ಮದ್ವೆ ಮಾಡ್ಕೊಬೇಕೂಂತ ನಿನ್ ಮನಸ್ನಾಗೇ ಯೋಚನೇನೂ ಬರ್ತಿತ್ತಾ ?"

"ನನ್ ಕೂಡ ಕೆಲಸ ಮಾಡ್ತೋರು ಇದ್ರಲ್ಲಾ– ಅವರ್ ಕೂಡ ಮದುವೆ ಆಗೋದಕ್ಕೆ ಇಷ್ಟ ಪಡ್ತಿದ್ದೆ ಮೆಚ್ಚಿಕೊಂಡ್ರು" ಎಂದು ಗಂಗಾಬಾಯಿ ಹೇಳಿದಾಗ ಲಚ್ಚಿಯ ಮುಖ ವಿವರ್ಣವಾಗಿತ್ತು.

ಲಚ್ಚಿಗೆ ಪರಿಚಯವಾದ ಇನ್ನೊಬ್ಬಳು ವಿಲಕ್ಷಣ ಕೈದಿ ಕೌಸಲ್ಯ. ಅವಳಿಗೆ ಅನೇಕ ಹೆಸರುಗಳಿದ್ದವು– ಇಕ್ಬಲ್ ಬಾನು, ಮೇರಿ ಡಿಸೋಜಾ, ಸುರ್‌ಜೀತ್ ಕೌರ್, ಇತ್ಯಾದಿ. ಶ್ರೀಮದ್ವ್ಯಾಘ್ರೋದರಿಯಾದ ಈ ಹುಡುಗಿ ಪದವೀಧರೆ, ತುಂಬಾ ಚುರುಕು. ಅವಳಿಗೆ ಅನೇಕ ಭಾಷೆಗಳು ಬರುತ್ತಿದ್ದವು. ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವುದಾಗಿಯೂ, ಮಂತ್ರಿಗಳು, ದೊಡ್ಡ ಅಧಿಕಾರಿಗಳು ತನಗೆ ಪರಿಚಯವಿದ್ದಾರೆಂದೂ ಅವರ ಮೂಲಕ ಸುಲಭವಾಗಿ ಕೆಲಸ ಕೊಡಿಸುವುದಾಗಿಯೂ ಹೇಳಿ, ಅವಳ ಮಾತಿಗೆ ಬೆರಗಾದವರಿಂದ ಹಣ ಗಿಟ್ಟಿಸಿ ಹಠಾತ್ತನೆ ನಾಪತ್ತೆಯಾಗುತ್ತಿದ್ದಳು.

"ನೀನು ಓದಿರೋ ಹೆಂಗ್ಸು. ತಿಂಗ್ಳು ತಿಂಗ್ಳು ಸಂಬಳ ಬರೋ ಅಂಥ ಕೆಲಸಕ್ಕೆ ಸೇರ್ಕೊಬಾರ್ದಾ? ಮಾಸವಾಗಿ ಇನ್ನೂರು– ಮುನ್ನೂರು ರೂಪಾಯಿ ಸಂಪಾದ್ನೆ ಮಾಡ್‌ಬಹುದಲ್ಲ ನೀನು" ಎಂದಳು ಲಚ್ಚಿ.

"ಅಷ್ಟರಿಂದ ಏನಾಗುತ್ತೆ. ದೊಡ್ ಮನುಷ್ರ ಹಾಗೆ ಬದುಕ್‌ಬೇಕು ನಾನು. ಅದಕ್ಕೇ ಈ ವೃತ್ತಿ..." ಎಂದಳು ಕೌಸಲ್ಯ.

"ನನ್ನ ಅಪ್ಪ ಅಮ್ಮ ದುಡ್ಡಿನಾಸೆಗೋಸ್ಕರ ನನ್ನನ್ನ ಮುದುಕನಿಗೆ ಕೊಟ್ಟು ಮದುವೆ ಮಾಡಿದ್ರು. ಆ ಮುದುಕ ಸತ್ತ ಮೇಲೆ ಅವನ ಮೊದಲನೇ ಹೆಂಡತಿ ಮಕ್ಕಳು ನನ್ನನ್ನ ಆಚೆಗೆ ಅಟ್ಟಿದರು. ನನಗಿಷ್ಟವಾದ ಒಬ್ಬ ಗೌರವಸ್ಥನ ಮದುವೆಮಾಡ್ಕೊಂಡು ಅವನ ಜೊತೆ ಸುಖವಾಗಿ ರೋಣ ಅಂತ ಒಂದು ಕಾಲದಲ್ಲಿ ಯೋಚನೆ ಮಾಡಿದ್ದೆ. ಆದರೆ ನನ್ನ ಮದುವೆಯಾಗೋದಕ್ಕೆ ಯಾವ ಗೌರವಸ್ಥನೂ ಒಪ್ಪಲಿಲ್ಲ. ಪ್ರತಿ ಸಾರಿಯೂ ಜೈಲಿನಿಂದ ಬಿಟ್ಟ ಮೇಲೆ ಒಳ್ಳೆ ದಾರೀಲಿ ಹೋಗ್ ಬೇಕು. ಒಳ್ಳೆ ಮರ್ಯಾದಸ್ಥನ ಮದುವೆ ಆಗಬೇಕು

ಅಂದ್ಕೊಳ್‌ತೀನಿ. ಅಂಥವನು ಸಿಕ್ಕಿದಾಗ ಅವನಿಗೆ ನಾನ್ ಕತೆ ಹೇಳ್ತೀನಿ. ಅದನ್ನ ಕೇಳಿ ಅವನು ಹೆದರಿ ನನ್ನಿಂದ ದೂರ ಹೊರಟು ಹೋಗ್ತಾನೆ," ತನ್ನ ಕತೆಯನ್ನು ವಿವರಿಸಿದಳು ಕೌಸಲ್ಯ.

"ಒಳ್ಳೇವನು, ಮರ್ಯಾದಸ್ಥ ಅಂದರೆ ಏನು ಅಂತ ತಿಳ್ಕೊಂಡಿದ್ದೀಯಾ?"

"ಏನಿಲ್ಲಾಂದರೂ ತಿಂಗಳಿಗೆ ಸಾವಿರ ರೂಪಾಯಿ ಸಂಬಳಾ ತರೋನೇ ಒಳ್ಳೇವನು –ಮರ್ಯಾದಸ್ಥ."

"ಓ ಹಂಗಾ! ಸರಿ ಬಿಡವ್ವಾ, ನಿನ್ನ ಆ ಭಗವಂತ್ನೇ ಕಾಪಾಡ್ಬೇಕು," ಎಂದು ನಿಟ್ಟುಸಿರಿಟ್ಟಳು ಲಚ್ಚಿ.

*

ಖುಬ್‌ಚಂದನ ಚಿತ್ರಕ್ಕೆ ರೂಪದರ್ಶಿಯಾಗಲು ಲಚ್ಚಿ ಅಂದು ಸಂಜೆ ಅವನ ಬಳಿಗೆ ಹೋದಾಗ ಎಂದಿನಂತೆ ಅವಳು ಗೆಲುವಾಗಿರಲಿಲ್ಲ. ಕೆಲಸದಲ್ಲಿ ತಲ್ಲೀನನಾಗಿದ್ದ ಅವನು ಅದನ್ನು ಗಮನಿಸಲಿಲ್ಲ.

"ನಿಮ್ ಸಂಬ್ಳ ಎಷ್ಟು?"

"ಆರು ನೂರು ರೂಪಾಯಿ."

"ಹಂಗಾದ್ರೆ ಬಿಡಿ, ನೀವು ಮರ್ಯಾದಸ್ಥರಲ್ಲ."

"ಯಾಕ್ ಹಾಗೆ ಹೇಳ್ತೀಯಾ?" ಎಂದು ಕೇಳುತ್ತಾ ಕೆಲಸ ನಿಲ್ಲಿಸಿದ ಖುಬ್‌ಚಂದ್, "ಎಂದಾದರೂ ನಾನು ನಿನ್ನ ಮನಸ್ಸು ನೋಯಾಗೋ ಹಾಗೆ ನಡ್ಕೊಂಡಿದ್ದೀನಾ?"

"ಇಲ್ಲ. ನಾನ್ ಹಂಗನ್ಲಿಲ್ಲ. ಸಾವಿರ ರೂಪಾಯಿಗಿಂತ ಕಮ್ಮಿ ಸಂಬ್ಳ ತಕ್ಕೊಳ್ಳೋರು ಮರ್ಯಾದಸ್ಥರಲ್ಲ ಅಂದ್ಲು ಕೌಸಲ್ಯ" ಖುಬ್‌ಚಂದ್ ನಕ್ಕ.

"ಈ ಜಗತ್ತು ತಿಳ್ಕೊಂಡಿರೋದೇ ಹಾಗೆ. ಅದಕ್ಕೇ ಈ ಲೋಕ ಇಷ್ಟೊಂದು ಕೆಟ್ಟಿರೋದು"

ಅನಂತರ ಖುಬ್‌ಚಂದ್ ಲಚ್ಚಿಗೆ ಗುಲ್‌ನ ಪತ್ರ ನೀಡಿದ. ಅದನ್ನು ಓದಿ ಹೇಳುವಂತೆ ಅವಳು ಖುಬ್‌ಚಂದ್‌ನಿಗೆ ಯಾಚಿಸಿದಳು. ಅವನು ಓದಿ ಹೇಳಿದ. ಪತ್ರದಲ್ಲಿ ಪ್ರೀತಿಯ ಹೊನಲು ಹರಿದಿತ್ತು.

ಖುಬ್‌ಚಂದ್ ತುಂಬಾ ಕಷ್ಟಪಟ್ಟು ಅವಳ ಚಿತ್ರವನ್ನು ಬರೆದಿದ್ದ. ಲಚ್ಚಿ ಅದನ್ನು ನೋಡಿ, "ಇದರಾಗಿರೋ ಅಷ್ಟು ನಾನು ಚೆಂದಾಕಿಲ್ಲ" ಎಂದಳು.

ಖುಬ್‌ಚಂದನ ಮುಖ ಬಾಡಿಹೋಗಿತ್ತು. ಈ ಚಿತ್ರದ ಮೂಲಕ ಅವನು ಅವಳೊಡನೆ ಬೇಕಾದಷ್ಟು ಮಾತನಾಡಿದ್ದ. ಅವಳು ಆ ಚಿತ್ರದಲ್ಲಿ ಅವಳ ಸ್ವರೂಪವನ್ನು ಮಾತ್ರ ನೋಡಿದ್ದಳೇನು? ಅವನ ಆತ್ಮದ ವೇದನೆಯ ತುಡಿತ– ಅವಳಿಗಾಗಿ ಅವನು ತೆರೆದಿಟ್ಟ ಹೃದಯದ ಮಿಡಿತ ಅವಳಿಗೆ ಗೊತ್ತಾಗಲಿಲ್ಲವೇನೋ?

"ಸೂಬ್ರಿಜಾನ್. ನಾನು ಗುಲ್‌ನ ಪ್ರೀತಿಸ್ದೆ ಇದ್ರೆ ನಿಮ್ಮನ್ನ ಮದುವೆ ಮಾಡ್ಕೊಣ್‌ತಿದ್ದೆ" ಲಚ್ಚಿ ನುಡಿದಾಗ ಬಿರುಗಾಳಿಗೆ ಸಿಕ್ಕ ಎಲೆಯಂತೆ ಅವನ ಮೈ ಕಂಪಿಸಿತು. ಅನಂತರ ನಿಶ್ಚಲವಾಯಿತು– ಮರದಿಂದ ಕೆಳಕ್ಕೆ ಬಿದ್ದ ಎಲೆಯಂತೆ.

"ಆದರೆ ಗುಲ್ ಹೊರಟುಹೋದ. ಎಲ್ಲಿಗೇಂತ ಯಾರಿಗೂ ತಿಳಿಯದು" ಅವಳ ಕಡೆಗೆ ನೋಡದೆಯೇ ಅವನು ಹೇಳಿದ.

"ಗುಲ್ ಸಾವಿರ ಮೈಲಿ ಆಚೆ ಇದ್ರೂನು ಸರಿ. ನಾನ್ ಓಗ್ತೀನಿ" ಎಂದಳು ಲಚ್ಚಿ.

"ಈ ನನ್ನ ಕೆಲಸಾನ ಬಿಟ್ಟು ಬಿಟ್ಟು ನಿನ ಜೊತೇ ಪ್ಯಾರಿಸ್‌ಗೆ ಹೋಗೋಣಾಂತ ಅಂದುಕೊಂಡಿದ್ದೆ. ಅಲ್ಲೇ ಸ್ಟುಡಿಯೋ ಮಾಡಿಕೊಂಡು ನಿನ ಚಿತ್ರಗಳನ್ನು ಮಾತ್ರ ಬರೆಯೋಣ ಅಂತಿದ್ದೆ" ಎಂದ ಖುಬ್‌ಚಂದ್.

ಲಚ್ಚಿಯನ್ನು ಆಲಂಗಿಸಿಕೊಳ್ಳಬೇಕೆಂಬ ಬಲವಾದ ಆಸೆ ಖುಬ್‌ಚಂದನ ಮನದಲ್ಲಿ ಮೂಡಿತ್ತು. ಆದರೆ ಅವನು ತನ್ನ ಬಯಕೆಯನ್ನು ಅದುಮಿಕೊಂಡ.

"ಈ ಚಿತ್ರಾನ ನೀವೇನ್ ಮಾಡ್ತೀರಿ?"


"ನನ್ ಜೊತೇಲೇ ಅದನ್ನ ಪ್ಯಾರಿಸ್‌ಗೆ ತಗೊಂಡ್ ಹೋಗ್ತೀನಿ."

"ಒಬ್ಬರ ಹಣೇಲಿ ಬರೆದಿರೋದನ್ನ ಯಾರೂ ಯಾವತ್ತೂ ಬದಲಾಸೋಕೂ ಆಗಾಕಿಲ" ಎಂದು ನಿಟ್ಟುಸಿರಿಟ್ಟ ಲಚ್ಚಿ, "ಆಹ್! ಗುಲ್‌ನ ಜ್ಞಾಪಿಸ್ಕೊಂಡ್ರೇನೇ ಸಾಕು ಹಾಯಾಗಿರ್ತದೆ" ಎಂದಳು.

"ಗುಲ್" ಶಬ್ದ ಕೇಳಿ ಕೆಂಡವಾದ ಖುಬ್‌ಚಂದ್ ಅವಳನ್ನು ಹೊರದೂಡಿದ.

*

ಮೂರು ದಿನಗಳಿಂದಲೂ ಲಚ್ಚಿ ಜೈಲಿನಲ್ಲಿನ ತನ್ನ ಕೋಣೆಯಿಂದ ಹೊರಕ್ಕೆ ಬಂದಿರಲಿಲ್ಲ. ಅವಳಿಗೆ ಜ್ವರ ಬಂದಿತ್ತು. ಪ್ರತಿದಿನವೂ ವೈದ್ಯರು ಬಂದು ಅವಳನ್ನು ಪರೀಕ್ಷಿಸಿ ಔಷಧಿ




ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.


ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ —ಆಮೇಲೆ ಇವು ನೋಯುವ ದಂತ ಕ್ಷಯವನ್ನು ಉಂಟುಮಾಡುತ್ತವೆ.

ಆದುದರಿಂದ [illegible] ಆಹಾರವನ್ನು [illegible] ನಂತರ ಕೂಡಲೇ ಕೋಲ್ಗೇಟ್‌ನಿಂದ [illegible] ನಿಮ್ಮ [illegible] ಹಲ್ಲುಗಳನ್ನು [illegible] ಮತ್ತು ದಂತಕ್ಷಯವನ್ನು [illegible] ಅದು ಅತ್ಯಂತ ಪರಿಣಾಮಕಾರಿ ಎಂದು [illegible]

ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ :



ಉಸಿರಿನ ದುರ್ವಾಸನೆಯನ್ನು ಮತ್ತು ದಂತಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.




ಕೋಲ್ಗೇಟ್‌ನ [illegible] ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿ[illegible] ಮತ್ತು ಅಪಾಯಕರವಾದ ಆಹಾರ [illegible]



[illegible]

ಅಧಿಕ ಶುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬೆಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು [illegible]



ದಂತವೈದ್ಯರು ಮಾತ್ರ ನಿಮಗೆ ಉತ್ತಮೋತ್ತಮ ದಂತರಕ್ಷಣೆಯನ್ನು ನೀಡಬಲ್ಲರು

DC.G.64 KN

265-18

ಕೊಡುತ್ತಿದ್ದರು. ಆದರೆ ಅವಳ ಸ್ಥಿತಿ ಸುಧಾರಿಸಲಿಲ್ಲ.

ಐದನೆಯ ದಿನ ಅವಳನ್ನು ಪರೀಕ್ಷಿಸಿದ ವೈದ್ಯರು, "ಅವಳ ಸ್ಥಿತಿ ತುಂಬಾ ಕೆಟ್ಟಿದೆ" ಎಂದು ಹೊರಗೆ ನಿಂತಿದ್ದ ಖುಬ್‌ಚಂದನಿಗೆ ಹೇಳಿದರು. "ಈಗಲೇ ಅವಳನ್ನು ಆಸ್ಪತ್ರೆಗೆ ಸಾಗಿಸಬೇಕು. ಇದು ಸಿಡುಬು" ಎಂದರು. ಕತ್ತಲೆಯಲ್ಲಿ ಮಲಗಿದ ಲಚ್ಚಿ ಗುಲ್‌ನಿಗಾಗಿ ಅರಚುತ್ತಿದ್ದಳು. ಧ್ವಂಸ ಮಾಡುವ ಬಿರುಗಾಳಿಯಂತೆ ಸಿಡುಬು ಅವಳ ಮೈಮೇಲೆ ದಾಳಿ ಮಾಡಿ ಅದನ್ನು ಹಾನಿಗೀಡು ಮಾಡಿತ್ತು. ಇಪ್ಪತ್ತೇಳು ದಿನಗಳ ಕಾಲ ಈ ಬಾಧೆಯನ್ನು ಅನುಭವಿಸಿದ ಲಚ್ಚಿ ಕೊನೆಗೊಮ್ಮೆ ಕಣ್ಣು ತೆರೆದಳು. ತೆರೆದ ಕಣ್ಣಿನ ಮುಂದೆ ಆವರಿಸಿತ್ತು ಕತ್ತಲೆ. ಅವಳು ಕುರೂಪಿಯಾಗಿದ್ದಳು. ಸಿಡುಬಿನ ಸಿಡಿಮದ್ದು ಸ್ಫೋಟಿಸಿ ಅವಳ ಸೌಂದರ್ಯ ನಾಶವಾಗಿತ್ತು.

ಮೂರು ತಿಂಗಳ ನಂತರ ಅವಳನ್ನು ಆಸ್ಪತ್ರೆಯಿಂದ ಜೈಲಿಗೆ ಸಾಗಿಸಿದರು. ಸಿಡುಬು ಅವಳ ಸೌಂದರ್ಯವನ್ನು ಹೇಗೆ ಕೆಡಿಸಿದೆ ಎಂದು ನೋಡಲು ಹಾಜಿ, ಮೀರ್‌ಜಂದಾನಿ, ಕೌಸಲ್ಯ, ಕಾಳಿಚರಣ್, ಜೀನಾಬಾಯಿ ಮತ್ತಿತರರು ಕಾತರರಾಗಿದ್ದರು. ಖುಬ್‌ಚಂದನಿಗೆ ಅವಳನ್ನು ನೋಡುವ ಆಸಕ್ತಿ ಇರಲಿಲ್ಲ.

"ಶಾನೆ ಅಸಯ್ಯನಾಗಿದ್ದೀನಿ ಅಲ್ವಾ ನಾನು?"

"ಇಲ್ಲ ಲಚ್ಚಿ. ಇಲ್ಲ ಹಾಗೆ ಹೇಳೋದು ಸರಿ ಅಲ್ಲ" ತಾನು ಗೊಂದಲದಲ್ಲಿ ಸಿಕ್ಕು ಬಿದ್ದೇನೆ ಎಂಬುದನ್ನು ತೋರಿಸಿಕೊಳ್ಳದೆ ಸರಸರನೆ ಮಾತನಾಡಿದ ಖುಬ್‌ಚಂದ್.

"ನೀವು ನನ್ನ ನಿಮ್ ಕೂಡ ಪ್ಯಾರಿಸ್‌ಗೆ ಕರ್ಕೊಂಡು ಓಗ್ತೀರಿ ತಾನೆ?"

"ಪ್ಯಾರಿಸ್‌ಗೆ ನೀನು ?" ಅಸಹ್ಯವಾಗಿ ನಕ್ಕ ಖುಬ್‌ಚಂದ್,

ಮಾತು ಬದಲಿಸಲೆತ್ನಿಸಿ ಖುಬ್‌ಚಂದ್, "ನನ್ ಶಿಫಾರಸ್ ಮೇಲೆ ನಿನ್ ಶಿಕ್ಷೆ ಮನ್ನಾ ಮಾಡೋಕೆ ಸರ್ಕಾರದ ದೊಡ್ ಮನಸ್ಸು ಮಾಡಿದೆ. ಇವತ್ತಿನಿಂದ ನೀನು ಸ್ವತಂತ್ರಳು. ನಿನ್ನಿಷ್ಟ ಬಂದ ಕಡೆಗೆ ಎಲ್ಲಿಗೆ ಬೇಕಾದರೂ ನೀನು ಹೋಗಬಹುದು" ಎಂದ.

ಜೈಲಿನಿಂದ ತನಗೆ ಬಿಡುಗಡೆಯಾದ ನಂತರ ತಾನು ಗುಲ್‌ನ ದೇಶಕ್ಕೆ ಹೋಗಿ ಅವನನ್ನು ಹುಡುಕಬೇಕೆಂದು ಅವಳು ಹಿಂದೆ ಯೋಚಿಸಿದ್ದಳು. ಅಗತ್ಯವಾದರೆ ಕಾಲುನಡಿಗೆಯಲ್ಲೇ ಪೂರ್ತಿ ಪ್ರಯಾಣವನ್ನು ಮುಗಿಸಲು ಸಿದ್ಧಳಿದ್ದಳು— ಹೀಗೆಲ್ಲಾ ಯೋಚಿಸಿದಾಗ ಅವಳಿಗೆ ಕಣ್ಣುಗಳಿದ್ದವು. ಈಗ ಅವಳು ಕುರುಡಿ. ಅವಳಿಗೆ ದಾರಿ ತೋರಿಸಲು ಅವಳ ಕಣ್ಣುಗಳಲ್ಲಿ ಬೆಳಕಿರಲಿಲ್ಲ.

"ಲಚ್ಚೀ, ಇಲ್ಲಿಂದ ನೀನು ಎಲ್ಲಿಗೆ ಹೋಗುತ್ತೀ?" ಕೇಳಿದ ಖುಬ್‌ಚಂದ್.

"ನನ್ನ ಕಾಲು ಕರ್ಕೊಂಡ್ ಓಗೋತಾವೋ ನಾನ್ ಓಗ್ತೀನಿ."

ಜೈಲಿನಿಂದ ಬಿಡುಗಡೆಗೆ ಮುನ್ನ ಅನೇಕ ಕಾಗದಗಳ ಮೇಲೆ ಲಚ್ಚಿಯು ಹೆಬ್ಬೆರಳ ಗುರುತು ಹಾಕಿಸಿಕೊಳ್ಳಲಾಯಿತು.

"ಒಂದ್ ಕಾಲದಲ್ಲಿ ಹಾಜಿ ಮತ್ತು ಮೀರ್ ಜಂದಾನಿ, ಜೀನಾಬಾಯಿ ಕೈಯಲ್ಲಿ ನಂಗೆ ಏನೇನೋ ಓಲೆ ಕಳಿಸಿದ್ರು. ನಾನ್ ಅವರ್ ಹತ್ರ ಓಗ್ಲೀ ಅಂತ ಆಸೆಪಡ್ತಿದ್ರು. ಅದಕ್ಕೆಂತ ನನಗೆ ಎಷ್ಟು ಬೇಕಾದರೂ ದುಡ್ಡು ಕೊಡೋಕೆ ತಯಾರಿದ್ದರು. ನಾನು ಮಾನ ಮಾರ್ಕೊಳ್ಳಿಲ್ಲ. ಈವಾಗ ನಾನು ತಯಾರು. ಬರ್ರಿ. ಲಚ್ಚಿಯ ಮಾನ ಹರಾಜಾಗಲಿ, ಮೊದಲು ಸವಾಲು ಕೂಗೋರು ಯಾರು ?" ಕೂಗಿದಳು ಲಚ್ಚಿ.

ಯಾರೂ ಮಾತನಾಡಲಿಲ್ಲ, ಅಲುಗಾಡಲಿಲ್ಲ.

ಜೈಲಿನ ಒಳಭಾಗದಲ್ಲಿ ಇದ್ದಂತೆಯೇ ಹೊರಜಗತ್ತಿನಲ್ಲೂ ಕತ್ತಲು ಆವರಿಸಿತು. ಲಚ್ಚಿ ಜೈಲಿನಿಂದಾಚೆ ಹೊರಟಿದ್ದಳು.

*

ಸಡಿಲವಾಗಿ ಕಟ್ಟಿದ ರುಮಾಲ್ ಧರಿಸಿದ್ದ ರಸಿಕಲಾಲ್ ವಿವರಗಳನ್ನೆಲ್ಲಾ ವಿಚಾರಿಸುತ್ತಾ ಅತ್ತಿಂದಿತ್ತ ರೈಲು ನಿಲ್ದಾಣದಲ್ಲಿ ಓಡಾಡುತ್ತಿದ್ದ.

ಕೊಳೆ ಬಟ್ಟೆಯೊಂದರಿಂದ ತನ್ನ ಹಣ್ಣುಗಳನ್ನೆಲ್ಲಾ ಸರಸರನೆ ಒರೆಸಿ ತನ್ನ ಗೂಡೆಯಲ್ಲಿ ಅಚ್ಚುಕಟ್ಟಾಗಿ ಜೋಡಿಸಿದ ಮಾಧೋ.

ಪ್ರಯಾಣಿಕರು ಟ್ಯಾಕ್ಸಿ ಗೊತ್ತು ಮಾಡಿಕೊಳ್ಳಬಹುದೆಂಬ ಆಶೆಯಿಂದ ಹಮೀದ ತನ್ನ ಟ್ಯಾಕ್ಸಿಗೆ ಒರಗಿ ನಿಂತಿದ್ದ.

ನಿಲ್ದಾಣದಾಚೆ ರೈಲು ಮಾರ್ಗ ದುರಸ್ತಿ ನಡೆಯುತ್ತಿತ್ತು. ಫ್ರಾಂಟಿಯರ್ ಮೆಯಿಲ್ ನಾಲ್ಕನೇ ನಂಬರಿನ ಪ್ಲಾಟ್‌ಫಾರ್ಮ್‌ಗೆ ಬಂದು ನಿಂತಿತು. ಗುಲ್ ಇಳಿದ. ಅವನನ್ನು ಗುರುತಿಸಿದ ಹಮೀದ್– "ನೀನು ಪಾಕಿಸ್ತಾನಕ್ಕೆ ಹೊರಟು ಹೋಗಿದ್ದೀಯಾ ಅಂತ ಅಂದ್ಕೊಂಡಿದ್ದೆ!" ಎಂದ.

"ನಮ್ಮಪ್ಪ ಪಾಕಿಸ್ತಾನಕ್ಕೆ ಹೋದ. ನಾನು ದಿಲ್ಲೀನಲ್ಲೇ ಇದ್ದೆ. ಭಾರತೀಯ ಪೌರತ್ವ ಪಡೆಯೋದಕ್ಕೆ ಪ್ರಯತ್ನಿಸ್ತಾ ಇದ್ದೆ; ಸಿಕ್ತು" ಎಂದ.

"ಲಚ್ಚಿ ಹೇಗಿದ್ದಾಳೆ ?"

"ಅದನ್ನ ತಿಳ್ಕೊಳ್ಳೋಕೆ ನಾನು ಬಂದಿದ್ದು. ನಾನು ಅವಳ್ಗೆ ಕಾಗದಗಳನ್ನ ಬರ್ದೆ. ಆದರೆ ಜವಾಬೇ ಬರ್ಲಿಲ್ಲ. ನಾಳೆ ಜೈಲಿಗೆ ಹೋಗಿ ಅವಳನ್ನೇ ನೋಡ್ಕೊಂಡ್ ಬರ್ತೀನಿ" ಎಂದ ಗುಲ್. ಹಮೀದನೊಡನೆ ಇರಾನಿ ಹೋಟಲಿಗೆ ಹೋದ.

ಹೊರಗಡೆ ಗಲಾಟೆಯ ಸದ್ದು. ಕುರುಡಿ ಭಿಕ್ಷುಕಿ ಲಚ್ಚಿ ದಾರಿಹೋಕನಿಗೆ ಢಿಕ್ಕಿ ಹೊಡೆದಿದ್ದಳು. ಅವಳ ಅಜಾಗರೂಕತೆಗಾಗಿ ಅವನು ಅವಳನ್ನು ಬೈದಿದ್ದ. ಬೈಗಳನ್ನೂ ಭಿಕ್ಷೆಯಂತೆಯೇ ಸ್ವೀಕರಿಸುವ ಬದಲು ಅವಳು ಅವನನ್ನು ಹೊಡೆದು ಪ್ರತೀಕಾರ ಮಾಡಿದ್ದಳು. ಈ ದೃಶ್ಯವನ್ನು ನೋಡುತ್ತಿದ್ದ ಜನರಿಗೆ ಕೋಪ ಬಂದಿತ್ತು.

ನಗರದ ಈ ಭಾಗಕ್ಕೆ ಲಚ್ಚಿ ಬಂದು ಎಷ್ಟೋ ದಿನಗಳಾಗಿತ್ತು. ಅವಳ ತಂಡದವರು ಒಂದು ಕಾಲದಲ್ಲಿ ಡೇರೆಗಳನ್ನು ಹಾಕಿಕೊಂಡಿದ್ದ ನಿಲ್ದಾಣದ ಬಳಿಗೆ ಈಗ ಲಚ್ಚಿ ಬರುತ್ತಲೇ ಇರಲಿಲ್ಲ. ಅಲ್ಲಿನ ಒಂದೊಂದು ಅಂಗುಲ ನೆಲದ ಮೇಲೆಯೂ ಅವಳ ಪ್ರೇಮ ಪ್ರಕರಣಗಳ ಛಾಪು ಉಳಿದಿತ್ತು. ಆದರೆ ಇಂದು ಗಾಢ ಕತ್ತಲೊಂದು ಅವಳನ್ನು ಆ ಸ್ಥಳಕ್ಕೆ ಸೆಳೆದು ತಂದಿತ್ತು.

ಅವಳು ಪೆಟ್ಟು ಬಿಟ್ಟ ನೆಲಕ್ಕೆ ಮುತ್ತಿಡಲು ಜನರು ನಾ ಮುಂದು ತಾ ಮುಂದು ಎಂದು ಓಡಿ ಬರುತ್ತಿದ್ದ ಕಾಲ ಒಂದಿತ್ತು. ಇಂದು ಅವಳನ್ನು ಬೈದ ಆ ಮನುಷ್ಯನಿಗೆ ತಿಳಿದಿದೆಯೇನು?

ಹಮೀದ್ ಬಿದ್ದ ಅವನ ಕೊರಳನ್ನು ಹಿಡಿದುಕೊಂಡು ಏನನ್ನೋ ಹೇಳಿದ. "ಬರ್ತೀನಿ. ನನಗೆ ಹೊಡೆಯೋಕೆ ನಿನಗೆಷ್ಟು ಧೈರ್ಯ?"

ಹಾಗೆ ಕೇಳಿದವನ ಧ್ವನಿಯನ್ನು ಲಚ್ಚಿ ಗುರುತಿಸಿದಳು. ಅವನು ಹಮೀದ.

ಲಚ್ಚಿ ನೋವಿನಿಂದ ನರಳಿದಳು. ಹಾಗೆ ಹೊಡೆದು ತಿನ್ನ ಕೆಲವು ಹುಡುಗ ಕಾಲಿಯ ಮಕ್ಕಳು ರಸ್ತೆಯ ಬದಿಯಲ್ಲಿ ಬಿದ್ದಿದ್ದ ಕಲ್ಲುಗಳನ್ನೇ ಆರಿಸಿಕೊಂಡು ಅವಳ ಕಡೆಗೆ ಬೀಸಿದರು. ಬೀಸಿ ಬಂದ ಕಲ್ಲೊಂದು ಲಚ್ಚಿಯ ಹಣೆಗೆ ತಗುಲಿ ರಕ್ತ ಚಿಮ್ಮಿತು.

ಅವಳನ್ನು ಅಟ್ಟಿಸಿಕೊಂಡು ಹೋದ ಗುಂಪು ಅವಳನ್ನು ರಸ್ತೆಯ ಬದಿಗೆ ನೂಕಿತು.

ಹಣ್ಣು ಮಾರುವ ಮಾಧೋ, "ಸಾಯಿಸ್ರೋ ಅವಳನ್ನು!" ಎನ್ನುತ್ತಾ ಅವನೂ ಕಲ್ಲು ಬೀಸಿದ. ಲಚ್ಚಿ ಮಾಧೋನ ಧ್ವನಿಯನ್ನು ಗುರುತಿಸಿದಳು.

"ಹಾಳಾದೋಳೇ!... ಚಚ್ಚಿರೋ ಅವಳನ್ನ! ಬಿಡಬ್ಯಾಡ್ರೋ ತಪ್ಪಿಸಿಕೊಳ್ಳೋಕೆ!" ಬಿಸ್ಕತ್ ಮಾರುವ ಸುಲೇಮಾನ ಧ್ವನಿಯನ್ನು ಲಚ್ಚಿ ಗುರುತಿಸಿದಳು. ಅನಂತರ ಅವಳು ರಸ್ತೆಯ ಬದಿಯಲ್ಲಿ ಬಿದ್ದುಬಿಟ್ಟಳು.

ಪೋಲೀಸನೊಬ್ಬ ಅಲ್ಲಿಗೆ ಬಂದ. ಗುಂಪು



"ಈಗ ಇವಳನ್ನ ಮದ್ವೆ ಮಾಡ್ಕೊಂಡ್ರೆ ನಾನು ನಿಮ್ಮ ಪಾಲಿಗೆ ಸತ್ತಂಗೇ ಅಂತ ಹೇಳಿದ್ರಲ್ಲ ಅಪ್ಪ, ನೀವೇನೆ. ಅದಕ್ಕೇ ಅನಂತ್ರಾಮ ಶಾಸ್ತ್ರಿ. ಕೇಳಿ ನಿಮ್ಮ ಹೆಸರಿನ ಹಿಂದೆ ದಿವಂಗತ ಅಂತ ಹಾಕ್ತಿದೇನೆ."

ಚದುರಿ ಹೋಯಿತು. ಅನಂತರ ಯಾರೋ ಅವಳನ್ನು ತಮ್ಮ ತೋಳುಗಳಲ್ಲಿ ಎತ್ತಿಕೊಂಡು ಇರಾನಿ ಹೋಟೆಲಿನ ಕಡೆಗೆ ಧಾವಿಸಿದರು. ಸರಸರನೆ ಎರಡು ಮೇಜುಗಳನ್ನು ಜೋಡಿಸಲಾಯಿತು. ಅದರ ಮೇಲೆ ಅವಳನ್ನು ಮಲಗಿಸಲಾಯಿತು.

"ಬೇಗ ಸ್ವಲ್ಪ ನೀರು ತನ್ನಿ!"

ಲಚ್ಚಿ ಚಕಿತಳಾದಳು. ಅದು ಗುಲ್‌ನ ಧ್ವನಿ.

ಇರಾಣಿ ಹೋಟೆಲಿನಲ್ಲೊಂದು ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ಇತ್ತು. ಗುಲ್ ಸರಸರನೆ ಅವಳ ಗಾಯುಗಳನ್ನು ತೊಳೆದ. ಆದರೂ ಅವಳಿಗೆ ವೈದ್ಯಕೀಯ ನೆರವು ಇನ್ನೂ ಅಗತ್ಯವಾಗಿತ್ತು.

ಗುಲ್ ಅವಳನ್ನು ತನ್ನ ತೋಳುಗಳಲ್ಲಿ ಎತ್ತಿಕೊಂಡು ಪಕ್ಕದಲ್ಲೇ ಇದ್ದ ಔಷಧಾಲಯಕ್ಕೆ ಹೋದ. ಅವಳ ಗಾಯುಗಳನ್ನು ಪರೀಕ್ಷಿಸಿದ ವೈದ್ಯರು ಅವು ಒಂದು ವಾರದೊಳಗಾಗಿ ವಾಸಿಯಾಗುತ್ತವೆಂದು ಹೇಳಿದರು. ಅವಳಿಗೆ ಬ್ಯಾಂಡೇಜ್ ಕಟ್ಟಿದರು.

ಗುಲ್ ಲಚ್ಚಿಯ ಕಡೆಗೆ ತಿರುಗಿ ಕೇಳಿದ, "ನಿನ್ ಹೆಸರು?"

ಲಚ್ಚಿ ಮೌನವಾಗಿದ್ದಳು. ಅನಂತರ, "ನಂಗೆ ಹೆಸ್ರೆ ಇಲ್ಲ" ಎಂದಳು ಅವಳು.

ಗುಲ್ ಹನ್ನೆರಡು ರೂಪಾಯಿಗಳನ್ನು ತೆಗೆದು ವೈದ್ಯರಿಗೆ ಕೊಟ್ಟ. ಅನಂತರ ಲಚ್ಚಿಯನ್ನು ಹೊರಕ್ಕೆ ಕರೆದುಕೊಂಡು ಹೋದ.

"ನೀನಿರೋದು ಎಲ್ಲಿ?" ಕ್ಷಣಕಾಲ ತಡೆದು ಕೇಳಿದ ಗುಲ್.

"ನಂಗೆಲ್ಲಿದೆ ಜಾಗ? ನಂಗೆ ರಾತ್ರಿ ಎಲ್ಲಾಗ್ತದೋ ಅಲ್ಲೇ ಬಿದ್ಕೊಳ್ತೀನಿ. ಅದೇ ನನ್ ಮನೆಯಾಗ್ತದೆ. ಬಾಬೂ, ನೀನು ದೇವರ ಹಂಗೆ ಬಂದು ನನ್ನ ಕಾಪಾಡ್ದೆ. ನನ್ನಿಂದ ಇನ್ನಷ್ಟು ಕಷ್ಟ ನಿಂಗ್ ಬರೋದು ಬ್ಯಾಡ."

ಹೊರಡಲನುವಾದ ಗುಲ್‌ನ ಕೈಗಳನ್ನು ಹಿಡಿದು ಅವಳು,

"ಗುಲ್, ನಿಂಗೆ ನನ್ ಗುರುತ್ ಸಿಕ್ಲಿಲ್ವಾ? ನಾನು ಲಚ್ಚಿ!" ಎಂದಳು.

ಗುಲ್‌ನ ಎದೆಯನ್ನು ಬಿಗಿಯಾಗಿ ಅಪ್ಪಿಕೊಂಡಿದ್ದ ಲಚ್ಚಿ ಗಾಢನಿದ್ರೆಯಲ್ಲಿದ್ದಳು.

ಗುಲ್ ತನ್ನ ಹೃದಯವನ್ನೆಲ್ಲಾ ಶೋಧಿಸಿದ. ಲಚ್ಚಿಯ ವಿಷಯದಲ್ಲಿ ಅವನಿಗಿದ್ದ ಭಾವನೆಗಳೆಲ್ಲಾ ಬತ್ತಿಹೋಗಿದ್ದುದು ಅವನಿಗೆ ಗೊತ್ತಾಯಿತು.

ಅವಳಿಗಾಗಿ ಇಡಿ ಜಗತ್ತನ್ನೇ ಹಿಂದೆ ಆತ ಎದುರು ಹಾಕಿಕೊಂಡಿದ್ದ. ಇನ್ನೆಷ್ಟು ಪ್ರಯತ್ನಿಸಿದರೂ ಅವಳನ್ನು ಮತ್ತೆ ಪ್ರೀತಿಸಲು ಅವನಿಗೆಂದೂ ಸಾಧ್ಯವಾಗದು. ಅವನ ಹೃದಯ ಕಲ್ಲಾಗಿತ್ತು.

ವೈದ್ಯರು ಲಚ್ಚಿಯ ಬ್ಯಾಂಡೇಜುಗಳನ್ನೆಲ್ಲಾ ತೆಗೆದರು. ಇನ್ನು ಹತ್ತು ದಿನಗಳಲ್ಲಿ ತನಗೆ ಮೊದಲಿನಂತೆ ನಡೆಯಲು ಸಾಧ್ಯವಾಗುತ್ತದೆಂದು ಅವಳಿಗೆ ಅನ್ನಿಸಿತು.

"ನನಗೆ ಪುಣೆಯಲ್ಲಿ ಕೆಲಸ ಸಿಕ್ಕಿದೆ. ನಾನು ಅಲ್ಲಿಗೆ ಹೋಗಬೇಕು" ಎಂದ ಗುಲ್.

"ನಾನೂ ನಿನ್ ಕೂಡಾನೇ ಬತ್ತೀನಿ."

"ನಿಂಗೇಂತ ಅಲ್ಲೊಂದು ಮನೆ ಮಾಡೋ ತನಕ ಬೇಡ."

"ಎಷ್ಟ್ ದಿನ ಆಗ್ತದೆ ನೀನ್ ಬರೋದು?"

"ಒಂದು ತಿಂಗಳಾಗಬಹುದು. ಅಲ್ಲೀ ತನಕ ನಮ್ಮಪ್ಪ ನನಗೆ ಕೊಟ್ಟಿರೋ ಈ ಮನೇಲಿ ನೀನು ನೆಮ್ಮದಿಯಾಗಿರಬಹುದು. ಅಕ್ಕ ಪಕ್ಕದ ಮನೆ ಜನ ನಿನ್ನ ನೋಡ್ಕೋಳ್ತಾರೆ. ವಾರವಾರಾನೂ ನಿನಗೆ ಕಾಗದ ಬರಿತೀನಿ" ಎಂದ ಗುಲ್.

ಲಚ್ಚಿ ಒಪ್ಪಿಕೊಂಡಳು. ಹೊರಡುವ ಮುನ್ನ ಗುಲ್ ಅವಳಿಗೆ ತಿಂಗಳ ವೆಚ್ಚಕ್ಕಾಗಿ ಐವತ್ತು ರೂಪಾಯಿ ಕೊಟ್ಟ.

ಒಂದು ವಾರ ಕಳೆಯಿತು. ಇನ್ನೊಂದು, ಮತ್ತೊಂದು ವಾರ ಉರುಳಿತು. ಗುಲ್‌ನಿಂದ ಕಾಗದ ಬರಲಿಲ್ಲ. ಹಣವೂ ಬರಲಿಲ್ಲ.

ಅವಳ ನಿರೀಕ್ಷೆ ನೆರೆಹೊರೆಯವರಿಗೆ ನಗೆಗೀಡಾಯಿತು. ಲಚ್ಚಿಗೆ ಗುಲ್‌ನಲ್ಲಿ ಅಚಲ ನಂಬಿಕೆ ಇತ್ತು. ಅಂತೂ ಅವನೇಕೆ ತನಗೆ ಕಾಗದ ಬರೆಯುಲಿಲ್ಲವೆಂಬುದನ್ನು ತಿಳಿಯಲು ಅವಳಿಗೆ ಸಾಧ್ಯವಾಗಲಿಲ್ಲ.

ಅವನು ಹೋದ ಎರಡು ತಿಂಗಳು ಹತ್ತು ದಿನಗಳ ನಂತರ ಅಂಚೆಯವನು ಬಂದು, "ಲಚ್ಚಿ ನಿನಗೊಂದು ಮನಿಯಾರ್ಡರ್ ಬಂದಿದೆ!" ಎಂದು.

ಗುಲ್ ಪುಣೆಯಿಂದ ಮೂವತ್ತು ರೂಪಾಯಿ ಕಳಿಸಿದ್ದ.

ಗುಲ್‌ನ ಅಡ್ರೆಸ್ಸು ಕೇರ್ ಆಫ್ ಪೋಸ್ಟ್

ನಿಮ್ಮ ಮಗುವಿಗೆ ಹೆಚ್ಚು ಶಕ್ತಿಯನ್ನು ಕೊಡುತ್ತದೆ, ಅವನನ್ನು ಮುಂದಿಡುತ್ತದೆ... ಕೋಕೋ-ಸ್ವಾದಿಷ್ಟ ಬೋರ್ನ್‌ವಿಟಾ.



ಬೋರ್ನ್‌ವಿಟಾದಲ್ಲಿ ಈಗ ಅಧಿಕ ಕೋಕೋ ಇರುವುದರಿಂದ ಅದು ಅಧಿಕ ರುಚಿಕರ ಹಾಗೂ ಅಧಿಕ ಆರೋಗ್ಯಪೂರ್ಣವಾಗಿದೆ. ಅಷ್ಟೆ ಮಾತ್ರವಲ್ಲ, ಬೋರ್ನ್‌ವಿಟಾ ಮಾಲ್ಟ್, ಹಾಲು ಮತ್ತು ಸಕ್ಕರೆಗಳ ಎಲ್ಲಾ ಪೌಷ್ಟಿಕ ಉತ್ತಮಿಕೆಯಿಂದ ತುಂಬಿದೆ.

ಎರಡು ಟೀ ಚಮಚ ಬೋರ್ನ್‌ವಿಟಾವನ್ನು ಒಂದು ಕಪ್ ಬಿಸಿ ಹಾಲಿಗೆ ಸೇರಿಸಿದಾಗ ಅದು ಅತ್ಯಂತ ರುಚಿಕರವಾದ, ಶಕ್ತಿದಾಯಕ ಪೇಯವಾಗುತ್ತದೆ.

ನಿಮ್ಮ ಮಕ್ಕಳಿಗೆ ಬೋರ್ನ್‌ವಿಟಾವನ್ನು ಪ್ರತಿದಿನ ಎರಡಾವರ್ತಿ ಕೊಡಿರಿ. ಅದು ಅವರ ಶಾರೀರಿಕ ಬೆಳವಣಿಗೆಗೆ ಅವಶ್ಯವಿರುವ ಹೆಚ್ಚಿನ ಶಕ್ತಿಯನ್ನು ಒದಗಿಸಲು ನೆರವಾಗುತ್ತದೆ. ಮತ್ತು ನಿಮಗೂ ಅದು ಬೇಕು...ಅವರೊಂದಿಗೆ ಅವರಂತೆ ಇರುವುದಕ್ಕಾಗಿ!

ಕ್ಯಾಡ್‌ಬರಿಸ್ ಬೋರ್ನ್‌ವಿಟಾ

ಅಧಿಕ ಕೋಕೋ ಯುಕ್ತ: ಅಧಿಕ ರುಚಿಕರ, ಅಧಿಕ ಆರೋಗ್ಯಪೂರ್ಣ!




75 ಪೈಸೆ ಉಳಿಸಿರಿ

ಹಣ ಉಳಿಸುವ 500 ಗ್ರಾಮ್‌ನ ರಿಫಿಲ್ ಪ್ಯಾಕ್ ಕೊಳ್ಳಿರಿ.

ಮುಖ್ಯ ಸಂಗತಿ:

ಈ ಪ್ಯಾಕನ್ನು ತೆರೆದ ಕೂಡಲೇ ಅದರಲ್ಲಿರುವ ಪುಡಿಯನ್ನು ಬೋರ್ನ್‌ವಿಟಾದ ಡಬ್ಬಿಯಲ್ಲಿ ಹಾಕಿಡಿರಿ. ಅದರಿಂದ ಅದರ ತಾಜಾ ಗುಣ ಉಳಿಯುತ್ತದೆ



OBM-8376 B/KN

ಮಾಸ್ಟರ್ ಅಂತಿರುವುದನ್ನು ಕೇಳಿ ತಿಳಿದು, "ಯಾಕ್ ಹಂಗೆ ಬರೆದವ್ನೆ?" ಎಂದು ಅಂಚೆ ಯುವನನ್ನು ಕೇಳಿದಳು ಲಚ್ಚಿ.

"ದುಡ್ಡು ಕಳಿಸೋರಿಗೆ ಮನೆ ಅಡ್ರೆಸ್ಸು ಇಲ್ದೆ ಇದ್ರೆ ಅಥವಾ ತಾನು ಎಲ್ಲಿದ್ದೀನಿ ಅನ್ನೋದನ್ನು ತಿಳಿಸೋಕೆ ಅವನಿಗೆ ಇಷ್ಟಾ ಇಲ್ದೆ ಇದ್ರೆ 'ಕೇರ್ ಆಫ್ ಪೋಸ್ಟ್ ಮಾಸ್ಟರ್' ಅಂತ ಬರೀತಾರೆ" ಎಂದ ಅಂಚೆಯವ.

ಬಹಳ ಹೊತ್ತು ಮೌನದಿಂದಿದ್ದ ಲಚ್ಚಿ ಅನಂತರ, "ಸುಭಾನ್, ಈ ಮನಿಆರ್ಡರ್ ನಂಗಲ್ಲ; ಇದು ಕುರುಡಿಗೆ, ಭಿಕ್ಷುಕಿಗೆ ಕಳಿಸಿರೋದು. ಇದನ್ನ ಅವನ್ಗೇ ವಾಪ್ಸು ಕಳ್ಸಿಬಿಡಿ" ಎಂದಳು ದೃಢವಾದ ಧ್ವನಿಯಲ್ಲಿ. ಅವಳು ಥಪಾರನೆ ಬಾಗಿಲು ಹಾಕಿಕೊಂಡು ಯೋಚನಾಮಗ್ನಳಾದಳು.

ಅವಳ ಮನಸ್ಸಿನಲ್ಲಿ ಬಹುಕಾಲದಿಂದ ಸುಳಿದಾಡುತ್ತಿದ್ದ ಗುಲ್‌ನ ಚಿತ್ರ ಅದೃಶ್ಯವಾಯಿತು.

ಕೋಣೆಯಲ್ಲಿ ಕತ್ತಲೆ ತುಂಬಿತ್ತು. ಕಣ್ಣುಗಳು ದೃಷ್ಟಿಯನ್ನು ಕಳೆದುಕೊಂಡಿದ್ದವು. ಆದರೂ ಹಿಂದೆಂದೂ ನೋಡದಷ್ಟು ಸ್ಪಷ್ಟವಾಗಿ ತನಗೆಲ್ಲವೂ ಕಾಣುತ್ತಿದೆಯೆಂದು ಅವಳು ಭಾವಿಸಿದಳು. ಭಿಕ್ಷೆ ಬೇಡಲು ಲಚ್ಚಿ ಬಸ್ ನಿಲ್ದಾಣದ ಕಡೆಗೆ ಹೆಜ್ಜೆ ಹಾಕಿದಳು. ✡

ಆ ನಿಪುಣ ತನ್ನ ಬಳಿ ಕುಳಿತಿದ್ದ ಜಿಪುಣ ಶ್ರೀಮಂತನನ್ನು ಒಮ್ಮೆಲೇ ಮನೆಯ ಕಿಟಕಿಯ ಬಳಿ ಕರೆದೊಯ್ದು ರಸ್ತೆಯ ಬದಿಗೆ ನೋಡಲು ಹೇಳಿದ.

"ಏನು ಕಂಡಿತು ?" ಕೇಳಿದ ನಿಪುಣ.

"ಜನ," ಉತ್ತರಿಸಿದ ಜಿಪುಣ.

ನಂತರ ಆತನನ್ನು ಕರೆದೊಯ್ದು ಕನ್ನಡಿಯೆದುರು ನಿಲ್ಲಿಸಿ ನೋಡಲು ಹೇಳಿದ. "ಈಗೇನು ಕಂಡಿತು ?" ನಿಪುಣನ ಪ್ರಶ್ನೆ.

"ನಾನು," ಜಿಪುಣನ ಉತ್ತರ.

ಆಗ ನಿಪುಣ ಹೇಳಿದ: "ಕಿಟಕಿಯಲ್ಲೂ ಕಾಜಿದೆ, ಕನ್ನಡಿಯಲ್ಲೂ ಕಾಜಿದೆ. ಆದರೆ ಕನ್ನಡಿಯ ಕಾಜಿಗೆ ಸ್ವಲ್ಪ ಬೆಳ್ಳಿ ಬಳಿಯಲಾಗಿದೆ. ನೋಡಿದೆಯಾ ಈ ಬೆಳ್ಳಿಯ ಮಹತ್ವವನ್ನು. ಅದು ಇತರರನ್ನು ಮರೆಸಿ 'ನಾನು, ನಾನು' ಎನ್ನುವಂತೆ ಮಾಡುತ್ತದೆ. ಇದಕ್ಕೇ ಧನಾಂಧತೆ ಅನ್ನುವುದು..."

–ದಡ್ಡ ಶಿಖಾಮಣಿ

Printed & published by P. S. Bhat for the Jayakarnataka News Printers Private Ltd. at the Samyukta Karnataka Press, Koppikar Road, Hubli. 580020 • Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramaniam Phone: 842201; New Delhi: P. R Chopra Phone: 224130.

ದಂತವೈದ್ಯರು ಹೇಳುತ್ತಾರೆ:

ನಿಯಮಿತವಾಗಿ ಬ್ರಶ್‌ನಿಂದ ಹಲ್ಲುಗಳನ್ನು ಸ್ವಚ್ಛಗೊಳಿಸಿರಿ, ಮತ್ತು ಒಸಡುಗಳನ್ನು ಮಸಾಜು ಮಾಡಿರಿ; ಒಸಡುಗಳ ತೊಂದರೆ ಹಾಗೂ ದಂತಕ್ಷಯದಿಂದ ದೂರ ಇರಿ

ಫೋರ್‌ಹನ್ಸ್ ಉಪಯೋಗಿಸುತ್ತಿರುವವರು ಸಂತೋಷದಿಂದ ಹೇಳುತ್ತಾರೆ.

"..ನನ್ನ ಹಲ್ಲುಗಳಲ್ಲಿ ಏನೂ ತೊಂದರೆಯಿಲ್ಲ..."

"...ನಾನು ಫೋರ್‌ಹನ್ಸ್ ಟೂಥ್‌ಪೇಸ್ಟನ್ನು ಉಪಯೋಗಿಸಲು ಪ್ರಾರಂಭಿಸಿದಾಗಿನಿಂದ, ನನ್ನ ಹಲ್ಲುಗಳಲ್ಲಿ ಯಾವುದೇ ತೊಂದರೆಯಾಗಲೀ, ಹಾಳಾಗುವುದಾಗಲೀ ಕಂಡುಬಂದಿಲ್ಲ...ನಾನು ಯಾವಾಗಲೂ ನಿಮ್ಮ ಫೋರ್‌ಹನ್ಸ್ ಟೂಥ್‌ಪೇಸ್ಟ್ ಹಾಗೂ ಫೋರ್‌ಹನ್ಸ್ ಡಬ್ಬಲ್ ಆ್ಯಕ್ಶನ್ ಟೂಥ್ ಬ್ರಶ್‌ನ ಆಭಾರಿಯಾಗಿದ್ದೇನೆ..."

(ಸಹಿ) ಓ. ನಾಗೇಶ ಕಾಮತ,
ಅಂಧೇರಿ, ಬೊಂಬಾಯಿ.

(ಈ ಪತ್ರಗಳ ಮತ್ತು ಇಂಥ ಪತ್ರಗಳ ಫೋಟೋಸ್ಟ್ಯಾಟ್ ಪ್ರತಿಗಳನ್ನು ಜೆಫ್ರಿ ಮೇನರ್ಸ್ ಅಂಡ್ ಕಂ. ಲಿ. ಅವರ ಯಾವುದೇ ಆಫೀಸಿನಲ್ಲಿ ನೋಡಬಹುದು.)



"ಸುಮಾರು ಹತ್ತು ವರ್ಷಗಳ ಹಿಂದೆ ನನಗೆ ಒಸಡುಗಳ ತೊಂದರೆಯಿತ್ತು..."

"...ಸುಮಾರು ಹತ್ತು ವರ್ಷಗಳ ಹಿಂದೆ ನನಗೆ ಒಸಡುಗಳ ತೊಂದರೆಯಿತ್ತು ಮತ್ತು ಆಗ ನಾನು ನಿಮ್ಮ ಫೋರ್‌ಹನ್ಸ್ ಟೂಥ್‌ಪೇಸ್ಟ್ ಉಪಯೋಗಿಸಲು ಪ್ರಾರಂಭಿಸಿದೆನು... ನಾನೀಗ ಗಟ್ಟಿಯಾದ ಮತ್ತು ಆರೋಗ್ಯಪೂರ್ಣ ಹಲ್ಲುಗಳನ್ನು ಪಡೆದವನಾಗಿದ್ದೇನೆ.

ಇಷ್ಟೊಂದು ಉತ್ಕೃಷ್ಟ ಕ್ವಾಲಿಟಿಯ ಟೂಥ್ ಪೇಸ್ಟನ್ನು ತಯಾರಿಸಿದ್ದಕ್ಕಾಗಿ ನಿಮಗೆ ನನ್ನ ಅಭಿನಂದನೆಗಳು..."

(ಸಹಿ) ಬಿ. ಎಸ್. ಜಯಂತಿ
ಮೌಲಾಲಿ, ಹೈದರಾಬಾದ್

ಹಲ್ಲುಗಳ ಯೋಗ್ಯ ಸಂರಕ್ಷಣೆಗಾಗಿ, ಪ್ರತಿ ದಿನ ರಾತ್ರಿ ಮತ್ತು ಮುಂಜಾನೆ ನಿಮ್ಮ ಹಲ್ಲುಗಳನ್ನು ಸರಿಯಾದ ರೀತಿಯಲ್ಲಿ ಸ್ವಚ್ಛ ಗೊಳಿಸಲು, ಮತ್ತು ಒಸಡುಗಳನ್ನು ಮಸಾಜು ಮಾಡಲು, ಫೋರ್‌ಹನ್ಸ್ ಟೂಥ್‌ಪೇಸ್ಟ್ ಉಪಯೋಗಿಸಿರಿ. ಜೊತೆಗೆ ಫೋರ್‌ಹನ್ಸ್ ಡಬ್ಬಲ್ ಆ್ಯಕ್ಶನ್ ಟೂಥ್‌ಬ್ರಶ್ ಉಪಯೋಗಿಸಿರಿ. ಯಾಕೆಂದರೆ, ಹಲ್ಲುಗಳನ್ನು ಸ್ವಚ್ಛಗೊಳಿಸಲು ಮತ್ತು ಒಸಡುಗಳನ್ನು ಮಸಾಜು ಮಾಡಲು, ವಿಶೇಷವಾಗಿ ತಯಾರಿಸಲಾಗಿದೆ.

ಒಸಡುಗಳು ಕೆಟ್ಟರೆ, ದೇಹಾರೋಗ್ಯ ಕೆಡುವುದು



ಉಚಿತ! "ನಿಮ್ಮ ಹಲ್ಲು ಮತ್ತು ಒಸಡುಗಳ ರಕ್ಷಣೆ:" ದಂತ-ಸಂರಕ್ಷಣೆಯ ಬಗ್ಗೆ ಒಂದು ವರ್ಣರಂಜಿತ ಬೋಧಪ್ರದ ಪುಸ್ತಿಕೆ. ಅಂಚೆವೆಚ್ಚಕ್ಕಾಗಿ 20 ಪೈಸೆಯ ಸ್ಟ್ಯಾಂಪನ್ನು ಜೊತೆಗಿಟ್ಟು ಈ ವಿಳಾಸಕ್ಕೆ ಬರೆಯಿರಿ: ಫೋರ್‌ಹನ್ಸ್ ಡೆಂಟಲ್ ಎಡ್ವೈಜರಿ ಬ್ಯೂರೋ, ಪೋಸ್ಟ್ ಬ್ಯಾಗ್ ನಂ. 11463, ಡಿಪಾರ್ಟಮೆಂಟ್ ನಂ. T 139-179 ಬೊಂಬಾಯಿ 400 020.
ಬೇಕಾದ ಭಾಷೆಯನ್ನು ನಮೂದಿಸಿರಿ

ಫೋರ್‌ಹನ್ಸ್ ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್

179F-162 KAN

Registered with the Registrar of Newspapers for India under No. 3633/57

ಸ್ಫೂರ್ತಿಯ ಚಿಲುಮೆ

